ಹೊಸ ವರ್ಷದ ಶುಭಾಶಯಗಳು

prajavani.net prajavani | ಗುರುವಾರ, ಜನವರಿ 1, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 1 | ಪುಟ 18 | www.prajavani.net

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 85,220 | ನಿಫ್ಟಿ 26,129 | $/₹ 89.88 | ಚಿನ್ನ (Std. 10g) ₹1,39,950 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,46,200 (ಬೆಂಗಳೂರು)

2026

ನಾಡಿನ ನೆಮ್ಮದಿಗೊಂದು ಆಶಯ

ಪರಿಸರ ರಕ್ಷಣೆಗಾಗಿ ಕೈ ಎತ್ತಿ

ಅಮೂಲ್ಯ ಔಷಧೀಯ ಸಸ್ಯಗಳ ಆಗರ ಕಪ್ಪತಗುಡ್ಡದ ಉಳಿವಿಗಾಗಿ ತೀವ್ರ ಹೋರಾಟ ನಡೆದಿದ್ದರಿಂದ ಸರ್ಕಾರ ಅದನ್ನು ‘ವನ್ಯಜೀವಿಧಾಮ’ ಎಂದು ಘೋಷಿಸುವಂತಾಯಿತು. ಇದೇ ರೀತಿ ನಮ್ಮ ನಾಡಿನ ಎಲ್ಲ ಅರಣ್ಯ ಪ್ರದೇಶವನ್ನು ಸಂರಕ್ಷಿಸುವ ಸಂಕಲ್ಪ ನಮ್ಮದಾಗಬೇಕು. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರ ಹಾಳು ಮಾಡುವುದು ಎಂದರೆ ಅದು ಮನೆಹಾಳು ಕೆಲಸ. ನಾಡಿನ ಮಳೆ, ಬೆಳೆ, ಪರಿಶುದ್ಧ ಗಾಳಿಗೆ ಆಧಾರವಾಗಿರುವ ಪಶ್ಚಿಮ ಘಟ್ಟವನ್ನು ಹಾಳು ಮಾಡಿ ವಿದ್ಯುತ್ ಉತ್ಪಾದಿಸುವುದು ಅರ್ಥಹೀನ. ಈಗ ವಿದ್ಯುತ್ ಉತ್ಪಾದನೆಗೆ ಸೌರ ಶಕ್ತಿ, ಪವನ ಶಕ್ತಿ ಸೇರಿ ಬೇರೆ ಮೂಲಗಳಿವೆ. ವಿದ್ಯುತ್ ಬೇಡಿಕೆ ಇಂದು ಗಂಭೀರ ಸಮಸ್ಯೆಯಾಗಿ ಉಳಿದಿಲ್ಲ. ಹೀಗಾಗಿ, ಶರಾವತಿ ಪಂಪ್ಡ್ ಸ್ಟೋರೇಜ್‌ನಂತಹ ಯೋಜನೆಗಳಿಗೆ ಸರ್ಕಾರ ಕೈ ಹಾಕಲೇಬಾರದು.

ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ, ತೋಂಟದಾರ್ಯ ಸಂಸ್ಥಾನಮಠ, ಗದಗ

ರೈತರಲ್ಲಿ ಮೂಡಲಿ ಹರ್ಷ

ಹೊಸ ವರ್ಷದಲ್ಲಿ ಯಾವೊಬ್ಬ ರೈತನೂ ಆತ್ಮಹತ್ಯೆ ಮಾಡಿಕೊಳ್ಳುವಂತಾಗಬಾರದು. ಅಂತಹದ್ದೊಂದು ವಾತಾವರಣ ಸೃಷ್ಟಿಯಾಗಬೇಕು. ಕಬ್ಬು, ಮೆಕ್ಕೆಜೋಳ, ತೊಗರಿ ಸೇರಿದಂತೆ ವಿವಿಧ ಬೆಳೆಗಳಿಗೆ ಉತ್ತಮ ದರ ಇಲ್ಲದೆ ರೈತರು ತೊಂದರೆ ಅನುಭವಿಸಬೇಕಾಯಿತು. ಹೊಸ ವರ್ಷದಲ್ಲಾದರೂ ಸರ್ಕಾರ ಬೆಳೆಗಳ ಬೆಲೆ ರಕ್ಷಣೆ ನೀತಿಯನ್ನು ಜಾರಿಗೆ ತರಬೇಕು. ಹವಾಮಾನ ವೈಪರೀತ್ಯದ ಮೊದಲ ಏಟು ತಿನ್ನುತ್ತಿರುವವರು ರೈತರು. ಹವಾಮಾನದಲ್ಲಿ ಆಗುತ್ತಿರುವ ಬದಲಾವಣೆಯಿಂದ ಕೃಷಿಕರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಮತ್ತು ಬದಲಾದ ಹವೆಗೆ ಪೂರಕವಾಗಿ ಬೆಳೆಯಬಹುದಾದ ಬೆಳೆಗಳ ಬಗ್ಗೆ ಸಂಶೋಧನೆಗಳು ನಡೆಯಬೇಕು. ಹಳ್ಳಿಗಳಿಂದ ಜನರು ವಲಸೆ ಹೋಗುವುದು ಹೊಸ ವರ್ಷದಲ್ಲಿ ನಿಲ್ಲಬೇಕು.

ಚುಕ್ಕಿ ನಂಜುಂಡಸ್ವಾಮಿ, ರೈತನಾಯಕಿ

ಜೀವ ತಳೆಯಲಿ ಸಾಮರಸ್ಯ

ನಮ್ಮ ನಾಡಿನ ಸಾಮರಸ್ಯದ ಬದುಕು ಸಜೀವ ಮತ್ತು ಉಸಿರಾಡುವ ಪರಿಕಲ್ಪನೆಯಾಗಿರಬೇಕು. ಅದು ಪದಗಳ ಬದಲಿಗೆ ನಮ್ಮ ದಿನನಿತ್ಯದ ಸಂವಾದಗಳಲ್ಲಿ, ನೆರೆಹೊರೆಯ ಸಹಕಾರದಲ್ಲಿ ಮತ್ತು ಸಾರ್ವಜನಿಕ ವೇದಿಕೆಗಳ ನಾಗರಿಕ ವರ್ತನೆಯಲ್ಲಿ ಗೋಚರಿಸಬೇಕು. ನಮ್ಮ ಭಾಷೆ, ಸಂಸ್ಕೃತಿ ಮತ್ತು ಸಂಪ್ರದಾಯಗಳಲ್ಲಿನ ಭಿನ್ನತೆಗಳು ನಮ್ಮನ್ನು ಪ್ರತ್ಯೇಕಿಸುವ ಗೆರೆಗಳಾಗದೆ, ನಮ್ಮ ಸಾಮೂಹಿಕ ಗುರುತಿನ ಶ್ರೀಮಂತ ನೇಯ್ಗೆಯ ಎಳೆಗಳಾಗಿರಬೇಕು. ಸಾಮರಸ್ಯ ಎಂದರೆ ಎಲ್ಲರೂ ಒಂದೇ ಆಗಿರಬೇಕು ಎಂದಲ್ಲ; ಬದಲಿಗೆ, ನಾವೆಲ್ಲರೂ ನಮ್ಮ ವೈಶಿಷ್ಟ್ಯವನ್ನು ಉಳಿಸಿಕೊಂಡು ಸಾಮೂಹಿಕ ಒಳಿತಿಗಾಗಿ ಒಟ್ಟಾಗಿ ಕೆಲಸ ಮಾಡಬಲ್ಲೆವು ಎಂಬ ತಿಳಿವಳಿಕೆ. ಧರ್ಮ, ಭಾಷೆ, ಜಾತಿ, ಅಂತಸ್ತು ಮತ್ತು ಲಿಂಗಾಧಾರಿತ ವೈರುಧ್ಯಗಳು ನಮ್ಮನ್ನು ಬೇರ್ಪಡಿಸುವ ಗೋಡೆಗಳಲ್ಲ ಎಂಬ ಅರಿವಿನೊಂದಿಗೆ ದಿನನಿತ್ಯದ ಬದುಕಿನಲ್ಲಿ ಸಣ್ಣ ಸೌಜನ್ಯ, ಪರಸ್ಪರ ಗೌರವ, ಕೇಳುವ ಸಹನೆ—ಇವೇ ಸಾಮರಸ್ಯದ ನಿಜವಾದ ರಾಜಕೀಯ. ಹೊಸ ವರ್ಷದಲ್ಲಿ ನಾಡು ಮಾತಿನಿಂದಲ್ಲ, ಬದುಕಿನಿಂದಲೇ ಸಹಬಾಳ್ವೆಯನ್ನು ಬರೆಯಲಿ.

ನಮ್ಮಲ್ಲಿಯ ಮಾನವೀಯತೆಯ ಬಲವನ್ನು ಮತ್ತಷ್ಟು ಗುರುತಿಸಿ, ಅಪನಂಬಿಕೆಯ ಬದಲಿಗೆ ಸಹಕಾರವನ್ನು ಮೆರೆಸೋಣ.

ಬಾನು ಮುಷ್ತಾಕ್, ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತ ಲೇಖಕಿ

ಲಂಚಾವತಾರ ಕೊನೆಗೊಳಿಸುವ ಸೇನಾನಿಗಳಾಗಿ

ಹೊಸ ವರ್ಷದ ಹೊಸ್ತಿಲಲ್ಲಿ ಕುಣಿದು ಕುಪ್ಪಳಿಸಿ, ಒಂದು ದಿನ ಸಂಭ್ರಮಾಚರಿಸುವುದು ಸರಿ. ಆದರೆ, ಅದರಿಂದ ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯವಿಲ್ಲ. ಕಾನೂನು ಹೇರಿಕೆಯಿಂದ ಮಾತ್ರವೇ ಭ್ರಷ್ಟಾಚಾರ ನಿಲ್ಲಿಸಲಾಗದು. ಭ್ರಷ್ಟಾಚಾರದ ವಿರುದ್ಧದ ಹೋರಾಟ ನಮ್ಮಿಂದಲೇ, ನಮ್ಮ ಮನೆಯಿಂದಲೇ ಆರಂಭವಾಗಬೇಕು. ಪ್ರಾಮಾಣಿಕವಾಗಿ ಇರಿ ಎಂದು ಮತ್ತೊಬ್ಬರಿಗೆ ಹೇಳುವುದಕ್ಕೂ ಮೊದಲು, ನಾವು ಪ್ರಾಮಾಣಿಕವಾಗಿ ಇರಬೇಕು. ಈ ಬಗ್ಗೆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಜಾಗೃತಿ ಮೂಡಿಸುವ ಹೊಣೆಗಾರಿಕೆಯು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಪತ್ರಿಕಾಂಗದ ಮೇಲೆ ಇದೆ.

ನ್ಯಾಯಮೂರ್ತಿ ಬಿ.ವೀರಪ್ಪ, ಉಪ ಲೋಕಾಯುಕ್ತ

ವಿಕೇಂದ್ರೀಕರಣದ ಆಶಯ ಈಡೇರಲಿ



ರಾಜ್ಯ ಸರ್ಕಾರ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು 2026ರಲ್ಲಿ ನಡೆಸುವ ಮೂಲಕ ಅಧಿಕಾರ ವಿಕೇಂದ್ರೀಕರಣದ ಆಶಯಗಳನ್ನು ಸಾಕಾರಗೊಳಿಸಬೇಕು. ಜಿಲ್ಲಾ ಪಂಚಾಯಿತಿಗಳ ಅವಧಿ 2021ಕ್ಕೆ ಕೊನೆಗೊಂಡ ನಂತರ ಇಲ್ಲಿಯವರೆಗೂ ಚುನಾವಣೆ ನಡೆಸಲು ಸಾಧ್ಯವಾಗದಿರುವುದು ಸ್ಥಳೀಯ ಸಮಸ್ಥೆಗಳ ಬಲವರ್ಧನೆಗೆ ದೊಡ್ಡ ಪೆಟ್ಟು. ಕೆಳ ಹಂತದ ಅಧಿಕಾರ ಬಲಗೊಳ್ಳದೆ ಪ್ರಜಾಪ್ರಭುತ್ವದ ಆಶಯಗಳ ಅನುಷ್ಠಾನ ಸಾಧ್ಯವಾಗುವುದಿಲ್ಲ. ಬೆಂಗಳೂರು ಕೇಂದ್ರಿತ ಅಭಿವೃದ್ಧಿಗೆ ಒತ್ತು ನೀಡುವ ಬದಲು, ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಆ ಭಾಗದ ಜನರಿಗೆ ಒಂದು ವರ್ಷದ ಒಳಗೆ ಕನಿಷ್ಠ ನಿರೀಕ್ಷೆ ಮೂಡಿಸುವ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕು. ಗ್ಯಾರಂಟಿ ಜಪಕ್ಕಿಂತ ಅಭಿವೃದ್ಧಿಯತ್ತಲೂ ಚಿತ್ತ ಹರಿಸಬೇಕು. ಬಹು ಮುಖ್ಯವಾಗಿ ಶಿಕ್ಷಣ ಕ್ಷೇತ್ರವನ್ನು ಕಾರ್ಪೊರೇಟ್ ಕಪಿಮುಷ್ಟಿಯಿಂದ ಹೊರತರಬೇಕು. ಸಾರ್ವಜನಿಕ ವಿಶ್ವವಿದ್ಯಾಲಯಗಳನ್ನು ಬಲಗೊಳಿಸುವ ಮೂಲಕ ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಕನಸಿಗೆ ನೀರೆರೆಯಬೇಕು.

ವಲೇರಿಯನ್ ರೋಡ್ರಿಗಸ್, ನಿವೃತ್ತ ಪ್ರಾಧ್ಯಾಪಕ, ಮಂಗಳೂರು ವಿವಿ

‘ನೆರೆ ಸಂತ್ರಸ್ತರಿಗೆ ಮನೆ ಯಾವಾಗ ನೀಡ್ತೀರಿ?

‘ಅತಿವೃಷ್ಟಿಯಲ್ಲಿ ಸೂರು ಕಳೆದುಕೊಂಡ 13,000 ಕುಟುಂಬಗಳಿಗೆ ಮನೆ ಯಾವಾಗ ನೀಡುತ್ತೀರಿ’ ಎಂದು ವಿಪಕ್ಷ ನಾಯಕ ಆರ್.ಅಶೋಕ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

ವಿವರ ಪುಟ 6

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸರ್ಕಾರದ ಕೈಗೆ ಕೋವಿಡ್ ವರದಿ

ಔಷಧ, ಆಮ್ಲಜನಕ, ವೈದ್ಯಕೀಯ ಉಪಕರಣ, ಸಾಮಗ್ರಿ ಖರೀದಿ, ವಿತರಣೆಯಲ್ಲಿ ಅವ್ಯವಹಾರ

ಪ್ರಜಾವಾಣಿ ವಾರ್ತೆ

ಗುರುವಾರ ಸಲ್ಲಿಸಲಾಗಿರುವ 10ನೇ ವರದಿಯು 98 ಪುಟಗಳನ್ನು ಒಳಗೊಂಡಿದ್ದು, ಒಟ್ಟು ₹63 ಕೋಟಿಯ ವಹಿವಾಟುಗಳನ್ನು ಪರಿಶೀಲನೆಗೆ ಒಳಪಡಿಸಿದೆ. 196 ಪುಟಗಳಷ್ಟಿರುವ 11ನೇ ವರದಿಯು ₹42.19 ಕೋಟಿಯಷ್ಟು ಮೊತ್ತದ ಖರೀದಿಗಳನ್ನು ಪರಿಶೋಧಿಸಿದೆ.

ಬೆಂಗಳೂರು: ಕೋವಿಡ್ ಅವಧಿಯಲ್ಲಿ ಸಂಭವಿಸಿದ ಸಾವುಗಳು ಮತ್ತು ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಕುರಿತು ತನಿಖೆ ನಡೆಸಿರುವ ನ್ಯಾ. ಜಾನ್ ಮೈಕಲ್ ಕುನ್ಹಾ ನೇತೃತ್ವದ ತನಿಖಾ ಆಯೋಗವು ಬುಧವಾರ ತನ್ನ ಅಂತಿಮ ವರದಿ ಸಲ್ಲಿಸಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ವರದಿಯನ್ನು ಸ್ವೀಕರಿಸಿದರು. ಎರಡು ಸಂಪುಟಗಳ ಅಂತಿಮ ವರದಿಯು ಬೆಂಗಳೂರು ನಗರ ಜಿಲ್ಲೆ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ನಡೆದ ಖರೀದಿ ಅವ್ಯವಹಾರದ ಪರಿಶೋಧನೆಯ ವಿವರಗಳನ್ನು ಒಳಗೊಂಡಿದೆ.

ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಬಿಜೆಪಿ ಅಧಿಕಾರದ ಅವಧಿಯಲ್ಲಿ ಕೋವಿಡ್ ನಿರ್ವಹಣೆಯಲ್ಲಿ ಅಕ್ರಮ ನಡೆದಿದೆ ಎಂದು ಅಂದಿನ ವಿರೋಧ ಪಕ್ಷ ಕಾಂಗ್ರೆಸ್ ಆರೋಪಿಸಿತ್ತು. ಆರಂಭದಲ್ಲಿ ಬಿ. ಶ್ರೀರಾಮುಲು ಹಾಗೂ ನಂತರದಲ್ಲಿ ಡಾ.ಕೆ. ಸುಧಾಕರ್ ಅವರು ಆರೋಗ್ಯ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಆ ಬಳಿಕ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದ ಕುರಿತು ತನಿಖೆಗಾಗಿ 2023ರ ಆ. 26ರಂದು ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹಾ ನೇತೃತ್ವದ ವಿಚಾರಣಾ ಆಯೋಗ ರಚಿಸಿತು. ಆಯೋಗವು ಈಗಾಗಲೇ ಎರಡು ಮಧ್ಯಂತರ ವರದಿಗಳನ್ನು ಸಲ್ಲಿಸಿದೆ.

5

‘ಬಿಡುಗಡೆ: ಸರ್ಕಾರದ ವಿವೇಚನೆಗೆ’

‘ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇದನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಿಲ್ಲ. ಆದರೂ ಈ ವಿಷಯದ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಮತ್ತು ಪಾರದರ್ಶಕತೆಯ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವೇ ವರದಿಗಳನ್ನು ಸಾರ್ವಜನಿಕರ ಅವಗಾಹನೆಗೆ ಬಿಡುಗಡೆ ಮಾಡಲು ಪರಿಶೀಲನೆ ನಡೆಸಬಹುದು’ ಎಂದು ನ್ಯಾ. ಜಾನ್ ಮೈಕಲ್ ಕುನ್ಹಾ ತಿಳಿಸಿದ್ದಾರೆ.

ಬಿಎಸ್‌ವೈ, ಶ್ರೀರಾಮುಲು ಹೆಸರು

ಬಿಜೆಪಿಯ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಮತ್ತು ಬಿ.ಶ್ರೀರಾಮುಲು ಆರೋಗ್ಯ ಸಚಿವರಾಗಿದ್ದ ಅವಧಿಯಲ್ಲಿ, ಇಬ್ಬರೂ ಅಧಿಕಾರ ದುರುಪಯೋಗದ ಮೂಲಕ ವೈಯಕ್ತಿಕ ಲಾಭ ಮಾಡಿಕೊಂಡಿದ್ದಾರೆ ಎಂದು ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ಆಯೋಗವು ತನ್ನ ಮಧ್ಯಂತರ ವರದಿಯಲ್ಲಿ ಹೇಳಿತ್ತು. ಕೋವಿಡ್ ನಿರ್ವಹಣೆಗಾಗಿ ಪಿಪಿಇ ಕಿಟ್ ಖರೀದಿ ಪ್ರಕ್ರಿಯೆಯಲ್ಲಿ ಅಧಿಕಾರ ದುರುಪಯೋಗ ಹಾಗೂ ವೈಯಕ್ತಿಕ ಲಾಭ ಪಡೆದ ಬಿ.ಎಸ್. ಯಡಿಯೂರಪ್ಪ, ಬಿ. ಶ್ರೀರಾಮುಲು ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ಆಯೋಗ ಶಿಫಾರಸು ಮಾಡಿತ್ತು.

ನಾಗೇಂದ್ರ ಆಪ್ತರಿಗೆ ತನಿಖೆ ಬಿಸಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ₹89.63 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಪ್ರಕರಣದ ತನಿಖೆ ನಡೆಸುತ್ತಿರುವ ಕೇಂದ್ರ ತನಿಖಾ ದಳ (ಸಿಬಿಐ), ಶಾಸಕ ಬಿ. ನಾಗೇಂದ್ರ ಅವರ ಆಪ್ತರ ಕುಟುಂಬಸ್ಥರನ್ನು ಬುಧವಾರ ಇಲ್ಲಿ ವಿಚಾರಣೆ ನಡೆಸಿತು.

ಬೆಳಿಗ್ಗೆ ಬಳ್ಳಾರಿಗೆ ಬಂದ ಸಿಬಿಐ ಅಧಿಕಾರಿಗಳ ಎರಡು ತಂಡಗಳು ನಗರದ ತೇರುಬೀದಿಯಲ್ಲಿರುವ ವಿಶ್ವನಾಥ್ ಮತ್ತು ಹುಸೇನ್ ನಗರದಲ್ಲಿರುವ ಮಾರುತಿ ಎಂಬುವರ ಮನೆಗಳ ಮೇಲೆ ದಾಳಿ ನಡೆಸಿತು. ಈ ಇಬ್ಬರೂ ನಾಗೇಂದ್ರ ಅವರ ಮನೆಯ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದರು ಎನ್ನಲಾಗಿದೆ.

ದಾಳಿ ವೇಳೆ ವಿಶ್ವನಾಥ್ ಮತ್ತು ಮಾರುತಿ ಇಬ್ಬರೂ ಮನೆಯಲ್ಲಿ ಇರಲಿಲ್ಲ. ಹೀಗಾಗಿ ಇಬ್ಬರ ಕುಟುಂಬಸ್ಥರನ್ನು ಪೊಲೀಸ್ ಠಾಣೆಗಳಿಗೆ ಕರೆದೊಯ್ದು ವಿಚಾರಣೆ ಮಾಡಲಾಯಿತು. ವಿಶ್ವನಾಥ್ ಕುಟುಂಬಸ್ಥರನ್ನು ಬ್ರೂಸ್‌ಪೇಟೆ ಪೊಲೀಸ್ ಠಾಣೆಗೆ ಕರೆದೊಯ್ದರೆ, ಮಾರುತಿ ಮನೆಯವರನ್ನು ಗಾಂಧಿನಗರ ಠಾಣೆಗೆ ಕರೆದೊಯ್ದು ಪ್ರಶ್ನಿಸಲಾಯಿತು.

‘ಮಧ್ಯಾಹ್ನ 12.30ರಿಂದ ಸಂಜೆ 4ರವರೆಗೆ ಕುಟುಂಬಸ್ಥರನ್ನು ವಿಚಾರಣೆ ಮಾಡಿದ ಸಿಬಿಐ ಅಧಿಕಾರಿಗಳು ಬಳಿಕ ನಿರ್ಗಮಿಸಿದರು’ ಎಂದು ಪೊಲೀಸ್ ಇಲಾಖೆಯ ಮೂಲಗಳು ತಿಳಿಸಿವೆ.

‘ಭದ್ರತಾ ವ್ಯವಸ್ಥೆ ಮಾಡಿಕೊಡುವಂತೆ ಸಿಬಿಐ ಅಧಿಕಾರಿಗಳು ಪೊಲೀಸ್ ಸಿಬ್ಬಂದಿಯನ್ನು ಕೋರಿದ್ದರು. ನಿರ್ದಿಷ್ಟ ಜಾಗದಲ್ಲಿ ಭದ್ರತೆ ಬೇಕು ಎಂದು ಅವರೇನೂ ಕೇಳಿರಲಿಲ್ಲ. ತನಿಖೆಗೆ ಠಾಣೆಗಳನ್ನು ಬಳಸಿಕೊಳ್ಳಲು ಅವಕಾಶವಿದೆ. ಅದರಂತೆ ಕೆಲ ಮಂದಿಯನ್ನು ಕರೆ ತಂದು ವಿಚಾರಿಸಿದ್ದಾರೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ವಿ.ಜೆ ‘ಪ್ರಜಾವಾಣಿ’ಗೆ ತಿಳಿಸಿದರು.

ಬ್ಯಾಂಕ್ ಅಧಿಕಾರಿಯ ವಿಚಾರಣೆ: ವಿಶ್ವನಾಥ್ ಅವರ ಬ್ಯಾಂಕ್ ಖಾತೆಯಿಂದ ಕೋಟ್ಯಂತರ ರೂಪಾಯಿ ವ್ಯವಹಾರ ನಡೆದಿದೆ ಎಂದು ಹೇಳಲಾಗಿದೆ. ಹೀಗಾಗಿ ಬಳ್ಳಾರಿಯ ಬ್ಯಾಂಕ್‌ವೊಂದರ ಪ್ರಾದೇಶಿಕ ವ್ಯವಸ್ಥಾಪಕರೊಬ್ಬರನ್ನು ಕರೆಸಿ ವಿಚಾರಣೆ ಮಾಡಲಾಯಿತು ಎಂದು ಗೊತ್ತಾಗಿದೆ. ಆದರೆ ಈ ಬಗ್ಗೆ ಅಧಿಕೃತ ಮಾಹಿತಿ ಲಭ್ಯವಾಗಿಲ್ಲ.

6

ದ್ವಿತೀಯ ಪಿಯು: ಪ್ರಾಯೋಗಿಕ ಪರೀಕ್ಷೆಗೆ ‘ವೆಬ್‌ಕಾಸ್ಟಿಂಗ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪ್ರಾಯೋಗಿಕ ಪರೀಕ್ಷೆಗಳೂ ಇನ್ನು ಮುಂದೆ ವೆಬ್‌ಕಾಸ್ಟಿಂಗ್ ಕಣ್ಗಾವಲಿನಲ್ಲಿ ನಡೆಯಲಿವೆ.

2025–26ನೇ ಸಾಲಿನಿಂದ ದ್ವಿತೀಯ ಪಿಯು ಪರೀಕ್ಷೆಯ ಕನಿಷ್ಠ ತೇರ್ಗಡೆ ಅಂಕವನ್ನು ಶೇ 33ಕ್ಕೆ ನಿಗದಿ ಮಾಡಲಾಗಿದೆ. ಪ್ರಾಯೋಗಿಕ ಪರೀಕ್ಷೆಗಳ ಅಂಕಗಳು ಕೆಲ ವಿಷಯಗಳಲ್ಲಿ 20 ಹಾಗೂ ಕೆಲ ವಿಷಯಗಳಲ್ಲಿ 30 ಇದೆ. ಲಿಖಿತ ಪರೀಕ್ಷೆಯಲ್ಲಿ ಬಹುತೇಕ ವಿದ್ಯಾರ್ಥಿಗಳು ಅತ್ಯಂತ ಕಡಿಮೆ ಅಂಕ ಪಡೆದರೂ ಪ್ರಾಯೋಗಿಕ ಪರೀಕ್ಷೆಯಲ್ಲಿ ಗರಿಷ್ಠ ಅಂಕ ಪಡೆಯುತ್ತಿದ್ದಾರೆ.

6

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ

ಕೈವಾರ ಬೆಟ್ಟದಲ್ಲಿ ದೀಪೋತ್ಸವ

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ತಾಲ್ಲೂಕಿನ ಕೈವಾರದ ಬೆಟ್ಟದ ಮೇಲೆ ನೆಲೆಸಿರುವ ಚಾಮುಂಡೇಶ್ವರಿ ದೇವಿಯ 27ನೇ ವಾರ್ಷಿಕ ದೀಪೋತ್ಸವ ಹೊಸ ವರ್ಷದ ಮೊದಲ ದಿನವಾದ ಗುರುವಾರ ನಡೆಯಲಿದೆ ಎಂದು ಚಾಮುಂಡೇಶ್ವರಿ ದೇವಾಲಯ ಸಮಿತಿ ಪ್ರಕಟಣೆ ತಿಳಿಸಿದೆ.

ಪ್ರತಿವರ್ಷದಂತೆ ಚಾಮುಂಡೇಶ್ವರಿ ದೇವಿಗೆ ಬೆಳಗ್ಗೆ 8 ಗಂಟೆಗೆ ವಿಶೇಷ ಪೂಜೆ ಹಾಗೂ ಅಲಂಕಾರ ಸೇವೆ ಹಮ್ಮಿಕೊಳ್ಳಲಾಗಿದೆ. ನಂತರ ಭಕ್ತರಿಂದ ಅನ್ನದಾನ ಹಾಗೂ ಮುತ್ತೈದೆಯರಿಗೆ ಬಳೆ ಸೇವೆ ಏರ್ಪಡಿಸಲಾಗಿದೆ.

ಸಂಜೆ 6 ಗಂಟೆಗೆ ಬೆಟ್ಟದ ಪ್ರತಿ ಮೆಟ್ಟಿಲುಗಳ ಮೇಲೆ ದೀಪ ಬೆಳಗಿಸುವ ಕಾರ್ಯಕ್ರಮ ಮತ್ತು ಬೆಟ್ಟಕ್ಕೆ ವಿಶೇಷ ವಿದ್ಯುತ್ ದೀಪ ಅಲಂಕಾರ ವ್ಯವಸ್ಥೆ ಮಾಡಲಾಗುವುದು.

ಗುರುವಾರ ಕೈವಾರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಯೋಗಿ ನಾರೇಯಣ ಯತೀಂದ್ರರ ಅಲಂಕೃತ ಉತ್ಸವ ಮೆರವಣಿಗೆ ಕಾರ್ಯಕ್ರಮವನ್ನು ಸಕಲ ವಾದ್ಯ ಮೇಳಗಳೊಂದಿಗೆ ಹಮ್ಮಿಕೊಳ್ಳಲಾಗಿದೆ.

ರಸ್ತೆ ಸುರಕ್ಷತಾ ಮಾಸಾಚರಣೆ ಇಂದಿನಿಂದ

ಅಪಘಾತ ನಿಯಂತ್ರಣ: ಕಾನೂನು ಸೇವಾ ಪ್ರಾಧಿಕಾರದಿಂದ ಅರಿವು ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸಲು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು, ಸರ್ಕಾರದ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಜನವರಿ 1 ರಿಂದ ಜನವರಿ 31 ರವರೆಗೆ ರಾಜ್ಯವ್ಯಾಪಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಆಯೋಜಿಸಲಿದೆ' ಎಂದು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶಶಿಧರ್ ಶೆಟ್ಟಿ ತಿಳಿಸಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಪ್ರತಿ ವರ್ಷ 33 ಸಾವಿರಕ್ಕೂ ಹೆಚ್ಚು ರಸ್ತೆ ಅಪಘಾತಗಳು ಸಂಭವಿಸುತ್ತಿದ್ದು 12 ಸಾವಿರ ಮಂದಿ ಅಪಘಾತಗಳಲ್ಲಿ ದುರ್ಮರಣಕ್ಕೆ ಈಡಾಗುತ್ತಿದ್ದಾರೆ. 50 ಸಾವಿರಕ್ಕೂ ಹೆಚ್ಚು ಮಂದಿ ಗಂಭೀರ ಗಾಯಗಳಿಗೆ ತುತ್ತಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

ಸುಪ್ರೀಂ ಕೋರ್ಟ್ ರಸ್ತೆ ಸುರಕ್ಷತಾ ಸಮಿತಿಯ ನಿರ್ದೇಶನದಂತೆ ಸಂಯೋಜಿತ ರಸ್ತೆ ಅಪಘಾತ ಡೇಟಾಬೇಸ್ ಮತ್ತು ಸ್ಥಳದಲ್ಲೇ ರಸ್ತೆ ಅಪಘಾತ ಮಾಹಿತಿ ಸಂಗ್ರಹ ಯೋಜನೆಯ ಜಾರಿ ಮತ್ತು ಅನುಷ್ಠಾನದ ಅರಿವು ಮೂಡಿಸುವುದು. ವಾಹನ ಅಪಘಾತ ಸಂದರ್ಭದಲ್ಲಿ ನಗದು ರಹಿತ ಚಿಕಿತ್ಸೆ, ವಿಮಾ ಮೊತ್ತ ಪಾವತಿಗೆ ಸಂಬಂಧಿಸಿದಂತೆ ನಮೂನೆಗಳ ಭರ್ತಿ ಮತ್ತಿತರ ಅಂಶಗಳ ಕುರಿತು ತರಬೇತಿ, ಕಾರ್ಯಾಗಾರ ಹಮ್ಮಿಕೊಳ್ಳುವುದು. ಸಂವಾದ, ಸುವರ್ಣ ಅವಧಿ ಬಗ್ಗೆ ಅರಿವು ಮೂಡಿಸುವುದು. ಮಾಸ್ಟರ್ ಟ್ರೈನರ್‌ಗಳಿಂದ ಉನ್ನತ ಮಟ್ಟದ ತರಬೇತಿಯನ್ನು ಸಾರಿಗೆ, ಪೊಲೀಸ್, ಆರೋಗ್ಯ, ರಸ್ತೆ ಮಾಲೀಕತ್ವದ ಸಂಸ್ಥೆಗಳ ಅಧಿಕಾರಿ ಮತ್ತು ಮತ್ತು ಸಿಬ್ಬಂದಿಗೆ ನೀಡಲಾಗುವುದು ಎಂದು ಅವರು ವಿವರಿಸಿದರು.

ಕೋಷ್ಟಕ		
2019-2025ರ ಮಧ್ಯೆ ಸಂಭವಿಸಿದ ರಸ್ತೆ ಅಪಘಾತಗಳು ಮತ್ತು ಮೃತರ ಸಂಖ್ಯೆ		
ವರ್ಷ	ಅಪಘಾತ	ಸಾವು
2020	34,178	3,760
2021	34,647	10,038
2022	39,762	11,702
2023	43,440	12,321
2024	39,228	10,319
2025 (ಜೂನ್ ಅಂತ್ಯದವರೆಗೆ)	21,937	5,975

'ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್‌ಗಳ ಚಾಲಕ ಮತ್ತು ನಿರ್ವಾಹಕರಿಗೆ ಎಲೆಕ್ಟ್ರಿಕ್ ಬಸ್ ಚಾಲನೆ ಹಾಗೂ ರಸ್ತೆ ಸುರಕ್ಷತೆ ಬಗ್ಗೆ ಕಾರ್ಯಕ್ರಮ, ಪ್ರತಿ ವಾರ ರಾಜ್ಯ ಮಟ್ಟದ ಸೆಮಿನಾರ್, ವಾಕಥಾನ್, ಮ್ಯಾರಾಥಾನ್ ವಿಂಟೇಜ್ ಕಾರ್ ರ‍್ಯಾಲಿ, ಬೈಕ್ ರ‍್ಯಾಲಿ, ಸೈಕಲ್ ಜಾಥಾ, ಮಾನವ ಸರಪಳಿ ನಿರ್ಮಾಣದ ಮೂಲಕ ಜಾಗೃತಿ, ಸಂಚಾರ ಲೈವ್ ಪ್ರಾತ್ಯಕ್ಷಿಕೆ, ವಾಣಿಜ್ಯ ವಾಹನ ಮಾಲೀಕರು ಮತ್ತು ಚಾಲಕರಿಗೆ ರಸ್ತೆ ಸುರಕ್ಷತೆ ಅರಿವು ಮೂಡಿಸುವ ಕಾರ್ಯಾಗಾರ, ಉಚಿತ ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರ, ವಿದ್ಯಾರ್ಥಿಗಳಿಗೆ ರಸಪ್ರಶ್ನೆ, ಪ್ರಬಂಧ ರಚನೆ, ಕಿರು ನಾಟಕ, ಚಿತ್ರಕಲಾ ಸ್ಪರ್ಧೆ, ಸಾಮಾಜಿಕ ಜಾಲತಾಣದಲ್ಲಿ ರಸ್ತೆ ಸುರಕ್ಷತೆಯ ಘೋಷಣೆಗಳ ಪ್ರದರ್ಶನ, ಮಾಧ್ಯಮಗಳಲ್ಲಿ ಪ್ರಚಾರ, ರೇಡಿಯೊ ಜಿಂಗಲ್ಸ್ ಮತ್ತು ಸಿನಿಮಾ ಮಂದಿರಗಳಲ್ಲಿ ಜಾಹೀರಾತು ಪ್ರದರ್ಶನಗಳ ಮೂಲಕ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸುತ್ತೇವೆ. ಉತ್ತಮ ಸಾಧನೆ ಮಾಡಿದ ಜಿಲ್ಲೆಗಳಿಗೆ ಬಹುಮಾನ ನೀಡುತ್ತೇವೆ' ಎಂದು ಅವರು ತಿಳಿಸಿದರು.

ರಸ್ತೆ ಅಪಘಾತದಲ್ಲಿ ಸಾವನ್ನಪ್ಪುವ ಜನರಲ್ಲಿ ಶೇ 28 ಪಾದಚಾರಿಗಳಾಗಿದ್ದಾರೆ. ಶೇ 90ರಷ್ಟು ಅಪಘಾತಗಳಿಗೆ ಅತಿ ವೇಗದ ಚಾಲನೆಯೇ ಕಾರಣ. ಉಳಿದಂತೆ ಮದ್ಯಪಾನ ಮಾಡಿ ಚಾಲನೆ ಮಾಡುವುದು, ಮೊಬೈಲ್ ಬಳಕೆ, ಕಳಪೆ ಮೂಲ ಸೌಕರ್ಯ, ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಬಳಕೆ ಮಾಡದೇ ಇರುವುದು ಮುಂತಾದ ಕಾರಣಗಳಿಂದ ಸಂಭವಿಸುತ್ತಿವೆ ಎಂದು ಅವರು ತಿಳಿಸಿದರು.

ಪ್ರಾಧಿಕಾರದ ಜೊತೆ ಸಾರಿಗೆ, ಪೊಲೀಸ್, ಆರೋಗ್ಯ, ಶಿಕ್ಷಣ, ಲೋಕೋಪಯೋಗಿ, ಹೆದ್ದಾರಿ ಪ್ರಾಧಿಕಾರ, ಜಿಲ್ಲಾಡಳಿತ, ಸ್ಥಳೀಯ ವಕೀಲರ ಸಂಘ, ವಿಮಾ ಕಂಪನಿಗಳ ಪ್ರತಿನಿಧಿಗಳು, ಸರ್ಕಾರೇತರ ಸಂಸ್ಥೆಗಳು ಸಹಯೋಗ ನೀಡಿದ್ದು ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಕಾರ್ಯಕ್ರಮ ಆಯೋಜಿಸುತ್ತಿದ್ದೇವೆ' ಎಂದು ಎಂದು ಶಶಿಧರ್ ಶೆಟ್ಟಿ ಅವರು ತಿಳಿಸಿದರು.

ಸಾರಿಗೆ ಇಲಾಖೆಯ ಆಯುಕ್ತ ಎ.ಎಂ. ಯೋಗೇಶ್ ಮಾತನಾಡಿ, ಅಪ್ರಾಪ್ತ ವಯಸ್ಕರಿಂದಲೂ ಅಪಘಾತಗಳು ಹೆಚ್ಚಿನ ಪ್ರಮಾಣದಲ್ಲಿ ಸಂಭವಿಸುತ್ತಿದ್ದು ಈ ಬಗ್ಗೆ ಪಿಯು, ಡಿಗ್ರಿ ಕಾಲೇಜುಗಳಿಗೆ ತೆರಳಿ ನಾವು ಜಾಗೃತಿ ಮೂಡಿಸುತ್ತೇವೆ. ಎಲೆಕ್ಟ್ರಿಕ್ ವಾಹನಗಳ ಚಾಲಕರಿಗೆ ಈಗಾಗಲೇ ಎರಡು ಹಂತದ ತರಬೇತಿ ನೀಡಿದ್ದು ಅವರಿಗೂ ಜಾಗೃತಿ ಮೂಡಿಸುತ್ತೇವೆ' ಎಂದು ಹೇಳಿದರು.

ಬೆಂಗಳೂರು ಪಶ್ಚಿಮ ಸಂಚಾರ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ, ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ 'ಟೇಲ್ಸ್ ಬೈ ಪರಿ' ಕೃತಿ

ಬೆಂಗಳೂರು: ಬಸವನಗುಡಿಯ ಎನ್‌ಇಟಿ ಪಬ್ಲಿಕ್ ಶಾಲೆಯಲ್ಲಿ 4ನೇ ತರಗತಿ ಓದುತ್ತಿರುವ ಪರಿಣಿತಾ ವಿರಚಿತ 'ಟೇಲ್ಸ್ ಬೈ ಪರಿ' ಕೃತಿಯು ಪ್ರತಿಷ್ಠಿತ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರ್ಪಡೆಯಾಗಿದ್ದು, 'ಯುವ ಲೇಖಕಿ' ಎಂಬ ಮನ್ನಣೆ ತಂದುಕೊಟ್ಟಿದೆ.

'ಪರಿಣಿತಾ ಅಭಿವ್ಯಕ್ತಿ ಮತ್ತು ಕಥೆ ಹೆಣೆಯುವಿಕೆಯಲ್ಲಿ ತನ್ನದೇ ಆದ ಶೈಲಿಯನ್ನು ರೂಪಿಸಿಕೊಂಡಿದ್ದಾಳೆ. ಕಥಾ ಸಂಕಲನ 'ಟೇಲ್ಸ್ ಬೈ ಪರಿ'ಯು ವ್ಯಕ್ತಿ-ವ್ಯಕ್ತಿತ್ವ ಹಾಗೂ ಸಮಾಜದ ಸೂಕ್ಷ್ಮ ಕಥೆಗಳನ್ನು ಹೇಳುತ್ತದೆ. ಆಕೆಯ ಬರವಣಿಗೆ ಈಗ ದೇಶದ ಗಮನ ಸೆಳೆದಿದೆ. ಬಾಲ್ಯದಲ್ಲೇ ಬರವಣಿಗೆ ರೂಢಿಸಿಕೊಂಡು 10ನೇ ವಯಸ್ಸಿಗೆ ಪರಿಣಿತಾ ಮಾಡಿರುವ ಸಾಧನೆ ಅನನ್ಯ'ವಾದುದು.

'ಪರಿಣಿತಾರ ಕೃತಿ ಸುಬ್ಬು ಪಬ್ಲಿಕೇಷನ್ಸ್ ಅಡಿಯಲ್ಲಿ ಮಾರ್ಚ್ 8ರಂದು ಜನಾರ್ಪಣೆಗೊಂಡಿತ್ತು.

'ನನ್ನ ಪ್ರತಿಭೆ, ಸೃಜನಶೀಲತೆ ಮತ್ತು ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ಸದಾ ಪ್ರೋತ್ಸಾಹ ನೀಡುತ್ತಿರುವ ಲೇಖಕಿ, ದಂತ ವೈದ್ಯೆಯಾದ ತಾಯಿ ಡಾ. ಅನುಷಾ ಆರ್. ಗುಪ್ತಾ, ಬೆಸ್ಕಾಂ ಅಧಿಕಾರಿಯಾಗಿ ರುವ ತಂದೆ ಕೆ. ಬಾಲಾಜಿ ಮತ್ತು ಬಸವನಗುಡಿಯ ಎನ್‌ಇಟಿ ಪಬ್ಲಿಕ್ ಶಾಲೆಯ ಶಿಕ್ಷಕರಿಗೆ ಆಭಾರಿ ಯಾಗಿದ್ದೇನೆ' ಎಂದು ಪರಿಣಿತಾ ಹೇಳಿದ್ದಾಳೆ.

ಕಾನೂನು ವಿ.ವಿ: ಮೈಸೂರಿನಲ್ಲಿ ಕಚೇರಿ ಸ್ಥಾಪಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿಯನ್ನು ಮೈಸೂರಿನಲ್ಲಿ ಸ್ಥಾಪಿಸಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಕಾನೂನು ಸಚಿವ ಎಚ್‌.ಕೆ. ಪಾಟೀಲ ಅವರಿಗೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪತ್ರ ಬರೆದಿದ್ದಾರೆ.

ಕಾನೂನು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ 176 ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಈ ಕಾಲೇಜುಗಳಲ್ಲಿ 30 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಮೂರು ವರ್ಷ ಹಾಗೂ ಐದು ವರ್ಷಗಳ ಅವಧಿಯ ಪಠ್ಯಕ್ರಮದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಪೈಕಿ, ಅರ್ಧದಷ್ಟು ಕಾಲೇಜುಗಳು ಮೈಸೂರು, ಬೆಂಗಳೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಸೇರಿದಂತೆ ಹಳೆ ಮೈಸೂರು ಪ್ರಾಂತ್ಯದ ಭಾಗದಲ್ಲಿವೆ. ಶೇ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಭಾಗದವರೇ ಆಗಿದ್ದಾರೆ. ಇವರೆಲ್ಲರೂ ಶೈಕ್ಷಣಿಕ ದಾಖಲಾತಿ, ಅಂಕಪಟ್ಟಿ, ಇತರೆ ಆಡಳಿತಾತ್ಮಕ ಕೆಲಸಗಳಿಗಾಗಿ ಪ್ರತಿ ಬಾರಿಯೂ ದೂರದ ಹುಬ್ಬಳ್ಳಿಗೆ ಪ್ರಯಾಣಿಸಬೇಕಾದ ಅನಿವಾರ್ಯತೆ ಇದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ವಿದ್ಯಾರ್ಥಿಗಳಿಗೆ ಉಂಟಾಗುತ್ತಿರುವ ಆರ್ಥಿಕ ಹೊರೆ ಹಾಗೂ ಸಮಯ ಸದುಪಯೋಗ ಮಾಡಿಕೊಳ್ಳುವ ಉದ್ದೇಶದಿಂದ ಕಾನೂನು ವಿಶ್ವವಿದ್ಯಾಲಯದ ಪ್ರಾದೇಶಿಕ ವಲಯ ಕಚೇರಿಯನ್ನು ಮೈಸೂರಿನಲ್ಲಿ ಸ್ಥಾಪಿಸುವುದು ಸೂಕ್ತವಾಗಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ಸರಳ ಆಡಳಿತಾತ್ಮಕ ಕ್ರಮಕ್ಕಾಗಿ ಪ್ರಾದೇಶಿಕ ಕಚೇರಿಯನ್ನು ಆರಂಭಿಸಲು ತಕ್ಷಣ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದೂ ಅವರು ಮನವಿ ಮಾಡಿದ್ದಾರೆ.

'ಒಪ್ಪಂದ ಆಗಿದ್ದರೆ ಅಧಿಕಾರ ಬಿಟ್ಟುಕೊಡಲಿ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ರಾಜ್ಯ ಸರ್ಕಾರ ರಚನೆ ಸಂದರ್ಭದಲ್ಲಿ ಒಪ್ಪಂದ ಆಗಿದ್ದರೆ ಆ ಪ್ರಕಾರ ಅಧಿಕಾರ ಬಿಟ್ಟುಕೊಡಬೇಕು ಎಂದು ಶ್ರೀಶೈಲ ಪೀಠದ ಚೆನ್ನ ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಏನು ಒಪ್ಪಂದ ಆಗಿದೆ ಎಂಬುದು ಯಾರಿಗೂ ಗೊತ್ತಿಲ್ಲ. ಯಾರು ಒಪ್ಪಂದ ಮಾಡಿಕೊಂಡಿದ್ದಾರೆ ಅವರಿಗೆ ಮಾತ್ರ ಸತ್ಯ ಗೊತ್ತಿದೆ' ಎಂದರು.

ಒಪ್ಪಂದ ಆಗಿದ್ದರೆ ಡಿ.ಕೆ. ಶಿವಕುಮಾರ್ ಮುಂದಿನ ಮುಖ್ಯಮಂತ್ರಿ ಆಗಬಹುದು. ಪಕ್ಷದ ಸಂಘಟನೆಯಲ್ಲಿ ಅವರ ಪಾತ್ರವೂ ಇದೆ ಎಂದು ಹೇಳಿದರು.

ಒಪ್ಪಂದಗಳು ಮುರಿದುಬಿದ್ದಿದ್ದಕ್ಕೆ, ಒಪ್ಪಂದದ ಪ್ರಕಾರ ನಡೆದುಕೊಳ್ಳಲಾರದ್ದಕ್ಕೆ ಸರ್ಕಾರಗಳೇ ಉರುಳಿ ಬಿದ್ದಿವೆ. ಹಾಗೆ ಆಗಬಾರದು ಎಂದರೆ ಒಪ್ಪಂದದ ಪ್ರಕಾರ ನಡೆದುಕೊಳ್ಳುವುದು ಒಳ್ಳೆಯದು ಎಂದರು.

ಪಾಲಿಕೆ ಚುನಾವಣೆಗೆ ತಯಾರಾಗುತ್ತಿದ್ದೇವೆ: ಸಚಿವ

ಬೆಂಗಳೂರು: 'ಮುಂಬರುವ ಪಾಲಿಕೆ ಚುನಾವಣೆಯಲ್ಲಿ ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಎಲ್ಲ 11 ವಾರ್ಡ್‌ಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಈಗಿನಿಂದಲೇ ಸಿದ್ಧತೆ ಆರಂಭವಾಗಿದೆ' ಎಂದು ಕ್ಷೇತ್ರದ ಶಾಸಕರೂ ಆಗಿರುವ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ಹೆಬ್ಬಾಳದ ಕೆ.ಟಿ. ಟ್ರಾನ್ಸ್‌ಪೋರ್ಟ್ ರಸ್ತೆ, ವಿ. ನಾಗೇನಹಳ್ಳಿ 3ನೇ ಅಡ್ಡರಸ್ತೆಯ ಕನಕನಗರ, ಮನೋರಾಯನಪಾಳ್ಯದ ಲಕ್ಷ್ಮೀ ಗೋಲ್ಡ್ ಪ್ಯಾಲೇಸ್ ಬಳಿ, ದಿಣ್ಣೂರು ಚಾಮುಂಡಿನಗರದ ಅಂಬೇಡ್ಕರ್ ವೃತ್ತ ಮತ್ತು ಮಠದಹಳ್ಳಿಯ ಮುನೇಶ್ವರ ದೇವಸ್ಥಾನ ರಸ್ತೆಯ ಅರಳಿಮರ ಗುಂಡು ಪ್ರದೇಶದಲ್ಲಿ ಎಲ್‌ಇಡಿ ವಿದ್ಯುತ್ ದೀಪ ಅಳವಡಿಕೆ ಕಾಮಗಾರಿಗೆ ಮಂಗಳವಾರ ಚಾಲನೆ ನೀಡಿ ಮಾತನಾಡಿದರು. 'ಹೆಬ್ಬಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುವ ಎಲ್ಲ ವಾರ್ಡ್‌ಗಳಲ್ಲಿ ಕಾಂಗ್ರೆಸ್ ಪಕ್ಷ ಅರ್ಹ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ಕ್ಷೇತ್ರದಲ್ಲಿ ಯಾವುದೇ ಮೂಲ ಸೌಕರ್ಯ ಕೊರತೆ ಉಂಟಾಗದಂತೆ ನೋಡಿಕೊಳ್ಳುವುದು ನನ್ನ ಜವಾಬ್ದಾರಿ' ಎಂದು ಭರವಸೆ ನೀಡಿದರು.

'ಕ್ಷೇತ್ರದಲ್ಲಿ 10 ಸಾವಿರ ಎಲ್‌ಇಡಿ ದೀಪಗಳನ್ನು ಅಳವಡಿಸಲಾಗುತ್ತಿದೆ. ಶುದ್ಧ ಕುಡಿಯುವ ನೀರು ಪೂರೈಕೆಗೆ ಹಲವು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಉದ್ಯಾನವನಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ₹30 ಕೋಟಿ ಅನುದಾನ ಬಿಡುಗಡೆ ಮಾಡಿದೆ' ಎಂದು ತಿಳಿಸಿದರು.

भारत सरकार
GOVERNMENT OF INDIA
सत्यमेव जयते

ಜಗಿಯುವ ತಂಬಾಕು, ಜರ್ದಾ, ಸುಗಂಧಿತ ತಂಬಾಕು ಮತ್ತು ಗುಟ್ಕಾ
ಉತ್ಪಾದಕರೇ ಗಮನಿಸಿರಿ

1ನೇ ಫೆಬ್ರವರಿ, 2026 ರಿಂದ
ಕ್ಷಮತೆ ಆಧಾರಿತ ಅಬಕಾರಿ ಉತ್ಪಾದನಾ ಶುಲ್ಕ ಜಾರಿ

ಪ್ಯಾಕಿಂಗ್ ಮಷೀನ್‌ನ ಸಹಾಯದಿಂದ ತಯಾರಾಗಿ ಪೌಚ್‌ನಲ್ಲಿ ಪ್ಯಾಕ್ ಮಾಡಲ್ಪಟ್ಟು ಹೊರಬರುವ ಜಗಿಯುವ ತಂಬಾಕು, ಜರ್ದಾ, ಸುಗಂಧಿತ ತಂಬಾಕು ಮತ್ತು ಗುಟ್ಕಾ ಉತ್ಪನ್ನಗಳ ಮೇಲೆ, ಅವುಗಳ ಉತ್ಪಾದನಾ ಕ್ಷಮತೆಯ ಆಧಾರದ ಮೇರೆಗೆ, 1ನೇ ಫೆಬ್ರವರಿ, 2026 ರಿಂದ ಕೇಂದ್ರಿಯ ಉತ್ಪಾದನಾ ಶುಲ್ಕ ಅನ್ವಯವಾಗುತ್ತದೆ.

ಈಗಾಗಲೇ ನೋಂದಣಿ ಮಾಡಿಕೊಂಡಿರುವ ತೆರಿಗೆ ಪಾವತಿದಾರರು, ಹೊಸದಾಗಿ ಕೇಂದ್ರಿಯ ಉತ್ಪಾದನಾ ಶುಲ್ಕ ನೋಂದಣಿ ಮಾಡಿಕೊಳ್ಳಬೇಕಾಗಿಲ್ಲ.

ಇಂತಹ ಉತ್ಪಾದಕರು 1ನೇ ಫೆಬ್ರವರಿ, 2026 ರಿಂದ 7ನೇ ಫೆಬ್ರವರಿ, 2026 ರೊಳಗೆ, ನಿಯಮಗಳ ಪ್ರಕಾರ ತಮ್ಮ ಉತ್ಪಾದನಾ ಆವರಣದಲ್ಲಿರುವ ಯಂತ್ರೋಪಕರಣಗಳಿಗೆ ಸಂಬಂಧಿತ ವಿವರಗಳನ್ನು, ನಿರ್ದಿಷ್ಟ ನಮೂನೆಯಲ್ಲಿ ಭರ್ತಿ ಮಾಡಿ, ತಮ್ಮ ವ್ಯಾಪ್ತಿಯ ಕೇಂದ್ರಿಯ ಉತ್ಪಾದನಾ ಶುಲ್ಕ ಉಪ / ಸಹಾಯಕ ಆಯುಕ್ತರಿಗೆ ಸಲ್ಲಿಸುವುದು.

ಕ್ರ.ಸಂ.	ಅನುಸರಣೆ ಮಾದರಿ	ಕೊನೆಯ ದಿನಾಂಕ
1.	ತಿಂಗಳ ಸೆಂಟ್ರಲ್ ಎಕ್ಸೈಸ್ ಡ್ಯೂಟಿ ಪೇಮೆಂಟ್	ಅದೇ ತಿಂಗಳ 06ನೇ ದಿನ
2.	ತಿಂಗಳ ಸೆಂಟ್ರಲ್ ಎಕ್ಸೈಸ್ ಸ್ಟೇಟ್‌ಮೆಂಟ್	ಅದೇ ತಿಂಗಳ 10ನೇ ದಿನ

ಟಿನ್ ಇತ್ಯಾದಿಗಳಲ್ಲಿ ಪ್ಯಾಕ್ ಮಾಡಿರುವ ಉತ್ಪಾದನೆಯ ಶುಲ್ಕವನ್ನು, ಚಿಲ್ಲರೆ ಮಾರಾಟ ದರದ ಆಧಾರದಲ್ಲಿ ಲೆಕ್ಕಾಚಾರ ಮಾಡಲಾಗುವ ಅಸೆಸ್ಸೇಬಲ್ ದರದಲ್ಲಿ ಪಾವತಿಸುವುದು (ಅಬೇಟ್‌ಮೆಂಟ್ ನಿಬಂಧನೆಯ ಪ್ರಕಾರ).

ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ದಿನಾಂಕ 31ನೇ ಡಿಸೆಂಬರ್, 2025ರ ಸೆಂಟ್ರಲ್ ಎಕ್ಸೈಸ್ ಅಧಿಸೂಚನೆ ಸಂ. 04/2025 ಪರಿಶೀಲಿಸಿರಿ.

@cbic_india @cbicindia @CBICINDIA @cbicindia @CBICIndia www.cbic.gov.in

CBC 15502/13/0048/2526

ನಿಧನ ವಾರ್ತೆ

ಪಾ ರಾಜಗೋಪಾಲ್



ಬೆಂಗಳೂರು: ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿಯ ಸ್ಥಾಪಕ ಪ್ರಧಾನ ಕಾರ್ಯದರ್ಶಿ, ಮಲ್ಲೇಶ್ವರ ನಿವಾಸಿ ಪಾ ರಾಜಗೋಪಾಲ್ (79) ಬುಧವಾರ ನಿಧನರಾದರು.

ಎಸ್‌ಬಿಐನಲ್ಲಿ 1972ರಲ್ಲಿಯೇ ಮೊದಲ ಕನ್ನಡ ಸಂಘವನ್ನು ಸ್ಥಾಪಿಸಿದ್ದರು. ಬ್ಯಾಂಕಿಂಗ್ ಶಬ್ದಗಳಿಗೆ ಕನ್ನಡದ ಪಾರಿಭಾಷಿಕ ಪದಗಳನ್ನು ಸೃಷ್ಟಿಸುತ್ತಿದ್ದರು. ಎಚ್‌ಎಸ್‌ಕೆ ಅವರ ಮಾರ್ಗದರ್ಶನದಲ್ಲಿ 'ಬ್ಯಾಂಕಿಂಗ್ ನಿಘಂಟು' ತರುವುದರಲ್ಲಿ ಹಾಗೂ 'ಬ್ಯಾಂಕಿಂಗ್ ಪ್ರಪಂಚ' ತ್ರೈಮಾಸಿಕ ಪತ್ರಿಕೆಯ ಪ್ರಕಟಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ನಾರಿ ಶಕ್ತಿ ರಾಷ್ಟ್ರೀಯ ಸಮ್ಮೇಳನ 4ಕ್ಕೆ

ಬೆಂಗಳೂರು: ಕರ್ನಾಟಕ ಆರ್ಯ ಈಡಿಗ ಮಹಿಳಾ ಸಂಘವು ಜನವರಿ 4ರಂದು ಹೊಸೂರು ಮುಖ್ಯರಸ್ತೆಯಲ್ಲಿರುವ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಾರಿ ಶಕ್ತಿ ರಾಷ್ಟ್ರೀಯ ಸಮ್ಮೇಳನ ಹಮ್ಮಿಕೊಂಡಿದೆ.

ಆರ್ಯ ಈಡಿಗ ಮಹಾ ಸಂಸ್ಥಾನದ ಪೀಠಾಧಿಪತಿ ವಿಖ್ಯಾತಾನಂದ ಸ್ವಾಮೀಜಿ, ನಿಟ್ಟೂರಿನ ಶ್ರೀನಾರಾಯಣಗುರು ಮಹಾ ಸಂಸ್ಥಾನದ ರೇಣುಕಾನಂದ ಸ್ವಾಮೀಜಿ, ಸಿಗಂದೂರು ಕ್ಷೇತ್ರದ ಧರ್ಮದರ್ಶಿ ರಾಮಪ್ಪ ಅವರು ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಲಿದ್ದಾರೆ.

ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಸಚಿವರಾದ ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಮಧು ಬಂಗಾರಪ್ಪ, ಸಂಸದ ಕೋಟಾ ಶ್ರೀನಿವಾಸ ಪೂಜಾರಿ, ಶಾಸಕರಾದ ಬೇಳೂರು ಗೋಪಾಲಕೃಷ್ಣ, ಎಚ್‌.ಆರ್. ಗವಿಯಪ್ಪ, ಮಾಜಿ ಸಚಿವರಾದ ಮಾಲಿಕಯ್ಯ ಗುತ್ತೇದಾರ್, ವಿನಯ್ ಕುಮಾರ್ ಸೊರಕೆ, ಜಯಮಾಲಾ, ಕರ್ನಾಟಕ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಸೌಮ್ಯಾರೆಡ್ಡಿ, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಕಾಶ್‌ಗೆ ಫೆಲೋಶಿಪ್

ಬೆಂಗಳೂರು: ನವದೆಹಲಿಯ ರಾಷ್ಟ್ರೀಯ ಕೃಷಿ ವಿಜ್ಞಾನಿಗಳ ಅಕಾಡೆಮಿಯ (ಎನ್‌ಎಎಎಸ್) 2026ನೇ ಸಾಲಿನ ಫೆಲೋಶಿಪ್‌ಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಡೀನ್ ಎನ್. ಬಿ. ಪ್ರಕಾಶ್ ಆಯ್ಕೆಯಾಗಿದ್ದಾರೆ.

ಎನ್.ಬಿ. ಪ್ರಕಾಶ್ ಅವರು ಮಣ್ಣಿನ ಫಲವತ್ತತೆ, ಸುಸ್ಥಿರ ಕೃಷಿಯ ಕುರಿತು ಕೈಗೊಂಡ ಸಂಶೋಧನಾ ಚಟುವಟಿಕೆಗಳ ಫಲಿತಾಂಶ, ಸಿಲಿಕಾನ್ ಪೋಷಕಾಂಶದ ಉಪಯುಕ್ತತೆ ಬಗ್ಗೆ ನಡೆಸಿದ ಸಂಶೋಧನೆಯನ್ನು ಪರಿಗಣಿಸಿ ಆಯ್ಕೆ ಮಾಡಲಾಗಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಮಹಿಳಾ ಸೌಧ ನಿರ್ಮಿಸಿ: ನಾಗಲಕ್ಷ್ಮೀ ಚೌಧರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಬಜೆಟ್‌ನಲ್ಲಿ ಮಹಿಳಾ ಸೌಧ ನಿರ್ಮಿಸಲು ಅನುದಾನ ಒದಗಿಸಬೇಕು ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, 'ರಾಜ್ಯ ಮಹಿಳಾ ಆಯೋಗ, ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಹಾಗೂ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಸ್ವಂತ ಕಚೇರಿಗಳಿಲ್ಲ. ಮಹಿಳಾ ಸೌಧ ನಿರ್ಮಾಣ ಮಾಡಿದರೆ, ಮಹಿಳೆಯರ ಹಾಗೂ ಮಕ್ಕಳ ಸಮಸ್ಯೆಗಳನ್ನು ಒಂದೇ ಸೂರಿನಡಿಯಲ್ಲಿ ಬಗೆಹರಿಸಲು ಸಹಾಯವಾಗಲಿದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಚಿತ್ರಾವಳಿ

ಅಹಮದಾಬಾದ್‌ನಲ್ಲಿ ಈಚೆಗೆ ನಡೆದ 100ನೇ ಅಖಿಲ ಭಾರತೀಯ ವೈದ್ಯಕೀಯ ಸಮ್ಮೇಳನದಲ್ಲಿ ಭಾರತೀಯ ವೈದ್ಯಕೀಯ ಸಂಘದ (ಐಎಂಎ) ರಾಜ್ಯ ಘಟಕದ ಗೌರವ ಕಾರ್ಯದರ್ಶಿ ಡಾ.ವಿ.ಸುರಿರಾಜು ಅವರಿಗೆ ರಾಷ್ಟ್ರೀಯ ಅಧ್ಯಕ್ಷರ ಮೆಚ್ಚುಗೆಯ 'ಗೌರವ ರಾಜ್ಯ ಕಾರ್ಯದರ್ಶಿ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಎಚ್‌ಎಎಲ್‌ನ ರಾಷ್ಟ್ರಕವಿ ಕುವೆಂಪು ಸಂಘ ಹಮ್ಮಿಕೊಂಡಿದ್ದ ಕುವೆಂಪು ಜಯಂತಿ ಸಮಾರಂಭದಲ್ಲಿ ಸಾಹಿತಿ ಎಸ್. ರಾಮಲಿಂಗೇಶ್ವರ್, ಸಂಘದ ಕಾರ್ಯಾಧ್ಯಕ್ಷ ವಿ.ರೆಡ್ಡಿ, ಮುಖಂಡರಾದ ರಮೇಶ್, ಟಿ.ಎನ್. ನರಸಿಂಹಮೂರ್ತಿ ಮೊದಲಾದವರು ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು

ಅಲೆನ್ ಸಂಸ್ಥೆ ಈಚೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜೆಇಇ ಮತ್ತು ನೀಟ್‌ನಲ್ಲಿ ಅಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು

ಕೆಎಸ್‌ಆರ್‌ಟಿಸಿ: ತರಬೇತಿ ಪರ್ವ

ಹೊಸ ನೌಕರರಿಗೂ, ಹಳಬರಿಗೂ ತರಬೇತಿ
ಐದು ಕೇಂದ್ರಗಳಿಗೆ ತಲಾ ₹25 ಲಕ್ಷ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ತರಬೇತಿ ಪರ್ವ ಆರಂಭವಾಗಿದೆ. ಅಪಘಾತ ನಿಯಂತ್ರಣವೂ ಸೇರಿ 20ಕ್ಕೂ ಅಧಿಕ ವಿಷಯಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಇದಕ್ಕಾಗಿ ಐದು ತರಬೇತಿ ಕೇಂದ್ರಗಳಿಗೆ ಅಪಘಾತ ಪರಿಹಾರ ನಿಧಿಯಿಂದ ತಲಾ ₹25 ಲಕ್ಷ ಮಂಜೂರು ಮಾಡಲಾಗಿದೆ.

ಮಳವಳ್ಳಿಯಲ್ಲಿರುವ ಚಾಲಕ ಮತ್ತು ತಾಂತ್ರಿಕ ತರಬೇತಿ ಕೇಂದ್ರ, ಮಾಲೂರಿನಲ್ಲಿರುವ ಕೇಂದ್ರೀಯ ತರಬೇತಿ ಕೇಂದ್ರ, ಚಿಕ್ಕಮಗಳೂರಿನಲ್ಲಿರುವ ಪ್ರಾದೇಶಿಕ ತರಬೇತಿ ಕೇಂದ್ರ, ಹಾಸನದಲ್ಲಿರುವ ಪ್ರಾದೇಶಿಕ ತರಬೇತಿ ಕೇಂದ್ರ ಹಾಗೂ ಹೊಳಲ್ಕೆರೆ ಚಾಲನಾ ತರಬೇತಿ, ತಾಂತ್ರಿಕ ಕೌಶಲ ಅಭಿವೃದ್ಧಿ ಕೇಂದ್ರಗಳಲ್ಲಿ ತರಬೇತಿ ಕಾರ್ಯ ನಡೆಯುತ್ತಿದೆ.

ಯಾವ್ಯಾವ ತರಬೇತಿಗಳು?: ಪುನಶ್ಚೇತನ, ಅಪಘಾತ ರಹಿತ ಚಾಲನೆ, ಕೆಎಂಪಿಎಲ್ (ಪ್ರತಿ ಲೀಟರ್‌ಗೆ ಸಂಚರಿಸಬೇಕಾದ ಕಿಲೋಮೀಟರ್), ಚಲನೆ ಆಧಾರಿತ ಬಸ್ ಸಿಮ್ಯುಲೇಟರ್, ಪಿಸಿಆರ್‌ಎ (ಇಂಧನ ಸಂರಕ್ಷಣೆ), ಕಂಪ್ಯೂಟರ್ ಸಾಕ್ಷರತೆ ಸೇರಿದಂತೆ, ಭದ್ರತಾ ಸಿಬ್ಬಂದಿಗೆ, ಕಿರಿಯ ಸಹಾಯಕರಿಗೆ, ತಾಂತ್ರಿಕ ಸಿಬ್ಬಂದಿಗೆ, ಮಹಿಳಾ ಸಿಬ್ಬಂದಿಗೆ, ಆಡಳಿತ ಸಿಬ್ಬಂದಿಗೆ, ಮೇಲ್ವಿಚಾರಣಾ ಸಿಬ್ಬಂದಿಗೆ ವಿಶೇಷ ತರಬೇತಿಗಳನ್ನು ನೀಡಲಾಗುತ್ತಿದೆ.

ಪ್ರತಿ ಕಿಲೋಮೀಟರ್‌ಗೆ ನಿಗದಿತ ಗಳಿಕೆಗಿಂತ ಕಡಿಮೆ ಸಂಗ್ರಹ ಮಾಡುವ ಬಸ್ ನಿರ್ವಾಹಕರಿಗೆ ತರಬೇತಿ, ಹೊಸದಾಗಿ ನೇಮಕಾತಿಗೊಂಡವರಿಗೆ ತರಬೇತಿ, ನಿವೃತ್ತರಾದ ಮೇಲೆ ಹಣಕಾಸು ನಿರ್ವಹಣೆ, ಬದುಕಿನ ನಿರ್ವಹಣೆ ಬಗ್ಗೆ ನಿವೃತ್ತರಿಗೂ ತರಬೇತಿ ನೀಡಲಾಗುತ್ತಿದೆ.

ಸಂಚಾರ ನಿಯಮಗಳು ಮತ್ತು ಸುರಕ್ಷಿತ ಚಾಲನೆ, ಚಾಲನಾ ಕೌಶಲ, ಸೇವಾ ನಿಯಮಗಳ ಬಗ್ಗೆ, ಕಾರ್ಮಿಕರ ಕಲ್ಯಾಣ ಯೋಜನೆಗಳ ಕುರಿತು ವಿಶೇಷ ತರಬೇತಿ ನೀಡಲಾಗುತ್ತಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ನಿಗಮದಿಂದಲೇ ತರಬೇತಿ: ಕೆಎಸ್‌ಆರ್‌ಟಿಸಿಯ ಐದು ತರಬೇತಿ ಕೇಂದ್ರಗಳು ಅಷ್ಟು ಸಕ್ರಿಯವಾಗಿರಲಿಲ್ಲ. ಸಿಎಂಕೆಕೆವೈ ಯೋಜನೆಯಡಿ ಭಾರಿ, ಲಘು ವಾಹನಗಳ ಚಾಲನಾ ತರಬೇತಿ, ಘನತ್ಯಾಜ್ಯ ನಿರ್ವಹಣಾ ಯೋಜನೆಯಡಿಯಲ್ಲಿ ಲಘು ವಾಹನಗಳ ತರಬೇತಿ, ಪಿಎಂ ಅಜಯ್ ಯೋಜನೆ ಚಾಲನಾ ತರಬೇತಿ, ತಾಂಡಾ ಅಭಿವೃದ್ಧಿ ಮಂಡಳಿಯ ಚಾಲನಾ ತರಬೇತಿ ಮುಂತಾದ ಸರ್ಕಾರಿ ಪ್ರಾಯೋಜಿತ ಯೋಜನೆಗಳಡಿ ವಿವಿಧ ತರಬೇತಿಗಳು ನಡೆಯುತ್ತಿದ್ದವು. ಈಗ ನಿಗಮದಿಂದಲೇ ತರಬೇತಿ ಶುರುವಾಗಿದೆ ಎಂದು ಕೆಎಸ್‌ಆರ್‌ಟಿಸಿಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕಾಲೇಜುಗಳಲ್ಲಿ ಉಪನ್ಯಾಸಕರಾಗಿದ್ದ, ಕೆಎಎಸ್, ಐಎಎಸ್ ಅಭ್ಯರ್ಥಿಗಳಿಗೆ ತರಬೇತಿ ನೀಡಿದ್ದ ಅನುಭವ ಇರುವ ಅಕ್ರಂ ಪಾಷ ಅವರು ಕೆಎಸ್‌ಆರ್‌ಟಿಸಿಗೆ ವ್ಯವಸ್ಥಾಪಕ ನಿರ್ದೇಶಕರಾಗಿ ಬಂದ ಬಳಿಕ ಎಲ್ಲ ತರಬೇತಿ ಕೇಂದ್ರಗಳು ಸಕ್ರಿಯಗೊಂಡಿವೆ ಎಂದರು.

6 ತಿಂಗಳಲ್ಲಿ ತರಬೇತಿ ಪಡೆದವರು

5,014 ವಿವಿಧ ತರಬೇತಿ ಪಡೆದ ನೌಕರರು

2,500 ಹೊಸದಾಗಿ ನೇಮಕಗೊಂಡವರು

661 ವಿಶೇಷ ತರಬೇತಿ ಪಡೆದ ಮೇಲ್ವಿಚಾರಕರು

‘ತರಬೇತಿಯಿಂದ ಹೊಸತನದ ಕಲಿಕೆ’

ಅಕ್ರಂ ಪಾಷ

ಯಾವುದೇ ಇಲಾಖೆಯಲ್ಲಿ ಕಾಲಕಾಲಕ್ಕೆ ತರಬೇತಿ ನಡೆಯುತ್ತಿದ್ದರೆ ಅಧಿಕಾರಿಗಳಿಗೆ, ನೌಕರರಿಗೆ ಹೊಸ ಚೈತನ್ಯ ಬರುತ್ತದೆ. ಕೆಲಸದ ಗುಣಮಟ್ಟ, ದಕ್ಷತೆ ಹೆಚ್ಚುತ್ತದೆ. ತಂಡವಾಗಿ ಕೆಲಸ ಮಾಡುವುದು ಹೇಗೆ ಎಂಬುದನ್ನು ಕಲಿಯಲು ಸಾಧ್ಯವಾಗುತ್ತದೆ. ತಪ್ಪು ಮಾಡುವುದು ಕಡಿಮೆಯಾಗುತ್ತದೆ. ಒತ್ತಡ ನಿಯಂತ್ರಣ, ಕೆಲಸದಲ್ಲಿ ಸಮತೋಲನ ಕಾಯ್ದುಕೊಳ್ಳಲು ಅನುಕೂಲವಾಗುತ್ತದೆ. ಹೊಸತನಕ್ಕೆ, ಹೊಸ ತಂತ್ರಜ್ಞಾನಗಳಿಗೆ ತೆರೆದುಕೊಳ್ಳಲು ಸಾಧ್ಯವಾಗುತ್ತದೆ. ಅದಕ್ಕಾಗಿ ಹೊಸದಾಗಿ ನೇಮಕಗೊಂಡವರಿಗೂ, ಈಗಾಗಲೇ ಇರುವವರಿಗೂ ತರಬೇತಿ ನೀಡಲಾಗುತ್ತಿದೆ. ಚಾಲಕರು, ನಿರ್ವಾಹಕರು, ಸಂಚಾರ ನಿಯಂತ್ರಕರು, ಕಲ್ಯಾಣ, ಕಾನೂನು, ತಾಂತ್ರಿಕ ವಿಭಾಗದವರು ಸೇರಿದಂತೆ ಎಲ್ಲರಿಗೂ ತರಬೇತಿ ನೀಡುತ್ತಿದ್ದು, ಕೆಲಸದ ಸ್ಥಳದಲ್ಲಿ ಸಕಾರಾತ್ಮಕ ಬದಲಾವಣೆ ಕಂಡು ಬಂದಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ತಿಳಿಸಿದರು.

ಬಸ್ ಸಿಮ್ಯುಲೇಟರ್ ತರಬೇತಿ ಪಡೆಯುತ್ತಿರುವ ಸಿಬ್ಬಂದಿ

‘ತಾತ್ವಿಕ ಸಂದೇಶ ಸಾರುವ ಮಲೆಗಳಲ್ಲಿ ಮದುಮಗಳು’

ಪುಸ್ತಕ ಪ್ರಾಧಿಕಾರ: ಬೆಂಗಳೂರು ನಗರ ವಿ.ವಿಯಲ್ಲಿ ಉಪನ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನುಷ್ಯ ಸಂಬಂಧಗಳನ್ನು ಶೋಧಿಸುತ್ತಲೇ ಪೂರ್ಣದೃಷ್ಟಿಯನ್ನು ಬೆರೆಸಿದ ತಾತ್ವಿಕತೆಯ ಸಂದೇಶವನ್ನು ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿ ಸಾರುತ್ತದೆ’ ಎಂದು ಸಾಹಿತಿ ಕೆ.ವೈ.ನಾರಾಯಣಸ್ವಾಮಿ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರವು ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಬುಧವಾರ ಆಯೋಜಿಸಿದ್ದ ಅಂಗಳದಲ್ಲಿ ತಿಂಗಳ ಪುಸ್ತಕ ಕಾರ್ಯಕ್ರಮದಲ್ಲಿ ‘ಕುವೆಂಪು ಅವರ ಮಲೆಗಳಲ್ಲಿ ಮದುಮಗಳು’ ಕಾದಂಬರಿಯ ಪಾತ್ರಾವಲೋಕನ ಕುರಿತು ಉಪನ್ಯಾಸ ನೀಡಿದರು.

‘ಕುವೆಂಪು ಅವರದ್ದು ಪ್ರಕೃತಿಯೊಂದಿಗಿನ ಮಿಳಿತ ಸಂಬಂಧ. ಅದನ್ನು ತಮ್ಮ ಬಹುತೇಕ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಮನುಷ್ಯ ಸ್ವಭಾವಗಳು, ಭಾವನಾತ್ಮಕ ಏರುಪೇರುಗಳನ್ನು ಪಾತ್ರ, ಸನ್ನಿವೇಶಗಳ ಮೂಲಕ ಕುವೆಂಪು ಅವರು ಈ ಕಾದಂಬರಿಯಲ್ಲಿ ಕಟ್ಟಿ ಕೊಟ್ಟಿದ್ದಾರೆ’ ಎಂದರು.

‘ಊಳಿಗಮಾನ್ಯ ವ್ಯವಸ್ಥೆಯನ್ನು ಕಟುವಾಗಿ ಟೀಕಿಸುತ್ತಲೇ ತಳವರ್ಗದ ಬದುಕಿನ ಚೈತನ್ಯವನ್ನೂ ತಿಳಿಸುವ ಈ ಕಾದಂಬರಿ ನಿರಾಸೆ ಹುಟ್ಟಿಸುವ ಕಥನವಲ್ಲ. ಬದಲಿಗೆ ನಾಳಿನ ಬದುಕನ್ನು ನೋಡುವ ಜತೆಗೆ ಹೊಸ ದರ್ಶನವನ್ನು ನೀಡುತ್ತದೆ. ಕನ್ನಡ ಓದುಗರನ್ನು ಇಷ್ಟೊಂದು ಸೆಳೆದ ಮತ್ತೊಂದು ಕೃತಿ ಇಲ್ಲ’ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯತ್ರಿ ಮಾತನಾಡಿ, ‘ಕುವೆಂಪು ಅವರದ್ದು ಜಾಗತಿಕ ಮಟ್ಟದಲ್ಲಿ ನಿಲ್ಲುವಂತಹ ಸಾಹಿತ್ಯ. ಆದರ್ಶ ಪ್ರೀತಿ, ಬದುಕನ್ನು ವೈಚಾರಿಕ ಪ್ರಖರತೆಯೊಂದಿಗೆ ಕುವೆಂಪು ನಿರೂಪಿಸಿದರು. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿನ ಎಲ್ಲಾ ಪಾತ್ರಗಳು ನಮ್ಮ ಬದುಕಿನ ಪ್ರತಿಬಿಂಬದಂತೆಯೇ ಇವೆ’ ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಬಿ.ರಮೇಶ್, ‘ಕುವೆಂಪು ಅವರ ವೈಚಾರಿಕ ಚಿಂತನೆಗಳು ನಮ್ಮ ಕಾಲದ ಹಲವು ಬಿಕ್ಕಟ್ಟುಗಳಿಗೆ ಮಾರ್ಗೋಪಾಯದಂತಿವೆ. ಅವರ ಚಿಂತನೆಗಳು ಸರಳವಾಗಿ ಅರ್ಥವಾದರೆ ನಾವು ಬಿಡುಗಡೆ ಪಡೆಯಲು ದಾರಿಯಾಗಲಿದೆ’ ಎಂದು ತಿಳಿಸಿದರು.

ಪ್ರಾಧಿಕಾರದ ಅಧ್ಯಕ್ಷ ಮಾನಸ, ರಿಜಿಸ್ಟ್ರಾರ್ ಕೆ.ಬಿ. ಕಿರಣ್‌ಸಿಂಗ್, ರಂಗಕರ್ಮಿ ಸಿ.ಬಸವಲಿಂಗಯ್ಯ, ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ತಾಂಡವಗೌಡ, ಸಿ.ಎನ್.ಮಂಜು ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕುವೆಂಪು ಅವರ ಭಾವಚಿತ್ರಕ್ಕೆ ಕೆ.ಬಿ. ಕಿರಣ್ ಸಿಂಗ್, ಕೆ.ಎಂ. ಗಾಯತ್ರಿ, ಕೆ.ವೈ. ನಾರಾಯಣಸ್ವಾಮಿ, ಮಾನಸ, ಬಿ.ರಮೇಶ್ ಅವರು ಪುಷ್ಪನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ವಿದ್ಯುತ್ ಪರಿವರ್ತಕಗಳ ನಿರ್ವಹಣೆಗೆ ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ತನ್ನ ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ ಇರುವ ಐದು ಲಕ್ಷಕ್ಕೂ ಅಧಿಕ ವಿದ್ಯುತ್ ಪರಿವರ್ತಕಗಳ (ಟಿ.ಸಿ) ಮುಂಜಾಗ್ರತ ನಿರ್ವಹಣೆ ಮಾಡಲು ಹಾಗೂ ಅದರ ಮೇಲೆ ನಿಗಾವಹಿಸಲು ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್ ಲೈಫ್ ಸೈಕಲ್ ಮ್ಯಾನೇಜ್‌ಮೆಂಟ್ ಸಿಸ್ಟಂ (ಡಿಟಿಎಲ್‌ಎಂಎಸ್) ಆ್ಯಪ್ ಅನ್ನು ಅಭಿವೃದ್ಧಿಪಡಿಸಿದೆ.

‘ಮೊಬೈಲ್ ಅಪ್ಲಿಕೇಶನ್ ಮೂಲಕ ಟಿ.ಸಿಗಳ ಕಾರ್ಯಾಚರಣೆ, ಮುಂಜಾಗ್ರತ ನಿರ್ವಹಣೆ, ದುರಸ್ತಿ ಹಾಗೂ ದಕ್ಷತೆಯ ಮೇಲೆ ನಿಗಾ ಇರಿಸಲಾಗುತ್ತದೆ. ಅಲ್ಲದೆ ಟಿ.ಸಿಗಳ ನಿರ್ವಹಣೆ ಕಾರ್ಯಗಳ ಮಾಹಿತಿಯನ್ನು ಆ್ಯಪ್‌ನಲ್ಲಿ ನಮೂದಿಸಲಾಗುತ್ತದೆ. ಇದರಿಂದಾಗಿ ಗ್ರಾಹಕರಿಗೆ ಗುಣಮಟ್ಟದ ಹಾಗೂ ತಡೆರಹಿತ ವಿದ್ಯುತ್ ಪೂರೈಸಲು ಅನುಕೂಲವಾಗಲಿದೆ’ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್.ಶಿವಶಂಕರ್ ತಿಳಿಸಿದ್ದಾರೆ.

ಡಿಟಿಎಲ್‌ಎಂಎಸ್ ಅಡಿಯಲ್ಲಿ ಅಭಿವೃದ್ಧಿಪಡಿಸಿದ ಡಿಟಿಸಿ (ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್ ಸೆಂಟರ್) ನಿರ್ವಹಣೆ ಮಾಡ್ಯೂಲ್ ವಿದ್ಯುತ್ ವಿತರಣಾ ವ್ಯವಸ್ಥೆಯ ಕಾರ್ಯಕ್ಷಮತೆ, ವಿಶ್ವಾಸಾರ್ಹತೆ ಮತ್ತು ನಿರಂತರತೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಹೇಳಿದ್ದಾರೆ.

ಡಿಟಿಎಲ್‌ಎಂಎಸ್ ಆ್ಯಪ್ ಅನ್ನು ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಈಚೆಗೆ ಬಿಡುಗಡೆ ಮಾಡಿದ್ದು ಟಿ.ಸಿಗಳ ನಿರ್ವಹಣೆಯ ಮೊದಲು ಹಾಗೂ ನಿರ್ವಹಣೆಯ ನಂತರದ ಫೋಟೊಗಳನ್ನು ಕ್ಷೇತ್ರಾಧಿಕಾರಿಗಳು ಆ್ಯಪ್‌ನಲ್ಲಿ ಕಡ್ಡಾಯವಾಗಿ ದಾಖಲಿಸಬೇಕು. ಇದರಿಂದಾಗಿ ವಿದ್ಯುತ್ ಪರಿವರ್ತಕಗಳ ಸಮರ್ಪಕ ನಿರ್ವಹಣೆ ಮಾಹಿತಿ ಜೊತೆಗೆ ಟಿ.ಸಿ ಆವರಣದಲ್ಲಿರುವ ಕಸಕಡ್ಡಿಗಳನ್ನು ತೆರವು ಮಾಡಿ ಅವುಗಳನ್ನು ಸುರಕ್ಷಿತವಾಗಿಡಲು ನೆರವಾಗಲಿದೆ.

ಡಿಟಿಎಲ್‌ಎಮ್‌ಎಸ್ ಆ್ಯಪ್ ಮೂಲಕ ವಿದ್ಯುತ್ ಪರಿವರ್ತಕಗಳ ತ್ರೈಮಾಸಿಕ ನಿರ್ವಹಣೆ, ದೋಷಗಳನ್ನು ದಾಖಲಿಸುವುದು, ದುರಸ್ತಿ ವಿವರಗಳ ವಿಶ್ಲೇಷಣೆಯನ್ನು ಡಿಜಿಟಲ್ ರೂಪದಲ್ಲಿ ಪರಿಣಾಮಕಾರಿಯಾಗಿ ಮಾಡಬಹುದು ಎಂದು ಶಿವಶಂಕರ್ ಹೇಳಿದ್ದಾರೆ.

ಮುಖ್ಯಾಂಶಗಳು

- ವಿದ್ಯುತ್ ಪೂರೈಕೆಯಲ್ಲಿ ಸುಧಾರಣೆ
- ಕಾರ್ಯಕ್ಷಮತೆಯ ಮೇಲ್ವಿಚಾರಣೆ ಸುಲಭ
- ವಿತರಣಾ ಪರಿವರ್ತಕದ ಜೀವಿತಾವಧಿ ವಿಸ್ತರಣೆ

‘ಸೋರಿಕೆ ತಡೆಗಟ್ಟಬಹುದು’

‘ಈ ನಿರ್ವಹಣಾ ಮಾಡ್ಯೂಲ್ ಮೂಲಕ ಬೆಸ್ಕಾಂ ಕ್ಷೇತ್ರ ಅಧಿಕಾರಿಗಳಿಗೆ ಅವರ ವ್ಯಾಪ್ತಿಯಲ್ಲಿರುವ ಎಲ್ಲಾ ಟ್ರಾನ್ಸ್‌ಫಾರ್ಮರ್‌ಗಳನ್ನು ತ್ರೈಮಾಸಿಕವಾಗಿ ನಿರ್ವಹಣೆ ಮಾಡಿ, ವಿದ್ಯುತ್ ವಿತರಣೆಯಲ್ಲಾಗುವ ಸೋರಿಕೆಯನ್ನು ತಡೆಗಟ್ಟಿ, ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಪೂರೈಸಲು ಸಹಕಾರಿಯಾಗಲಿದೆ’ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್.ಶಿವಶಂಕರ್ ಹೇಳಿದ್ದಾರೆ.

> ವಿದ್ಯುತ್ ಪರಿವರ್ತಕಗಳ ನಿರ್ವಹಣೆ, ಮೇಲ್ವಿಚಾರಣೆಯನ್ನು ಆ್ಯಪ್ ಮೂಲಕ ನಿರ್ವಹಿಸುವುದರಿಂದ ತಡೆರಹಿತ ವಿದ್ಯುತ್ ಪೂರೈಸುವ ನಮ್ಮ ಉದ್ದೇಶ ಸಫಲವಾಗಲಿದೆ
> **ಕೆ.ಜೆ. ಜಾರ್ಜ್,** ಇಂಧನ ಸಚಿವ

ಚಿಟಿಕೆ ಸುದ್ದಿ

ಎಂಪೈರ್ ಎಫ್‌ಸಿಗೆ ಸುಲಭ ಜಯ

ಬೆಂಗಳೂರು: ಸಂಘಟಿತ ಆಟ ಆಡಿದ ಎಂಪೈರ್ ಎಫ್‌ಸಿ ತಂಡವು ಬಿಡಿಎಫ್‌ಎ ‘ಎ’ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಬುಧವಾರ 4–1ರಿಂದ ಎಡಿಇ ಎಫ್‌ಸಿ ತಂಡದ ವಿರುದ್ಧ ಸುಲಭ ಜಯ ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಂಪೈರ್ ತಂಡದ ಅಭಿನಂದ್ 15ನೇ ನಿಮಿಷದಲ್ಲಿ ಗೋಲಿನ ಖಾತೆ ತೆರೆದರು. ಸಚಿನ್‌ಕುಮಾರ್ 26ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಅವಕಾಶದಲ್ಲಿ ಗೋಲನ್ನಾಗಿ ಪರಿವರ್ತಿಸಿದರು. ಮೊಹಮ್ಮದ್ ಜಾಸ್ ಎಂ. (47ನೇ ಹಾಗೂ 48ನೇ ನಿ.) ಅವಳಿ ಗೋಲು ಹೊಡೆದರೆ, ಎಡಿಇ ತಂಡದ ವಿನು ವಿನೋದ್ (40 + 3ನೇ ನಿ.) ಒಂದು ಗೋಲು ಗಳಿಸಿದರು.

ದಿನದ ಇನ್ನೊಂದು ಪಂದ್ಯದಲ್ಲಿ, ಫಿಟೊ (19ನೇ ನಿ.) ಹಾಗೂ ಎಂ.ಸಿ. ಮೈಥೇಯಿ (38ನೇ ನಿ.) ಅವರ ಗೋಲಿನ ನೆರವಿನಿಂದ ಶೂಟರ್ಸ್ ಎಫ್‌ಸಿ ತಂಡವು 2–1ರಿಂದ ಜುನೊ ಎಫ್‌ಸಿ ತಂಡವನ್ನು ಮಣಿಸಿತು. ರಿವೈವ್ ಎಫ್‌ಸಿ–ಬೆಂಗಳೂರು ಗನ್ನರ್ಸ್ ಎಫ್‌ಸಿ ನಡುವಣ ಪಂದ್ಯ ಗೋಲು ರಹಿತ ಡ್ರಾ ಆಯಿತು.

ಮಹಿಳಾ ಕ್ರಿಕೆಟ್ ಇದೇ 4ಕ್ಕೆ ಟ್ರಯಲ್ಸ್

ಬೆಂಗಳೂರು: ರಾಷ್ಟ್ರೀಯ ಸೀನಿಯರ್ ಮಹಿಳಾ ಏಕದಿನ ಟೂರ್ನಿಗಳಿಗೆ ರಾಜ್ಯ ತಂಡವನ್ನು ಆಯ್ಕೆ ಮಾಡಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಜನವರಿ ಎರಡು ಅಥವಾ ಮೂರನೇ ವಾರದಲ್ಲಿ ಆಯ್ಕೆ ಪಂದ್ಯಗಳನ್ನು ಆಯೋಜಿಸಲಿದೆ. ಈ ಪಂದ್ಯಗಳಲ್ಲಿ ಆಡಲಿರುವ ಆಟಗಾರ್ತಿಯರ ಆಯ್ಕೆಗಾಗಿ ಕೆಎಸ್‌ಸಿಎ ಇದೇ ಭಾನುವಾರ (ಜ.4) ಆಯ್ಕೆ ಟ್ರಯಲ್ಸ್ ಆಯೋಜಿಸಿದೆ.

ಚಿನ್ನಸ್ವಾಮಿ ಕ್ರೀಡಾಂಗಣದ ಆವರಣದಲ್ಲಿರುವ ಕೆಎಸ್‌ಸಿಎ–ಬಿ ಮೈದಾನದಲ್ಲಿ ಅಂದು ಬೆಳಿಗ್ಗೆ 9ಕ್ಕೆ ಟ್ರಯಲ್ಸ್ ಆರಂಭವಾಗಲಿದೆ. 2009 ಆಗಸ್ಟ್ 31ರ ಮೊದಲು ಜನಿಸಿದ ಆಟಗಾರ್ತಿಯರು ಟ್ರಯಲ್ಸ್‌ನಲ್ಲಿ ಭಾಗವಹಿಸಬಹುದು.

IEPF | SEBI
CDSL · NSDL · BSE · NSE

ಹೂಡಿಕೆದಾರರ ಶಿಕ್ಷಣ ಮತ್ತು ಸುರಕ್ಷಾ ನಿಧಿ ಪ್ರಾಧಿಕಾರ (ಐಇಪಿಎಫ್‌ಎ)
(ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ)

ಸಾರ್ವಜನಿಕ ಪ್ರಕಟಣೆ

ಹೂಡಿಕೆದಾರರ ಶಿಬಿರ

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿನ ಹೂಡಿಕೆದಾರರ ಶಿಕ್ಷಣ ಮತ್ತು ಸುರಕ್ಷಾ ನಿಧಿ ಪ್ರಾಧಿಕಾರ (ಐಇಪಿಎಫ್‌ಎ) ರವರು, ಭಾರತೀಯ ಸೆಕ್ಯೂರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ (ಸೆಬಿ) ಇವರ ಜೊತೆಗೂಡಿ, ಭಾರದಾದ್ಯಂತ ಇರುವ ಕ್ಲೇಮುದಾರರ ಎಲ್ಲಾ ದೂರು ದುಮ್ಮಾನಗಳಿಗೆ ಪರಿಹಾರ ಒದಗಿಸುವ ಉದ್ದೇಶದಿಂದ – ಹೂಡಿಕೆದಾರರ ಶಿಬಿರ ಎಂಬ ಒಂದು ಉಪಕ್ರಮವನ್ನು ಆರಂಭಿಸುತ್ತಿದ್ದಾರೆ.

ಉದ್ದೇಶ

ಸದರಿ ಹೂಡಿಕೆದಾರರ ಶಿಬಿರವು, ಹೂಡಿಕೆದಾರರ ಸೇವೆಗಳನ್ನು ಸರಳಗೊಳಿಸುವ, ಆರ್ಥಿಕ ಸಾಕ್ಷರತೆಯನ್ನು ಸುಧಾರಿಸುವ ಮತ್ತು ಹೂಡಿಕೆದಾರರ ಸುರಕ್ಷತೆಯನ್ನು ಬಲಪಡಿಸುವ ಉದ್ದೇಶವನ್ನು ಹೊಂದಿದೆ:
- ಪಾವತಿಗೊಳ್ಳದಿರುವ ಡಿವಿಡೆಂಡ್‌ಗಳ ವರ್ಗಾವಣೆ ಸೌಕರ್ಯ (6–7 ವರ್ಷಗಳಿಂದ ಉಳಿದಿರುವ).
- ಕಂಪನಿಯೊಂದಿಗೆ ಕೆವೈಸಿ ಮತ್ತು ನಾಮಿನೇಶನ್ ನವೀಕರಣಕ್ಕೆ ನೆರವು.
- ಕ್ಲೇಮ್ ಮಾಡದಿರುವ ಮತ್ತು ಪಾವತಿಗೊಳ್ಳದಿರುವ ಷೇರುಗಳು ಹಾಗೂ ಡಿವಿಡಂಡ್‌ಗಳಿಗೆ ಸಂಬಂಧಿತ, ಬಾಕಿ ಉಳಿದಿರುವ ಐಇಪಿಎಫ್‌ಎ ಕ್ಲೇಮ್‌ಗಳಿಗೆ ಪರಿಹಾರ.

ನಿಯೋಜಿತ ನಗರ

ಈ ಉಪಕ್ರಮದ ಚಾಲನೆಗಾಗಿ, **ಬೆಂಗಳೂರು** ನಗರದಲ್ಲಿ ಹೂಡಿಕೆದಾರರ ಶಿಬಿರ ಆಯೋಜಿಸಲಾಗುತ್ತಿದೆ.

ಕಾರ್ಯಕ್ರಮದ ವಿವರ

ದಿನಾಂಕ/ಸಮಯ: 03ನೇ ಜನವರಿ 2026, ಬೆಳಗ್ಗೆ 10:00 ರಿಂದ ಸಂಜೆ 04:00 ಗಂಟೆ.
ಸ್ಥಳ: ಶ್ರೀ ವೈ ಮುನಿಸ್ವಾಮಪ್ಪ ಕಲ್ಯಾಣ ಮಂಟಪ, 17, ತುಮಕೂರು ರಸ್ತೆ, ಗೋಪಾಲ್ ಥಿಯೇಟರ್ ಸಮೀಪ, ಡಾ. ಅಂಬೇಡ್ಕರ್ ನಗರ, ಯಶವಂತಪುರ, ಬೆಂಗಳೂರು, ಕರ್ನಾಟಕ 560022.

ಭಾಗವಹಿಸುವ ವಿಧಾನ

ದಯವಿಟ್ಟು ಈ ಪ್ರಕಟಣೆಯಲ್ಲಿ ನೀಡಲಾಗಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಅಥವಾ **https://qr.me-qr.com/l/NiveshkShivir** ಲಿಂಕ್ ಮೇಲೆ ಕ್ಲಿಕ್ ಮಾಡುವ ಮೂಲಕ ನೋಂದಣಿ ಮಾಡಿಕೊಳ್ಳಿ. ಸದರಿ ಹೂಡಿಕೆದಾರರ ಶಿಬಿರದಲ್ಲಿ ನಿಮಗೆ ಸಾಕಷ್ಟು ಪರಿಣಾಮಕಾರಿ ಮತ್ತು ಸಕಾಲಿಕ ನೆರವು ಲಭಿಸಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಲು, ಈ ನೋಂದಣಿಯು ನಮಗೆ ಸಹಕಾರಿಯಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ

ದಯವಿಟ್ಟು ನಮ್ಮ ಅಧಿಕೃತ www.iepf.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ. ಅಲ್ಲದೆ, ಸದರಿ ಹೂಡಿಕೆದಾರರ ಶಿಬಿರಕ್ಕೆ ಸಂಬಂಧಿತ ಪ್ರಚಲಿತ ಅಪ್‌ಡೇಟ್‌ಗಳು ಹಾಗೂ ಘೋಷಣೆಗಳನ್ನು ತಿಳಿಯುತ್ತಿರಲು, ನಮ್ಮ ಸಾಮಾಜಿಕ ಮಾಧ್ಯಮ ವಾಹಿನಿಗಳನ್ನು ಕೂಡ ನೀವು ಅನುಸರಿಸಬಹುದು.

ಎಲ್ಲಾ ಕ್ಲೇಮುದಾರರು, ನೇರವಾಗಿ ನಮ್ಮ ಪರಿಣಿತರಿಂದ ತಮ್ಮ ದೂರು ದುಮ್ಮಾನಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದು ಬಯಸುತ್ತೇವೆ. ನಾವು ನಿಮಗೆ ಉತ್ತಮ ಸೇವೆಗಳು ಮತ್ತು ಬೆಂಬಲ ಒದಗಿಸಲು, ಸದರಿ ಶಿಬಿರದಲ್ಲಿ ನೀವುಗಳು ಪಾಲ್ಗೊಳ್ಳುವುದು ಬಹು ಮುಖ್ಯವಾಗಿದೆ.
ಟೋಲ್ ಫ್ರೀ ನಂಬರ್: 14453– ಕಾಲ್ ಸೆಂಟರ್: ಸೋಮವಾರ– ಶುಕ್ರವಾರ ಬೆಳಗ್ಗೆ 9:00–ಸಂಜೆ 05:30

www.iepf.gov.in

CBC 07110/12/0011/2526

ದರ ಪರಿಷ್ಕರಣೆ: ಕಡತ ಕಳಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಪುಸ್ತಕಗಳ ಪುಟವಾರು ದರ ಪರಿಷ್ಕರಣೆಗೆ ಸಂಬಂಧಿಸಿದ ಕಡತವನ್ನು ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಳುಹಿಸಬೇಕು. ಅವರು ಕನ್ನಡ ಸಾಹಿತ್ಯ ಮತ್ತು ಸಾಹಿತಿಗಳ ಬಗೆಗೆ ಅಪಾರ ಗೌರವ ಪ್ರೀತಿ ಹೊಂದಿರುವ ಕಾರಣ, ಆದಷ್ಟು ಬೇಗ ದರ ಪರಿಷ್ಕರಣೆಗೆ ಅನುಮೋದನೆ ನೀಡುವ ಭರವಸೆಯಿದೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಕನ್ನಡ ಲೇಖಕರ ಮತ್ತು ಪ್ರಕಾಶಕರ ಒಕ್ಕೂಟದ ಪ್ರತಿನಿಧಿಗಳೊಂದಿಗೆ ಬುಧವಾರ ಇಲ್ಲಿ ಸಭೆ ನಡೆಸಿದ ಅವರು, ಪುಸ್ತಕೋದ್ಯಮಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳ ಬಗ್ಗೆ ಚರ್ಚಿಸಿದರು.

'2017ರಿಂದ ಪುಸ್ತಕಗಳ ಪುಟವಾರು ಬೆಲೆ ಪರಿಷ್ಕರಣೆ ನಡೆದಿಲ್ಲ. ಮುದ್ರಣ ಮತ್ತು ಕಚ್ಚಾ ವಸ್ತುಗಳ ಬೆಲೆ ಏರಿಕೆ, ಜಿಎಸ್‌ಟಿ, ಸಾಗಣಿಕೆ ವೆಚ್ಚಗಳ ಹೊರೆಯಿಂದಾಗಿ ಪುಸ್ತಕಗಳ ಪುಟವಾರು ಬೆಲೆ ಪರಿಷ್ಕರಣೆಗೆ ಹಲವು ವಿಶೇಷ ಅಳತೆಯ ಪುಸ್ತಕಗಳಿಗೆ ಬೆಲೆ ನಿಗದಿ ಮಾಡಲು ಮನವಿ ಮಾಡಲಾಗಿತ್ತು. ಈ ಬಗ್ಗೆ ಕ್ರಮ ಕೈಗೊಳ್ಳಬೇಕು' ಎಂದು ಒಕ್ಕೂಟದ ಪ್ರತಿನಿಧಿಗಳು ಮನವಿ ಮಾಡಿದರು. ಇದಕ್ಕೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದರು.

'2022ರಿಂದ ಈವರೆಗೆ ಪ್ರಕಟವಾದ ಪುಸ್ತಕಗಳನ್ನು ಖರೀದಿಸಲು ಸಾರ್ವಜನಿಕ ಗ್ರಂಥಾಲಯ ಇಲಾಖೆ ಕ್ರಮ ಕೈಗೊಳ್ಳಬೇಕು' ಎಂದು ಪ್ರಕಾಶಕರು ಇದೇ ವೇಳೆ ಪ್ರಸ್ತಾಪಿಸಿದರು. 2022ರ ಪುಸ್ತಕಗಳ ಪಟ್ಟಿ ತಮ್ಮ ಬಳಿ ಇರುವುದಾಗಿ ತಿಳಿಸಿದ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, '2023ರಿಂದ 2025ರ ವರೆಗಿನ ಪ್ರಕಟಿತ ಪುಸ್ತಕಗಳನ್ನು ಒಂದೇ ಹಂತದಲ್ಲಿ ಆಯ್ಕೆ ಮಾಡಿ, ಆರು ತಿಂಗಳ ಅವಧಿಯಲ್ಲಿ ಖರೀದಿಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಸೂಚಿಸಿದರು.

'ಆಯಾ ವರ್ಷದ ಬಜೆಟ್ ಅನುಮೋದನೆಯನ್ನು ಸಾಧ್ಯವಾದಷ್ಟು ಬೇಗ ಮಾಡಿ ಕಳಿಸುವ ಜತೆಗೆ, ಸಮಯದ ಮಿತಿಯಲ್ಲಿ ಅನುಮೋದಿಸಲು ಕ್ರಮ ವಹಿಸಲಾಗುವುದು' ಎಂದು ತಿಳಿಸಿದರು.

'ಈ ಭರವಸೆ ಹೊಸ ವರ್ಷಕ್ಕೆ ಸರ್ಕಾರ ನಮಗೆ ನೀಡಿದ ಕೊಡುಗೆ. ನಿಧಾನವಾಗಿಯಾದರೂ ಸರ್ಕಾರ ನಮ್ಮತ್ತ ನೋಡಿದ್ದಕ್ಕೆ ಇಡೀ ಕನ್ನಡ ಪುಸ್ತಕೋದ್ಯಮ ಹರ್ಷಿಸುತ್ತದೆ' ಎಂದು ಪ್ರಕಾಶಕ ಸೃಷ್ಟಿ ನಾಗೇಶ್ ಹೇಳಿದರು.

ವಕೀಲ ಸಿ.ಎಸ್. ದ್ವಾರಕಾನಾಥ್, ಕಲಾವಿದರಾದ ಎಂ.ಎಸ್. ಮೂರ್ತಿ, ಲೇಖಕಿ ಡಾ. ವಸುಂಧರಾ ಭೂಪತಿ, ಪ್ರಕಾಶಕರಾದ ಅವಿರತ ಹರೀಶ್, ಚಂದ್ರ ಕೀರ್ತಿ, ರಾಜೇಶ್ ಬಿ. ಹೊನ್ನೇನಹಳ್ಳಿ, ಧಾತ್ರಿ ಉಮೇಶ್, ಆರ್. ಪೂರ್ಣಿಮಾ, ಅಭಿನವ ರವಿಕುಮಾರ್ ಉಪಸ್ಥಿತರಿದ್ದರು.

ಪುಸ್ತಕೋದ್ಯಮಕ್ಕೆ ಸಂಬಂಧಿಸಿದ ಬೇಡಿಕೆಗಳನ್ನು ಈಡೇರಿಸುವಂತೆ ಒಕ್ಕೂಟದ ಪ್ರತಿನಿಧಿಗಳು ಸಚಿವ ಮಧು ಬಂಗಾರಪ್ಪ ಅವರಿಗೆ ಮನವಿ ಸಲ್ಲಿಸಿದರು

'ಸರ್ಕಾರ ಪುಸ್ತಕಗಳನ್ನು ಖರೀದಿಸಲಿ'

ಕಾರ್ಯಕ್ರಮದಲ್ಲಿ ನಿಡಸಾಲೆ ಪುಟ್ಟಸ್ವಾಮಯ್ಯ ಮತ್ತು ಮಲ್ಲೇಪುರಂ ಜಿ. ವೆಂಕಟೇಶ್ ಸಮಾಲೋಚನೆಯಲ್ಲಿ ತೊಡಗಿದ್ದರು. ಬೈರಮಂಗಲ ರಾಮೇಗೌಡ, ಎಚ್.ಕೆ. ಲಕ್ಷ್ಮೀನಾರಾಯಣ ಅಡಿಗ ಹಾಗೂ ಸಂಘದ ಕಾರ್ಯದರ್ಶಿ ಆರ್ ದೊಡ್ಡೇಗೌಡ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರ ಸಂಗ್ರಹಿಸುವ ಸೆಸ್‌ಗೆ ಅನುಗುಣವಾಗಿ ಪುಸ್ತಕಗಳನ್ನು ಖರೀದಿಸಬೇಕು' ಎಂದು ವಿದ್ವಾಂಸ ಮಲ್ಲೇಪುರಂ ಜಿ.ವೆಂಕಟೇಶ್ ಒತ್ತಾಯಿಸಿದರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಬುಧವಾರ ಆಯೋಜಿಸಿದ್ದ ವಿವಿಧ ಲೇಖಕರ ಪುಸ್ತಕಗಳ ಜನಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸಾರ್ವಜನಿಕ ಗ್ರಂಥಾಲಯ ಇಲಾಖೆ ಕಳೆದ ನಾಲ್ಕು ಐದು ವರ್ಷಗಳಿಂದ ಏಕಗವಾಕ್ಷ ಯೋಜನೆಯಡಿ ಪುಸ್ತಕಗಳ ಖರೀದಿಯನ್ನು ಸ್ಥಗಿತಗೊಳಿಸಿದೆ. ಪ್ರತಿವರ್ಷ ರಾಜ್ಯ ಸರ್ಕಾರ ಪುಸ್ತಕಗಳನ್ನು ಖರೀದಿಸಿ, ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿರುವ ಗ್ರಂಥಾಲಯಗಳಿಗೆ ತಲುಪಿಸಬೇಕು. ಇದರಿಂದ ಸ್ಥಳೀಯರಿಗೆ ಹೊಸ ಹೊಸ ಪುಸ್ತಕಗಳನ್ನು ಓದುವ ಅವಕಾಶ ಸಿಗಲಿದೆ. ಇತ್ತೀಚೆಗೆ ವಿವಿಧ ತಂತ್ರಜ್ಞಾನದ ಮೂಲಕ ಪುಸ್ತಕಗಳನ್ನು ಓದುವವರ ಸಂಖ್ಯೆ ಹೆಚ್ಚುತ್ತಿದ್ದು, ಇದರಿಂದ ಹಣಕ್ಕೆ ಹಾನಿಯಾಗುವ ಸಾಧ್ಯತೆ ಇದೆ' ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಮಾತನಾಡಿ, 'ರಾಜ್ಯ ಸರ್ಕಾರವು ಪುಸ್ತಕಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಆರ್ಥಿಕ ನೆರವು ನೀಡಬೇಕು. ಈ ಬಗ್ಗೆ ಸಾಹಿತಿಗಳು ಧ್ವನಿ ಎತ್ತಬೇಕು. ಪ್ರಕಾಶಕರಿಗೆ ಪ್ರೋತ್ಸಾಹ ಸಿಗದಿರುವ ಕಾರಣ ಇಂದು ವಿವಿಧ ಕೃತಿಗಳ ನಿರ್ವಹಣೆ ಸವಾಲಾಗಿ ಪರಿಣಮಿಸಿದೆ. ಸಂಬಂಧಪಟ್ಟ ಸಚಿವರು ಹಾಗೂ ಅಧಿಕಾರಿಗಳು ಈ ಬಗ್ಗೆ ಗಮನಹರಿಸಬೇಕು' ಎಂದು ಆಗ್ರಹಿಸಿದರು.

ಸಮಾರಂಭದಲ್ಲಿ ಐಬಿಎಚ್ ಪ್ರಕಾಶನದ ಎಚ್.ಕೆ. ಲಕ್ಷ್ಮೀನಾರಾಯಣ ಅಡಿಗ, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಸ್ವಾನ್ ಕೃಷ್ಣಮೂರ್ತಿ ಹಾಗೂ ಕೆ.ಬಿ. ಪರಶಿವಪ್ಪ ಅವರನ್ನು ಸನ್ಮಾನಿಸಲಾಯಿತು.

ಬೆಂಗಳೂರಿನಲ್ಲಿ ನಡೆಯುತ್ತಿರುವ ಡ್ರಗ್ಸ್ ದಂಧೆಗೆ ಕಡಿವಾಣ ಹಾಕಲು ಗೃಹ ಸಚಿವ ಜಿ.ಪರಮೇಶ್ವರ ಅವರು ವಿಫಲರಾಗಿದ್ದಾರೆ ಎಂದು ಆರೋಪಿಸಿ ಅವರ ನಿವಾಸಕ್ಕೆ ಬುಧವಾರ ಮುತ್ತಿಗೆ ಹಾಕಿದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಕರ್ನಾಟಕ ದಕ್ಷಿಣ) ಸದಸ್ಯರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು

ನೇಣು ಬಿಗಿದು ಯುವಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಮುಕ್ತಾಂಭಿಕಾ ಬಡಾವಣೆಯ ಮನೆಯೊಂದರಲ್ಲಿ ಯುವಕನ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ವಿನಯ್‌ರಾಜ್(26) ಮೃತ ಯುವಕ. ಮೃತನ ತಾಯಿ ಖಾಸಗಿ ಶಾಲೆಯ ಶಿಕ್ಷಕಿ.

ಮಂಗಳವಾರ ರಾತ್ರಿ ಮನೆಯ ಕೋಣೆಯಲ್ಲಿ ವಿನಯ್‌ರಾಜ್ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಟ್ರ್ಯಾಕ್ಟರ್‌ನಿಂದ ಬಿದ್ದು ಸಾವು

ಚೇಳೂರು: ಟ್ರ್ಯಾಕ್ಟರ್‌ನಿಂದ ಬಿದ್ದು ಕೂಲಿ ಕಾರ್ಮಿಕ ಮಲ್ಲಿಕಾರ್ಜುನ್ ಬುಧವಾರ ಮೃತಪಟ್ಟಿದ್ದಾರೆ. ಈ ಸಂಬಂಧ ಅವರ ಪತ್ನಿ ಚೇಳೂರು ಠಾಣೆಗೆ ದೂರು ನೀಡಿದ್ದಾರೆ.

'ನನ್ನ ಪತಿಯ ಸಾವಿಗೆ ಟ್ರ್ಯಾಕ್ಟರ್ ಚಾಲಕ ಅಜಯ್ ಕಾರಣ. ಅಜಯ್ ಪೊಲೀಸ್ ವಸತಿ ಗೃಹಗಳ ಬಳಿ ಅತಿವೇಗ ಮತ್ತು ಅಜಾಗರೂಕತೆಯಿಂದ ಟ್ರ್ಯಾಕ್ಟರ್ ಚಾಲನೆ ಮಾಡಿದ ಪರಿಣಾಮ ಟ್ರ್ಯಾಕ್ಟರ್‌ನಲ್ಲಿದ್ದ ನನ್ನ ಪತಿ ಕೆಳಗೆ ಬಿದ್ದಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಯುವ ಆಯೋಗ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಯುವ ಆಯೋಗವನ್ನು ಸ್ಥಾಪಿಸಬೇಕು ಎಂದು ಸಾಲಿಡಾರಿಟಿ ಯೂತ್ ಮೂವ್‌ಮೆಂಟ್‌ನ ರಾಜ್ಯ ಘಟಕದ ಅಧ್ಯಕ್ಷ ನಸೀಮ್ ಅಹ್ಮದ್ ಆಗ್ರಹಿಸಿದ್ದಾರೆ.

ಯುವಜನರು ಎದುರಿಸುತ್ತಿರುವ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಮಾನಸಿಕ ಆರೋಗ್ಯ ಮತ್ತು ಉದ್ಯೋಗ ಸಂಬಂಧಿತ ಸಮಸ್ಯೆಗಳಿಗೆ ಪರಿಣಾಮಕಾರಿಯಾಗಿ ಪರಿಹಾರ ಕಂಡುಕೊಳ್ಳಲು ಯುವ ಆಯೋಗ ಸಹಾಯಕವಾಗಲಿದೆ. ಕೇರಳ, ಅಸ್ಸಾಂ, ಮಿಜೋರಾಂ ಮತ್ತು ಬಿಹಾರದಲ್ಲಿ ಯುವ ಆಯೋಗವಿದ್ದು, ಯುವಜನರ ಹಕ್ಕುಗಳ ರಕ್ಷಣೆ, ನೀತಿ ನಿರೂಪಣೆ, ಕೌಶಲ ಅಭಿವೃದ್ಧಿ, ಉದ್ಯೋಗ, ಮಾದಕ ವ್ಯಸನ ವಿರೋಧಿ ಕ್ರಮಗಳು ಮತ್ತು ಮಾನಸಿಕ ಆರೋಗ್ಯದಂತಹ ಪ್ರಮುಖ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ ಯುವ ಆಯೋಗ ಸ್ಥಾಪಿಸುವುದಾಗಿ 2023ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಘೋಷಣೆ ಮಾಡಿತ್ತು. ಯುವ ಆಯೋಗ ಸ್ಥಾಪನೆಗೆ ಅಧಿಸೂಚನೆ ಹೊರಡಿಸುವ ಮೂಲಕ ಈ ಭರವಸೆಯನ್ನು ಕಾರ್ಯರೂಪಕ್ಕೆ ತರಬೇಕು ಎಂದು ಮುಖ್ಯಮಂತ್ರಿಗೆ ಮನವಿ ಮಾಡಿದ್ದಾರೆ.

ಆಯೋಗ ಸ್ಥಾಪಿಸಿ ಅದಕ್ಕೆ ಯುವಕರ ಹಕ್ಕುಗಳ ರಕ್ಷಣೆ ಹಾಗೂ ಉಲ್ಲಂಘನೆಗಳ ತನಿಖೆಯ ಅಧಿಕಾರ ನೀಡಬೇಕು. ಶಿಕ್ಷಣ, ಉದ್ಯೋಗ, ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಕುರಿತು ಶಿಫಾರಸುಗಳು ಆಯೋಗದ ಮೂಲಕ ಆಗಬೇಕು. ಮಾನಸಿಕ ಆರೋಗ್ಯ, ವ್ಯಸನ ವಿರೋಧಿ ಕ್ರಮಗಳು ಮತ್ತು ಸಾಮಾಜಿಕ ಅನಿಷ್ಟಗಳ ವಿರುದ್ಧ ಪರಿಣಾಮಕಾರಿ ಕಾರ್ಯತಂತ್ರ, ಯುವಕರ ದೂರುಗಳ ಪರಿಹಾರಕ್ಕೆ ವ್ಯವಸ್ಥಿತ ಮತ್ತು ಪಾರದರ್ಶಕ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಯುವಕರ ರಾಜಕೀಯ ಮತ್ತು ಸಾಮಾಜಿಕ ನಾಯಕತ್ವವನ್ನು ಉತ್ತೇಜಿಸಬೇಕು. ವಿಧಾನಸಭೆ, ವಿಧಾನ ಪರಿಷತ್ ಮತ್ತು ವಿವಿಧ ನಾಮನಿರ್ದೇಶಿತ ಸಂಸ್ಥೆಗಳಲ್ಲಿ ಯುವಕರ ಪ್ರಾತಿನಿಧ್ಯವನ್ನು ಖಚಿತಪಡಿಸಬೇಕು. ನಿಗಮ, ಮಂಡಳಿ, ಸಮಿತಿ, ಇತರ ಸರ್ಕಾರಿ ಸಂಸ್ಥೆಗಳಲ್ಲಿ ಯುವ ಪ್ರಾತಿನಿಧ್ಯ ಇರುವಂತೆ ಮಾಡಬೇಕು ಎಂದು ಹೇಳಿದ್ದಾರೆ.

ಶಿಲಾರೋಹಣ: ಅಮೀರಾಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿಯ ಅಮೀರಾ ಖೋಸಲಾ ಅವರು ಇಲ್ಲಿನ 'ಯವನಿಕಾ'ದಲ್ಲಿ ಈಚೆಗೆ ನಡೆದ 29ನೇ ರಾಷ್ಟ್ರೀಯ ಕ್ರೀಡಾ ಆರೋಹಣ (ಸ್ಪೋರ್ಟ್ ಕ್ಲೈಂಬಿಂಗ್) ಚಾಂಪಿಯನ್‌ಷಿಪ್‌ನ ಜೂನಿಯರ್ ಬಾಲಕಿಯರ ಶಿಲಾರೋಹಣ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಉತ್ತರ ವಲಯವನ್ನು ಪ್ರತಿನಿಧಿಸಿದ್ದ ಅವರು 83.8 ಪಾಯಿಂಟ್ಸ್ ಪಡೆದರು.

ಪೂರ್ವ ವಲಯದ ಸಾವಿತ್ರಿ ಸಮದ್ ಅವರು 50 ಪಾಯಿಂಟ್ಸ್‌ಗಳೊಡನೆ ಬೆಳ್ಳಿ ಪದಕ ಜಯಿಸಿದರು. ಉತ್ತರ ವಲಯದ ಗುಂತಾಸ್ ಕೌರ್ ಚಾಬಡಾ (24.8) ಅವರು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯು ಈ ಚಾಂಪಿಯನ್‌ಷಿಪ್ ಅನ್ನು ಆಯೋಜಿಸಿತ್ತು.

ಸಾರ್ವಜನಿಕ ಪ್ರಕಟಣೆ / ಎಚ್ಚರಿಕೆ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಅಂಬಲಿಪುರ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇಲ್ಲಿರುವ ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನ ಒಳಗಿರುವ ಮನೆಪಟ್ಟಿ ಸಂಖ್ಯೆ 3/2, ವಿ.ಪಿ. ಖಾತಾ ನಂ. 322, ಮನೆಪಟ್ಟಿ ಸಂಖ್ಯೆ 3/2, ಖಾತಾ ನಂ.55, ಅಸೆಸ್‌ಮೆಂಟ್ ನಂ. 322, ಮನೆಪಟ್ಟಿ ನಂ. 1, ಖಾತಾ ನಂ. 3/2, ಸಂಖ್ಯೆ 3/2, ಬಿ.ಬಿ.ಎಂ.ಪಿ. ಖಾತಾ ನಂ. 322/ಬಿ, ನಂ. 3/2, ಮತ್ತು ಬಿ.ಬಿ.ಎಂ.ಪಿ. ಖಾತಾ ನಂ. 3/2/322ಸಿ, ಹಳೆ ಖಾತಾ ನಂ. 3/2, ವಿ.ಪಿ. ಖಾತಾ ನಂ. 55/322, ಖಾತಾ ನಂ. 3/2, ವಿ.ಪಿ. ಖಾತಾ ನಂ. 322ಎ, ಹೊಂದಿರುವ, ಒಟ್ಟಾರೆ 33424 ಚದರ ಅಡಿ ವಿಸ್ತೀರ್ಣವುಳ್ಳ ಜೊತೆಗೆ 60,000 ಚದರ ಅಡಿ ವಿಸ್ತೀರ್ಣದ ಕಟ್ಟಡ ಒಳಗೊಂಡ ಸಂಪೂರ್ಣ ಸ್ವತ್ತಿನ ಹಕ್ಕುಗಳ ಮೊಕದ್ದಮೆ ಸಂ. ಒ.ಎಸ್. 5845/2015 ... IX ಎಡಿಷನಲ್ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ... ದಿನಾಂಕ 04–07–2015 ಮತ್ತು 05–02–2024ರ ಆದೇಶದನ್ವಯ ... ಷೆಡ್ಯೂಲ್ 'ಬಿ' ಸ್ವತ್ತುಗಳು ... [illegible]

ತತ್ಸಂಬಂಧಿತ ತಡೆಯಾಜ್ಞೆ ನೀಡಿರುವ, ಒ.ಎಸ್. ನಂ. 5845/2015, ಫಸ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಸಿಸಿಹೆಚ್.5, IX ಎಡಿಷನಲ್ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ಮುಂದಿರುವ ಷೆಡ್ಯೂಲ್ 'ಎ' ಮತ್ತು 'ಬಿ' ಸ್ವತ್ತುಗಳ ಕೆಳಕಂಡಂತಿರುವುದು:

ಷೆಡ್ಯೂಲ್ 'ಎ' ಸ್ವತ್ತುಗಳು

ಐಟಂ ನಂ.1

ವಿಶೇಷ ಜಿಲ್ಲಾಧಿಕಾರಿಗಳ ಕಚೇರಿ, ಬೆಂಗಳೂರು ಜಿಲ್ಲೆ, ಬೆಂಗಳೂರು ಇವರು ಹೊರಡಿಸಿರುವ ಆದೇಶ ಸಂ. ಬಿಡಿಎಸ್ ಎಎಲ್‌ಎನ್ ಎಸ್‌ಆರ್ (ಎಸ್‌ಎ) 47/95–96 ದಿನಾಂಕ: 27–02–1996 ಆದೇಶದ ಅನ್ವಯ ಪರಿವರ್ತನೆಯಾಗಿರುವ, ಅಂಬಲಿಪುರ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇಲ್ಲಿರುವ 0.20 ½ ಗುಂಟೆಯ ಪೈಕಿ 0.16 ½ ಗುಂಟೆಗಳ ವಿಸ್ತೀರ್ಣದ, ಸರ್ವೆ ನಂ. 3/2ರ ಪರಿವರ್ತನೆಯಾಗಿರುವ ಸಂಪೂರ್ಣ ಸ್ವತ್ತು ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವಕ್ಕೆ	:	ಬಿ.ಪಿ. ಪಾಪಣ್ಣರೆಡ್ಡಿಯವರ ಸ್ವತ್ತು,
ಪಶ್ಚಿಮಕ್ಕೆ	:	ಕೆಕೆಇಸಿಎಸ್‌ನ ಸ್ವತ್ತಿನ ಉಳಿಕೆ ಭಾಗ ಮತ್ತು ಶ್ರೀ ಪಿಳ್ಳರೆಡ್ಡಿರವರ ಸ್ವತ್ತು
ಉತ್ತರಕ್ಕೆ	:	ಶ್ರೀ ಬಿ.ಪಿ.ಪಾಪಣ್ಣ ರೆಡ್ಡಿಯವರ ಸ್ವತ್ತು,
ದಕ್ಷಿಣಕ್ಕೆ	:	ಸರ್ವೆ ಸಂಖ್ಯೆ 3/2ರ ಉಳಿಕೆ ಸ್ವತ್ತು.

ಐಟಂ ನಂ.2

ಅಂಬಲಿಪುರ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇಲ್ಲಿರುವ ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನ ಒಳಗಿರುವ ಮನೆ ಪಟ್ಟಿ ಸಂಖ್ಯೆ: 3/2, ವಿ.ಪಿ.ಖಾತಾ ಸಂಖ್ಯೆ 322 ಹೊಂದಿರುವ ಪೂರ್ವ–ಪಶ್ಚಿಮಕ್ಕೆ 60 ಅಡಿ ಮತ್ತು ಉತ್ತರ–ದಕ್ಷಿಣಕ್ಕೆ 80 ಅಡಿ, ಒಟ್ಟಾರೆ 4800 ಚದರ ಅಡಿ ವಿಸ್ತೀರ್ಣವುಳ್ಳ ಸಂಪೂರ್ಣ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವಕ್ಕೆ	:	20 ಅಡಿ ರಸ್ತೆ,
ಪಶ್ಚಿಮಕ್ಕೆ	:	ಪಿಳ್ಳರೆಡ್ಡಿಯವರ ಸ್ವತ್ತು,
ಉತ್ತರಕ್ಕೆ	:	ರಾಧಮ್ಮನವರ ಸ್ವತ್ತು,
ದಕ್ಷಿಣಕ್ಕೆ	:	ರಾಧಮ್ಮನವರ ಸ್ವತ್ತು.

ಐಟಂ ನಂ.3

ಅಂಬಲಿಪುರ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇಲ್ಲಿರುವ ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನ ಒಳಗಿರುವ ಪೂರ್ವ–ಪಶ್ಚಿಮಕ್ಕೆ 117 ಅಡಿ ಮತ್ತು ಉತ್ತರ–ದಕ್ಷಿಣಕ್ಕೆ 23 ಅಡಿ ವಿಸ್ತೀರ್ಣವುಳ್ಳ ಮನೆ ಪಟ್ಟಿ ಸಂಖ್ಯೆ: 3/2, ಖಾತಾ ಸಂಖ್ಯೆ. 55, ಅಸೆಸ್‌ಮೆಂಟ್ ಸಂ. 322 ಹೊಂದಿರುವ ಸಂಪೂರ್ಣ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವಕ್ಕೆ	:	ಹನುಮರೆಡ್ಡಿಯವರ ಸ್ವತ್ತು,
ಪಶ್ಚಿಮಕ್ಕೆ	:	ಪಿಳ್ಳರೆಡ್ಡಿಯವರ ಸ್ವತ್ತು,
ಉತ್ತರಕ್ಕೆ	:	ಆರ್.ಕೆ. ಸರಸ್ವತಿಯವರ ಸ್ವತ್ತು,
ದಕ್ಷಿಣಕ್ಕೆ	:	ಶ್ರೀಮತಿ ರಾಧಮ್ಮನವರ ಉಳಿಕೆ ಸ್ವತ್ತು.

ಐಟಂ ನಂ.4

ಅಂಬಲಿಪುರ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇಲ್ಲಿರುವ ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನ ಒಳಗಿರುವ ಪೂರ್ವ–ಪಶ್ಚಿಮಕ್ಕೆ 40 ಅಡಿ ಮತ್ತು ಉತ್ತರ–ದಕ್ಷಿಣಕ್ಕೆ 40 ಅಡಿ ವಿಸ್ತೀರ್ಣವುಳ್ಳ ಮನೆ ಪಟ್ಟಿ ಸಂಖ್ಯೆ: 1, ಖಾತಾ ಸಂಖ್ಯೆ. 3/2, ಹೊಂದಿರುವ ಸಂಪೂರ್ಣ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವಕ್ಕೆ	:	ಪಾಪಣ್ಣರೆಡ್ಡಿಯವರ ಸ್ವತ್ತು,
ಪಶ್ಚಿಮಕ್ಕೆ	:	ರಸ್ತೆ,
ಉತ್ತರಕ್ಕೆ	:	ಬಿ.ಎನ್.ರಾಧಮ್ಮನವರ ಸ್ವತ್ತು,
ದಕ್ಷಿಣಕ್ಕೆ	:	ಬಿ.ಎನ್.ರಾಧಮ್ಮನವರ ಸ್ವತ್ತು.

ಐಟಂ ನಂ.5

ಅಂಬಲಿಪುರ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇಲ್ಲಿರುವ ಮನೆ ಪಟ್ಟಿ ಸಂಖ್ಯೆ: 3/2, ಬಿ.ಬಿ.ಎಂ.ಪಿ.ಖಾತಾ ಸಂಖ್ಯೆ. 322/ಬಿ, ಹೊಂದಿರುವ ಪೂರ್ವ–ಪಶ್ಚಿಮಕ್ಕೆ 50 ಅಡಿ ಮತ್ತು ಉತ್ತರ–ದಕ್ಷಿಣಕ್ಕೆ 52 ಅಡಿ ವಿಸ್ತೀರ್ಣವುಳ್ಳ ಹೊಂದಿರುವ ಸಂಪೂರ್ಣ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವಕ್ಕೆ	:	ಶ್ರೀ ಪಿ.ಬಿ. ಪಾಪಣ್ಣರೆಡ್ಡಿಯವರ ಸ್ವತ್ತು
ಪಶ್ಚಿಮಕ್ಕೆ	:	ರಸ್ತೆ ಮತ್ತು ಕೆಕೆಇಸಿಎಸ್ ಸ್ವತ್ತು
ಉತ್ತರಕ್ಕೆ	:	ಕೆಕೆಇಸಿಎಸ್ ಸ್ವತ್ತು,
ದಕ್ಷಿಣಕ್ಕೆ	:	ಕೆಕೆಇಸಿಎಸ್ ಸ್ವತ್ತು.

ಐಟಂ ನಂ.6

ಅಂಬಲಿಪುರ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇಲ್ಲಿರುವ ಮನೆ ಪಟ್ಟಿ ಸಂಖ್ಯೆ: 3/2, ಬಿ.ಬಿ.ಎಂ.ಪಿ.ಖಾತಾ ಸಂಖ್ಯೆ. 3/2/322/ಸಿ, ಹೊಂದಿರುವ ಪೂರ್ವ–ಪಶ್ಚಿಮಕ್ಕೆ 60 ಅಡಿ ಮತ್ತು ಉತ್ತರ–ದಕ್ಷಿಣಕ್ಕೆ 10 ಅಡಿ ವಿಸ್ತೀರ್ಣವುಳ್ಳ ಹೊಂದಿರುವ ಸಂಪೂರ್ಣ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವಕ್ಕೆ	:	ರಸ್ತೆ ಮತ್ತು ಕೆಕೆಇಸಿಎಸ್ ಸ್ವತ್ತು,
ಪಶ್ಚಿಮಕ್ಕೆ	:	ಪಿಳ್ಳರೆಡ್ಡಿಯವರ ಸ್ವತ್ತು
ಉತ್ತರಕ್ಕೆ	:	ಕೆಕೆಇಸಿಎಸ್‌ಗೆ ಸೇರಿದ ಸ್ವತ್ತು,
ದಕ್ಷಿಣಕ್ಕೆ	:	ಶ್ರೀಮತಿ ಬಿ.ಎನ್.ರಾಧಮ್ಮರವರ ಉಳಿಕೆ ಸ್ವತ್ತು.

ಐಟಂ ನಂ.7

ಅಂಬಲಿಪುರ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇಲ್ಲಿರುವ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನ ಒಳಗಿರುವ ಹಳೆ ಖಾತೆ ಸಂಖ್ಯೆ 3/2, ವಿ.ಪಿ. ಖಾತಾ ಸಂ. 55/322, ಹೊಂದಿರುವ ಮತ್ತು ಪೂರ್ವ–ಪಶ್ಚಿಮಕ್ಕೆ 117.6 ಅಡಿ ಮತ್ತು ಉತ್ತರ–ದಕ್ಷಿಣಕ್ಕೆ 139 ಅಡಿ ಹೀಗೆ ಒಟ್ಟು 16333 ಚದರ ಅಡಿ ವಿಸ್ತೀರ್ಣವುಳ್ಳ ಸಂಪೂರ್ಣ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವಕ್ಕೆ	:	ಬಿ.ಪಿ. ಪಾಪಣ್ಣರೆಡ್ಡಿಯವರ ಸ್ವತ್ತು
ಪಶ್ಚಿಮಕ್ಕೆ	:	ಪಿಳ್ಳರೆಡ್ಡಿಯವರ ಸ್ವತ್ತು
ಉತ್ತರಕ್ಕೆ	:	ಮಾರಾಟಗಾರರಿಗೆ ಸೇರಿದ ಸ್ವತ್ತು,
ದಕ್ಷಿಣಕ್ಕೆ	:	ಮಾರಾಟಗಾರರಿಗೆ ಸೇರಿದ ಸ್ವತ್ತು.

ಐಟಂ ನಂ.8

ಅಂಬಲಿಪುರ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇಲ್ಲಿರುವ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನ ಒಳಗಿರುವ ಹಳೆ ಖಾತೆ ಸಂಖ್ಯೆ 3/2, ವಿ.ಪಿ. ಖಾತಾ ಸಂ. 55/322ಎ, ಹೊಂದಿರುವ ಮತ್ತು ಪೂರ್ವ–ಪಶ್ಚಿಮಕ್ಕೆ 60 ಅಡಿ ಮತ್ತು ಉತ್ತರ–ದಕ್ಷಿಣಕ್ಕೆ 80 ಅಡಿ ಹೀಗೆ ಒಟ್ಟು 4800 ಚದರ ಅಡಿ ವಿಸ್ತೀರ್ಣವುಳ್ಳ ಸಂಪೂರ್ಣ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವಕ್ಕೆ	:	ಹನುಮರೆಡ್ಡಿಯವರ ಸ್ವತ್ತು
ಪಶ್ಚಿಮಕ್ಕೆ	:	ಪಿಳ್ಳರೆಡ್ಡಿಯವರ ಸ್ವತ್ತು
ಉತ್ತರಕ್ಕೆ	:	ಪೃಥ್ವಿರಾಜ್‌ರವರ ಸ್ವತ್ತು,
ದಕ್ಷಿಣಕ್ಕೆ	:	ಮಾರಾಟಗಾರರ ಉಳಿಕೆ ಸ್ವತ್ತು.

ವಾಸ್ತವಿಕ / ಭೌತಿಕ ವಿಸ್ತೀರ್ಣಗಳ ಅನ್ವಯ ಐಟಂ 1 ರಿಂದ 8ರ ಕ್ರೋಢೀಕೃತ ಷೆಡ್ಯೂಲ್ ಸ್ವತ್ತು

ಅಂಬಲಿಪುರ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇಲ್ಲಿರುವ ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನ ಒಳಗಿರುವ ಮನೆ ಪಟ್ಟಿ ಸಂಖ್ಯೆ 3/2, ವಿ.ಪಿ. ಖಾತಾ ಸಂ. 322, ಮನೆ ಪಟ್ಟಿ ಸಂಖ್ಯೆ 3/2, ಖಾತಾ ಸಂ. 55, ಅಸೆಸ್‌ಮೆಂಟ್ ಸಂ. 322, ಮನೆ ಪಟ್ಟಿ ಸಂ. 1, ಖಾತಾ ಸಂ. 3/2, ಸಂ. 3/2, ಬಿ.ಬಿ.ಎಂ.ಪಿ. ಖಾತಾ ಸಂಖ್ಯೆ 322/ಬಿ, ಸಂ. 3/2 ಮತ್ತು ಬಿಬಿಎಂಪಿ ಖಾತಾ ಸಂ. 3/2/322ಸಿ, ಹಳೆ ಖಾತಾ ಸಂ. 3/2, ವಿ.ಪಿ.ಖಾತಾ ಸಂ. 55/322, ಖಾತಾ ಸಂ. 3/2, ವಿ.ಪಿ.ಖಾತಾ ಸಂ. 322ಎ, ಹೊಂದಿರುವ ಒಟ್ಟಾರೆ 51,405 ಚದರ ಅಡಿ ಜೊತೆಗೆ 60,000 ಚದರ ಅಡಿ ವಿಸ್ತೀರ್ಣದ ಕಟ್ಟಡ, ಮೊಸಾಯಿಕ್ ನೆಲಹಾಸು ಹೊಂದಿರುವ ಸಂಪೂರ್ಣ ಸ್ವತ್ತು. ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವಕ್ಕೆ	:	ಪಾಪಣ್ಣರೆಡ್ಡಿಯವರ ಸ್ವತ್ತು
ಪಶ್ಚಿಮಕ್ಕೆ	:	ಮುಕುಂದ ಮತ್ತು ನಾಗರಾಜ್ ಡಿ.ಪಿ.ರವರಿಗೆ ಸೇರಿದ ಸ್ವತ್ತು
ಉತ್ತರಕ್ಕೆ	:	ಮಾರಾಟಗಾರರ ಉಳಿಕೆ ಸ್ವತ್ತು,
ದಕ್ಷಿಣಕ್ಕೆ	:	30 ಅಡಿ ರಸ್ತೆ ಮತ್ತು ಬಿ.ಎನ್.ರಾಧಮ್ಮನವರ ಸ್ವತ್ತು.

ಷೆಡ್ಯೂಲ್ 'ಬಿ' ಸ್ವತ್ತುಗಳು

ಐಟಂ ನಂ. ಎ

ಅಂಬಲಿಪುರ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇಲ್ಲಿರುವ ವಿಶೇಷ ಜಿಲ್ಲಾಧಿಕಾರಿಯವರ ಕಚೇರಿ, ಬೆಂಗಳೂರು ಜಿಲ್ಲೆ, ಬೆಂಗಳೂರು ಇವರು ಹೊರಡಿಸಿರುವ ಆದೇಶ ಸಂ.ಬಿಡಿಎಸ್ ಎಎಲ್‌ಎನ್ ಎಸ್ ಆರ್ (ಎಸ್‌ಎ) 47/95–96, ದಿನಾಂಕ: 27–02–1996ರ ಅನ್ವಯ ಪರಿವರ್ತನೆಯಾಗಿರುವ ಸರ್ವೆ ನಂ. 3/2, ಹೊಂದಿರುವ 2540 ಚದರ ಅಡಿ ವಿಸ್ತೀರ್ಣದ ಸಂಪೂರ್ಣ ಪರಿವರ್ತಿತ ಜಮೀನು. ಸದರಿ ಸ್ವತ್ತಿನ ಚಕ್ಕುಬಂಧಿ ಕೆಳಕಂಡಂತಿರುವುದು:

ಪೂರ್ವಕ್ಕೆ	:	ಈಗ ಶ್ರೀ ಶಿವಪ್ರಸಾದ್ ಮತ್ತು ಶ್ರೀಮತಿ ಉಮಾಪ್ರಸಾದ್‌ರವರಿಗೆ ಸೇರಿದ ಸ್ವತ್ತು.
ಪಶ್ಚಿಮಕ್ಕೆ	:	ಕೆಕೆಇಸಿಎಸ್ ಸ್ವತ್ತು ಮತ್ತು 20 ಅಡಿ ರಸ್ತೆ
ಉತ್ತರಕ್ಕೆ	:	ಶ್ರೀ ಬಿ.ಪಿ.ಪಾಪಣ್ಣ ರೆಡ್ಡಿರವರ ಸ್ವತ್ತು,
ದಕ್ಷಿಣಕ್ಕೆ	:	ಕೆಕೆಇಸಿಎಸ್ ಸ್ವತ್ತು ಮತ್ತು ಖಾಸಗಿ ಸ್ವತ್ತು.

ಐಟಂ ನಂ. ಬಿ

ಅಂಬಲಿಪುರ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇಲ್ಲಿರುವ ಸಂ. 322ಎ, ಖಾತಾ ಸಂ.54, ಅಸೆಸ್‌ಮೆಂಟ್ ಸಂ. 3/2, ಹೊಂದಿರುವ ಒಟ್ಟಾರೆ 9000 ಚದರ ಅಡಿ ವಿಸ್ತೀರ್ಣವುಳ್ಳ ಸಂಪೂರ್ಣ ಸ್ವತ್ತು, ಸದರಿ ಸ್ವತ್ತಿನ ಚಕ್ಕುಬಂಧಿ ಕೆಳಕಂಡಂತಿರುವುದು:

ಪೂರ್ವಕ್ಕೆ	:	ಮುಸ್ಲಿಮರಿಗೆ ಸೇರಿದ ಸ್ವತ್ತು
ಪಶ್ಚಿಮಕ್ಕೆ	:	ಶ್ರೀ ರವಿ, ರುಕ್ಮಿಣಿ, ನಂಜಪ್ಪರೆಡ್ಡಿ, ಸರೋಜ, ಗೋಪಿ, ಮುನಿನರಸಪ್ಪ, ಕೆಕೆಇಸಿಎಸ್ (2 ನಿವೇಶನ) ಮತ್ತು ನಟರಾಜ್‌ರವರಿಗೆ ಸೇರಿದ 14 ನಿವೇಶನಗಳು.
ಉತ್ತರಕ್ಕೆ	:	ಇಬ್ಬಲೂರು ಗಡಿ,
ದಕ್ಷಿಣಕ್ಕೆ	:	ಸರ್ಜಾಪುರ ಮುಖ್ಯರಸ್ತೆ.

ಸ್ಥಳ: ಬೆಂಗಳೂರು ದಿನಾಂಕ: 31–12–2025

ಸಹಿ/– ಶಹ್ನಾವಾಜ್ ಮತೀನ್ ಮಮದಾಪುರ್, ವಕೀಲರು,
ಎಎಸ್‌ಎಂ ಲಾ ಪಾರ್ಟ್‌ನರ್ಸ್, ವಕೀಲರು ಮತ್ತು ಸಾಲಿಸಿಟರ್ಸ್
ನಂ. 94/1–2, ಇನ್‌ಫೆಂಟ್ರಿ ರಸ್ತೆ, ಕರ್ನಾಟಕ ಬ್ಯಾಂಕ್ ಹಿಂಭಾಗ, ಬೆಂಗಳೂರು–560001,
ದೂರವಾಣಿ : 080–43023621 ಮೊಬೈಲ್: 9738031563 / 7795725122
ಇಮೇಲ್: shahnawaz@asmlawpartners.com

PUBLIC NOTICE

Public are hereby notified that on behalf of my client, that my client is intended to purchase schedule property from the present owners **1) Sri. H.N. Umesh Reddy** S/o. Late. Narayana Reddy, **2) Sri. H.N. Krishna Murthy @ Krishna Murthy** S/o. Late. H. Narasimha Reddy @ Narasimhaiah, **3) Sri. H. Nagappa** S/o. late. Hanumanthappa, **4) Sri. R. Krishna Reddy** S/o. late. Rama Reddy, **5) Smt. Chandramma** W/o. late. N. Narasimha Murthy Rao, the present owners represent the schedule property is free from all encumbrance, charged, lien, litigation or any third-party rights/claims of any nature whatsoever.

Notice is hereby given to the general public that if any person or persons, Firm or Institution has any claims or asserts any right, title or interest in the schedule Property or having or claiming any manner of right, title, lien, interest etc. in respect of the above said Property should write to the undersigned **within 11 days** from the date of this publication.

If no valid objection is received as aforesaid by the undersigned within time stipulated above, my clients shall proceed to complete the sale transaction deeming that apart from the said owners, no one else have any manner of claim over the Schedule properties.

Schedule Property

Sl. No.	Owner/Khathedra	Survey Number	Village	Extent
01.	Sri. H.N. Umesh Reddy	Sy. No. 8/11 (old Sy. No. 8/1)	Harohalli	0-05 Guntas
02.	Sri. Krishna Murthy @ H.N. Krishna Murthy Reddy	Sy. No. 8/12 (old Sy. No. 8/1)	Harohalli	0-20 Guntas
03.	Sri. Krishna Murthy @ H.N. Krishna Murthy Reddy	Sy. No. 8/13 (old Sy. No. 8/1)	Harohalli	0-10 Guntas
04.	Sri. Krishna Murthy @ H.N. Krishna Murthy Reddy	Sy. No. 8/14 (old Sy. No. 8/1)	Harohalli	0-25 guntas
05.	Sri. H. Nagappa	Sy. No. 8/15 (old Sy. No. 8/1)	Harohalli	0-10 Guntas
06.	Sri. R. Krishna Reddy	Sy. No. 8/15 (old Sy. No. 8/1)	Harohalli	0-05 Guntas
07.	Smt. Chandramma	Sy. No. 8/15 (old Sy. No. 8/1)	Harohalli	0-25 Guntas

All the survey number/properties are Situated at Harohalli Village, Yelahanka Hobli, Yelahanka Taluk, earlier Bangalore Addl. North Taluk, Bangalore Urban District.

Address :- Ambarish R.C, Advocate.
No. 310, 60 feet Road, Talakaveri Layout, Sahakar Nagar Post,
Bangalore- 560 092 Phone No. 9008581888/9448675308

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: ಅಇಂವಿ/ಪ್ರ(ಕಾ)/ದ.ವೃ/ಕಾನಿಇಂ(ವಿ)/ಕಿಇಂ(ವಿ)–1/ಕ–321(6)/2025–26/4426–28 ದಿನಾಂಕ: 30.12.2025

ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕವಿಪ್ರನಿನಿಯು ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಪ್ರ(ಕಾ)/ಬೆಂ.ಮ.ಕ್ಷೇ.ವ.(ದ) /ಕಾ.ನಿ.ಇಂ(ವಿ)/ಸ.ಕಾ.ಇಂ(2)/ಕಿ.ಇಂ-1/25-26/ಇ.ಪಿ.ಆರ್-21 ದಿನಾಂಕ: 12.12.2025 ರ ಅನ್ವಯ **ಬೆಂಗಳೂರಿನ ಪ್ರಸರಣ (ಕಾರ್ಯಾಚರಣೆ) ವೃತ್ತ-ದಕ್ಷಿಣಗೆ ಸಂಬಂಧಿಸಿದ 220 ಕೆವಿ ಹೂಡಿ ಸ್ವೀಕರಣಾ ಕೇಂದ್ರದಲ್ಲಿರುವ 66ಕೆವಿ ಕೆಪ್ಯಾಸಿಟರ್ ಬ್ಯಾಂಕಿನ ನ್ಯೂಮ್ಯಾಟಿಕ್ ಬ್ರೇಕರ್ ಮತ್ತು ಸಿ&ಆರ್ ಪ್ಯಾನಲ್ ಬದಲಾವಣೆ, ಪೂರೈಕೆ ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸಲು ಸಂಪೂರ್ಣ ಟರ್ನ್‌ಕೀ ಮತ್ತು ಶೇಕಡಾವಾರು ಆಧಾರದ ಮೇಲೆ ಬಿಡ್‌ಗಳನ್ನು ಆಹ್ವಾನಿಸಿದೆ.**

ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ಗೆ ಹೈಪರ್‌ಲಿಂಕ್ "E Procurement KPTCL" ನಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ: 01.01.2026** ರ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್ (ವಿ),
ಪ್ರಸರಣ (ಕಾರ್ಯಾಚರಣೆ) ವೃತ್ತ-ದಕ್ಷಿಣ,
ಕ.ವಿ.ಪ್ರ.ನಿ.ನಿ., ಆನಂದರಾವ್ ವೃತ್ತ, ಬೆಂಗಳೂರು-560 009.

ಪುರಸಭಾ ಕಾರ್ಯಾಲಯ ಚಂದಾಪುರ

ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560081
ಫೋನ್: 080–27832411, E-Mail: ka.chandapura.tmc@gmail.com

ಸಂ:ಚಂ.ಪು.ಕಾ/ಆ.ಶಾ/ಕೆಪಿಪಿ/ಟೆಂ/06/2025–26 ದಿನಾಂಕ:31.12.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳಯ 2000ರ ಪ್ರಕಾರ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮಗಳನ್ವಯ, 2025–26ನೇ ಪುರಸಭಾ ನಿಧಿಯಡಿಯಲ್ಲಿ Annual Tender for Animal Birth Control (ABC) and Anti Rabies Vaccination (ARV) in Chandapura TMC ಲೋಕೋಪಯೋಗಿ ಇಲಾಖೆಯ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಕೆಪಿಪಿ ಪೋರ್ಟಲ್ ಮುಖಾಂತರ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇಲಾಖಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಟೆಂಡರ್ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಸೇವೆಯ ವಿವರ
1	DMA/2025-26/SE6924	Annual Tender for Animal Birth Control (ABC) and Anti Rabies Vaccination (ARV) in Chandapura TMC.

ಟೆಂಡರಿಗಿಟ್ಟ ಅಂದಾಜು ಮೊತ್ತ : ರೂ. 14,98,500/–

ವೇಳಾಪಟ್ಟಿ: 1) ಕೆಪಿಪಿ ಪೋರ್ಟಲ್ ಮೂಲಕ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ:15.01.2026 ಸಂಜೆ 5:00 ಗಂಟೆಯವರೆಗೆ.** 2) ಸ್ವೀಕೃತವಾದ ಟೆಂಡನ್ನು ತೆರೆಯುವ **ದಿನಾಂಕ ಮತ್ತು ಸಮಯ:16.01.2026 ರಂದು ಸಂಜೆ 5:30 ಗಂಟೆಗೆ.** 3) ಹೆಚ್ಚಿನ ವಿವರಗಳಿಗಾಗಿ ಪುರಸಭೆಯ ಕಿರಿಯ ಅಭಿಯಂತರರಿಂದ ಅಥವಾ ದೂರವಾಣಿ ಸಂಖ್ಯೆ:080–27832411 ರಲ್ಲಿ ಮಾಹಿತಿ ಪಡೆಯಬಹುದು.

ಸಹಿ/–
ಮುಖ್ಯಾಧಿಕಾರಿ
ಪುರಸಭೆ, ಚಂದಾಪುರ.

ವಾಸಾಸಂಇ/ವಾಪ್ರ/ಜಿಎ/4743/2025–26

ಪುರಸಭೆ ಕಾರ್ಯಾಲಯ, ಹುಣಸಮಾರನಹಳ್ಳಿ

ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562157
ಇ–ಮೇಲ್: itstaff_ulb_hmhalli@gmail.com ದೂ: 080–23901864

ಸಂ: ಹು.ಪು/ತಾ.ಶಾ/ಸಿ.ಆರ್/18/2025–26 ದಿನಾಂಕ: 31–12–2025

ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಹುಣಸಮಾರನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 2025–26ನೇ ಸಾಲಿನ ಪುರಸಭಾ ನಿಧಿ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಮತ್ತು ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವರ್ಗ
1	DMA/2025-26/RD/WORK_INDENT30287/CALL-2	14.12	ಸಾಮಾನ್ಯ
2	DMA/2025-26/OW/WORK_INDENT52961	28.50	ಸಾಮಾನ್ಯ
3	DMA/2025-26/OW/WORK_INDENT49008	62.10	ಸಾಮಾನ್ಯ
4	DMA/2025-26/OW/WORK_INDENT53293	7.85	ಸಾಮಾನ್ಯ
5	DMA/2025-26/BD/WORK_INDENT53291	29.26	ಸಾಮಾನ್ಯ

ಟೆಂಡರ್ ಸಲ್ಲಿಸುವ ವಿವರಗಳು: (1) ಆಕ್ಷೇಪಣೆ / ಮಾಹಿತಿಯನ್ನು ಸಲ್ಲಿಸಲು ದಿನಾಂಕ: 13/01/2026ರ ಸಂಜೆ 5.00 ಗಂಟೆಯವರೆಗೆ. (2) ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15/01/2026ರ ಸಂಜೆ 5.00 ಗಂಟೆಯವರೆಗೆ. (3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 16/01/2026ರ ಸಂಜೆ 5.15 ಗಂಟೆ ನಂತರ. (4) ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 17/01/2026ರ ಸಂಜೆ 5.15 ಗಂಟೆ ನಂತರ. ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ / ಬದಲಾವಣೆಯಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ವಿಳಾಸ https://kppp.karnataka.gov.in ಮೂಲಕ ಮಾತ್ರ ತಿಳಿಸಲಾಗುವುದು.

ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಹುಣಸಮಾರನಹಳ್ಳಿ

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಹುಣಸಮಾರನಹಳ್ಳಿ

ವಾಸಾಸಂಇ/ವಾಪ್ರಾ/ಸ್ಪ್ಯಾನ್/4756/2025–26

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಇಲಾಖೆ

ಉಪ ನಿರ್ದೇಶಕ (ಆಡಳಿತ) ರವರ ಕಛೇರಿ, ಶಾಲಾ ಶಿಕ್ಷಣ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆಜಿಲ್ಲಾಡಳಿತ ಭವನ,
ಬೀರಸಂದ್ರ, ದೇವನಹಳ್ಳಿ ತಾಲ್ಲೂಕು.

ಸಂಖ್ಯೆ: ಆ2/ಜಿ.ಲಿ.ಯೋ/10/2025–26 ದಿನಾಂಕ: 31.12.2025

ಪ್ರಕಟಣೆ

2025–26ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್ ಅಯವ್ಯಯದಲ್ಲಿ ಸರ್ಕಾರಿ ಪ್ರೌಢಶಾಲೆಗಳಿಗೆ 04 ಸೀಟರ್ ಡೆಸ್ಕ್ ಒದಗಿಸುವ ಸಂಬಂಧ ಆಸಕ್ತ ಸಂಸ್ಥೆ/ಏಜೆನ್ಸಿಗಳಿಂದ ದ್ವಿಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾರರಿಗೆ ಸೂಚನೆಗಳು :–

(1) ಸರ್ಕಾರಿ ಪ್ರೌಢಶಾಲೆ ಶಾಲೆಗಳಿಗೆ 04 ಸೀಟರ್ ಡೆಸ್ಕ್ ಒದಗಿಸುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆ ನಡೆಸಲಾಗುತ್ತಿದೆ. (2) ಟೆಂಡರ್ ಡಾಕ್ಯುಮೆಂಟ್‌ನ್ನು http://www.eproc.karnataka.gov.in ವೆಬ್‌ಸೈಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ, ಅವಧಿ ವಿಸ್ತರಣೆ ಹಾಗೂ ಇತರೆ ಹೆಚ್ಚಿನ ಸೂಚನೆಗಳನ್ನು ಸಂಬಂಧಿಸಿದ ವೆಬ್‌ಸೈಟ್ ಮೂಲಕವೇ ಪಡೆಯತಕ್ಕದ್ದು. ಮೇಲ್ಕಂಡ ಸೇವೆಯನ್ನು ಒದಗಿಸಲು ಆಸಕ್ತಿ ಇರುವ ಸಂಸ್ಥೆಗಳು ಇ–ಗವರ್ನೆನ್ಸ್ ಇಲಾಖೆಯಲ್ಲಿ ನೋಂದಣಿ ಪಡೆದು ಡಿಜಿಟಲ್ ಸಹಿಯನ್ನು ದೃಢೀಕರಣ ಪಡೆಯಬೇಕಾಗಿರುತ್ತದೆ. (3) ಈ ಸಂಬಂಧ http://www.eproc.karnataka.gov.in ಹೆಚ್ಚಿನ ಮಾಹಿತಿಗಾಗಿ ಬೆಂಗಳೂರಿನಲ್ಲಿ ಇ–ಗವರ್ನೆನ್ಸ್ ಘಟಕವನ್ನು ಸಂಪರ್ಕಿಸಬಹುದಾಗಿದೆ. (4) ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ಈ ಕಛೇರಿಯ, ಕಛೇರಿ ಸಮಯದಲ್ಲಿ ಟೆಂಡರ್‌ನ ಹೆಚ್ಚಿನ ಮಾಹಿಗಾಗಿ ದೂರವಾಣಿ ಸಂಖ್ಯೆ: 9448999325 ಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಉಪ ನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಾಸಂಇ/ವಾಪ್ರ/4755/ಶಿರಡಿ ಸಾಯಿ/2025–26

Office of The Executive Engineer PWD. Division Vidisha (M.P.)

TENDER NOTICE

NIT No- 110 to 115/2025-26 Date 25.12.2025

Online Tender for mentioned below are being invited. The Tender have been uploaded on the e-Procurement system of Public Works Department on the Portal www.mptenders.gov.in Tender details are as below:-

S. No.	Tender No.	District	Nature of work	Nature of work	Call No.	Cost of Project (PAC) (Rs. In lack)	Earnest Money
1	2	3	4	5	6	7	8
1.	2025 PWDR B_470895_1	Vidisha	Special Strengthening	Special Strengthening of Jartoli Dabari road length 3.50 km.	Ist	93.21	93210.00
2.	2025_PWDR B_470899_1	Vidisha	Special Strengthening	Special Strengthening of Padariya Jagir to Gajanyayi road length 5.00 km.	Ist	121.40	121400.00
3.	2025 PWDR B_470904_1	Vidisha	Special Strengthening	Special Strengthening of Pamariya to Kaluam-kheda Dhadon Wardha to Dangarwada road length 5.00 km.	Ist	124.87	124870.00
4.	2025_PWDR B_470908_1	Vidisha	Strengthening Work	Strengthening Work of Peeklon Approach road length 3.90 km. IIIrd Call	IIIrd	320.60	320600.00
5.	2025_PWDR B_470915_1	Vidisha	Construction Work	Construction of Gram Panchayat Thaner to Gufa Mandir road to Lodhakhedi via Pipalkheda Canal length 2.70 km.	Ist	259.65	259650.00
6.	2025 PWDR B_470918_1	Vidisha	Construction Work	Construction of CC Road Village Arwariya Stop Dam to Arwariya Berkhedi River Bridge length 0.60 km. and Construction of CC road from Thanner to Gufa Mandir road to Jind Maharaj Temple length 0.60 km. total length 1.20 km. IInd Call	IInd	135.20	135200.00
				Total		1054.93	

The document can only be purchased online from the above website after making online payment. The last date & time for purchase of Document online is Dated 07.01.2026 up to (17:30.) Detailed NIT and other details can be viewed on the above mentioned portal. Amendments to NIT, if any, would be published on website only, and not in newspaper.

G23585/25 Sd/-Executive-Engineer. PWD. Division Vidisha

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರ ಕಚೇರಿ –3, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ,
ವಸಂತ ನಗರ, ಬೆಂಗಳೂರು –560052.

ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/19/25–26 ದಿನಾಂಕ : 31.12.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ, ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಬಿಎಸ್‌ಡಬ್ಲ್ಯೂಎಂಎಲ್ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗಾಗಿ ಬೆಂಗಳೂರು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ. ಟೆಂಡರ್‌ಗಳು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (ಎಂದರೆ https://kppp.karnataka.gov.in) ಮೂಲಕ ಕೆಳಗಿನ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು.

ಕಾಮಗಾರಿಗಳ ಹೆಸರು	ಕಾಮಗಾರಿಗಳ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)	ಅವಧಿ	ಇಎಂಡಿ ಮೊತ್ತ ರೂ.ಗಳಲ್ಲಿ
MSW ಸಂಸ್ಕರಣಾ ಘಟಕಗಳಲ್ಲಿ LVP/RDF ಗಳನ್ನು ವಿಂಗಡಿಸುವುದು ಮತ್ತು ಟಿಪ್ಪರ್‌ಗಳಿಗೆ ಲೋಡ್ ಮಾಡುವುದು.	78.78	05 ತಿಂಗಳು	1,57,560.00

ಸೂಚನೆ: (1) ಬಿಡ್ ಪೂರ್ವ ಪ್ರಶ್ನೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 05.01.2026 ರಂದು ಸಂಜೆ 15.00 ಗಂಟೆಯವರೆಗೆ.**
(2) ಬಿಡ್ ಪೂರ್ವ ಸಭೆಯು **ದಿನಾಂಕ 05.01.2026 ರಂದು ಮಧ್ಯಾಹ್ನ 15:00 ಗಂಟೆಗೆ** ಸಿಇ & ಸಿಜಿಎಂ (ಟೆಕ್) ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು ರವರ ಕಚೇರಿಯಲ್ಲಿ ನಡೆಯಲಿದೆ.
(3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 12.01.2026 ರಂದು ಸಂಜೆ 16.00 ಗಂಟೆಯವರೆಗೆ.**
(4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 13.01.2026 ರಂದು 16.30 ಗಂಟೆಗೆ.**
(5) ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/4736/ಶಿರಡಿ ಸಾಯಿ/2025–26

ಸ್ಕೇಟ್ ಬೋರ್ಡಿಂಗ್ ಪಾರ್ಕ್ ನಿರ್ಮಾಣ

ಬಾಲಭವನದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಪಾರ್ಕ್‌ಗೆ ಸಿದ್ಧತೆ

• ಖಲೀಲಅಹ್ಮದ ಶೇಖ

ಬೆಂಗಳೂರು: ಬಾಲಭವನದ ಸುಮಾರು ಒಂದು ಎಕರೆ ಪ್ರದೇಶದಲ್ಲಿ ಅಂತರ ರಾಷ್ಟ್ರೀಯ ಗುಣಮಟ್ಟದ ಸ್ಕೇಟ್ ಬೋರ್ಡಿಂಗ್ ಪಾರ್ಕ್ ನಿರ್ಮಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಿದ್ಧತೆ ನಡೆಸಿದೆ. ಎಲ್ಲವೂ ಅಂದುಕೊಂಡಂತೆ ಆದರೆ 2026ರ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಸ್ಕೇಟ್ ಬೋರ್ಡ್‌ಲೋಕಾರ್ಪಣೆಯಾಗಲಿದೆ.

ಜವಾಹರ ಬಾಲಭವನ ಸೊಸೈಟಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಭಾಗಿತ್ವದಲ್ಲಿ ಕಬ್ಬನ್ ಉದ್ಯಾನದ ಬಾಲಭವನದಲ್ಲಿ ಸುಮಾರು ₹1.5 ಕೋಟಿ ವೆಚ್ಚದಲ್ಲಿ ಸ್ಕೇಟ್ ಬೋರ್ಡಿಂಗ್ ಪಾರ್ಕ್ ನಿರ್ಮಿಸಲು ನೀಲನಕ್ಷೆ ಸಿದ್ಧಪಡಿಸಲಾಗಿದೆ.

ಬೆಂಗಳೂರು ನಗರದ ಹೊರ ಭಾಗದಲ್ಲಿ ಹಲವು ಸ್ಕೇಟ್ ಬೋರ್ಡಿಂಗ್ ಪಾರ್ಕ್‌ಗಳಿವೆ. ಆದರೆ, ಸಾರಿಗೆ ಸಂಪರ್ಕ ಸರಿಯಾಗಿಲ್ಲ. ಬೆಂಗಳೂರಿನ ಹೃದಯ ಭಾಗದಲ್ಲಿರುವ ಬಾಲಭವನಕ್ಕೆ ಮೆಟ್ರೊ ಸೇರಿದಂತೆ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಚೆನ್ನಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆಸಕ್ತರು ಇಲ್ಲಿಗೆ ಬರುವ ನಿರೀಕ್ಷೆ ಇದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಬಾಲಭವನದ ಅಧಿಕಾರಿಗಳು ತಿಳಿಸಿದರು.

‘ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಸ್ಕೇಟ್ ಬೋರ್ಡಿಂಗ್ ವಿಭಾಗದಲ್ಲಿ ಭಾಗವಹಿಸುವ ಅಥ್ಲೀಟ್‌ಗಳನ್ನು ಸಜ್ಜುಗೊಳಿಸಲು ಈ ಪಾರ್ಕ್ ಸಹಕಾರಿ ಆಗಲಿದೆ. ಇಲ್ಲಿ ಸ್ಟ್ರೀಟ್ ಹಾಗೂ ಪಾರ್ಕ್ ಎಂಬ ಎರಡು ವಿಭಾಗಗಳು ಇರಲಿವೆ. ಸಾಮಾನ್ಯವಾಗಿ ಈ ಎರಡು ವಿಭಾಗಗಳನ್ನು ಬೇರೆ–ಬೇರೆಯಾಗಿ ನಿರ್ಮಿಸಲಾಗುತ್ತದೆ. ಆದರೆ ಇಲ್ಲಿ ಜಾಗದ ಕೊರತೆ ಇರುವ ಕಾರಣ ಹೈಬ್ರಿಡ್ ಮಾದರಿಯ ಸ್ಕೇಟ್ ಬೋರ್ಡಿಂಗ್ ಪಾರ್ಕ್ ನಿರ್ಮಿಸಲಾಗುತ್ತಿದೆ’ ಎಂದು ಜವಾಹರ್ ಬಾಲಭವನ ಸೊಸೈಟಿಯ ಅಧ್ಯಕ್ಷ ಬಿ.ಆರ್. ನಾಯ್ಡು ‘ಪ್ರಜಾವಾಣಿ’ಗೆ ತಿಳಿಸಿದರು.

‘ಸ್ಕೇಟ್ ಬೋರ್ಡಿಂಗ್ ಪಾರ್ಕ್ ಪ್ರವೇಶಕ್ಕೆ ಶುಲ್ಕ ನಿಗದಿಪಡಿಸಲಾಗುತ್ತದೆ. ಸ್ಕೇಟ್ ಬೋರ್ಡಿಂಗ್ ಕಲಿಯಲು ಬೇಕಾದ ಎಲ್ಲ ರೀತಿಯ ತರಬೇತಿಯನ್ನು ನೀಡಲಾಗುತ್ತದೆ. ಆನ್‌ಲೈನ್ ಹಾಗೂ ಆಫ್‌ಲೈನ್ ಮಾದರಿಯಲ್ಲಿ ತರಬೇತಿ ನೀಡಲಾಗುವುದು. ಇದಕ್ಕೆ ಪ್ರತ್ಯೇಕವಾಗಿ ಶುಲ್ಕ ಇರಲಿದೆ. ನಮ್ಮ ರಾಜ್ಯದಿಂದ ಅಂತರ ರಾಷ್ಟ್ರೀಯ ಗುಣಮಟ್ಟದ ಸ್ಕೇಟ್ ಬೋರ್ಡಿಂಗ್ ತಂಡ ತಯಾರಿಸುವ ಉದ್ದೇಶ ಇದೆ’ ಎಂದು ವಿವರಿಸಿದರು.

‘ಈ ಪಾರ್ಕ್‌ಗೆ ನಾಲ್ಕು ವರ್ಷ ಮೇಲ್ಪಟ್ಟ ಯಾರು ಬೇಕಾದರೂ ಭೇಟಿ ನೀಡಬಹುದು. ಸ್ಕೇಟ್ ಬೋರ್ಡ್ ಇರುವವರಿಗೆ ಮಾತ್ರ ಒಳಗೆ ಪ್ರವೇಶ ನೀಡಲಾಗುತ್ತದೆ. ಈ ಆಟದ ಬಗ್ಗೆ ಗೊತ್ತಿಲ್ಲದವರಿಗೆ ತರಬೇತಿ ನೀಡಲಾಗುತ್ತದೆ. ಬೆಳಿಗ್ಗೆ ಹಾಗೂ ಸಂಜೆ ಸಮಯದಲ್ಲಿ ತರಬೇತಿ ಇರಲಿದೆ. ಉಳಿದ ಸಮಯದಲ್ಲಿ ಆಸಕ್ತರು ಇಲ್ಲಿಗೆ ಬಂದು ಸ್ಕೇಟ್ ಬೋರ್ಡ್ ಆಡಬಹುದು’ ಎಂದು ಹೇಳಿದರು.

ಸ್ಕೇಟ್ ಬೋರ್ಡಿಂಗ್ ಪಾರ್ಕ್‌ನ ನೀಲಿ ನಕ್ಷೆ

‘ಹೈಬ್ರಿಡ್ ಮಾದರಿಯ ಸ್ಕೇಟ್ ಪಾರ್ಕ್’

‘ಬಾಲಭವನದಲ್ಲಿ ಹೈಬ್ರಿಡ್ ಮಾದರಿಯ ಸ್ಕೇಟ್ ಬೋರ್ಡಿಂಗ್ ನಿರ್ಮಿಸಲಾಗುತ್ತಿದೆ. ಇದರಲ್ಲಿ ಪಾರ್ಕ್ ವಿಭಾಗದಲ್ಲಿ ಹಾಫ್–ಕ್ವಾಟರ್ ಪೈಪ್, ಲೆಡ್ಜ್, ಫನ್ ಬಾಕ್ಸ್, ಬೌಲ್ಸ್ ಮತ್ತು ಸ್ನೇಕ್ ರನ್‌ಗಳ ಜೊತೆಗೆ ಖಾಲಿ ಈಜುಕೊಳದ ಮಾದರಿ ಇರಲಿದ್ದು, ಕಡಿದಾದ ಬದಿಗಳನ್ನು ಹೊಂದಿರುತ್ತದೆ. ಇಲ್ಲಿ ಸ್ಕೇಟರ್‌ಗಳು ಗ್ರ್ಯಾಬ್ ಮತ್ತು ಸ್ಪಿನ್ ಮಾಡುತ್ತಾರೆ. ಸ್ಟ್ರೀಟ್ ವಿಭಾಗದಲ್ಲಿ ಬೀದಿಗಳಲ್ಲಿರುವ ಕಂಬಿಗಳು, ಮೆಟ್ಟಿಲುಗಳ ಮೇಲೆ ಸ್ಕೇಟ್ ಮಾಡಬಹುದು’ ಎಂದು ಬಿ.ಆರ್. ನಾಯ್ಡು ತಿಳಿಸಿದರು. ‘ನಗರದ ಹಲವು ಕಡೆ ಮುಖ್ಯರಸ್ತೆಯಲ್ಲಿ ಕೆಲವರು ಸ್ಕೇಟ್ ಬೋರ್ಡ್ ಆಡುತ್ತಾರೆ. ಇದರಿಂದ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಸ್ಕೇಟ್ ಬೋರ್ಡ್ ಆಡುವ ಆಸಕ್ತರು ಇಲ್ಲಿಗೆ ಬರಬಹುದು’ ಎಂದರು.

ಆರ್‌ಐಎಂ 29ನೇ ಘಟಿಕೋತ್ಸವದಲ್ಲಿ ಆಲೀನಾ ಆಲಂ

‘ಯಶಸ್ಸಿನ ಕೀಲಿ ಕೈ ಸರಿಯಾಗಿ ಬಳಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಗತ್ತನ್ನು ಬದಲಾಯಿಸ ಬಲ್ಲ ಕೀಲಿ ಕೈ ನಮ್ಮ ಬಳಿಯೇ ಇದ್ದು, ಅದನ್ನು ಸೂಕ್ತ ಸಮಯದಲ್ಲಿ ಬಳಸಿ’ ಎಂದು ಮಿಟ್ಟಿ ಕೆಫೆ ಸಂಸ್ಥಾಪಕಿ ಹಾಗೂ ಸಿಇಒ ಅಲೀನಾ ಆಲಂ ಹೇಳಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ (ಆರ್‌ಐಎಂ) 29ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ‘ಸಮಾಜವನ್ನು ರೂಪಿಸುವ ಕೆಲಸ ಎಲ್ಲರಿಂದಲೂ ಆಗಬೇಕು. ಇದರಲ್ಲಿ ಪ್ರತಿ ವ್ಯಕ್ತಿಯ ಒಳಗೊಳ್ಳುವಿಕೆ, ಘನತೆ ಮುಖ್ಯವಾದದು’ ಎಂದು ಹೇಳಿದರು.

‘ಏನನ್ನಾದರೂ ಬದಲಾವಣೆ ಮಾಡಬೇಕು ಎಂದು ಬಯಸಿದಾಗ ಸಮುದಾಯದ ಬೆಂಬಲ ಬೇಕಾಗುತ್ತದೆ. ಧೈರ್ಯ, ಗಟ್ಟಿತನದ ನಿರ್ಧಾರಗಳು ಮುಖ್ಯ ಪಾತ್ರ ವಹಿಸುತ್ತವೆ. ಸೂಕ್ತ ಗುರಿ, ಉದ್ದೇಶದೊಂದಿಗೆ ಕೆಲಸ ಮಾಡಿದಾಗ ಯಶಸ್ಸು ತಾನಾಗಿಯೇ ಬರುತ್ತದೆ. ಆಲೋಚನೆಗಳೂ ಯಶಸ್ವಿಯಾಗುತ್ತವೆ’ ಎಂದು ತಾವು ಕಟ್ಟಿ ಬೆಳೆಸಿದ ಮಿಟ್ಟಿ ಕಥೆಯ ಯಶಸ್ಸಿನ ಹಾದಿಯನ್ನು ಬಿಡಿಸಿಟ್ಟರು.

ಗೋಕುಲ್ ಎಜುಕೇಷನ್ ಫೌಂಡೇಷನ್ (ಜಿಇಎಫ್) ಅಧ್ಯಕ್ಷ ಡಾ.ಎಂ.ಆರ್. ಸೀತಾರಾಮ್, ಆರ್‌ಐಎಂ ನಿರ್ದೇಶಕ ಹಾಗೂ ಜಿಇಎಫ್ ಟ್ರಸ್ಟಿ ಡಾ.ಎಂ.ಆರ್. ಪಟ್ಟಾಭಿರಾಮ್ ಅವರು, ‘ರಾಮಯ್ಯ ಶಿಕ್ಷಣ ಸಂಸ್ಥೆಯು ಮೌಲ್ಯಾಧಾರಿತ ಶಿಕ್ಷಣ ಹಾಗೂ ಪ್ರಗತಿಯ ಮೂಲಕ ತನ್ನ ಪರಂಪರೆಯನ್ನು ಮುಂದುವರೆಸಿದೆ. ವಿದ್ಯಾರ್ಥಿ ಸಮೂಹ ಇದರ ಉಪಯೋಗ ಪಡೆದುಕೊಂಡು ಬದುಕು ಕಟ್ಟಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಡೀನ್ ಡಾ.ಅರುಣ್‌ಕುಮಾರ್ ಅವರು ವಾರ್ಷಿಕ ವರದಿ ಮಂಡಿಸಿದರು. ಫೌಂಡೇಷನ್ ನಿರ್ದೇಶಕ ಹಾಗೂ ಕಾರ್ಯದರ್ಶಿ ಎಂ.ಆರ್.ಆನಂದ ರಾಮ್, ಮುಖ್ಯ ಕಾರ್ಯನಿರ್ವಾಹಕ ಎಚ್.ವಿ.ಪಾರ್ಶ್ವನಾಥ್, ಮುಖ್ಯ ಶೈಕ್ಷಣಿಕ ಸಲಹೆಗಾರ ಕರಿಸಿದ್ದಪ್ಪ, ಹಣಕಾಸು ಮುಖ್ಯಾಧಿಕಾರಿ ಜಿ.ರಾಮಚಂದ್ರ, ಆರ್‌ಐಎಂ ರಿಜಿಸ್ಟ್ರಾರ್ ಸವಿತಾರಾಣಿ ಉಪಸ್ಥಿತರಿದ್ದರು.

ಶೈಕ್ಷಣಿಕ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ಪೂಜಾ ಸಾಸನೂರು, ಯಶಸ್ವಿ ಶರ್ಮ, ಎಸ್.ಆಕಾಂಕ್ಷ, ಚಿಂತಿಲಾ ರಮ್ಯಾ, ಕೆ.ವಲ್ಲಿಯಪ್ಪನ್, ಜಿ.ವಿಘ್ನೇಶ್ ಅವರು ಚಿನ್ನ ಹಾಗೂ ಬೆಳ್ಳಿ ಪದಕ ಸ್ವೀಕರಿಸಿದರು. 280 ವಿದ್ಯಾರ್ಥಿಗಳು ಘಟಿಕೋತ್ಸವದಲ್ಲಿ ಭಾಗವಹಿಸಿದ್ದರು

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ(ಆರ್‌ಐಎಂ) 29ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದಕ ಪಡೆದ ವಿದ್ಯಾರ್ಥಿಗಳೊಂದಿಗೆ ಸವಿತಾ ರಾಣಿ, ಜಿ.ರಾಮಚಂದ್ರ, ಕರಿಸಿದ್ದಪ್ಪ, ಅಲಿನಾ ಆಲಂ, ಎಂ.ಆರ್.ಆನಂದರಾಮ್, ಎಚ್.ವಿ.ಪಾರ್ಶ್ವನಾಥ್, ಎ.ವಿ.ಅರುಣ್‌ಕುಮಾರ್ ಉಪಸ್ಥಿತರಿದ್ದರು

ಬಸವಲಿಂಗಪ್ಪ ಸ್ಮಾರಕ ನಿರ್ಮಾಣಕ್ಕೆ ಅನುದಾನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಯಲಹಂಕ: ‘ಬಸವಲಿಂಗಪ್ಪನವರ ಸ್ಮಾರಕ ನಿರ್ಮಿಸುವುದಕ್ಕೆ ಸರ್ಕಾರ ₹1 ಕೋಟಿ ಅನುದಾನ ಬಿಡುಗಡೆ ಮಾಡಿದೆ’ ಎಂದು ಮಾಜಿ ಶಾಸಕ ಬಿ. ಪ್ರಸನ್ನ ಕುಮಾರ್ ತಿಳಿಸಿದರು.

ಮಾಜಿ ಸಚಿವ ಬಿ. ಬಸವಲಿಂಗಪ್ಪ ಅವರ 33ನೇ ಪುಣ್ಯಸ್ಮರಣೆಯ ಅಂಗವಾಗಿ ಅಲ್ಲಾಳಸಂದ್ರ ಸಮೀಪದಲ್ಲಿರುವ ಬಸವಲಿಂಗಪ್ಪನವರ ಸಮಾಧಿಯ ಸ್ಥಳದಲ್ಲಿ ಆಯೋಜಿಸಿದ್ದ ಪೂಜಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸ್ಮಾರಕ ನಿರ್ಮಾಣಕ್ಕಾಗಿ 2013ರ ಬಜೆಟ್‌ನಲ್ಲಿ ಅನುದಾನ ಘೋಷಣೆ ಮಾಡಲಾಗಿತ್ತು. ಆದರೆ, ಇದುವರೆಗೆ ಬಿಡುಗಡೆ ಆಗಿರಲಿಲ್ಲ. ಈಗ ಅನುದಾನ ಬಿಡುಗಡೆಯಾಗಿದ್ದು, 2026ರ ಮೇ ತಿಂಗಳ ಅಂತ್ಯದೊಳಗೆ ಸ್ಮಾರಕ ನಿರ್ಮಿಸಲಾಗುವುದು’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ದಲಿತ ಸಂಘರ್ಷ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಎಚ್. ಮಾರಪ್ಪ ಅವರ ನೇತೃತ್ವದಲ್ಲಿ ಆಯೋಜಿಸಿದ್ದ ಕಾಲ್ನಡಿಗೆ ಜಾಥಾದಲ್ಲಿ ನೂರಾರು ಜನ ಕೈಯಲ್ಲಿ ಕೆಂಪುಗುಲಾಬಿ ಹಿಡಿದು ಸಾಗಿ ಬಸವಲಿಂಗಪ್ಪನವರ ಸಮಾಧಿ ಸ್ಥಳಕ್ಕೆ ಆಗಮಿಸಿ ಗುಲಾಬಿ ಅರ್ಪಿಸಿದರು.

ಭೇದವಿಲ್ಲ, ಸರ್ವರೂ ಸಮಾನ

ಸಂವಿಧಾನವೇ ಬೆಳಕು

Curated by DH DECCAN HERALD | ಪ್ರಜಾವಾಣಿ

• ಜಯಸಿಂಹ ಆರ್.

ದೇಶದ ಸಮಸ್ತ ನಾಗರಿಕರು ಸಮಾನರು ಎಂದು ಸಾರಿ ಹೇಳುವ ನಮ್ಮ ಹೆಮ್ಮೆಯ ಸಂವಿಧಾನವು, ಪ್ರತಿಯೊಬ್ಬರಿಗೂ ಸಮಾನವಾದ ಹಕ್ಕು ಗಳನ್ನು ನೀಡಿದೆ. ಧರ್ಮ, ಜಾತಿ, ಲಿಂಗ, ಜನ್ಮಸ್ಥಳ, ಆರ್ಥಿಕ ಸ್ಥಿತಿ ಯಾವುದನ್ನೂ ಪರಿಗಣಿಸದೆ ಮೂಲಭೂತ ಹಕ್ಕುಗಳು ಎಲ್ಲರಿಗೂ ಅನ್ವಯ ವಾಗುತ್ತವೆ. ಪ್ರತಿ ನಾಗರಿಕರೂ ಸಂವಿಧಾನದ ಮುಂದೆ ಒಂದೇ ಎಂದು ಮೂಲಭೂತ ಹಕ್ಕುಗಳು ಪ್ರತಿಪಾದಿಸುತ್ತವೆ.

ಸಮಾನತೆ ಹಕ್ಕು: ಸಮಾನತೆಯ ವಿವಿಧ ಸ್ವರೂಪ ಮತ್ತು ಅವುಗಳನ್ನು ಕಾಯ್ದುಕೊಳ್ಳಬೇಕಾದ ಬಗೆಯನ್ನು ಸಂವಿಧಾನದ 14ರಿಂದ 18ನೇ ವಿಧಿಯವರೆಗೆ ವಿವರಿಸಲಾಗಿದೆ.

ಕಾನೂನಿನ ಮುಂದೆ ಸಮಾನತೆ: ದೇಶದ ಕಾನೂನಿನ ಮುಂದೆ ಪ್ರತಿಯೊಬ್ಬರೂ ಸಮಾನರು ಮತ್ತು ಕಾನೂನಿನ ರಕ್ಷಣೆ ಎಲ್ಲರಿಗೂ ಸಮಾನವಾಗಿ ದೊರೆಯಬೇಕು ಎಂದು ಈ ಹಕ್ಕು ಪ್ರತಿಪಾದಿಸುತ್ತದೆ.

ತಾರತಮ್ಯ ನಿಷೇಧ: ಧರ್ಮ, ಮೂಲವಂಶ, ಜಾತಿ, ಲಿಂಗ, ಭಾಷೆ, ಜನ್ಮಸ್ಥಳದ ಆಧಾರದಲ್ಲಿ ವ್ಯಕ್ತಿಯನ್ನು ತಾರತಮ್ಯಕ್ಕೆ ಗುರಿ ಮಾಡುವಂತಿಲ್ಲ ಎಂದು ಈ ಹಕ್ಕು ಪ್ರತಿಪಾದಿಸುತ್ತದೆ. ಇವುಗಳ ಆಧಾರದಲ್ಲಿ ಯಾವುದೇ ವ್ಯಕ್ತಿಗೆ ಹೋಟೆಲು, ಅಂಗಡಿ, ದೇವಾಲಯ, ಸಾರ್ವಜನಿಕ ಮನೋರಂಜನ ಸ್ಥಳಕ್ಕೆ ಪ್ರವೇಶ ನಿರಾಕರಿಸುವಂತಿಲ್ಲ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳು, ಆರ್ಥಿಕವಾಗಿ ದುರ್ಬಲ ವರ್ಗಗಳ ಜನರಿಗೆ ಶೈಕ್ಷಣಿಕ ಸಂಸ್ಥೆಗಳ ಪ್ರವೇಶಾತಿಯಲ್ಲಿ ವಿಶೇಷ ಸವಲತ್ತು ಕಲ್ಪಿಸಬಹುದು ಎಂದು 15 (2ಬಿ, 3, 4, 5, 6)ನೇ ಉಪವಿಧಿಗಳಲ್ಲಿ ವಿವರಿಸಲಾಗಿದೆ.

ಸರ್ಕಾರಿ ನೇಮಕಾತಿಯಲ್ಲಿ ಸಮಾನ ಅವಕಾಶ: ಸರ್ಕಾರದ ಯಾವುದೇ ನೇಮಕಾತಿಯಲ್ಲಿ ದೇಶದ ಎಲ್ಲ ನಾಗರಿಕರಿಗೂ ಸಮಾನ ಅವಕಾಶ ಇರಬೇಕು. ಪರಿಶಿಷ್ಟ ಜಾತಿ, ಪಂಗಡಗಳು, ಹಿಂದುಳಿದ ವರ್ಗ ಗಳು, ಆರ್ಥಿಕವಾಗಿ ದುರ್ಬಲ ವರ್ಗಗಳ ಜನರಿಗೆ, ಸರ್ಕಾರಿ ನೇಮಕಾತಿಯಲ್ಲಿ ವಿಶೇಷ ಸವಲತ್ತು ಕಲ್ಪಿಸಲು 16ನೇ ವಿಧಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಅಸ್ಪೃಶ್ಯತೆಯ ನಿರ್ಮೂಲನೆಯನ್ನು 18ನೇ ವಿಧಿಯಲ್ಲಿ ವಿವರಿಸಲಾಗಿದೆ. ಯಾವುದೇ ರೂಪದ ಅಸ್ಪೃಶ್ಯತೆ ಆಚರಣೆಯನ್ನು ಈ ವಿಧಿಯು ನಿಷೇಧಿಸುತ್ತದೆ. ಜತೆಗೆ ಅಸ್ಪೃಶ್ಯತೆಯ ಆಚರಣೆಯು ದಂಡನೀಯ ಅಪರಾಧ ಎಂಬುದನ್ನೂ ಈ ವಿಧಿ ವಿವರಿಸುತ್ತದೆ.

ಸ್ವಾತಂತ್ರ್ಯದ ಹಕ್ಕು: ಸಂವಿಧಾನ 19ನೇ ವಿಧಿಯಲ್ಲಿ ಸ್ವಾತಂತ್ರ್ಯದ ಹಕ್ಕುಗಳನ್ನು ವಿವರಿಸಲಾಗಿದೆ. ಯಾವುದೇ ವ್ಯಕ್ತಿಯು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಶಾಂತಿಯುತವಾಗಿ, ನಿರಾಯುಧರಾಗಿ ಸಭೆ ಸೇರುವ, ಸಂಘ–ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಅವುಗಳ ಮೂಲಕ ಕಾರ್ಯನಿರ್ವಹಿಸುವ ಸ್ವಾತಂತ್ರ್ಯ, ದೇಶದ ಯಾವುದೇ ಭಾಗದಲ್ಲಿ ತನ್ನ ಇಚ್ಛೆಯ ಕುಲಕಸುಬು/ಕಸುಬು/ಉದ್ಯೋಗ/ವ್ಯವಹಾರ/ ವ್ಯಾಪಾರ ನಡೆಸುವ ಸ್ವಾತಂತ್ರ್ಯವನ್ನು ಈ ಹಕ್ಕು ನೀಡುತ್ತದೆ.

- ಜೀವಿಸುವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು 21ನೇ ವಿಧಿಯು ನೀಡುತ್ತದೆ. ಈ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೂ ಜೀವಿಸುವ ಹಕ್ಕಿದೆ. ಯಾವುದೇ ವ್ಯಕ್ತಿ, ಗುಂಪು, ಸಂಸ್ಥೆ, ಸರ್ಕಾರವು ದೇಶದ ನಾಗರಿಕರ ಜೀವಿಸುವ ಹಕ್ಕಿಗೆ ಧಕ್ಕೆ ತರುವಂತಿಲ್ಲ.
- **ಉಚಿತ ಮತ್ತು ಕಡ್ಡಾಯ ಶಿಕ್ಷಣ:** ದೇಶದ ಪ್ರತಿಯೊಂದು ಮಗುವಿಗೂ ಅದರ 6ನೇ ವಯಸ್ಸಿನಿಂದ 14ನೇ ವಯಸ್ಸಿನವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕು ಎಂದು 21(ಎ) ವಿಧಿ ಹೇಳುತ್ತದೆ.
- **ಕಾನೂನು ಬಾಹಿರ ಬಂಧನದಿಂದ ರಕ್ಷಣೆ:** ಕಾರಣವನ್ನು ತಿಳಿಸದೆ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸದೆ ಯಾವುದೇ ವ್ಯಕ್ತಿಯನ್ನು 24 ಗಂಟೆಗಳಿಗಿಂತ ಹೆಚ್ಚು ಅವಧಿಗೆ ಬಂಧನದಲ್ಲಿ ಇರಿಸುವಂತಿಲ್ಲ.

4. ಧಾರ್ಮಿಕ ಸ್ವಾತಂತ್ರ್ಯದ ಹಕ್ಕು

ಪ್ರತಿ ನಾಗರಿಕರು ತಮ್ಮ ಇಷ್ಟದ ಧರ್ಮವನ್ನು ಅನುಸರಿಸುವ, ಅದರ ಆಚರಣೆಗಳಲ್ಲಿ ಭಾಗಿಯಾಗುವ, ಆ ಧರ್ಮವನ್ನು ಪ್ರಚಾರ ಮಾಡುವ ಹಕ್ಕನ್ನು ಸಂವಿಧಾನದ 25ನೇ ವಿಧಿ ನೀಡುತ್ತದೆ. ವ್ಯಕ್ತಿಯು ತಾನು ಅನುಸರಿಸುತ್ತಿರುವ ಧರ್ಮಕ್ಕೆ ಸಂಬಂಧಿಸಿದ ಧರ್ಮಾರ್ಥ ಉದ್ದೇಶಗಳಿಗಾಗಿ ಸಂಸ್ಥೆಗಳನ್ನು ಸ್ಥಾಪಿಸುವ, ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸುವ, ಆ ಸಂಸ್ಥೆ ಮೂಲಕ ಚರ, ಸ್ಥಿರಾಸ್ತಿ ಹೊಂದುವ, ನಿರ್ವಹಣೆ ಮಾಡುವ ಹಕ್ಕನ್ನು 26ನೇ ವಿಧಿಯು ನೀಡುತ್ತದೆ.

ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು

ಅಲ್ಪಸಂಖ್ಯಾತರ ಹಕ್ಕುಗಳು: ದೇಶದ ಅಲ್ಪಸಂಖ್ಯಾತ ಸಮುದಾಯದ ನಾಗರಿಕರು ತಮ್ಮದೇ ವಿಭಿನ್ನ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿದ್ದರೆ, ಅದನ್ನು ಅವರು ರಕ್ಷಿಸಿಕೊಳ್ಳಬಹುದಾಗಿದೆ. ಅದು ಸರ್ಕಾರದ ಹೊಣೆಗಾರಿಕೆಯೂ ಹೌದು. ಅಲ್ಪಸಂಖ್ಯಾತ ಸಮುದಾಯವು ತನ್ನದೇ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸುವ, ಅದನ್ನು ನಡೆಸುವ ಹಕ್ಕನ್ನು 30ನೇ ವಿಧಿಯು ನೀಡುತ್ತದೆ.

ಸಾಂವಿಧಾನಿಕ ಪರಿಹಾರದ ಹಕ್ಕು: ದೇಶದ ಯಾವುದೇ ನಾಗರಿಕರೂ ಯಾವುದೇ ವಿಚಾರದಲ್ಲಿ ಸಂವಿಧಾನಬದ್ಧ ಪರಿಹಾರ ಕೋರಿ ಅಧೀನ ನ್ಯಾಯಾಲಯಗಳು, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ಮೊರೆ ಹೋಗುವ ಹಕ್ಕನ್ನು 32ನೇ ವಿಧಿಯು ನೀಡುತ್ತದೆ.

ಕರ್ತವ್ಯಗಳು

ದೇಶದ ಪ್ರತಿಯೊಬ್ಬ ನಾಗರಿಕರೂ ನಿರ್ವಹಿಸಲೇಬೇಕಾದ ಮೂಲಭೂತ ಕರ್ತವ್ಯಗಳನ್ನು ಸಂವಿಧಾನವು ವಿವರಿಸಿದೆ. ಇವುಗಳನ್ನು ನಿರ್ವಹಿಸದೇ ಇರುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.

- ಸಂವಿಧಾನಕ್ಕೆ ಬದ್ಧವಾಗಿರಬೇಕು. ಅದರ ಆದರ್ಶ ಮತ್ತು ಸಂಸ್ಥೆಗಳನ್ನು ಗೌರವಿಸುವುದು
- ರಾಷ್ಟ್ರಧ್ವಜ ಮತ್ತು ರಾಷ್ಟ್ರ ಗೀತೆಯನ್ನು ಗೌರವಿಸಬೇಕು
- ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಅಖಂಡತೆಯನ್ನು ಎತ್ತಿಹಿಡಿಯಬೇಕು ಹಾಗೂ ಸಂರಕ್ಷಿಸಬೇಕು
- ದೇಶವನ್ನು ರಕ್ಷಿಸುವುದು ಮತ್ತು ಕರೆಬಂದಾಗ ದೇಶದ ಸೇವೆಗೆ ಧಾವಿಸಬೇಕು
- ಧರ್ಮ, ಭಾಷೆ, ಪ್ರದೇಶ, ಜಾತಿ-ಪಂಗಡಗಳ ಭೇದಭಾವಗಳನ್ನು ಬಿಟ್ಟು, ದೇಶದ ಎಲ್ಲ ನಾಗರಿಕರಲ್ಲೂ ಸಾಮರಸ್ಯ ಮತ್ತು ಭ್ರಾತೃತ್ವ ಭಾವನೆಯನ್ನು ಬೆಳೆಸುವುದು. ಮಹಿಳೆಯರ ಗೌರವಕ್ಕೆ ಧಕ್ಕೆತರುವಂತಹ ಆಚರಣೆಗಳನ್ನು ಬಿಟ್ಟುಬಿಡಬೇಕು
- ನಮ್ಮ ಸಮ್ಮಿಶ್ರ ಮತ್ತು ವೈವಿಧ್ಯ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸಬೇಕು ಹಾಗೂ ಕಾಪಾಡಬೇಕು
- ದೇಶದ ನೈಸರ್ಗಿಕ ಸಂಪತ್ತಿನ ರಕ್ಷಣೆ ಮತ್ತು ಅಭಿವೃದ್ಧಿ. ವನ್ಯಜೀವಿಗಳಿಗೆ ಅನುಕಂಪ ತೋರಬೇಕು
- ವೈಜ್ಞಾನಿಕ, ಮಾನವೀಯತೆ, ಪ್ರಶ್ನಿಸುವ ಮತ್ತು ಸುಧಾರಣೆಯ ಮನೋಭಾವನೆಗಳನ್ನು ಬೆಳೆಸಿಕೊಳ್ಳಬೇಕು
- ಹಿಂಸೆಯನ್ನು ತ್ಯಜಿಸಬೇಕು ಮತ್ತು ಸಾರ್ವಜನಿಕ ಆಸ್ತಿಗಳನ್ನು ರಕ್ಷಿಸಬೇಕು
- ದೇಶವು ನಿರಂತರ ಸಾಧನೆಯ ಹಾದಿಯಲ್ಲಿರಲು ಮತ್ತು ಉನ್ನತ ಸಾಧನೆಗಳನ್ನು ಸಿದ್ಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು

An Initiative by:

SOCIAL WELFARE DEPARTMENT
For the Educational, Social & Economic Upliftment of Scheduled Castes

In Association with:

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
01. SMT. RATHNAMMA @ RATHNA, W/o Late K. V. Jayaraju, aged about 70 Years, and 02. SMT. UMA, D/o Late K.V. Jayaraju, C/o Gopal Krishnam Raju, aged about 50 years, both are residing at No. S-008, 'PIONEER PARADISE', 24th Main Road, J.P. Nagar, 7th Phase, BENGALURU - 560 078, 03. SMT. D. USHA, W/o K.N. Damodar Raju D/o Sri. K.V. Jayaraju, aged about 46 years, residing at #402, Sai Palace, 17th Main, BOB Colony, Behind Wood Rose Club, J.P. Nagar, 7th Phase, BENGALURU - 560 078 and 04. SMT. ASHA J. W/o K. Neela Krishnam Raju D/o Sri. K.V. Jayaraju, aged about 42 years, residing at No.54/55, Flat No.003, Sri Sai Nilayam, 7th Main, Puttenahalli, J.P. Nagar, 7th Phase, BENGALURU - 560078, herein, being the absolute owners of the property mentioned in the Schedule hereunder, have offered to sell it. In turn, SRI. HOMBUJA JAIN MATH, Humcha Post, Humcha-577 436, Hosanagara Taluk, Shivamogga District, had agreed to purchase it for a valuable consideration.
If any person, Banks, Financial Institutions, Organizations, etc, having any claim/s, right, title and interest, whatsoever, over the schedule property, may lodge/ forward their objections with supporting documents of such claim to the undersigned, in writing within 15 days from the date of publication of this Notice
Failing which, it will be deemed that there is no such claim, by any body, right, title or interest and our client will purchase the property and proceed for completion of execution of SALE DEED and thereafter, no claim will be considered/entertained.
SCHEDULE
All that piece and parcel of the Property bearing No.21/1, Khata No.1/9, Bommanahalli CMC old Khata No.79/79, then No. 90/84/79 New No.536/21/1A now EPID No.8598236163 measuring East to West 105 feet and North to South 70 feet where boundaries are unequal and have bends and totally admeasuring 7350 sqft situated at No. 501077 Puttenahalli Gramathana, Uttarahalli Hobli, Bengaluru South Taluk, presently within the limits of BBMP Ward No.187-Puttenahalli, JP Nagar, Bengaluru and presently coming under the limits of Greater Bengaluru Authority and bounded on: East by: 30 Road, West by: Property bearing No. 42 belonging to Parashurama and property bearing No. 23, North by : Property No.367/334/311/20/9 (previous Khaneshumari No.85/5) belonging to Sri. Hombuja Jain Math, Humcha, South by: Road. On behalf of Sri. Hombuja Jain Mutt, Humcha, issued this notice on this the 30/12/2025 at Bengaluru.
JWALA KUMAR, Advocate
No. 39/1, Chamber 28, 2nd Floor, ASVNV Centenary Bhavana, Kempegowda Road, Bengaluru-560009. Mob-9886026693.

PUBLIC NOTICE
To Place your Classified Ads Contact
9731810277

PUBLIC NOTICE
This is to inform the General Public that My client, Mr. NAGENDRA.K.A. S/o. Mr. K.N.Anantha Raju Gupta, Residing at: No.440/21, 4th Main Road, Near K.R. Hospital, Nagendra Block, Banashankari 1st Stage, Benglauru – 560 050, he is interest to purchase the Site Bearing No. 1153, Property No. 1153-8, Situated at: 24th Main Road, 4th 'T' Block Jaya nagar Extension, Bengaluru-560 041, comes under jurisdiction of Old BBMP Ward. No.58, Jayanagar, vide PID No. 58-22-8, New BBMP Ward. No.168, Pattabhiramanagara, vide E-PID. No.6542017142. Bounded as: East by: Site No. 1166, West by : Road, North by: Site No. 1154, South by: Site No. 1152. Measuring: East to West: 27.43 Mtrs or 90 feet, North to South: 13.72 Mtrs or 45 feet, Totally measuring: 376.26 Sq.Mtrs., or 4050 Sq.ft., from its previous Owners (1) Mr. N. R. Srivatsa, S/o. Late G.C. Ramaswamy, Residing at: No. 299, Davidson Avenue, Ramsey, NJ, 07446, USA. Presently Residing at: No.1153, 4th 'T' Block, Jayanagar, Bengaluru. and (2) Mr. Arun Ramaswamy Srivatsa, S/o. Late G.C. Ramaswamy, Residing at: No. 33251, Falcon Drive, Fremont, CA 94555, USA.
In this regard, if any person's has any objections or disputes regarding the above Site, can contact the below mentioned Advocate Office within 15 days from the date of Publication.
SOMASHEKHAR.N
Advocate
No.01, Sri Sai Skanda, 11th Cross, Janajyothinagar, Ullal Main Road, Bengaluru – 560056. Ph.No: 9448236908
Place: Bengaluru
Date: 31.12.2025

BUSINESS

Business Offers

General

BUSINESS PROPOSAL–DIGI Monte Pvt Ltd invites investors and partners for a scalable, future-ready, high-profit business model. Call 7207915007

JOB OPPORTUNITIES

Wanted

WANTED
Location: Mangalore
SECURITY FIELD OFFICERS
2-3 years of experience, Ex-Army / Police preferred.
FACILITY MANAGER
1-2 years of experience in mechanised house keeping.
Location: Bangalore
BRANCH MANAGER
1-2 years experience in facility management services with marketing & customer coordination.
Apply immediately at : md@durgafacility.com

Hospital & Medical Jobs

WANTED DUTY DOCTOR, NURSING STAFF Contact Chaitanya Hospital No-80/117 P&T Colony, R.T.Nagar Bangalore-32 Contact:9900520357

BUILDERS ESSENTIAL

Roofing Materials

WE FIX LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

House

Banashankari

BANASHANKARI 6TH Stage 10th Block 20x30, 4 BHK House Rs. 1.17 Crore. Contact: 9148914809/ 9993959099

Sites

Banashankari

BANASHANKARI 6TH Stage 10th Block 40X60 West Facing Price. 2.40 CR. Stlightly Negotiable: 9148914809/ 9993959099

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PERSONAL

Greetings

'IRSHADS PROPERTY MATTERS' WISHES Clients, Developers, Associates & Well-Wishers 'A VERY HAPPY & PROSPEROUS NEW YEAR' 98458-41310/ 25591629 www.irshads property.com

Change of Name

CHANGE OF NAME
I, Mohomed Sadiq, S/o Mohammed Ismail, DOB: 01-01-1977, residing at No. 20/1, 2nd Cross, 2nd Main, Gowthamapura, Halasuru, HAL 2nd Stage, Bengaluru-560008, have changed my name to MOHAMMED SADIQ vide affidavit dated 31.12.2025 before notary N Kanchivaradharaju, Bengaluru. Henceforth I shall be called MOHAMMED SADIQ only

CHANGE OF NAME
I, Gayathri, Gayathri R & Gayathri Ramamurthy, residing at No. 338, 7th B Main, 1st Block, HRBR Layout, Kalyannagar, Bengaluru-560043, declare that all the names pertain to me only & henceforth I shall be known as GAYATHRI R vide affidavit dated 30-12-2025, before notary Uday Kumar K, Bengaluru.

Lost

DOCUMENT LOST
I, Rajagopal Boopathi R/at No. 34, 17th Cross, 3rd Main, T.G. Layout, Ittamadu, BSK 3rd Stage, Bengauru-560085, have lost the Original Absolute Sale Deed, Document / Identification No.: KEN-1-05312-2024-05, CD No. KEND74, Book-1, Registered 21-05-2004, Kengeri, while in transit. If found please Contact No: 8050623305, 944590226.

ಸ್ಥಾಪನೆ:1907
ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
ಕಛೇರಿ : 26678572 : 26600512 : 26609066. ಪ್ರಧಾನ ವ್ಯವಸ್ಥಾಪಕರು : 26617980
ಟೆಲಿಫ್ಯಾಕ್ಸ್ : (080) 26617980. E-mail : accounts@bccbl.co.in | Web : www.bccbl.co.in

ನಾಡಿನ ಸಮಸ್ತ ಜನತೆಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು 2026

“ಕರ್ನಾಟಕ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಅತ್ಯುನ್ನತ ಪಟ್ಟಣ ಸಹಕಾರ ಬ್ಯಾಂಕ್”

ನಮ್ಮ ಬ್ಯಾಂಕ್, ದೇಶದ ಸ್ವಾತಂತ್ರ್ಯ ಪೂರ್ವದಲ್ಲಿಯೇ ಅಂದರೆ ದಿನಾಂಕ: 06.04.1907ರಂದು ಪ್ರಾರಂಭಗೊಂಡಿದ್ದು, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸುಮಾರು 119 ವರ್ಷಗಳಿಗೂ ಮೀರಿ ಸೇವೆ ಸಲ್ಲಿಸುತ್ತಾ ಬಂದಿದೆ. ಬ್ಯಾಂಕು ರಾಜ್ಯಾದ್ಯಂತ ತನ್ನ ಕ್ಷೇತ್ರ ವ್ಯಾಪ್ತಿ ಹೊಂದಿದ್ದು, ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ 20 ಶಾಖೆಗಳು, ಮೈಸೂರಿನಲ್ಲಿ 1 ಶಾಖೆ ಮತ್ತು ರಾಮನಗರದಲ್ಲಿ 1 ಶಾಖೆ, ಒಟ್ಟು 22 ಶಾಖೆಗಳನ್ನು ಹೊಂದಿದೆ.

ಸ್ಪರ್ಧಾತ್ಮಕ ಬಡ್ಡಿ ದರದಲ್ಲಿ ಸಾಲ ಸೌಲಭ್ಯದ ವಿವರಗಳು
• ವಿದ್ಯಾಭ್ಯಾಸ ಉದ್ದೇಶಕ್ಕೆ • ಚಾಲ್ತಿ ಖಾತೆಯಲ್ಲಿ O.D.
• ವಾಹನ ಸಾಲ • ವ್ಯಾಪಾರ ವಹಿವಾಟು ಉದ್ದೇಶಕ್ಕೆ ಸಾಲ
• ಚಿನ್ನಾಭರಣಗಳ ಆಧಾರ ಸಾಲ

ಸ್ಥಿರಾಸ್ತಿ ಆಧಾರದ ಮೇಲೆ ಗೃಹ ಖರೀದಿ/ ಗೃಹ ನಿರ್ಮಾಣ ಸಾಲ 9%* ಬಡ್ಡಿ ದರದಲ್ಲಿ ಪ್ರಾರಂಭ

ಚಿನ್ನಾಭರಣ ಆಧಾರ ಸಾಲ 8.5%* (ಗ್ರಾಂಗೆ ರೂ.7,500/-) ಬಡ್ಡಿದರದಿಂದ ಪ್ರಾರಂಭ

*ಷರತ್ತುಗಳು ಅನ್ವಯ

ದಿನಾಂಕ: 30.11.2025 ರಲ್ಲಿದ್ದಂತೆ ಬ್ಯಾಂಕಿನ ಆರ್ಥಿಕ ಸ್ಥಿತಿ
(ಆಡಿಟ್ ಪೂರ್ವ) (ರೂ. ಕೋಟಿಗಳಲ್ಲಿ)

1. ಷೇರು ಬಂಡವಾಳ	ರೂ.	96.07
2. ಆಪದ್ಧನ ಮತ್ತು ಇತರೆ ನಿಧಿಗಳು	ರೂ.	539.26
3. ಠೇವಣಾತಿಗಳು	ರೂ.	2246.92
4. ದುಡಿಯುವ ಬಂಡವಾಳ	ರೂ.	2882.26
5. ಸಾಲಗಳು ಮತ್ತು ಮುಂಗಡಗಳು	ರೂ.	1454.45
6. ಗುಂತಾಯಗಳು	ರೂ.	1306.44
7. ನಿವ್ವಳ ಲಾಭ	ರೂ.	36.95
8. Net NPA		0%

ಠೇವಣಾತಿಗಳ ಮೇಲಿನ ಬಡ್ಡಿ ದರಗಳನ್ನು 18.07.2025 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿದೆ

ವಿವರಗಳು	ಠೇವಣಿದಾರರಿಗೆ	ಹಿರಿಯ ನಾಗರೀಕರಿಗೆ
7 ದಿನಗಳು ಮತ್ತು ಮೇಲ್ಪಟ್ಟು 29 ದಿನಗಳವರೆಗೆ	3.00%	3.00%
30 ದಿನಗಳು ಮತ್ತು ಮೇಲ್ಪಟ್ಟು 90 ದಿನಗಳವರೆಗೆ	4.00%	4.50%
91 ದಿನಗಳು ಮತ್ತು ಮೇಲ್ಪಟ್ಟು 180 ದಿನಗಳವರೆಗೆ	4.50%	5.00%
181 ದಿನಗಳು ಮತ್ತು ಮೇಲ್ಪಟ್ಟು 364 ದಿನಗಳವರೆಗೆ	6.00%	6.50%
365 ದಿನಗಳು (1 ವರ್ಷ) ಮತ್ತು 2 ವರ್ಷಗಳವರೆಗೆ	7.25%	7.75%
2 ವರ್ಷಕ್ಕೂ ಮೇಲ್ಪಟ್ಟು 5 ವರ್ಷಗಳವರೆಗೆ	7.00%	7.50%
5 ವರ್ಷಕ್ಕೂ ಮೇಲ್ಪಟ್ಟು (above 5 years)	6.50%	7.00%
ಸೊಸೈಟಿ ಮತ್ತು ಸಂಸ್ಥೆಯ ಠೇವಣಿಗೆ 365 ದಿನಗಳು (1 ವರ್ಷ)		7.50%

ಆವಲಹಳ್ಳಿ ಚಂದ್ರಪ್ಪ. ಆರ್ – ಅಧ್ಯಕ್ಷರು
ಡಾ|| ದೇವರಾಜ್.ಬಿ.ಎಂ. – ಉಪಾಧ್ಯಕ್ಷರು
ಮಂಜುನಾಥ.ಪಿ. – ಪ್ರಧಾನ ವ್ಯವಸ್ಥಾಪಕರು

ಶುಭಕೋರುವವರು:
ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ

‘ಚಿಕಿತ್ಸೆ’ಗಾಗಿ ಕಾದಿವೆ ನಮ್ಮ ಕ್ಲಿನಿಕ್

ರೋಗಿಗಳ ಕೊರತೆಯಿಂದ ಬಳಲಿದ ಚಿಕಿತ್ಸಾ ಕೇಂದ್ರಗಳು

● ಚಿಕಿತ್ಸೆಗಿಂತ ಮಾತ್ರೆಗೆ ಬರುವವರೇ ಅಧಿಕ

● ವರುಣ ಹೆಗಡೆ

ಬೆಂಗಳೂರು: ವೈದ್ಯರು ನಿಯಮಿತವಾಗಿ ಲಭ್ಯವಾಗುವ ಕಡೆ ರೋಗಿಗಳು ಅಧಿಕ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಕಡೆ ವೈದ್ಯರೇ ದೊರೆಯುತ್ತಿಲ್ಲ. ವೈದ್ಯರು ಹಾಗೂ ರೋಗಿಗಳು ಇರುವ ಕಡೆ ಚಿಕಿತ್ಸೆಗೆ ಅಗತ್ಯ ಮೂಲಸೌಕರ್ಯವೇ ಇಲ್ಲ.

ಇದು ಜಿಬಿಎ ವ್ಯಾಪ್ತಿಯಲ್ಲಿ ಇರುವ ‘ನಮ್ಮ ಕ್ಲಿನಿಕ್’ಗಳ ಸ್ಥಿತಿ. ಜನರ ಸಮಗ್ರ ಆರೋಗ್ಯ ವೃದ್ಧಿಗೆ ವಾರ್ಡ್ ಮಟ್ಟದಲ್ಲಿ ಪ್ರಾರಂಭಿಸಲಾದ ಈ ಕೇಂದ್ರಗಳಿಗೆ ಚಿಕಿತ್ಸೆಗೆ ಬರುವವರಿಗಿಂತ, ಮಾತ್ರೆಗಳನ್ನು ಪಡೆದುಕೊಳ್ಳಲು ಭೇಟಿ ನೀಡುವವರೇ ಅಧಿಕ. ಅದರಲ್ಲೂ ವೃದ್ಧರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದು, ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ದಂತಹ ಸಮಸ್ಯೆಗಳಿಗೆ ಮಾತ್ರೆ ಪಡೆಯುತ್ತಿದ್ದಾರೆ. ಇದರಿಂದಾಗಿ ನಮ್ಮ ಕ್ಲಿನಿಕ್‌ಗಳು ಚಿಕಿತ್ಸೆಯ ಬದಲು, ಔಷಧಗಳನ್ನು ವಿತರಿಸುವ ಕೇಂದ್ರಗಳಾಗಿ ಮಾರ್ಪಟ್ಟಿವೆ.

ಸದ್ಯ ನಗರದಲ್ಲಿ 243 ‘ನಮ್ಮ ಕ್ಲಿನಿಕ್’ಗಳು ಕಾರ್ಯನಿರ್ವಹಿಸುತ್ತಿವೆ. ಈ ಕ್ಲಿನಿಕ್‌ಗಳು ತಲಾ ಒಬ್ಬರು ವೈದ್ಯಾಧಿಕಾರಿ, ಶುಶ್ರೂಷಕರು, ಪ್ರಯೋಗಾಲಯ ತಂತ್ರಜ್ಞರು ಹಾಗೂ ‘ಡಿ’ ದರ್ಜೆ ಸಿಬ್ಬಂದಿಯನ್ನು ಒಳಗೊಂಡಿವೆ. ಬೆಳಿಗ್ಗೆ 9ರಿಂದ ಸಂಜೆ 4.30ರವರೆಗೆ ಕಾರ್ಯನಿರ್ವಹಿಸುತ್ತವೆ. ಮಧ್ಯಾಹ್ನ 1.30ರಿಂದ 2 ಗಂಟೆವರೆಗೆ ಊಟದ ವಿರಾಮ ಇರಲಿದೆ. ಕೆಲ ಕ್ಲಿನಿಕ್‌ಗಳಲ್ಲಿ ಈ ಊಟದ ವಿರಾಮ ಕಡಿತಮಾಡಿ, ಸಂಜೆ 4 ಗಂಟೆವರೆಗೆ ಸೇವೆ ಒದಗಿಸಲಾಗುತ್ತಿದೆ. ಈ ಕ್ಲಿನಿಕ್‌ಗಳಿಗೆ ಭೇಟಿ ನೀಡುವವರ ಸಂಖ್ಯೆ ಮಧ್ಯಾಹ್ನವಾದರೂ ಎರಡಂಕಿ ದಾಟುತ್ತಿಲ್ಲ.

ಇದರಿಂದಾಗಿ ವೈದ್ಯರು ಹಾಗೂ ಶುಶ್ರೂಷಕರು ರೋಗಿಗಳಿಗಾಗಿ ಎದುರು ನೋಡುತ್ತಾ ಕಾಲಹರಣ ಮಾಡುವ ಸ್ಥಿತಿ ನಿರ್ಮಾಣವಾಗಿದೆ.

2022ರ ಫೆಬ್ರವರಿ ತಿಂಗಳಲ್ಲಿ ಮೊದಲ ಹಂತದಲ್ಲಿ 108 ಕ್ಲಿನಿಕ್‌ಗಳಿಗೆ ಚಾಲನೆ ನೀಡಲಾಗಿತ್ತು. ಇನ್ನುಳಿದ ಕ್ಲಿನಿಕ್‌ಗಳು ತದನಂತರ ಕಾರ್ಯಾರಂಭಿಸಿವೆ. ಈ ಕ್ಲಿನಿಕ್‌ಗಳನ್ನು ಜಿಬಿಎ (ಈ ಹಿಂದೆ ಬಿಬಿಎಂಪಿ) ವ್ಯಾಪ್ತಿಯಲ್ಲಿ ಖಾಲಿ ಇರುವ ಕಟ್ಟಡ ಗಳಲ್ಲಿ ಪ್ರಾರಂಭಿಸಲಾಗಿದೆ. ನಗರದ ಎಲ್ಲಾ ವಿಧಾನಸಭೆ ಕ್ಷೇತ್ರದಲ್ಲಿ ಈ ಕ್ಲಿನಿಕ್‌ಗಳನ್ನು ಸ್ಥಾಪಿಸಲಾಗಿದೆ.

ಸಂದಿಗೊಂದಿಯಲ್ಲಿ ಕ್ಲಿನಿಕ್: ಚಾಮರಾಜಪೇಟೆ, ಪದ್ಮನಾಭನಗರ, ಬಸವನ ಗುಡಿ, ಶಿವಾಜಿ ನಗರ, ಚಿಕ್ಕಪೇಟೆ, ಜಯನಗರ, ಮಹದೇವಪುರ, ಯಲಹಂಕ ಸೇರಿ ಬಹುತೇಕ ಕಡೆ ಮುಖ್ಯ ರಸ್ತೆಗಳ ಅಕ್ಕಪಕ್ಕದಲ್ಲಿ ಈ ಕ್ಲಿನಿಕ್‌ಗಳಿಲ್ಲ. ಸಂದಿಗೊಂದಿಯಲ್ಲಿ ಕ್ಲಿನಿಕ್‌ಗಳು ಇರುವ ಕಾರಣ ಈ ಚಿಕಿತ್ಸಾ ಕೇಂದ್ರದ ಬಗ್ಗೆ ಬಹುತೇಕ ಸ್ಥಳೀಯರಿಗೆ ಮಾಹಿತಿಯೇ ಇಲ್ಲವಾಗಿದೆ. ಪ್ರಮುಖ ರಸ್ತೆಗಳಿಗೆ ಹೊಂದಿಕೊಂಡು ಇರದಿರುವುದು, ಪ್ರವೇಶ ದ್ವಾರ ಹಿಂಭಾಗದಲ್ಲಿ ಇರುವುದು ಸೇರಿ ವಿವಿಧ ಕಾರಣದಿಂದ ಈ ಕ್ಲಿನಿಕ್‌ಗಳು ಜನಮನ್ನಣೆ ಪಡೆಯುವಲ್ಲಿ ವಿಫಲವಾಗಿವೆ.

‘ಮಧುಮೇಹ, ಅಧಿಕ ರಕ್ತದೊತ್ತಡ ದಂತಹ ಸಮಸ್ಯೆಗಳಿಗೆ ಮಾತ್ರೆಗಳನ್ನು ಪಡೆಯಲು ನಮ್ಮ ಕ್ಲಿನಿಕ್‌ಗಳು ಸಹಕಾರಿಯಾಗಿವೆ. ಜ್ವರ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳ ಸಂಬಂಧ ಭೇಟಿ ನೀಡಿದಾಗ ಮಾತ್ರೆಗಳು ದೊರೆಯುತ್ತಿವೆ. ಆದರೆ, ಎಲ್ಲ ಸಂದರ್ಭದಲ್ಲಿ ವೈದ್ಯರು ಕರ್ತವ್ಯದಲ್ಲಿ ಇರುವುದಿಲ್ಲ. ಇದ್ದರೂ ದೂರದಿಂದಲೇ ಅನಾರೋಗ್ಯ ಸಮಸ್ಯೆ ಬಗ್ಗೆ ಆಲಿಸುತ್ತಾರೆ. ಸ್ಪರ್ಶಿಸಿ ಪರೀಕ್ಷೆ ಮಾಡುವುದಿಲ್ಲ. ಶುಶ್ರೂಷಕರೇ ವಿಚಾರಿಸಿ ಮಾತ್ರೆಗಳನ್ನು ನೀಡುತ್ತಾರೆ. ಹೀಗಾಗಿ, ಜ್ವರ ಸೇರಿ ವಿವಿಧ ಅನಾರೋಗ್ಯ ಸಮಸ್ಯೆ ಕಾಣಿಸಿಕೊಂಡಾಗ ಖಾಸಗಿ ಕ್ಲಿನಿಕ್‌ಗಳಿಗೆ ಭೇಟಿ ನೀಡುತ್ತಿದ್ದೇವೆ’ ಎಂದು ನಮ್ಮ ಕ್ಲಿನಿಕ್‌ಗೆ ಮಾತ್ರೆಗಳನ್ನು ಪಡೆಯಲು ಬಂದವರು ತಿಳಿಸಿದರು.

‘ನಮ್ಮ ಕ್ಲಿನಿಕ್‌ಗಳಲ್ಲಿ ಮಧುಮೇಹ ಸೇರಿ ವಿವಿಧ ಸಮಸ್ಯೆಗಳಿಗೆ ಮಾತ್ರೆಗಳು ನಿಯಮಿತವಾಗಿ ದೊರೆಯುತ್ತಿಲ್ಲ. ವೈದ್ಯರು ಕೂಡ ವಾರದ ಕೆಲ ದಿನ ಆಸ್ಪತ್ರೆಯಲ್ಲಿ ಕಾಣಿಸುವುದಿಲ್ಲ’ ಎಂದು ಚಾಮರಾಜಪೇಟೆಯ ನಿವಾಸಿಯೊಬ್ಬರು ದೂರಿದರು.

‘ಈ ಕ್ಲಿನಿಕ್‌ಗಳಲ್ಲಿ ಪ್ರತಿ ಗುರುವಾರ ಮಕ್ಕಳಿಗೆ ವಿವಿಧ ಲಸಿಕೆಗಳನ್ನು ಹಾಕಲಾಗುತ್ತಿದೆ. ಆದರೆ, ಪ್ರಚಾರದ ಕೊರತೆಯಿಂದಾಗಿ ಮಕ್ಕಳನ್ನು ಕರೆತರುವ ತಾಯಂದಿರ ಸಂಖ್ಯೆಯೂ ಬೆರಳಣಿಕೆಯಷ್ಟು’ ಎಂದು ಕ್ಲಿನಿಕ್‌ಗಳ ಸಿಬ್ಬಂದಿಯೇ ಹೇಳುತ್ತಾರೆ.

ನಮ್ಮ ಏರಿಯಾದಲ್ಲಿಯೂ ನಮ್ಮ ಕ್ಲಿನಿಕ್ ಇದೆ ಎನ್ನುವುದೇ ತಿಳಿದಿರಲಿಲ್ಲ. ಸಿಬ್ಬಂದಿಯೇ ನನ್ನನ್ನು ಕರೆತಂದು ಅಧಿಕ ರಕ್ತದೊತ್ತಡ, ಮಧುಮೇಹ ಪರೀಕ್ಷೆ ಮಾಡಿಸಿದರು
ಚೆಲುವರಾಜ್, ಇಟ್ಟಮಡು ನಿವಾಸಿ

ಈ ಕ್ಲಿನಿಕ್‌ಗಳಲ್ಲಿ ವೈದ್ಯರು ಸಮರ್ಪಕವಾಗಿ ಕಾರ್ಯನಿರ್ವಹಿಸಿ, ಸೂಕ್ತ ಚಿಕಿತ್ಸೆ ಒದಗಿಸಬೇಕು. ಆಗ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ
ರುದ್ರಪ್ಪ, ಬನಶಂಕರಿ ನಿವಾಸಿ

ಕಾಮಾಕ್ಯದಲ್ಲಿರುವ ನಮ್ಮ ಕ್ಲಿನಿಕ್‌ನಲ್ಲಿ ವೃದ್ಧೆಯೊಬ್ಬರು ಚಿಕಿತ್ಸೆಗಾಗಿ ಕಾದು ಕುಳಿತಿರುವುದು ಚಿತ್ರಗಳು: ರಂಜು ಪಿ.

ಏನೆಲ್ಲ ಸೇವೆ ಲಭ್ಯ?

- ಗರ್ಭಿಣಿ ಮತ್ತು ಜನನ ಸಮಯದ ಆರೈಕೆ
- ನವಜಾತ ಮತ್ತು ಶಿಶುವಿನ ಸಮಗ್ರ ಆರೋಗ್ಯ ರಕ್ಷಣೆ
- ಬಾಲ್ಯ ಮತ್ತು ಹದಿಹರೆಯ-ದವರ ಸಮಗ್ರ ಆರೋಗ್ಯ ಸೇವೆ
- ಸಾರ್ವತ್ರಿಕ ಲಸಿಕಾಕರಣ ಸೇವೆ
- ಕುಟುಂಬ ಕಲ್ಯಾಣ, ಗರ್ಭನಿರೋಧಕ ಸೇವೆ
- ಸಾಂಕ್ರಾಮಿಕ ರೋಗಗಳ ನಿರ್ವಹಣೆ
- ಸಾಮಾನ್ಯ ಮತ್ತು ಸಣ್ಣ ಪ್ರಮಾಣದ ಕಾಯಿಲೆಗಳಿಗೆ ಹೊರರೋಗಿ ಸೇವೆ
- ಬಾಯಿ ಆರೋಗ್ಯ ಸೇವೆ, ನೇತ್ರ ಹಾಗೂ ಕಿವಿ, ಮೂಗು, ಗಂಟಲು ಆರೋಗ್ಯ ಆರೈಕೆ
- ಮಾನಸಿಕ ಆರೋಗ್ಯ ಸೇವೆ, ವೃದ್ಧಾಪ್ಯ ಆರೈಕೆ

ಪ್ರಜಾವಾಣಿ ರಿಯಾಲಿಟಿ ಚೆಕ್

ಜನರನ್ನು ಕರೆತರುವ ಸಿಬ್ಬಂದಿ

ನಿಗದಿತ ಸಂಖ್ಯೆಯಲ್ಲಿ ರೋಗಿಗಳು ಕ್ಲಿನಿಕ್‌ಗೆ ಬರದ ಪರಿಣಾಮ, ಕ್ಲಿನಿಕ್ ಸಿಬ್ಬಂದಿಯೇ ಜನರನ್ನು ಕರೆತಂದು ಅಧಿಕ ರಕ್ತದೊತ್ತಡ, ಮಧುಮೇಹದ ಪರೀಕ್ಷೆ ನಡೆಸುತ್ತಿದ್ದಾರೆ. ಅಗತ್ಯ ಇದ್ದವರಿಗೆ ಮಾತ್ರೆಗಳನ್ನೂ ನೀಡುತ್ತಿದ್ದಾರೆ. ಜನರು ಅಧಿಕ ಸಂಖ್ಯೆಯಲ್ಲಿ ಸೇರುವ ಉದ್ಯಾನ, ದೇವಸ್ಥಾನ ಸೇರಿ ಸುತ್ತಮುತ್ತಲಿನ ಸ್ಥಳಗಳಲ್ಲಿಯೂ ಸಿಬ್ಬಂದಿ ಈ ಪರೀಕ್ಷೆ ಮಾಡಿಸಿ, ಅಗತ್ಯ ಸಲಹೆ ನೀಡುತ್ತಿದ್ದಾರೆ. ಈ ಮೂಲಕ ನಿಗದಿತ ಸಂಖ್ಯೆಯ ಗುರಿಯನ್ನು ತಲುಪುತ್ತಿದ್ದಾರೆ.

ಕತ್ತಲೆಯಲ್ಲಿ ಕಾರ್ಯನಿರ್ವಹಣೆ

ಬಸವನಗುಡಿಯ ನಮ್ಮ ಕ್ಲಿನಿಕ್ ಸೇರಿ ಕೆಲವೆಡೆ ವಿದ್ಯುತ್ ವ್ಯತ್ಯಯವಾದ ಸಂದರ್ಭದಲ್ಲಿ ಕತ್ತಲೆಯಲ್ಲಿ ಸೇವೆ ಒದಗಿಸಬೇಕಾದ ಸ್ಥಿತಿಯಿದೆ. ಯುಪಿಎಸ್ ಬ್ಯಾಟರಿ ಒದಗಿಸದ ಪರಿಣಾಮ, ಅಲ್ಲಿ ಸಮಸ್ಯೆ ಉಂಟಾಗುತ್ತಿದೆ. ಇದರಿಂದಾಗಿ ಚಿಕಿತ್ಸೆಗೆ ಬರಲು ಜನರು ಹಿಂದೇಟು ಹಾಕುತ್ತಿದ್ದಾರೆ.

ಬದಲಾಗದ ಸಮಯ

ಸಂಜೆ 4.30ಕ್ಕೆ ಈ ಕ್ಲಿನಿಕ್‌ಗಳು ಬಂದ್ ಆಗುತ್ತಿರುವ ಕಾರಣ ಕೂಲಿ ಕಾರ್ಮಿಕರು ಹಾಗೂ ಉದ್ಯೋಗಸ್ಥರಿಗೆ ಪರೀಕ್ಷೆ ಹಾಗೂ ಮಾತ್ರೆಗಳ ಸಂಬಂಧ ಭೇಟಿ ನೀಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಪ್ರಾಯೋಗಿಕವಾಗಿ ಶೇ 25 ರಷ್ಟು ‘ನಮ್ಮ ಕ್ಲಿನಿಕ್’ಗಳ ಅವಧಿಯನ್ನು ಮಧ್ಯಾಹ್ನ 12 ರಿಂದ ರಾತ್ರಿ 8 ಗಂಟೆಯವರೆಗೆ ಬದಲಾಯಿಸುವ ಪ್ರಸ್ತಾವ ಆರೋಗ್ಯ ಇಲಾಖೆಯ ಮುಂದಿತ್ತು. ಆದರೆ, ಇದು ಕಾರ್ಯಗತ-ವಾಗದ ಪರಿಣಾಮ ಕಾರ್ಮಿಕರು ಹಾಗೂ ಉದ್ಯೋಗಸ್ಥರಿಗೆ ಈ ಕ್ಲಿನಿಕ್‌ಗಳ ಪ್ರಯೋಜನ ಪಡೆಯುವುದು ಕಷ್ಟಸಾಧ್ಯವಾಗಿದೆ.

ಹೊಸಕೆರೆಹಳ್ಳಿ ವಾರ್ಡ್‌ನ ನಮ್ಮ ಕ್ಲಿನಿಕ್‌ನಲ್ಲಿ ಮಾತ್ರೆ ಪಡೆದು ತೆರಳಿದ ಜನರು

ವೈದ್ಯರು, ಸಿಬ್ಬಂದಿ ಅಲಭ್ಯ

ಕೆಲವೆಡೆ ವೈದ್ಯರು ಹಾಗೂ ಸಿಬ್ಬಂದಿ ಕರ್ತವ್ಯದ ಅವಧಿಯಲ್ಲಿ ಅಲಭ್ಯರಾಗುತ್ತಿರುವುದು ನಮ್ಮ ಕ್ಲಿನಿಕ್‌ಗಳ ಸಮರ್ಪಕ ಕಾರ್ಯನಿರ್ವಹಣೆಗೆ ತೊಡಕಾಗಿದೆ. ‘ವೈದ್ಯರು ಕ್ಷೇತ್ರಕಾರ್ಯದಲ್ಲಿ ಇದ್ದಾರೆ’ ಎಂದು ತಿಳಿಸುವ ಶುಶ್ರೂಷಕರು, ಅಗತ್ಯ ಮಾತ್ರೆಗಳನ್ನು ರೋಗಿಗಳಿಗೆ ನೀಡುತ್ತಿದ್ದಾರೆ. ಅಗತ್ಯ ಬಿದ್ದಲ್ಲಿ ತಾವೇ ವೈದ್ಯರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಅವರ ಸಲಹೆ ಅನುಸಾರ ಔಷಧಗಳನ್ನು ಸೂಚಿಸುತ್ತಿದ್ದಾರೆ.

ರೋಗಿಗಳು ಇಲ್ಲದ ಸಂದರ್ಭದಲ್ಲಿ ಶುಶ್ರೂಷಕರು ಹಾಗೂ ಸಿಬ್ಬಂದಿ ಚಹಾ-ಕಾಫಿಗೆ ಹೊರಗಡೆ ತೆರಳುತ್ತಿದ್ದು, ಕ್ಲಿನಿಕ್‌ಗೆ ಭೇಟಿ ನೀಡಿದ ಕೆಲವರು ವಾಪಸ್ ಮರಳಬೇಕಾದ ಸ್ಥಿತಿಯೂ ನಿರ್ಮಾಣವಾಗುತ್ತಿದೆ.

‘ಜನರಿಗೆ ಮಾಹಿತಿ ಕೊರತೆ’

‘ರೋಗಿಗಳಿಗೆ ಚಿಕಿತ್ಸೆಯ ಜತೆಗೆ ಉಚಿತವಾಗಿ ಔಷಧವನ್ನೂ ಒದಗಿಸಲಾಗುತ್ತಿದೆ. ಮಧುಮೇಹದಂತಹ ದೀರ್ಘಾವಧಿ ಸಮಸ್ಯೆಗಳಿಗೂ ಮಾತ್ರೆಗಳನ್ನು ನೀಡಲಾಗುತ್ತಿದೆ. ಮಾಹಿತಿ ಕೊರತೆಯಿಂದ ರೋಗಿಗಳು ಕ್ಲಿನಿಕ್‌ಗಳಿಗೆ ಅಷ್ಟಾಗಿ ಬರುತ್ತಿಲ್ಲ’ ಎಂದು ಹೊಸಕೆರೆಹಳ್ಳಿಯ ನಮ್ಮ ಕ್ಲಿನಿಕ್‌ನ ವೈದ್ಯಾಧಿಕಾರಿ ಡಾ. ಪದ್ಮಾ ಹೇಳಿದರು.

‘ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಲ್ಲಿ ಇನ್ನಷ್ಟು ಸೌಲಭ್ಯ ಹಾಗೂ ಸ್ಥಳಾವಕಾಶ ಕೇಳಬಹುದು’ ಎಂದು ಮಲ್ಲೇಶ್ವರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ನಮ್ಮ ಕ್ಲಿನಿಕ್‌ನ ವೈದ್ಯರೊಬ್ಬರು ತಿಳಿಸಿದರು.

‘ಮುಖ್ಯ ರಸ್ತೆಗಳು, ಉದ್ಯಾನಗಳ ಅಕ್ಕಪಕ್ಕ ಸ್ಥಾಪಿಸಿದಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದರು. ವೃದ್ಧರು ಮಾತ್ರ ವಿವಿಧ ಮಾತ್ರೆಗಳನ್ನು ಪಡೆಯಲು ಭೇಟಿ ನೀಡುತ್ತಿದ್ದಾರೆ’ ಎಂದು ಜಯನಗರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯ ನಮ್ಮ ಕ್ಲಿನಿಕ್‌ನ ಶುಶ್ರೂಷಕಿ ಅಭಿಪ್ರಾಯಪಟ್ಟರು.

ಪ್ರೀಮಿಯಂ ಪಿಕ್ ಅಪ್ ವಲಯ: 10 ನಿಮಿಷಕ್ಕೆ ₹275 ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ‘ಪ್ರತಿಷ್ಠಿತ ಪಿಕ್ ಅಪ್ ವಲಯ’ (ಪ್ರೀಮಿಯಂ ಪಿಕ್ ಅಪ್ ವಲಯ) ಪರಿಚಯಿಸಲಾಗಿದೆ. ವಾಣಿಜ್ಯ ಸಂಚಾರಕ್ಕೆ ಮೀಸಲಾದ ವಾಹನಗಳಿಗೆ (ಹಳದಿ ನಂಬರ್ ಪ್ಲೇಟ್) 10 ನಿಮಿಷಕ್ಕೆ ₹275 ಆ ನಂತರದ ಹೆಚ್ಚುವರಿ ಐದು ನಿಮಿಷಕ್ಕೆ ₹150 ಶುಲ್ಕ ನಿಗದಿ ಮಾಡಲಾಗಿದೆ.

ಹೊಸ ವಲಯವನ್ನು ಭಾನುವಾರ ಆರಂಭಿಸಲಾಗಿದೆ. ಪ್ರವೇಶ ದ್ವಾರಗಳ ಬಳಿ ಐದನೇ ಲೇನ್‌ನಲ್ಲಿ ಹೊಸ ಪಿಕ್ ಅಪ್ ವಲಯ ಸ್ಥಾಪಿಸಲಾಗಿದೆ. ಇದರಲ್ಲಿ ಚಾಲಕ 15 ನಿಮಿಷ ಕಳೆದರೆ, ಅವರಿಗೆ ₹425 ಶುಲ್ಕ ವಿಧಿಸಲಾಗುತ್ತದೆ. ಪಿ3 ಮತ್ತು ಪಿ4ರಲ್ಲಿ ಗೊತ್ತುಪಡಿಸಿದ ಪಾರ್ಕಿಂಗ್ ಸ್ಥಳದ ಕಡೆಗೆ ನಡೆಯುವ ಬದಲು ಕರ್ಬ್-ಸೈಡ್ ಪಿಕ್ ಅಪ್ ಅನ್ನು ಆದ್ಯತೆ ನೀಡುವ ಪ್ರಯಾಣಿಕರಿಗಾಗಿ ನಿಗದಿಪಡಿಸಲಾಗಿದೆ.

15 ನಿಮಿಷಗಳಿಗಿಂತ ಹೆಚ್ಚು ಕಾಲ ಇಲ್ಲಿ ಪಾರ್ಕಿಂಗ್ ಮಾಡಿದರೆ ವಾಹನ ಮಾಲೀಕರಿಂದ ಹೆಚ್ಚುವರಿ ವೆಚ್ಚ ವಸೂಲಿ ಮಾಡುವುದಲ್ಲದೇ ಆ ವಾಹನವನ್ನು ಪೊಲೀಸ್ ವಶಕ್ಕೆ ನೀಡಲಾಗುತ್ತದೆ ಎಂದು ಇಲ್ಲಿ ಫಲಕ ಹಾಕಲಾಗಿದೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (ಬಿಐಎಎಲ್) ಕಾರ್ಪೊರೇಟ್ ಟ್ಯಾಕ್ಸಿಗಳಿಗೆ ಪಿಕ್ ಅಪ್ ಶುಲ್ಕವನ್ನು ₹275 ವಿಧಿಸುವುದಾಗಿ ಡಿ.26ರಂದು ಘೋಷಿಸಿತ್ತು. ಬಳಿಕ ಈ ನಿರ್ಧಾರದಿಂದ ಹಿಂದಕ್ಕೆ ಸರಿದಿತ್ತು. ಎರಡೇ ದಿನ ಬಿಟ್ಟು ಡಿ. 28ರಂದು ಸದ್ದಿಲ್ಲದೇ ಹೊಸ ಲೇನ್ ವ್ಯವಸ್ಥೆ ಜಾರಿಗೆ ತಂದಿದೆ. ಈ ನಿರ್ಧಾರದಿಂದ ಹಿಂದಕ್ಕೆ ಸರಿಯುವುದಿಲ್ಲ ಎಂದೂ ಬಿಐಎಎಲ್ ಅಧಿಕಾರಿಗಳು ಹೇಳಿಕೊಂಡಿದ್ದಾರೆ.

ವಿರೋಧ: ಬಿಐಎಎಲ್ ನಿರ್ಧಾರಕ್ಕೆ ಕ್ಯಾಬ್ ಚಾಲಕರು ವಿರೋಧ ವ್ಯಕ್ತಪಡಿಸಿದ್ದಾರೆ. ‘ಪ್ರೀಮಿಯಂ ಪಿಕ್ ಅಪ್ ವಲಯವನ್ನು ಪ್ರವೇಶಿಸಲು ನಮಗೆ ಸಾಧ್ಯವಿಲ್ಲ. ಇಷ್ಟೊಂದು ದುಬಾರಿ ಶುಲ್ಕವನ್ನು ಭರಿಸುವುದು ಕಷ್ಟ. ಈಗಾಗಲೇ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿ ನಮ್ಮ ಜೀವನೋಪಾಯಕ್ಕೆ ಹೊಡೆತ ಬಿದ್ದಿದೆ. ಈಗ ಪ್ರೀಮಿಯಂ ಪಿಕ್ ಅಪ್ ವಲಯವು ಗಾಯದ ಮೇಲೆ ಬರೆ ಎಳೆದಿದೆ’ ಎಂದು ಕ್ಯಾಬ್ ಚಾಲಕ ರಹೀಮ್ ತಿಳಿಸಿದರು.

ಹೊಸ ಶುಲ್ಕ ನಿಯಮ ವಿಧಿಸಿರುವ ವಿಮಾನ ನಿಲ್ದಾಣ ಅಧಿಕಾರಿಗಳ ವಿರುದ್ಧ ಹಲವಾರು ಪ್ರಯಾಣಿಕರು ಸಾಮಾಜಿಕ ಮಾಧ್ಯಮಗಳ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಿಮಾನ ನಿಲ್ದಾಣದಲ್ಲಿ ಹೊಸ ಪಿಕ್ ಅಪ್ ನಿಯಮಗಳನ್ನು ಹಿಂಪಡೆಯುವಂತೆ ಕೋರಿ ಸಲ್ಲಿಸಲಾದ ಆನ್‌ಲೈನ್ ಅರ್ಜಿಗೆ ಇದುವರೆಗೆ 1,572 ಜನರು ಸಹಿ ಹಾಕಿದ್ದಾರೆ.

‘ದೇಶದ ಅತ್ಯಂತ ಪ್ರಸಿದ್ಧ ವಿಮಾನ ನಿಲ್ದಾಣಗಳಲ್ಲಿ ಒಂದಾದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸರಿಯಾದ ಅಧ್ಯಯನ ಇಲ್ಲದೇ ಇಂತಹ ನಿಯಮಗಳನ್ನು ಅವೈಜ್ಞಾನಿಕವಾಗಿ ತರುತ್ತಿರುವುದು ಆಶ್ಚರ್ಯವನ್ನು ಉಂಟು ಮಾಡಿದೆ’ ಎಂದು ಆನ್‌ಲೈನ್ ಸಹಿ ಸಂಗ್ರಹ ಅಭಿಯಾನ ಆರಂಭಿಸಿರುವ ಹರೀಶ್ ಅಮ್ಮುರಿ ಪ್ರತಿಕ್ರಿಯಿಸಿದ್ದಾರೆ.

ನಕಲಿ ಬಿಲ್ ಸಲ್ಲಿಕೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಳಲಿ ನಾರ್ಲಪದವು ಎಂಬಲ್ಲಿ ದನದ ಮಾಂಸ ಅಕ್ರಮ ಸಾಗಾಟ ಪ್ರಕರಣ ಸಂಬಂಧ ತಿರುಚಿದ ಬಿಲ್ ನೀಡಿ ನ್ಯಾಯಾಲಯವನ್ನು ವಂಚಿಸಿದ ಕುರಿತು ಆರೋಪಿಗಳಿಬ್ಬರನ್ನು ಬಜಪೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ದನದ ಮಾಂಸವನ್ನು ಅಕ್ರಮವಾಗಿ ಸಾಗಿಸಿದ ಆರೋಪಿ ಮುಲ್ಲರಪಟ್ಣದ ಅಬ್ದುಲ್ ಸತ್ತಾರ್ ಅಲಿಯಾಸ್ ಸತ್ತಾರ್ (54), ತಿರುಚಿದ ಬಿಲ್ ನೀಡಿದ್ದ ದೇರಳಕಟ್ಟೆ ಮಾಂಸದ ಅಂಗಡಿ ಮಾಲೀಕ, ತೊಕ್ಕೊಟ್ಟು ಚೊಂಬುಗುಡ್ಡೆಯ ಅಬ್ದುಲ್ ಸತ್ತಾರ್ (41) ಬಂಧಿತರು. ಅವರಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ ಎಂದು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ದರೋಡೆಯಾದ ಚಿನ್ನಾಭರಣದ ಮೌಲ್ಯ ₹10 ಕೋಟಿ

ಹುಣಸೂರು (ಮೈಸೂರು ಜಿಲ್ಲೆ): ‘ನಗರದ ರಾಷ್ಟ್ರೀಯ ಹೆದ್ದಾರಿ-275ರಲ್ಲಿನ ‘ಸ್ಕೈ ಗೋಲ್ಡ್ ಅಂಡ್ ಡೈಮಂಡ್ಸ್’ನಲ್ಲಿ ದರೋಡೆಯಾದ ಚಿನ್ನಾಭರಣಗಳ ಮೌಲ್ಯ ಒಟ್ಟು ₹10 ಕೋಟಿ ಮೌಲ್ಯದ್ದಾಗಿದೆ. 450 ಆಭರಣಗಳನ್ನು ದರೋಡೆ ಮಾಡಲಾಗಿದೆ’ ಎಂದು ಅಂಗಡಿ ಮಾಲೀಕ ಕೇರಳದ ವಯನಾಡು ನಿವಾಸಿ ಜಂಷಿದ್ ಪಿ.ಎ. ದೂರಿನಲ್ಲಿ ತಿಳಿಸಿದ್ದಾರೆ.

ಡಿ.28ರ ಮಧ್ಯಾಹ್ನ ದರೋಡೆ ನಡೆದಿದ್ದು, ಐವರು ದ್ವಿಚಕ್ರವಾಹನದಲ್ಲಿ ಬಂದೂಕಿನೊಂದಿಗೆ ಬಂದು ದಾಳಿ ನಡೆಸಿದ್ದರು. ಕೇವಲ 5 ನಿಮಿಷದಲ್ಲಿ ದರೋಡೆ ಮಾಡಿದ್ದಾರೆ. ಆ ಸಮಯದಲ್ಲಿ ಅಂಗಡಿಯ ವ್ಯವಸ್ಥಾಪಕ ಊಟಕ್ಕೆ ತೆರಳಿದ್ದರು. ಮುಸುಕುಧಾರಿಗಳು ಬಂದೂಕು ತೋರಿಸಿ ಅಂಗಡಿಯಲ್ಲಿದ್ದ ಆಭರಣಗಳನ್ನು ದರೋಡೆ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಮಾಹಿತಿ ಇಲ್ಲ: ದರೋಡೆ ನಡೆಸಿದ ಆರೋಪಿಗಳ ಸುಳಿವು ನಾಲ್ಕು ದಿನ ಕಳೆದರೂ ಪೊಲೀಸರಿಗೆ ಸುಳಿವು ಸಿಕ್ಕಿಲ್ಲ. ಈ ಪ್ರಕರಣವನ್ನು ಭೇದಿಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಡಿವೈಎಸ್‌ಪಿ ರವಿ ಸೇರಿದಂತೆ 100 ಪೊಲೀಸರನ್ನು ಒಳಗೊಂಡ 5 ತಂಡ ರಚಿಸಲಾಗಿದೆ.

ತನಿಖೆ ವಿಳಂಬ: ವಿಜಯಲಕ್ಷ್ಮಿ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶಗಳನ್ನು ಹಾಕಿದ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದೆ. ಆದರೆ, ಪೊಲೀಸರು ಇದುವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ’ ಎಂದು ನಟ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅಸಮಾಧಾನ ಹೊರಹಾಕಿದ್ದಾರೆ.

ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಅವರನ್ನು ವಿಜಯಲಕ್ಷ್ಮಿ ಅವರು ಬುಧವಾರ ಭೇಟಿ ಮಾಡಿ ಪ್ರಕರಣದ ಸಂಬಂಧ ಮಾಹಿತಿ ಪಡೆದುಕೊಂಡರು.

‘ನಾನು ಸಲ್ಲಿಸಿದ್ದ ದೂರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ದೇಶದಲ್ಲಿ ಕಾನೂನು ಎಲ್ಲರಿಗೂ ಒಂದೇ ಎಂದು ನಂಬಿದ್ದೇನೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಈ ನಂಬಿಕೆಯನ್ನು ಪ್ರಶ್ನಿಸುವಂತಾಗಿದೆ. ಬೇರೆ ಮಹಿಳೆ ನೀಡಿದ ದೂರು ಆಧರಿಸಿ ಒಂದು ದಿನದೊಳಗೆ ಕ್ರಮ ಕೈಗೊಳ್ಳಲಾಗಿದೆ. ಇದು ನಿಜವಾಗಿಯೂ ನನಗೆ ಆಶ್ಚರ್ಯ ತಂದಿದೆ’ ಎಂದು ವಿಜಯಲಕ್ಷ್ಮಿ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದಾರೆ.

‘ನನ್ನ ಪರ ವಕೀಲರು ಈ ವಿಚಾರಕ್ಕೆ ಸಂಬಂಧಿಸಿದಂತೆ ನಿರಂತರವಾಗಿ ವಿಚಾರಿಸಿದ್ದರು ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ನಾನೇ ಖುದ್ದಾಗಿ ಕಮಿಷನರ್ ಕಚೇರಿಗೆ ತೆರಳಿ ನೆನಪಿಸಬೇಕಾಯಿತು.

ವಿಜಯಲಕ್ಷ್ಮಿ

ಈ ವಿಳಂಬವು ಯಾವುದೇ ಬಾಹ್ಯ ಒತ್ತಡ ಅಥವಾ ಪ್ರಭಾವದಿಂದಾಗಿ ಆಗಿಲ್ಲ ಎಂದು ಭಾವಿಸುತ್ತೇನೆ. ಇನ್ನೂ ಕಾಯುತ್ತಿದ್ದೇನೆ. ಇದನ್ನು ಸುಮ್ಮನೆ ಬಿಡುವುದಿಲ್ಲ’ ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ದೂರಿನಲ್ಲಿ ಏನಿತ್ತು?: ‘ದಾವಣಗೆರೆಯಲ್ಲಿ ಆಯೋಜಿಸಿದ್ದ ‘ಡೆವಿಲ್’ ಸಿನಿಮಾದ ಪ್ರಚಾರದಲ್ಲಿ ಯಾರು ಏನೇ ಹೇಳಿದರೂ ತಲೆಕೆಡಿಸಿಕೊಳ್ಳಬೇಡಿ ಎಂದು ಅಭಿಮಾನಿಗಳಿಗೆ ಕರೆ ನೀಡಿದ್ದೆ. ಈ ಬಗ್ಗೆ ಹಲವರು ಸಾಮಾಜಿಕ ಜಾಲತಾಣದ ಮೂಲಕ ನನ್ನ ಹಾಗೂ ನಮ್ಮ ಕುಟುಂಬದ ಕುರಿತು ಅಶ್ಲೀಲ ಸಂದೇಶಗಳನ್ನು ಹಾಕುತ್ತಿದ್ದಾರೆ. ಅದರಿಂದ ತಮ್ಮ ಗೌರವಕ್ಕೆ ಧಕ್ಕೆಯಾಗುತ್ತಿದ್ದು, ಮನಸ್ಸಿಗೆ ತೀವ್ರ ನೋವುಂಟು ಮಾಡಿದೆ’ ಎಂದು ವಿಜಯಲಕ್ಷ್ಮಿ ಅವರು ಈ ಹಿಂದೆ ನೀಡಿದ್ದ ದೂರಿನಲ್ಲಿ ಉಲ್ಲೇಖಿಸಿದ್ದರು.

ವಿಳಂಬ ಮಾಡಿಲ್ಲ: ಸೀಮಾಂತ್‌ಕುಮಾರ್



‘ವಿಜಯಲಕ್ಷ್ಮಿ ನೀಡಿರುವ ದೂರಿನ ಬಳಿಕ ಕಾನೂನಿನ ಅನ್ವಯ ತಕ್ಷಣ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ’ ಎಂದು ಸೀಮಾಂತ್ ಕುಮಾರ್ ಸಿಂಗ್ ಪ್ರತಿಕ್ರಿಯಿಸಿದ್ದಾರೆ.

‘ಎಲ್ಲರ ರಕ್ಷಣೆಗೆ ಪೊಲೀಸರು ಇದ್ದಾರೆ. ಈ ಪ್ರಕರಣದಲ್ಲಿಯೂ ಕಾನೂನಾತ್ಮಕವಾಗಿ ಎಫ್‌ಐಆರ್ ದಾಖಲಿಸಿಕೊಂಡು ಡಿಸಿಪಿ ಹಂತದ ಅಧಿಕಾರಿಯಿಂದಲೇ ತನಿಖೆ ಮಾಡಲಾಗುತ್ತಿದೆ. ಕೆಲವೊಮ್ಮೆ ತಕ್ಷಣಕ್ಕೆ ಆರೋಪಿಗಳ ಪತ್ತೆ ಸಾಧ್ಯವಾಗುವುದಿಲ್ಲ. ಅದನ್ನು ಹೊರತುಪಡಿಸಿದರೆ ಬೇರೆ ಯಾವುದೊ ಉದ್ದೇಶದಿಂದ ತನಿಖೆ ವಿಳಂಬವಾಗುತ್ತಿಲ್ಲ. ಆ ರೀತಿ ಮಾಡಿದರೆ ತನಿಖಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಅವರು ತಿಳಿಸಿದರು.

ಅಪರಾಧ ಸುದ್ದಿಗಳು

ಮದ್ಯ ಸೇವಿಸಿ ವಾಹನ ಚಾಲನೆ: 4,147 ಮಂದಿ ವಿರುದ್ಧ ಎಫ್‌ಐಆರ್

ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಿರುವ ನಗರದ ಸಂಚಾರ ಪೊಲೀಸರು, ಕಳೆದ ಎಂಟು ದಿನಗಳಲ್ಲಿ 4,147 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿದವರ ವಿರುದ್ಧ ಡಿ.22ರಿಂದ 30ರವರೆಗೆ ನಗರದಾದ್ಯಂತ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ 3,01,577ಕ್ಕೂ ಹೆಚ್ಚು ವಾಹನಗಳನ್ನು ತಪಾಸಣೆ ಮಾಡಲಾಯಿತು. ಸಂಚಾರ ನಿಯಮ ಉಲ್ಲಂಘಿಸಿದ್ದವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದರು.

ಅಪಘಾತಗಳನ್ನು ತಡೆಗಟ್ಟುವ ಉದ್ದೇಶದಿಂದ ಈ ವಿಶೇಷ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಮಗು ರಕ್ಷಿಸಿದ ಎಎಸ್‌ಐ: ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಲಕ್‌ನಗರ ಠಾಣೆಯ ಎಎಸ್‌ಐ ಬಿ.ಜಿ.ಮಲ್ಲಿಕಾರ್ಜುನ್ ಅವರು ರಾಗಿಗುಡ್ಡದ (ಜಯನಗರ 9ನೇ ಬ್ಲಾಕ್) ಬಳಿ ಎಂದಿನಂತೆ ಕರ್ತವ್ಯದಲ್ಲಿ ಇದ್ದರು. ಆ ವೇಳೆ ಮಾನಸಿಕ ಅಸ್ವಸ್ಥ ಮಹಿಳೆ, ಎರಡು ವರ್ಷದ ಮಗುವನ್ನು ಎತ್ತಿಕೊಂಡು ಹೋಗುತ್ತಿರುವುದನ್ನು ಗಮನಿಸಿ ರಕ್ಷಣೆ ಮಾಡಿದ್ದಾರೆ.

ಮಹಿಳೆ ಕೊರಳಿನಲ್ಲಿ ದೊಡ್ಡ ಮಣಿ ಸರ ಧರಿಸಿದ್ದರು. ಕೈಯಲ್ಲಿ ಬ್ಯಾಗ್, ತಲೆಗೆ ಬಟ್ಟೆ ಕಟ್ಟಿಕೊಂಡಿದ್ದರು. ಅನುಮಾನಗೊಂಡ ಮಲ್ಲಿಕಾರ್ಜುನ್ ಮಹಿಳೆಯನ್ನು ತಡೆದು ವಿಚಾರಿಸಿದಾಗ ಮೆಟ್ರೊ ಕನ್ವೆನ್ಷನ್ ಹಾಲ್‌ನಿಂದ ಮಗುವನ್ನು ಎತ್ತಿಕೊಂಡು ಬಂದಿರುವುದು ಗೊತ್ತಾಯಿತು.

ತಕ್ಷಣವೇ ಮಲ್ಲಿಕಾರ್ಜುನ್ ದಕ್ಷಿಣ ವಿಭಾಗದ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಫೋಟೊ ಸಹಿತ ಮಾಹಿತಿ ಹಂಚಿಕೊಂಡಿದ್ದರು. ಹೊಯ್ಸಳ ಸಿಬ್ಬಂದಿಗೆ ಮಾಹಿತಿ ರವಾನೆ ಮಾಡಲಾಯಿತು. ಅಷ್ಟರಲ್ಲಿ ಮಗುವಿನ ತಾಯಿ ಪೊಲೀಸ್ ಠಾಣೆಗೆ ಬಂದಿದ್ದರು. ಬಳಿಕ, ಅವರನ್ನು ಸ್ಥಳಕ್ಕೆ ಕರೆದೊಯ್ದು ಮಗುವನ್ನು ಒಪ್ಪಿಸಲಾಯಿತು. ಮಲ್ಲಿಕಾರ್ಜುನ್ ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಕಳೆದ ಶನಿವಾರ ಘಟನೆ ನಡೆದಿತ್ತು. ಮಗುವಿನ ತಾಯಿ ಇವೆಂಟ್ ಮ್ಯಾನೇಜ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದರು.

ರಕ್ಷಣೆ ಮಾಡಿದ ಮಗು ಜತೆಗೆ ಎಎಸ್‌ಐ ಬಿ.ಜಿ.ಮಲ್ಲಿಕಾರ್ಜುನ್

ಕನ್ವೆನ್ಷನ್ ಹಾಲ್‌ನಲ್ಲಿ ತಾಯಿ ಕೆಲಸದಲ್ಲಿ ಮಗ್ನರಾಗಿದ್ದರು. ಆ ವೇಳೆ ಮಗುವನ್ನು ಮಹಿಳೆ ಎತ್ತಿಕೊಂಡು ಪರಾರಿ ಆಗಿದ್ದರು.

ಠಾಣಾ ವ್ಯಾಪ್ತಿಯಲ್ಲಿ ಬ್ಯಾನರ್‌ವೊಂದನ್ನು ಇತ್ತೀಚೆಗೆ ಹರಿದು ಹಾಕಲಾಗಿತ್ತು. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣ ಆಗಿತ್ತು. ಸ್ಥಳಕ್ಕೆ ತೆರಳಿದ್ದ ಪೊಲೀಸರು ಘಟನೆ ನಡೆದ ಸುತ್ತಮುತ್ತಲ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಿದಾಗ, ಇದೇ ಮಹಿಳೆ ಬ್ಯಾನರ್ ಹರಿದು ಹಾಕಿದ್ದರು ಎಂಬುದು ಪತ್ತೆಯಾಗಿತ್ತು. ಕೃತ್ಯ ಎಸಗಿದ ಮಹಿಳೆ ಮಾನಸಿಕ ಅಸ್ವಸ್ಥೆ ಎಂಬುದು ಗೊತ್ತಾಗಿದ್ದರಿಂದ ಯಾರೂ ದೂರು ನೀಡಿರಲಿಲ್ಲ.

‘ಎಎಸ್‌ಐ ಮಲ್ಲಿಕಾರ್ಜುನ್ ಅವರು ಸಮಯ ಪ್ರಜ್ಞೆಯಿಂದ ಮಗು ನಮ್ಮ ಮಡಿಲು ಸೇರಿತು’ ಎಂದು ಪೋಷಕರು ಸಂತೋಷ ವ್ಯಕ್ತಪಡಿಸಿದರು.

₹270 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಮಾದಕ ವಸ್ತು ಕಳ್ಳ ಸಾಗಣೆ ನಿಯಂತ್ರಣ ದಳದ (ಎನ್‌ಸಿಬಿ) ಬೆಂಗಳೂರು ವಲಯದ ಅಧಿಕಾರಿಗಳು 2025ರಲ್ಲಿ ಡ್ರಗ್ಸ್ ವಿರುದ್ಧ ಭರ್ಜರಿ ಕಾರ್ಯಾಚರಣೆ ನಡೆಸಿದ್ದಾರೆ.

ಒಂದು ವರ್ಷದಲ್ಲಿ ₹270 ಕೋಟಿ ಮೌಲ್ಯದ ವಿವಿಧ ಮಾದರಿಯ ಡ್ರಗ್ಸ್ ಜಪ್ತಿ ಮಾಡಿಕೊಂಡು, ಏಳು ಮಂದಿ ವಿದೇಶಿ ಪೆಡ್ಲರ್‌ಗಳೂ ಸೇರಿದಂತೆ ಒಟ್ಟು 81 ಮಂದಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. 490 ಕೆ.ಜಿ ಗಾಂಜಾ, 244 ಕೆ.ಜಿ ಹೈಡ್ರೊಗಾಂಜಾ ಸೇರಿದಂತೆ ಎಲ್‌ಎಸ್‌ಡಿ, ಎಂಡಿಎಂಎ, ಕೊಕೇನ್ ಜಪ್ತಿ ಮಾಡಿಕೊಳ್ಳಲಾಗಿತ್ತು ಎಂದು ಎನ್‌ಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಮಾದಕ ವಸ್ತು ಜಾಲವನ್ನು ಪತ್ತೆಹಚ್ಚಿ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರ ಸೂಚಿಸಿತ್ತು. ಅದರಂತೆ ಎನ್‌ಸಿಬಿ ಬೆಂಗಳೂರು ವಲಯದ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ಕಳೆದ ವರ್ಷ 30 ಪ್ರಕರಣ ದಾಖಲಿಸಿದ್ದರು.

ನಗರದಲ್ಲಿ ಇಂದು

ಕಲ್ಪತರು ದಿನಾಚರಣೆ: ವಿಶೇಷ ಪೂಜೆ, ಭಜನೆ, ಕನ್ನಡದಲ್ಲಿ ಪ್ರವಚನ, ರಾಮಕೃಷ್ಣ ಲೀಲಾ ಪ್ರಸಂಗ ವಾಚನ, ಆಯೋಜನೆ ಹಾಗೂ ಸ್ಥಳ: ರಾಮಕೃಷ್ಣ ಮಠ, ಸ್ವಾಮಿ ವಿವೇಕಾನಂದ ರಸ್ತೆ, ಹಲಸೂರು, ಬೆಳಿಗ್ಗೆ 5ರಿಂದ ಸಂಜೆ 6.45

‘ಸುರೇಶ್ವರ ಸಂವತ್ಸರ’ ವಾಚನ ಪ್ರಾರಂಭ, ‘ವೇದಾಂತ ಸಂವತ್ಸರ’ ವಾಚನದ ಮಂಗಳ: ಆಯೋಜನೆ: ವೇದಾಂತ ಸತ್ಸಂಗ ಕೇಂದ್ರ, ಸ್ಥಳ: ಸದ್ಗುರುಗಳ ತಪೋಭೂಮಿ, ಅಧ್ಯಾತ್ಮಪ್ರಕಾಶ ಶಾಖಾ ಕಾರ್ಯಾಲಯ, 2ನೇ ಬ್ಲಾಕ್, ತ್ಯಾಗರಾಜನಗರ, ಬೆಳಿಗ್ಗೆ 9

ಭೀಮಾ ಕೋರೇಗಾಂವ್ ವಿಜಯೋತ್ಸವ: ಪುಷ್ಪಾರ್ಚನೆ: ಜಿ. ಪರಮೇಶ್ವರ, ಅಧ್ಯಕ್ಷತೆ: ಎಂ.ವೆಂಕಟಸ್ವಾಮಿ, ಆಯೋಜನೆ: ನಾಗಸೇನಾ ವಿದ್ಯಾಲಯ, ಸಮತಾ ಸೈನಿಕ ದಳ, ಆರ್‌.ಪಿ.ಐ., ದಲಿತ ಸಂಘಟನೆಗಳ ಒಕ್ಕೂಟ, ಸ್ಥಳ: ನಾಗಸೇನ ವಿದ್ಯಾಲಯ ಮೈದಾನ, ಸದಾಶಿವನಗರ, ಬೆಳಿಗ್ಗೆ 11

ವಂದೇ ಮಾತರಂ ನಾಡು ನುಡಿಗಾಗಿ ಸಂಕಲ್ಪ: ಆಯೋಜನೆ: ಅದಮ್ಯ ಚೇತನ, ಸ್ಥಳ: ಅನಂತ ಸ್ಮೃತಿ ವನ, ಲಾಲ್‌ಬಾಗ್ ಪಶ್ಚಿಮ ದ್ವಾರ, ಸಂಜೆ 4

ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಶಿವಸುಜ್ಞಾನಮೂರ್ತಿ ಸ್ವಾಮೀಜಿ, ಕಾಳಹಸ್ತೇಂದ್ರ ಸ್ವಾಮೀಜಿ, ರಾಮಚಂದ್ರ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಶಿವರಾಜ ತಂಗಡಗಿ, ಉಪನ್ಯಾಸ: ಬಿ.ಶ್ರೀಕಂಠಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 5

ಸಾಮಾಜಿಕ ಸಮಾನತಾ ದಿನ: 208ನೇ ವರ್ಷದ ಭೀಮಾ ಕೋರೆಗಾಂವ್ ವಿಜಯೋತ್ಸವದ ಪ್ರಯುಕ್ತ ಹಣತೆ ಹಚ್ಚುವ ಮೂಲಕ ಹುತಾತ್ಮ ಯೋಧರ ಸ್ಮರಣೆ, ಭಾಗವಹಿಸುವವರು: ಮಾವಳ್ಳಿ ಶಂಕರ್, ಇಂದಿರಾ ಕೃಷ್ಣಪ್ಪ, ಎಸ್‌.ಜಿ. ಸಿದ್ಧರಾಮಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಡಿ.ಉಮಾಪತಿ, ರವಿಕುಮಾರ್ ಬಾಗಿ, ಜಿಗಣಿ ಶ್ರೀರಾಮ್, ಮಣಿಪಾಲ್ ರಾಜಪ್ಪ, ನಿರ್ಮಲಾ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಯ ಮುಂಭಾಗ, ವಿಧಾನಸೌಧ ಸಂಜೆ 5.30

ರಾಷ್ಟ್ರೀಯ ಸಂಗೀತ ಮತ್ತು ನೃತ್ಯೋತ್ಸವ: ಉದ್ಘಾಟನೆ: ಚಿರಂಜೀವಿ ಸಿಂಘ್, ಸಮೂಹ ಗೀತೆಗಳು: ಸಂಗೀತ ಸಂಭ್ರಮದ ಕಲಾವಿದರು, ಕರ್ನಾಟಕ ಸಂಗೀತ: ಜೋಸ್ಯರ್ ಶ್ರೀಕಾಂತ್, ಭರತನಾಟ್ಯ: ಶ್ರೇಯಾ ಶ್ರೀರಾಮ್, ಗಾಯನ: ದೀಪ್ತಿ ಶ್ರೀನಾಥ್, ಸಾಕ್ಷಿ ಜಗನ್ನಾಥ್, ಭಾರ್ಗವ್ ಎಚ್‌.ಸಿ., ನೃತ್ಯ ನಾಟಕ: ಕೃಪಾ ಫಡ್ಕೆ ಮತ್ತು ತಂಡ, ಆಯೋಜನೆ: ಸಂಗೀತ ಸಂಭ್ರಮ, ಸ್ಥಳ ಸೇವಾಸದನ, ಮಲ್ಲೇಶ್ವರ, ಸಂಜೆ 5

ಕೊಳಲು ವಾದನ: ಶಶಾಂಕ್ ಎಸ್. ಗಿರಿ ಮತ್ತು ಸಂಗಡಿಗರು, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 5

ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನದ ಉದ್ಘಾಟನಾ ಸಮಾರಂಭ: ಸಾನ್ನಿಧ್ಯ: ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ನೇತೃತ್ವ: ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಡಾ.ಸಿ.ಎನ್. ಮಂಜುನಾಥ್, ಆಯೋಜನೆ: ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 6

ಪು.ತಿ.ನರಸಿಂಹಾಚಾರ್ ವಿರಚಿತ ‘ಶ್ರೀಹರಿ ಚರಿತೆ’ ವಾಚನ: ಸುಷ್ಮಾ ಸಂತೋಷ್, ವ್ಯಾಖ್ಯಾನ: ಮೀನಾಕ್ಷಿ ಶ್ರೀಪಾದ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಯುವಜನ ಸಂಘ, ಎಚ್‌.ಸಿದ್ದಯ್ಯ ರಸ್ತೆ, ಹೊಂಬೇಗೌಡನಗರ, ಸಂಜೆ 6.30

ಮಾರ್ಗಶೀರ್ಷೋತ್ಸವ: ಸಂಗೀತ ಮೇಳ: ಮೈಲೈ ಎಂ. ಕಾರ್ತಿಕೇಯನ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ದಾಸ ವೈಭವ: ಗಾಯನ: ಅಪರ್ಣಾ ರಾವ್ ಶ್ರೀಹರಿ, ಪಿಟೀಲು: ಜಿ.ವಿ. ಶ್ರೀಹರ್ಷ, ಮೃದಂಗ: ಶ್ರೀಕರ ಶಿವಕುಮಾರ್, ಆಯೋಜನೆ ಹಾಗೂ ಸ್ಥಳ: ಪವಮಾನಪುರದ ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ರಾತ್ರಿ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

₹1.61 ಕೋಟಿ ಕಳೆದುಕೊಂಡ ನಿವೃತ್ತ ಶಿಕ್ಷಕ

ಮುಂಡಗೋಡ: ತಾಲ್ಲೂಕಿನ ಟಿಬೆಟಿಯನ್ ಕಾಲೊನಿಯ ನಿವೃತ್ತ ಶಿಕ್ಷಕ ಪಾಲ್ದೆನ್ ಲೋಸಂಗ ಚೋಡಕ್ ಸೈಬರ್ ವಂಚಕರ ಜಾಲಕ್ಕೆ ಸಿಲುಕಿ ₹1.61 ಕೋಟಿ ಕಳೆದುಕೊಂಡಿದ್ದು, ಇವರನ್ನು ‘ಡಿಜಿಟಲ್ ಅರೆಸ್ಟ್’ ಮಾಡಿ ವಂಚಕರು ಹಂತ ಹಂತವಾಗಿ ಹಣ ದೋಚಿದ್ದಾರೆ.

ನ.29ರಂದು ನಿವೃತ್ತ ಶಿಕ್ಷಕ ಪಾಲ್ದೆನ್ ಅವರಿಗೆ ವಾಟ್ಸ್‌ಆ್ಯಪ್ ಕರೆ ಮಾಡಿದ ವ್ಯಕ್ತಿಯೊಬ್ಬ, ತಾನು ಮಹಾರಾಷ್ಟ್ರದ ಕೋಲಬಾ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಎಂದು ಪರಿಚಯಿಸಿಕೊಂಡು, ಪೊಲೀಸ್ ಸಮವಸ್ತ್ರದಲ್ಲಿಯೇ ವಿಡಿಯೊ ಕರೆ ಮಾಡಿದ್ದಾನೆ. ಮುಂಬೈನಲ್ಲಿ ಉಗ್ರವಾದಿ ನಾಯಕನನ್ನು ಬಂಧಿಸಲಾಗಿದ್ದು, ಆತನ ಬಳಿ ಸಿಕ್ಕ ನೂರಾರು ಎ.ಟಿ.ಎಂ ಕಾರ್ಡ್‌ಗಳಲ್ಲಿ ನಿಮ್ಮ ಹೆಸರಿನ ಬ್ಯಾಂಕ್ ಕಾರ್ಡ್ ಕೂಡ ಇದೆ. ನಿಮ್ಮ ಬ್ಯಾಂಕ್ ಖಾತೆಯ ಮೂಲಕ ಕೋಟ್ಯಂತರ ರೂಪಾಯಿ ಮನಿ ಲಾಂಡ್ರಿಂಗ್ ನಡೆದಿದ್ದು, ನಿಮ್ಮ ಮೇಲೆ ಗಂಭೀರ ಪ್ರಕರಣ ದಾಖಲಾಗಿದೆ. ಅರೆಸ್ಟ್ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ.

ಇದನ್ನು ನಂಬಿದ ಪಾಲ್ದೆನ್, ಹಣ ವರ್ಗಾಯಿಸಿ ಕೆಲ ದಿನಗಳ ನಂತರ ಅವರು ಸೈಬರ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಸಾಂಸ್ಕೃತಿಕ ಮುನ್ನೋಟ

‘ಕಾಲಚಕ್ರ’ ನಾಟಕ ಪ್ರದರ್ಶನ 2ಕ್ಕೆ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ಇದೇ 2ರಂದು ಸಂಜೆ 6.30ಕ್ಕೆ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ‘ಕಾಲಚಕ್ರ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ.ಎಂ. ಗಾಯತ್ರಿ ಅವರು ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ. ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ರಂಗಸಮಾಜದ ಸದಸ್ಯರಾದ ಶಶಿಧರ್ ಭಾರಿಘಾಟ್, ಕೆ.ರಾಮಕೃಷ್ಣಯ್ಯ, ಕಲಾವಿದೆ ಲಕ್ಷ್ಮೀ ಚಂದ್ರಶೇಖರ್, ಕಲಬುರಗಿ ರಂಗಾಯಣದ ನಿರ್ದೇಶಕಿ ಸುಜಾತ ಜಂಗಮಶೆಟ್ಟಿ ಅತಿಥಿಗಳಾಗಿ ಭಾಗವಹಿಸಲಿ-ದ್ದಾರೆ. ಈ ನಾಟಕವನ್ನು ಹುಲಗಪ್ಪ ಕಟ್ಟಿಮನಿ ಅವರು ನಿರ್ದೇಶಿಸಿದ್ದಾರೆ.

‘ಬೈಠಕ್’ ಸಂಗೀತ ಕಛೇರಿ 4ಕ್ಕೆ

ಬೆಂಗಳೂರು: ಶ್ರೀರಾಮ ಕಲಾ ವೇದಿಕೆಯಿಂದ ಜ. 4ರಂದು ಸಂಜೆ 5.30ಕ್ಕೆ ಮಲ್ಲೇಶ್ವರದ ಷಡ್ಜ ಕಲಾ ಕೇಂದ್ರದಲ್ಲಿ ಬೈಠಕ್ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಛೇರಿ ನಡೆಯಲಿದೆ.

ಗಾಯಕಿ ಸುಷ್ಮಾ ಕಶ್ಯಪ್ ಅವರಿಗೆ ಶಶಿಭೂಷಣ್ ಗುರ್ಜರ್ (ತಬಲಾ), ಸಮೀರ್ ಹವಾಲ್ದಾರ್ (ಹಾರ್ಮೋನಿಯಂ) ಸಾಥ್ ನೀಡಲಿದ್ದಾರೆ.

‘ಒಮ್ಮೆ ಹೆಣ್ಣಾಗು’ ನಾಟಕ ಪ್ರದರ್ಶನ

ಬೆಂಗಳೂರು: ಮೈಸೂರಿನ ರಂಗಾಯಣದವರು ಜ.4ರಂದು ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ ಜೆ.ಪಿ.ನಗರದಲ್ಲಿರುವ ರಂಗಶಂಕರದಲ್ಲಿ ‘ಒಮ್ಮೆ ಹೆಣ್ಣಾಗು’ ನಾಟಕ ಪ್ರದರ್ಶನ ಹಮ್ಮಿಕೊಂಡಿದ್ದಾರೆ.

ಲೇಖಕಿ ಬಾನು ಮುಷ್ತಾಕ್ ಅವರ ‘ಎದೆಯ ಹಣತೆ’ ಸಂಕಲನದ ಆಯ್ದ ಕಥೆಗಳನ್ನು ರಂಗದ ಮೇಲೆ ತರಲಾಗುತ್ತಿದೆ. ಸವಿತಾ ರಾಣಿ ಅವರು ಈ ನಾಟಕ ನಿರ್ದೇಶಿಸಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೊದಲ್ಲಿ ಲಭ್ಯ.



ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿ ಬುಧವಾರ ಹೊಸ ವರ್ಷದ ಸಂಭ್ರಮದಲ್ಲಿ ಭಾಗವಹಿಸಲು ಹರಿದುಬಂದ ಜನಸ್ತೋಮ –ಚಿತ್ರ / ರಂಜು ಪಿ

ಹೊಸ ವರ್ಷದ ಸಡಗರದಲ್ಲಿ ತೇಲಿದ ನಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಾದ್ಯಂತ ಹೊಸ ವರ್ಷದ ಸಡಗರದಲ್ಲಿ ಯುವಜನರು ತೇಲಿದರು. ಕೈ ಕೈ ಹಿಡಿದು ನಡೆದು, ಕುಣಿದು–ನಲಿದು ಸಂಭ್ರಮಿಸಿದರು.

ವಿವಿಧ ಪಬ್, ಬಾರ್, ರೆಸ್ಟೋರೆಂಟ್‌ಗಳು ತುಂಬಿದ್ದವು. ಎಂ.ಜಿ. ರಸ್ತೆ, ಕೋರಮಂಗಲ ಸೇರಿದಂತೆ ಹಲವು ರಸ್ತೆಗಳಲ್ಲಿ ಜನಸಂದಣಿ ಕಂಡುಬಂತು.

ಮಹಾತ್ಮ ಗಾಂಧಿ ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಒಪೆರಾ ಜಂಕ್ಷನ್, ರೆಸ್ಟ್‌ಹೌಸ್ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ರಿಚ್ಮಂಡ್ ರಸ್ತೆ, ರೆಸಿಡೆನ್ಸಿ ರಸ್ತೆಯಲ್ಲಿ ಸಂಭ್ರಮ ಮನೆ ಮಾಡಿತ್ತು. ಕೋರಮಂಗಲದಲ್ಲಿ ಹೆಚ್ಚಿನ ಯುವ ಸಮೂಹ ಕಂಡುಬಂತು.

ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್‌ನಲ್ಲಿ ಸುತ್ತಾಡುವಾಗ ನೂಕುನುಗ್ಗಲು ಆಗುವುದನ್ನು ತಪ್ಪಿಸಲು ಏಕಮುಖವಾಗಿ ಮಾತ್ರ ಸಾಗುವಂತೆ ಪೊಲೀಸರು ವ್ಯವಸ್ಥೆ ಮಾಡಿದ್ದರು. ಯಾರೂ ತಿರುಗಿ ಬರುವಂತಿಲ್ಲ. ಒಂದು ವೇಳೆ ಬರಬೇಕಿದ್ದರೆ ಸುತ್ತು ಹಾಕಿಯೇ ಬರುವಂತೆ ಮಾಡಲಾಗಿತ್ತು.

ಇಂದಿರಾನಗರದ 100 ಅಡಿ ರಸ್ತೆ, 12ನೇ ಮುಖ್ಯರಸ್ತೆಯ 80 ಅಡಿ ರಸ್ತೆ–ಡಬಲ್ ರೋಡ್ ಜಂಕ್ಷನ್, ಐಟಿಪಿಎಲ್ ಮುಖ್ಯರಸ್ತೆ, ಗರುಡಾಚಾರ್ ಪಾಳ್ಯ, ಕೋರಮಂಗಲದ ನ್ಯಾಷನಲ್ ಗೇಮ್ಸ್ ವಿಲೇಜ್–ಯುಕೊ ಬ್ಯಾಂಕ್ ರಸ್ತೆ, ವೈಡಿ ಮಠ ರಸ್ತೆ, ಬ್ಯಾಟರಾಯನಪುರದ ಮಾಲ್ ಆಫ್ ಏಷ್ಯಾ, ರಾಜಾಜಿನಗರದ ಓರಾಯನ್ ಮಾಲ್ ಮುಂದೆ ಭಾರಿ ಸಂಖ್ಯೆಯಲ್ಲಿ ಸೇರಿದ್ದ ಜನರು ಸಂಭ್ರಮದಿಂದ ಹೊಸವರ್ಷ ಆಚರಿಸಿದರು.

ನಾಗರಬಾವಿಯ ಕಿಂಗ್ಸ್ ಕ್ಲಬ್ ಸೇರಿದಂತೆ ಹಲವು ಕ್ಲಬ್, ಪಬ್‌ಗಳಲ್ಲಿ ಸಂಭ್ರಮ ಮುಗಿಲು ಮುಟ್ಟಿತ್ತು. ಫೀನಿಕ್ಸ್ ಮಾಲ್, ವೈಟ್‌ಫೀಲ್ಡ್, ಬೆಳ್ಳಂದೂರು, ಕೊತ್ತನೂರು, ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಹರ್ಷದಿಂದ ಹೊಸ ವರ್ಷವನ್ನು ಬರಮಾಡಿಕೊಳ್ಳಲಾಯಿತು. ರಾತ್ರಿ 12 ಕಳೆಯುತ್ತಿದ್ದಂತೆಯೇ ಪರಸ್ಪರ ಹೊಸ ವರ್ಷದ ಶುಭಾಶಯ ವಿನಿಮಯ ಮಾಡಿಕೊಂಡು ಸಂಭ್ರಮಿಸಿದರು.

ಇಂದಿರಾನಗರದ 100 ಅಡಿ ರಸ್ತೆಯೊಂದರಲ್ಲಿಯೇ 30ಕ್ಕೂ ಅಧಿಕ ಪಬ್‌ಗಳು, ಹಲವು ಕ್ಲಬ್‌ಗಳು, ರೆಸ್ಟೋರೆಂಟ್‌ಗಳು ಇದ್ದು ಜನರು ಮುಂಗಡವಾಗಿ ಕಾಯ್ದಿರಿಸಿದ್ದರು.

ಬಿಎಂಟಿಸಿ ಬಸ್‌ಗಳು ರಾತ್ರಿ 2 ಗಂಟೆಯವರೆಗೆ ವಿವಿಧೆಡೆ ಸಂಚರಿಸಿದವು. ಬ್ರಿಗೇಡ್ ರಸ್ತೆಯಿಂದ ಎಲೆಕ್ಟ್ರಾನಿಕ್ಸ್ ಸಿಟಿ, ಜಿಗಣಿ, ಎಂ.ಜಿ. ರಸ್ತೆಯಿಂದ ಸರ್ಜಾಪುರ, ಕೆಂಗೇರಿ, ಜನಪ್ರಿಯ ಟೌನ್‌ಶಿಪ್, ನೆಲಮಂಗಲ, ಯಲಹಂಕ, ಬಾಗಲೂರು, ಹೊಸಕೋಟೆ, ಚನ್ನಸಂದ್ರ, ಕಾಡುಗೋಡು, ಜೀವನ್ ಬಿಮಾನಗರಕ್ಕೆ ಸಂಚರಿಸಿದ ಬಸ್‌ಗಳು ತುಂಬಿ ಹೋಗಿದ್ದವು. ಆರ್.ವಿ. ರಸ್ತೆ ಮೆಟ್ರೊ ನಿಲ್ದಾಣದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ಗೆ, ಮೆಜೆಸ್ಟಿಕ್‌ನಿಂದ ಕೋರಮಂಗಲಕ್ಕೆ ತಡರಾತ್ರಿವರೆಗೆ ಬಸ್‌ಗಳು ಸಂಚರಿಸಿದವು.

ಮುಖ್ಯಾಂಶಗಳು

- ಕಮಾಂಡ್ ಸೆಂಟರ್‌ನಿಂದ ಗೃಹ ಸಚಿವ ಜಿ.ಪರಮೇಶ್ವರ ಖುದ್ದು ಪರಿಶೀಲನೆ
- ಕೋರಮಂಗಲದಲ್ಲಿ ಮಧ್ಯರಾತ್ರಿ ಬಳಿಕ ಪಬ್‌ಗಳಿಂದ ಯುವಕರನ್ನು ಹೊರಗೆ ಕಳುಹಿಸಿದ ಪೊಲೀಸರು
- ಎಲ್ಲ ಕಡೆ ಅಚ್ಚುಕಟ್ಟಾದ ಭದ್ರತಾ ವ್ಯವಸ್ಥೆ, ಪೊಲೀಸರ ಕ್ರಮಕ್ಕೆ ಮೆಚ್ಚುಗೆ
- ಕಿರಿಕ್ ಮಾಡಿದ ಯುವಕರಿಗೆ ಪೊಲೀಸರ ಲಾಠಿ ಏಟು

ಮೆಟ್ರೊದಲ್ಲೂ ದಟ್ಟಣೆ

ನಮ್ಮ ಮೆಟ್ರೊ ರೈಲಿನ ಸಾಮರ್ಥ್ಯ ಮೀರಿ ಜನರು ಬರುವುದನ್ನು ತಡೆಯುವುದಕ್ಕಾಗಿ ಎಂ.ಜಿ. ರಸ್ತೆಯಲ್ಲಿ ನಮ್ಮ ಮೆಟ್ರೊ ನಿಲ್ದಾಣವನ್ನು ರಾತ್ರಿ 10 ಗಂಟೆಗೆ ಬಂದ್ ಮಾಡಲಾಗಿತ್ತು. ಹೀಗಾಗಿ, ಮೆಟ್ರೊ ರೈಲಿನಲ್ಲಿ ಸಂಚರಿಸುವವರು ಟ್ರಿನಿಟಿ ಇಲ್ಲವೇ ಕಬ್ಬನ್ ಪಾರ್ಕ್ ನಿಲ್ದಾಣಕ್ಕೆ ಹೋಗಬೇಕಾಯಿತು.

ರಾತ್ರಿ 12ಕ್ಕೆ ಹೊಸ ವರ್ಷವನ್ನು ಬರಮಾಡಿಕೊಂಡ ನಂತರ ನಿಧಾನವಾಗಿ ಜನದಟ್ಟಣೆ ಕರಗತೊಡಗಿತ್ತು. ಜನರಿಗೆ ರಾತ್ರಿ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ನಮ್ಮ ಮೆಟ್ರೊ ರೈಲುಗಳು ತಡರಾತ್ರಿವರೆಗೆ ಸಂಚರಿಸಿದವು. ನೇರಳೆ ಮಾರ್ಗದಲ್ಲಿ ವೈಟ್‌ಫೀಲ್ಡ್‌ನಿಂದ ರಾತ್ರಿ 1.45ಕ್ಕೆ ಚಲ್ಲಘಟ್ಟದಿಂದ ರಾತ್ರಿ 2ಕ್ಕೆ ಕೊನೇ ರೈಲುಗಳು ಸಂಚರಿಸಿದವು. ಹಸಿರು ಮಾರ್ಗದಲ್ಲಿ ಮಾದಾವರದಿಂದ ಮತ್ತು ರೇಷ್ಮೆ ಸಂಸ್ಥೆಯಿಂದ ರಾತ್ರಿ 2ಕ್ಕೆ ಕೊನೇ ರೈಲುಗಳು ಹೊರಟವು. ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದಿಂದ ನಾಲ್ಕು ಟರ್ಮಿನಲ್‌ಗಳ ಕಡೆಗೆ ರಾತ್ರಿ 2.45ಕ್ಕೆ ಕೊನೇ ರೈಲುಗಳು ಸಂಚರಿಸಿದವು.

ಹಳದಿ ಮಾರ್ಗದಲ್ಲಿ ಬೊಮ್ಮಸಂದ್ರದಿಂದ ಆರ್‌ವಿ ರಸ್ತೆಯವರೆಗೆ ರಾತ್ರಿ 1.30ಕ್ಕೆ ಕಡೆಯ ರೈಲು ಸಂಚರಿಸಿತು. ಹಸಿರು ಮಾರ್ಗದಿಂದ ಹಳದಿ ಮಾರ್ಗಕ್ಕೆ ಅಂತರ್ ಬದಲಾಗುವವರಿಗೆ ಅನುಕೂಲ ಆಗುವಂತೆ ಆರ್‌ವಿ ರಸ್ತೆಯಿಂದ ಬೊಮ್ಮಸಂದ್ರ ಕಡೆಗೆ ಕೊನೇ ಮೆಟ್ರೊ ರಾತ್ರಿ 3.10ಕ್ಕೆ ಸಂಚರಿಸಿತು.

ರೆಸಾರ್ಟ್‌ಗಳಲ್ಲಿ ಭರ್ಜರಿ ವ್ಯಾಪಾರ

ಪಬ್‌ಗಳಲ್ಲಿ ಭರ್ಜರಿ ವ್ಯಾಪಾರ ನಡೆಯಿತು. ಬೇಕರಿಗಳಲ್ಲಿ ವಿಭಿನ್ನವಾದ ಕೇಕ್ ತಯಾರಿಸಲಾಗಿತ್ತು. ಬೆಳಿಗ್ಗೆಯಿಂದಲೂ ಬೇಕರಿಗಳ ಮುಂದೆ ಜನದಟ್ಟಣೆ ಕಂಡುಬಂತು. ನೂತನ ವಿನ್ಯಾಸದ ಕೇಕ್‌ಗಳನ್ನು ಕತ್ತರಿಸಿ ಜನರು ಸಂಭ್ರಮಿಸಿದರು.

ಈ ಬಾರಿ ಪ್ರವಾಸಿ ತಾಣಗಳ ಪ್ರವೇಶಕ್ಕೆ ನಿರ್ಬಂಧಿಸಲಾಗಿದೆ. ಆದ್ದರಿಂದ ರೆಸಾರ್ಟ್‌ಗಳು, ಪಬ್‌ಗಳು ಜನರಿಂದ ಭರ್ತಿಯಾಗಿದ್ದವು. ಬೆಂಗಳೂರು ನಗರದ ಹೊರ ವಲಯದಲ್ಲಿರುವ ಬಹುತೇಕ ರೆಸಾರ್ಟ್‌ಗಳಲ್ಲಿ ಸಂಗೀತ ಹಾಗೂ ರೇನ್ ಡಾನ್ಸ್ ಸೇರಿದಂತೆ ಹಲವು ಮನರಂಜನೆಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಸ್ಥಳದಲ್ಲೇ ದಂಡ

ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿದವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ದಂಡ ವಿಧಿಸಲಾಗುವುದು ಎಂದು ಸಂಚಾರ ಪೊಲೀಸರು ಎಚ್ಚರಿಕೆ ನೀಡಿದ್ದರು. ಕೆಲವರು ಹೊಸ ವರ್ಷದ ಪಾರ್ಟಿಯಲ್ಲಿ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿಕೊಂಡು ಮನೆಯತ್ತ ತೆರಳುತ್ತಿದ್ದರು. ಅಂತಹವರನ್ನು ಜಂಕ್ಷನ್‌ಗಳಲ್ಲಿ ತಡೆದ ಪೊಲೀಸರು, ಸ್ಥಳದಲ್ಲೇ ದಂಡ ಹಾಕಿದರು. ಅಲ್ಲದೇ ಪ್ರಕರಣ ದಾಖಲಿಸಿಕೊಂಡು ಕಳುಹಿಸಿದರು.

ಹೊಸ ವರ್ಷ ಸ್ವಾಗತಿಸಿದ ಮಹಿಳೆ

ಅಪಾರ್ಟ್‌ಮೆಂಟ್‌ಗಳಲ್ಲಿ ಸಂಭ್ರಮ

ಹೊಸ ವರ್ಷವನ್ನು ಸ್ವಾಗತಿಸಲು ನಗರದ ವಿವಿಧ ಅಪಾರ್ಟ್‌ಮೆಂಟ್‌ಗಳು ವಿದ್ಯುತ್ ದೀಪಾಲಂಕಾರದಿಂದ ಝಗಮಗಿಸುತ್ತಿದ್ದವು. ಅಪಾರ್ಟ್‌ಮೆಂಟ್ ಸಂಘದವರು ಪಾರ್ಟಿಗಳನ್ನು ಆಯೋಜಿಸಿದ್ದರು. ಹಾಡು, ನೃತ್ಯ ಸಂಗೀತ ಕಾರ್ಯಕ್ರಮಗಳು ನಡೆದವು.

ರಾಜರಾಜೇಶ್ವರಿ ನಗರ, ಮಹಾಲಕ್ಷ್ಮಿ ಬಡಾವಣೆ, ಅಶೋಕ ನಗರ, ಮತ್ತಿಕೆರೆ, ಕೆಂಗೇರಿ, ಬಸವನಗುಡಿ, ಜಯನಗರ, ಜೆ.ಪಿ ನಗರ, ಪೀಣ್ಯ, ಮಲ್ಲೇಶ್ವರ, ಶೇಷಾದ್ರಿಪುರ, ದೀಪಾಂಜಲಿ ನಗರ, ಸುಬ್ರಹ್ಮಣ್ಯ ನಗರ, ಯಶವಂತಪುರ, ಜಾಲಹಳ್ಳಿ, ದಾಸರಹಳ್ಳಿ, ಎಚ್‌ಎಸ್‌ಆರ್ ಲೇಔಟ್, ಇಂದಿರಾನಗರ, ದೊಮ್ಮಲೂರು, ವೈಟ್‌ಫೀಲ್ಡ್, ವಿಜಯನಗರ, ನಾಗರಬಾವಿ, ಕೆಂಗೇರಿ, ಯಲಹಂಕ, ಕೆ.ಆರ್. ಪುರ, ಶಿವಾಜಿನಗರ, ಕಾಕ್ಸ್‌ಟೌನ್, ಬೆನ್ಸನ್‌ಟೌನ್ ಸೇರಿದಂತೆ ನಗರದ ಅನೇಕ ಪ್ರದೇಶಗಳ ಅಪಾರ್ಟ್‌ಮೆಂಟ್‌ಗಳಲ್ಲಿ ಹೊಸ ವರ್ಷದ ಸಂಭ್ರಮ ಮನೆ ಮಾಡಿತ್ತು.

ಎಲ್ಲೆಲ್ಲಿ ಏನಾಯಿತು?

- ರಾತ್ರಿ 10 ಗಂಟೆಯ ಬಳಿಕ ಸಂಭ್ರಮಾಚರಣೆ ಸ್ಥಳಕ್ಕೆ ಬಂದ ಜನರು
- ಹೊಸ ವರ್ಷದ ಸಂಭ್ರಮದ ನಡುವೆ ಯಲಹಂಕ ಭಾಗದಲ್ಲಿ ಮಳೆಯ ಸಿಂಚನ
- ಬ್ರಿಗೇಡ್ ರಸ್ತೆ ಪ್ರವೇಶಿಸಲು ಸ್ಕ್ಯಾನರ್ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿ ಕಡಿಮೆ ಸಂಖ್ಯೆಯ ಸ್ಕ್ಯಾನರ್ ಅಳವಡಿಸಿದ್ದರಿಂದ ನೂಕುನುಗ್ಗಲು ಉಂಟಾಗಿತ್ತು
- ಬಂದೋಬಸ್ತ್‌ಗೆ ಹೊರ ಜಿಲ್ಲೆಯ ಪೊಲೀಸರ ಬಳಕೆ
- 160 ಸ್ಥಳಗಳಲ್ಲಿ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿದವರ ತಪಾಸಣೆ, ಪ್ರಕರಣ ದಾಖಲು
- ರಾತ್ರಿ 12 ಕಳೆಯುತ್ತಿದ್ದಂತೆಯೇ ಹೊಸ ವರ್ಷದ ಶುಭಾಶಯ ವಿನಿಯಮ ಮಾಡಿಕೊಂಡ ಜನರು
- ಚರ್ಚ್ ಸ್ಟ್ರೀಟ್‌ನಲ್ಲಿ ಕರ್ತವ್ಯನಿರತ ಮಹಿಳಾ ಸಿಬ್ಬಂದಿಯೊಂದಿಗೆ ದುರ್ವತನೆ ತೋರಿದ ಯುವಕರನ್ನು ವಶಕ್ಕೆ ಪಡೆದ ಸಿಸಿಬಿ ಪೊಲೀಸರು
- ವಾಹನ ತಪಾಸಣೆ ವೇಳೆ ಪೊಲೀಸರಿಗೆ ನಿಂದನೆ: ಎಲೆಕ್ಟ್ರಾನಿಕ್ ಸಿಟಿಯ ನೀಲಾದ್ರಿ ನಗರದಲ್ಲಿ ಘಟನೆ
- ಮದ್ಯದ ನಶೆಯಲ್ಲಿ ಅಲ್ಲಲ್ಲಿ ಯುವಕರ ಪುಂಡಾಟ, ತಿಳಿವಳಿಕೆ ಹೇಳಿ ಮನೆಗೆ ಕಳುಹಿಸಿದ ಪೊಲೀಸರು
- ಮದ್ಯದ ಅಮಲಿನಲ್ಲಿ ನಡೆದು ತೆರಳಲು ಸಾಧ್ಯವಾಗದವರನ್ನು ಪೊಲೀಸ್ ವಾಹನದಲ್ಲಿ ಮನೆಗೆ ಕಳುಹಿಸಿದ ಸಿಬ್ಬಂದಿ
- ಮಹಾತ್ಮ ಗಾಂಧಿ ರಸ್ತೆಯಲ್ಲಿ ನೂಕುನುಗ್ಗಲಿನಿಂದಾಗಿ ಕುಸಿದ ವ್ಯಕ್ತಿ ಮತ್ತು ಬಿದ್ದ ವ್ಯಕ್ತಿಯನ್ನು ಆಂಬುಲೆನ್ಸ್‌ನಲ್ಲಿ ಶಿವಾಜಿನಗರದ ಬೌರಿಂಗ್ ಆಸ್ಪತ್ರೆಗೆ ಕಳುಹಿಸಿದ ಪೊಲೀಸರು
- ಎಂ.ಜಿ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು

ಭದ್ರತೆಗೆ 20 ಸಾವಿರ ಪೊಲೀಸ್ ಸಿಬ್ಬಂದಿ

ನಗರದಾದ್ಯಂತ ಹೊಸ ವರ್ಷಾಚರಣೆಯ ಬಂದೋಬಸ್ತ್ ಕರ್ತವ್ಯಕ್ಕೆ ಒಟ್ಟು 20 ಸಾವಿರ ಪೊಲೀಸರನ್ನು ನಿಯೋಜಿಸಲಾಗಿತ್ತು. ಕಾನೂನು ಸುವ್ಯವಸ್ಥೆ ವಿಭಾಗದ 14 ಸಾವಿರ, 2,500 ಸಂಚಾರ ಪೊಲೀಸರು, 88 ಕೆಎಸ್‌ಆರ್‌ಪಿ ತುಕಡಿಗಳು, 266 ಹೊಯ್ಸಳ ವಾಹನ, 250 ಕೋಬ್ರಾ ವಾಹನಗಳು ಹಾಗೂ 400 ಟ್ರಾಫಿಕ್ ವಾರ್ಡನ್‌ಗಳನ್ನು ನಿಯೋಜನೆ ಮಾಡಲಾಗಿತ್ತು.

ಟೋಯಿಂಗ್ ಬಿಸಿ

ಕೆಲವು ರಸ್ತೆಗಳಲ್ಲಿ ವಾಹನಗಳ ನಿಲುಗಡೆ ನಿರ್ಬಂಧಿಸಿ ಸಂಚಾರ ಪೊಲೀಸರು ಆದೇಶಿಸಿದ್ದರು. ಆದರೂ, ರಸ್ತೆಯ ಬದಿಯಲ್ಲಿ ದ್ವಿಚಕ್ರ ವಾಹನಗಳನ್ನು ನಿಲುಗಡೆ ಮಾಡಿ ಸವಾರರು ತೆರಳಿದ್ದರು. ಅಂತಹ ವಾಹನಗಳನ್ನು ಟೋಯಿಂಗ್ ಮಾಡಲಾಯಿತು. ಹೊಸ ವರ್ಷಾಚರಣೆಗೆ ಸ್ವಂತ ವಾಹನದಲ್ಲಿ ಬಂದವರಿಗೆ ದಂಡದ ಬಿಸಿ ತಟ್ಟಿತು.

ಹೊಸ ವರ್ಷದ ಸಂಭ್ರಮದಲ್ಲಿ ತಂದೆ ಹಾಗೂ ಮಗು – ಚಿತ್ರ: ಎಂ.ಎಸ್.ಮಂಜುನಾಥ್

ಪೊಲೀಸ್ ಸರ್ಪಗಾವಲಿನಲ್ಲಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಳೆದ ಜೂನ್ ತಿಂಗಳಲ್ಲಿ ಸಂಭವಿಸಿದ್ದ ಕಾಲ್ತುಳಿತದ ನಂತರ ಎಚ್ಚೆತ್ತಿರುವ ಗೃಹ ಇಲಾಖೆ ಅಧಿಕಾರಿಗಳು, ಹೊಸ ವರ್ಷಾಚರಣೆಯ ಬಂದೋಬಸ್ತ್‌ಗೆ ನಗರದಲ್ಲಿ ಪೊಲೀಸ್ ಸರ್ಪಗಾವಲನ್ನೇ ಹಾಕಿದ್ದರು.

ಮಹಾತ್ಮ ಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆ, ಕೋರಮಂಗಲ, ಒಪೆರಾ ಜಂಕ್ಷನ್, ರೆಸ್ಟ್‌ಹೌಸ್ ರಸ್ತೆ, ಸೇಂಟ್ ಮಾರ್ಕ್ ರಸ್ತೆ, ರಿಚ್ಮಂಡ್ ರಸ್ತೆ, ರೆಸಿಡೆನ್ಸಿ ರಸ್ತೆಯಲ್ಲಿ ಬುಧವಾರ ರಾತ್ರಿ ಹೆಜ್ಜೆ ಹೆಜ್ಜೆಗೂ ಪೊಲೀಸರು ಕಂಡುಬಂದರು

ರಾತ್ರಿ 9 ಗಂಟೆವರೆಗೂ ಈ ರಸ್ತೆಗಳಲ್ಲಿ ಹೆಚ್ಚಿನ ಜನರು ಕಂಡುಬರಲಿಲ್ಲ. ರಾತ್ರಿ 10 ಗಂಟೆಯ ಸುಮಾರಿಗೆ ದೊಡ್ಡ ಸಂಖ್ಯೆಯಲ್ಲಿ ಯುವ ಸಮೂಹ ಸಂಭ್ರಮಾಚರಣೆ ನಡೆಯುವ ಸ್ಥಳದಲ್ಲಿ ಜಮಾವಣೆಗೊಂಡಿತ್ತು. ಚರ್ಚ್ ಸ್ಟ್ರೀಟ್‌ನಲ್ಲಿ (ಮೆಟ್ರೊ ಪ್ರವೇಶ ದ್ವಾರ) ಬ್ಯಾರಿಕೇಡ್ ಹಾಕಿ ಸರದಿಯಲ್ಲಿ ಜನರು ಸಂಚರಿಸುವಂತೆ ಮಾಡಲಾಗಿತ್ತು. ಒಂದುಬದಿಯ ಪಬ್‌ಗಳಿಗೆ ತೆರಳುವುದಕ್ಕೆ ಅವಕಾಶ ಇರಲಿಲ್ಲ. ಈ ಬಾರಿ ಪೀಪಿ ಬಳಕೆಯನ್ನು ನಿಷೇಧಿಸಲಾಗಿತ್ತು.

ಮಹಾತ್ಮ ಗಾಂಧಿ ರಸ್ತೆ, ಚರ್ಚ್ ರಸ್ತೆ ಹಾಗೂ ಬ್ರಿಗೇಡ್ ರಸ್ತೆಯಲ್ಲಿ ಬಂದೋಬಸ್ತ್‌ಗೆ ಮೂರು ಸಾವಿರಕ್ಕೂ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಅಲ್ಲಲ್ಲಿ ಹೆಚ್ಚುವರಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿತ್ತು. 60ಕ್ಕೂ ಹೆಚ್ಚು ಮಹಿಳಾ ಸಹಾಯ ಕೇಂದ್ರ ಸ್ಥಾಪಿಸಲಾಗಿತ್ತು. ವೈದ್ಯಕೀಯ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ಸಿವಿಲ್ ಪೊಲೀಸ್, ಸಶಸ್ತ್ರ ಮೀಸಲು ಪಡೆ, ಕೆಎಸ್‌ಆರ್‌ಪಿ, ಕ್ಷಿಪ್ರ ಕಾರ್ಯ ಪಡೆ, ಗೃಹ ರಕ್ಷಕ ದಳದ ಸಿಬ್ಬಂದಿ ಹಾಗೂ ನಾಗರಿಕ ಪೊಲೀಸ್‌ರನ್ನೂ ಭದ್ರತೆಗೆ ನಿಯೋಜನೆ ಮಾಡಲಾಗಿತ್ತು.

ಎಂ.ಜಿ. ರಸ್ತೆಯ ಅನಿಲ್ ಕುಂಬ್ಳೆ ವೃತ್ತದಿಂದ ಟ್ರಿನಿಟಿ ವೃತ್ತದವರೆಗೆ, ಬ್ರಿಗೇಡ್ ರಸ್ತೆಯಲ್ಲಿ ಕಾವೇರಿ ಎಂಪೋರಿಯಂ ಜಂಕ್ಷನ್‌ನಿಂದ ಅಪೇರಾ ಜಂಕ್ಷನ್‌ವರೆಗೆ, ಚರ್ಚ್ ಸ್ಟ್ರೀಟ್‌ನ ಬ್ರಿಗೇಡ್ ರಸ್ತೆ ಜಂಕ್ಷನ್‌ನಿಂದ ಮ್ಯೂಸಿಯಂ ರಸ್ತೆ ಜಂಕ್ಷನ್‌ವರೆಗೆ, ರೆಸಿಡೆನ್ಸಿ ರಸ್ತೆಯ ಆಶೀರ್ವಾದಂ ಜಂಕ್ಷನ್‌ನಿಂದ ಮೆಯೊ ಹಾಲ್ ಜಂಕ್ಷನ್‌ವರೆಗೆ ವಾಹನ ಸಂಚಾರ ನಿಷೇಧಿಸಲಾಗಿತ್ತು. ನಡೆದು ಸಾಗುವವರಿಗೆ ಮಾತ್ರವೇ ಅವಕಾಶ ಕಲ್ಪಿಸಲಾಗಿತ್ತು. ತಡರಾತ್ರಿ 12.30ರ ಬಳಿಕ ಈ ರಸ್ತೆಗಳಲ್ಲಿ ಬ್ಯಾರಿಕೇಡ್ ತೆರವು ಮಾಡಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಯಿತು.

ಕೋರಮಂಗಲದ ವೈ.ಡಿ.ಮಠ ರಸ್ತೆಯ ಸುಖಸಾಗರ ಜಂಕ್ಷನ್‌ನಿಂದ ಮೈಕ್ರೋಲ್ಯಾಂಡ್ ಜಂಕ್ಷನ್, ವೈ.ಡಿ.ಮಠ ರಸ್ತೆಗೆ ಸಂಪರ್ಕ ಕಲ್ಪಿಸುವ ಅಡ್ಡರಸ್ತೆಗಳಾದ ಜೆ.ಎನ್.ಸಿ ರಸ್ತೆ, 4ನೇ ಬಿ ಕ್ರಾಸ್‌ರಸ್ತೆ, ಟಾನಿಕ್ ಹಿಂಭಾಗದ ರಸ್ತೆ, 17ನೇ ಎಚ್ ಮುಖ್ಯರಸ್ತೆಗಳಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿತ್ತು.

ಮದ್ಯಸೇವಿಸಿ ಯುವಕರು ದುರ್ವತನೆ ತೋರುತ್ತಾರೆ ಎನ್ನುವ ಕಾರಣಕ್ಕೆ ನಗರದ ಹಲವು ಮೇಲ್ಸೇತುವೆಗಳಲ್ಲಿ (ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುವ ಮೇಲ್ಸೇತುವೆ ಹೊರತುಪಡಿಸಿ) ಎಲ್ಲ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿತ್ತು. ವಾಹನ ಸವಾರರು ಪರ್ಯಾಯ ಮಾರ್ಗ ಬಳಸಿ ತೆರಳಿದರು. ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಸ್ಥಳದಲ್ಲಿ ಅಗ್ನಿಶಾಮಕ ದಳದ ವಾಹನಗಳನ್ನು ನಿಯೋಜನೆ ಮಾಡಲಾಗಿತ್ತು.

ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಬ್ರಿಗೇಡ್ ರಸ್ತೆಯಲ್ಲಿ ಭದ್ರತಾ ಪರಿಶೀಲನೆ ನಡೆಸಿದರು –ಪ್ರಜಾವಾಣಿ ಚಿತ್ರ

ಬ್ರಿಗೇಡ್ ರಸ್ತೆಯಲ್ಲಿ ಸಂಭ್ರಮಿಸಿದ ಜನಸ್ತೋಮ –ಪ್ರಜಾವಾಣಿ ಚಿತ್ರ

ಎಂ.ಜಿ ರಸ್ತೆಯಲ್ಲಿ ಜನರನ್ನು ಚದುರಿಸಲು ಪೊಲೀಸರು ಲಾಠಿ ಬೀಸಿದರು ಚಿತ್ರ/ಬಿ.ಕೆ.ಜನಾರ್ದನ್

‘ಆತ್ಮಸಾಕ್ಷಿಯಂತೆ ಕೆಲಸ ಮಾಡಿ’

ಪ್ರೆಸ್‌ಕ್ಲಬ್‌ನ ವಾರ್ಷಿಕ, ವಿಶೇಷ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪತ್ರಕರ್ತರು ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡಿದರೆ ಯಾರಿಗೂ ಹೆದರಬೇಕಾಗಿಲ್ಲ’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

‘ಪ್ರೆಸ್‌ಕ್ಲಬ್ ಆಫ್ ಬೆಂಗಳೂರು’ ಹೊಸ ವರ್ಷಾಚರಣೆ ಅಂಗವಾಗಿ ಬುಧವಾರ ಆಯೋಜಿಸಿದ್ದ 2025ನೇ ಸಾಲಿನ ವರ್ಷದ ವ್ಯಕ್ತಿ, ವಿಶೇಷ ಪ್ರಶಸ್ತಿ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಪತ್ರಿಕಾ ಕ್ಷೇತ್ರಕ್ಕೆ ಈಗಲೂ ತನ್ನದೇ ಆದ ಮಹತ್ವವಿದೆ. ಸಮಾಜದಲ್ಲಿ ಏನಾದರೂ ಪರಿವರ್ತನೆ ಆಗಬೇಕು ಎಂದರೆ ಅದು ಮಾಧ್ಯಮದಿಂದ ಎನ್ನುವ ನಂಬಿಕೆ ಉಳಿದುಕೊಂಡಿದೆ. ಅಂತಹ ವಿಶ್ವಾಸವನ್ನು ಉಳಿಸಿಕೊಂಡು ಬದಲಾವಣೆಗೆ ಮಾಧ್ಯಮ ಒತ್ತು ನೀಡಬೇಕು’ ಎಂದು ಸಲಹೆ ನೀಡಿದರು.

‘ಹಿಂದೆ ವಿಧಾನ ಪರಿಷತ್ ಅಧಿವೇಶನಕ್ಕೆ ಟಿವಿ ಮಾಧ್ಯಮದವರ ಪ್ರವೇಶ ನಿರಾಕರಿಸಿದಾಗ ಗೊಂದಲ ಆಯಿತು. ಆಗ ನಾನೇ ಎಲ್ಲರಿಗೂ ಅಧಿವೇಶನದ ದೃಶ್ಯಾವಳಿ ಸಿಗುವ ಹಾಗೆ ವ್ಯವಸ್ಥೆ ಮಾಡಿದೆ. ಇದರಿಂದ ನಾಡಿನ ಜನರು ಕಲಾಪವನ್ನು ಮಾಧ್ಯಮಗಳ ಮೂಲಕ ನೋಡಲು ಅವಕಾಶವಾಗಿದೆ’ ಎಂದು ಅವರು ಹೇಳಿದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಮಾತನಾಡಿ, ‘25 ವರ್ಷಗಳಿಂದ ಪ್ರೆಸ್‌ಕ್ಲಬ್ ಆಫ್ ಬೆಂಗಳೂರಿನೊಂದಿಗೆ ನಿಕಟ ಸಂಪರ್ಕ ಹೊಂದಿದ್ದೇನೆ. ಪತ್ರಕರ್ತರ ಹಿತರಕ್ಷಣೆಗೆ ಹಲವಾರು ಸುಧಾರಣಾ ಕ್ರಮಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಹಕಾರದಿಂದ ಕೈಗೊಳ್ಳಲಾಗಿದೆ. ಹೊಸಕೆರೆ ಹಳ್ಳಿಯಲ್ಲಿ ನೀಡಿರುವ ಒಂದು ಎಕರೆ ಜಾಗದಲ್ಲಿ ಪ್ರೆಸ್‌ಕ್ಲಬ್‌ನ ವಿಶಾಲ ಕಟ್ಟಡ ನಿರ್ಮಿಸಲಾಗುವುದು’ ಎಂದು ಹೇಳಿದರು.

ಶಾಸಕ ಕೆ.ಷಡಕ್ಷರಿ, ಜವಾಹರ್ ಬಾಲಭವನ ಸೊಸೈಟಿಯ ಅಧ್ಯಕ್ಷ ಬಿ.ಆರ್.ನಾಯ್ಡು, ಸಚಿವರ ಮಾಧ್ಯಮ ಸಮನ್ವಯಾಧಿಕಾರಿಗಳಾದ ಬಿ.ಎನ್.ಶ್ರೀಧರ, ಲಕ್ಷ್ಮೀನಾರಾಯಣ, ಪ್ರೆಸ್ ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್, ಪ್ರಧಾನ ಕಾರ್ಯದರ್ಶಿ ಎಂ.ಡಿ.ಶಿವಕುಮಾರ್ ಬೆಳ್ಳಿತಟ್ಟೆ, ಕಾರ್ಯದರ್ಶಿ ಮಂಜುನಾಥ್, ಜಂಟಿ ಕಾರ್ಯದರ್ಶಿ ಧರಣೇಶ್ ಬೂಕನಕೆರೆ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರಜಾವಾಣಿಯ ಕೆ.ಜೆ.ಮರಿಯಪ್ಪ, ಆರ್.ಮಂಜುನಾಥ್, ಬಿ.ವಿ.ಶ್ರೀನಾಥ, ಮಂಜುಶ್ರೀ ಕಡಕೋಳ, ಡೆಕ್ಕನ್ ಹೆರಾಲ್ಡ್‌ನ ಮಧುಕೇಶ್ವರ ಜವಳಿ ಸೇರಿದಂತೆ 53 ಪತ್ರಕರ್ತರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕೆ.ವಿ.ಪ್ರಭಾಕರ್, ಬೆಳಗಾವಿ ಎಸ್ಪಿ ಭೀಮಾಶಂಕರ ಗುಳೇದ ಪರವಾಗಿ ಅವರ ತಾಯಿ ಪಾರ್ವತಿ ಶಾಮರಾವ್ ವಿಶೇಷ ಪ್ರಶಸ್ತಿ ಸ್ವೀಕರಿಸಿದರು.



ಕೋರಮಂಗಲದಲ್ಲಿ ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಕಂಡುಬಂದ ಜನಸ್ತೋಮ –ಪ್ರಜಾವಾಣಿ ಚಿತ್ರ

ಖರ್ಚು ಮಾಡಿದ ಬಳಿಕ ಉಳಿದಿದ್ದನ್ನು ಉಳಿತಾಯ ಮಾಡುವುದಲ್ಲ; ಬದಲಾಗಿ, ಉಳಿತಾಯ ಮಾಡಿದ ಬಳಿಕ ಉಳಿದಿದ್ದನ್ನು ಖರ್ಚು ಮಾಡು
ವಾರೆನ್ ಬಫೆಟ್, ಹೂಡಿಕೆ ತಜ್ಞ

ದುಡ್ಡಿನಂಥಾ ಮಾತು

ಆರೋಗ್ಯ ವಿಮೆ ಪೋರ್ಟ್ ಹೇಗೆ?

● ಆದರ್ಶ್ ಅಗರ್ವಾಲ್

ಹೀಗೊಂದು ಸಂದರ್ಭವನ್ನು ಕಲ್ಪಿಸಿಕೊಳ್ಳಿ...

ನಿಮಗೆ ಹಲವು ವರ್ಷಗಳಿಂದ ಆರೋಗ್ಯ ವಿಮೆಯೊಂದರ ರಕ್ಷೆ ಇದೆ. ಆದರೆ ಕಳೆದ ವರ್ಷದಲ್ಲಿ ಒಂದು ಮರೆಯಲಾಗದ ವಿದ್ಯಮಾನ ಘಟಿಸಿತು. ನೀವು ಅನಾರೋಗ್ಯದ ಕಾರಣದಿಂದಾಗಿ ಭರಿಸಿದ ವೈದ್ಯಕೀಯ ವೆಚ್ಚಗಳಿಗೆ ಸಂಬಂಧಿಸಿದ ಕ್ಲೇಮ್ ಅರ್ಜಿಯನ್ನು ವಿಮಾ ಕಂಪನಿಗೆ ಸಲ್ಲಿಸಿದಿರಿ. ಆದರೆ ವಿಮಾ ಕಂಪನಿಯಿಂದ ಆರಂಭದಲ್ಲಿ ದೊರೆತ ಸ್ಪಂದನವು ತೃಪ್ತಿಕರವಾಗಿರಲಿಲ್ಲ, ಅವರು 'ನಿಮ್ಮ ಕ್ಲೇಮ್ ಅರ್ಜಿ ತಿರಸ್ಕೃತಗೊಂಡಿದೆ' ಎಂಬ ಮಾಹಿತಿ ನೀಡಿದರು. ಯಾವ ಕಾಯಿಲೆಗೆ ನೀವು ಚಿಕಿತ್ಸೆ ಪಡೆದಿದ್ದೀರೋ ಅದು ನೀವು ಪಡೆದ ವಿಮಾ ಸೌಲಭ್ಯದ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಸಿದರು.

ಈ ವಿವರಣೆಯು ನಿಮಗೆ ಸಮಾಧಾನ ನೀಡಲಿಲ್ಲ. ಆಗ ನೀವು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ (ಐಆರ್‌ಡಿಎಐ) ದೂರು ಸಲ್ಲಿಸುತ್ತೀರಿ. ನಿಮ್ಮ ದೂರನ್ನು ಪರಿಶೀಲಿಸಿದ ನಂತರ ಅಲ್ಲಿಂದ ಧನಾತ್ಮಕವಾದ ಫಲಿತಾಂಶವೊಂದು ಸಿಕ್ಕಿತು. ವಿಮಾ ಕಂಪನಿಯು ನೀವು ಕ್ಲೇಮ್ ಮಾಡಿದ್ದ ಮೊತ್ತವನ್ನು ಅಂತೂ ಬಿಡುಗಡೆ ಮಾಡಿತು. ಈ ಇಡೀ ಪ್ರಕ್ರಿಯೆ ಪೂರ್ಣಗೊಳ್ಳಲು ಸರಿಸುಮಾರು ಐದು ತಿಂಗಳು ಹಿಡಿಯಿತು.

ನಿಮ್ಮ ಆರೋಗ್ಯ ವಿಮಾ ಕ್ಲೇಮ್ ಅರ್ಜಿಯು ಇತ್ಯರ್ಥ ಆಯಿತಾದರೂ, ಇಡೀ ಪ್ರಕ್ರಿಯೆಯು ನಿಮ್ಮಲ್ಲಿ ಅಸಮಾಧಾನ ಮೂಡಿಸಿತು. ನಿಮ್ಮ ವಿಮಾ ಕಂಪನಿಯು ನಿಮ್ಮ ಕ್ಲೇಮ್ ಅರ್ಜಿಯನ್ನು ಆರಂಭದಿಂದ ಅಂತ್ಯದವರೆಗೆ ನಿರ್ವಹಿಸಿದ ಬಗೆಯು ನಿಮ್ಮಲ್ಲಿ ಬಹಳ ಅತೃಪ್ತಿ ಉಂಟುಮಾಡಿತು. ನಂತರದಲ್ಲಿ, ಈ ಅನುಭವದ ಕಾರಣದಿಂದಾಗಿ ನೀವು ಈಗಿನ ವಿಮಾ ಪಾಲಿಸಿಯನ್ನು ನವೀಕರಿಸದೆ ಇರುವ ತೀರ್ಮಾನ ಮಾಡಿದಿರಿ.



ಇಂತಹ ಪರಿಸ್ಥಿತಿಯಲ್ಲಿ ನಿಮಗೆ ಇರುವ ಬಹಳ ಅಮೂಲ್ಯವಾದ ಆಯ್ಕೆ, ಚಾಲ್ತಿಯಲ್ಲಿ ಇರುವ ಆರೋಗ್ಯ ವಿಮಾ ಪಾಲಿಸಿಯನ್ನು ಇನ್ನೊಂದು ವಿಮಾ ಕಂಪನಿಗೆ ವರ್ಗಾವಣೆ ಮಾಡಿಕೊಳ್ಳುವುದು. ಆರೋಗ್ಯ ವಿಮಾ ಪಾಲಿಸಿ ಹೊಂದಿದವರ ಹಕ್ಕುಗಳನ್ನು ಗುರುತಿಸಿ, ಪಾಲಿಸಿಯ ನವೀಕರಣದ ಸಂದರ್ಭದಲ್ಲಿ ಅದನ್ನು ಒಂದು ಕಂಪನಿಯಿಂದ ಇನ್ನೊಂದು ಕಂಪನಿಗೆ ವರ್ಗಾಯಿಸಿಕೊಳ್ಳುವ ಸೌಲಭ್ಯವನ್ನು ಐಆರ್‌ಡಿಎಐ ಕಲ್ಪಿಸಿದೆ. ಪಾಲಿಸಿಯನ್ನು ಪೋರ್ಟ್ ಮಾಡಿಕೊಳ್ಳುವುದು, ಅಂದರೆ ಒಂದು ಕಂಪನಿಯಿಂದ ಇನ್ನೊಂದು ಕಂಪನಿಗೆ ವರ್ಗಾವಣೆ ಮಾಡಿಕೊಳ್ಳುವುದರಲ್ಲಿ ಹಲವು ಅನುಕೂಲಗಳಿವೆ. ಹೀಗೆ ಮಾಡುವುದರಿಂದ ಸೌಲಭ್ಯಗಳ ಮುಂದುವರಿಕೆ ಇರುತ್ತದೆ. ಇದೇ ಸಂದರ್ಭದಲ್ಲಿ ಹೊಸ ಕಂಪನಿಯ ಹಾಗೂ ಹೊಸ ವಿಮಾ ಯೋಜನೆಯ ಪ್ರಯೋಜನಗಳೂ ಲಭ್ಯವಾಗುತ್ತವೆ.

ಪೋರ್ಟ್ ಮಾಡಲು ಇವೆಲ್ಲ ಬೇಕು

● **ನಿಮ್ಮ ಅಗತ್ಯಗಳಿಗೆ ಅತ್ಯಂತ ಹೆಚ್ಚು ಸೂಕ್ತವೆನಿಸುವ ವಿಮಾ ಕಂಪನಿಯನ್ನು ಆಯ್ಕೆ ಮಾಡಿಕೊಳ್ಳಿ:** ಕಾಲ ಕಳೆದಂತೆಲ್ಲ, ಚಾಲ್ತಿಯಲ್ಲಿರುವ ನಿಮ್ಮ ಆರೋಗ್ಯ ವಿಮೆಯು ನಿಮ್ಮ ಅಗತ್ಯಗಳಿಗೆ ಸರಿಹೊಂದದಂತೆ ಆಗಬಹುದು. ಬಹುಶಃ, ಅಗತ್ಯ ಪ್ರಮಾಣದಲ್ಲಿ ವಿಮಾ ರಕ್ಷೆ ಇಲ್ಲದೆಯೂ ಹೆಚ್ಚಿನ ಪ್ರೀಮಿಯಂ ಪಾವತಿಸುವ ಸಂದರ್ಭ ಸೃಷ್ಟಿಯಾಗಬಹುದು. ಚಾಲ್ತಿಯಲ್ಲಿರುವ ವಿಮಾ ಪಾಲಿಸಿಯನ್ನು ಒದಗಿಸಿರುವ ಕಂಪನಿಯಲ್ಲಿ ಕ್ಲೇಮ್ ಪ್ರಕ್ರಿಯೆಯು ಬಹಳ ಸಂಕೀರ್ಣವಾಗಿರಬಹುದು, ವಿಮೆಯನ್ನು ಪಡೆದವರಿಗೆ ನೆರವು ಒದಗಿಸುವ ವ್ಯವಸ್ಥೆಯು ಅಲ್ಲಿ ಸಮರ್ಪಕವಾಗಿಲ್ಲದಿರಬಹುದು. ಅಥವಾ ಇನ್ನೊಂದು ಕಂಪನಿಯು ಹೆಚ್ಚು ಉತ್ತಮವಾದ ಸೌಲಭ್ಯವನ್ನು ಒದಗಿಸುತ್ತಿದೆ ಎಂದು ನಿಮಗೆ ಅನ್ನಿಸಬಹುದು.

ಬೇರೆ ಬೇರೆ ಕಂಪನಿಗಳು ನೀಡುತ್ತಿರುವ ಆರೋಗ್ಯ ವಿಮಾ ಪಾಲಿಸಿಗಳಲ್ಲಿ ಇರುವ ಸೌಲಭ್ಯಗಳ ಬಗ್ಗೆ ಆನ್‌ಲೈನ್ ಮೂಲಕ ತಿಳಿದುಕೊಳ್ಳಿ. ಬೇರೆ ಬೇರೆ ಪಾಲಿಸಿಗಳನ್ನು ಜಾಗರೂಕವಾಗಿ ತುಲನೆ ಮಾಡಿ, ನಿಮ್ಮ ಅಗತ್ಯಗಳಿಗೆ ಹೆಚ್ಚು ಸೂಕ್ತವಾಗುವ ವಿಮೆಯನ್ನು ಆಯ್ಕೆ ಮಾಡಿಕೊಳ್ಳಿ.

● **ಹಳೆಯ ಕಂಪನಿಗೆ ಮಾಹಿತಿ ಕೊಡಿ:** ಆರೋಗ್ಯ ವಿಮಾ ಪಾಲಿಸಿಯನ್ನು ಬೇರೊಂದು ಕಂಪನಿಗೆ ವರ್ಗಾಯಿಸಿಕೊಳ್ಳುವ ತೀರ್ಮಾನ ತೆಗೆದುಕೊಂಡ ನಂತರದಲ್ಲಿ, ನೀವು ಪ್ರಸ್ತುತ ಪಾಲಿಸಿ ಸೌಲಭ್ಯ ಪಡೆದಿರುವ ಕಂಪನಿಗೆ ಅದರ ಬಗ್ಗೆ ಮಾಹಿತಿ ನೀಡಬೇಕಾಗುತ್ತದೆ. ಚಾಲ್ತಿಯಲ್ಲಿರುವ ಪಾಲಿಸಿಯ ನವೀಕರಣದ ದಿನಾಂಕಕ್ಕೆ 45 ದಿನಗಳ ಮೊದಲು ಆ ಬಗ್ಗೆ ಮಾಹಿತಿ ಒದಗಿಸಬೇಕಾಗುತ್ತದೆ. ಹೀಗೆ 45 ದಿನಗಳ ಸಮಯಾವಕಾಶ ನೀಡುವುದರಿಂದ ನಿಮ್ಮ ಅರ್ಜಿಯನ್ನು ಸ್ವೀಕರಿಸಿ, ಪೋರ್ಟ್ ಮನವಿಯನ್ನು ಪರಿಶೀಲಿಸಲು ಹೊಸ ವಿಮಾ ಕಂಪನಿಗೆ ಅಗತ್ಯ ಸಮಯ ಸಿಗುತ್ತದೆ. ನಿಮಗೆ ಹಾಲಿ ಆರೋಗ್ಯ ವಿಮಾ ಸೌಲಭ್ಯ ನೀಡಿರುವ ಕಂಪನಿಗೆ ನಿಮ್ಮ ಪಾಲಿಸಿಯ ಮಾಹಿತಿಯನ್ನು ಹೊಸ ಕಂಪನಿಯ ಜೊತೆ ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಪೋರ್ಟ್ ಮಾಡುವ ಕುರಿತ ಮಾಹಿತಿಯನ್ನು ಇಮೇಲ್ ಅಥವಾ ಪತ್ರದ ಮೂಲಕ ತಿಳಿಸಬೇಕು.

ಆರೋಗ್ಯ ವಿಮೆಯ ವರ್ಗಾವಣೆ ಅಂದರೇನು?

ಆರೋಗ್ಯ ವಿಮಾ ಪಾಲಿಸಿಯನ್ನು ಒಂದು ಕಂಪನಿಯಿಂದ ಇನ್ನೊಂದು ಕಂಪನಿಗೆ ವರ್ಗಾವಣೆ ಮಾಡಿಕೊಳ್ಳುವ ಅವಕಾಶವನ್ನು ಐಆರ್‌ಡಿಎಐ ನೀಡಿದೆ. ಈ ಸೌಲಭ್ಯವನ್ನು ಬಳಸಿಕೊಳ್ಳುವವರು ತಾವು ಅದಾಗಲೇ ಒಗ್ಗೂಡಿಸಿಕೊಂಡಿರುವ ವಿವಿಧ ಅನುಕೂಲಗಳನ್ನು ಬಿಟ್ಟುಕೊಡದೆ, ಇನ್ನೊಂದು ಕಂಪನಿಯ ಪಾಲಿಸಿಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಅಂದರೆ, ಆರೋಗ್ಯ ವಿಮಾ ಪಾಲಿಸಿಯನ್ನು ವರ್ಗಾಯಿಸಿಕೊಳ್ಳುವ ಅವಕಾಶ ಬಳಸಿಕೊಳ್ಳುವವರು ತಾವು ಒಗ್ಗೂಡಿಸಿಕೊಂಡಿರುವ 'ನೋ ಕ್ಲೇಮ್ ಬೋನಸ್' (ಎನ್‌ಸಿಬಿ) ಕಳೆದುಕೊಳ್ಳಬೇಕಾಗಿಲ್ಲ. ಇನ್ನೊಂದು ಕಂಪನಿಗೆ ಪಾಲಿಸಿ ವರ್ಗಾವಣೆ ಮಾಡಿಕೊಂಡಾಗ ಹೊಸದಾಗಿ 'ಕಾಯುವಿಕೆ ಅವಧಿ' ಇರುವುದಿಲ್ಲ.

● **ಹೊಸ ಕಂಪನಿಗೆ ಪೋರ್ಟಿಂಗ್ ಅರ್ಜಿ:** ಹೊಸ ಕಂಪನಿಯನ್ನು ಆಯ್ಕೆ ಮಾಡಿದ ನಂತರದಲ್ಲಿ, ಪೋರ್ಟ್ ಆಗುವುದಕ್ಕೆ ಸಂಬಂಧಿಸಿದ ಅರ್ಜಿ ಸಲ್ಲಿಸುವ ಪ್ರಕ್ರಿಯೆಯ ಕಡೆ ಮುಂದಡಿ ಇರಿಸಬಹುದು. ಇದರ ಭಾಗವಾಗಿ ಹೊಸ ಅರ್ಜಿಯೊಂದನ್ನು ಭರ್ತಿ ಮಾಡಿ, ಅದನ್ನು ಸಂಬಂಧಪಟ್ಟ ಕಂಪನಿಗೆ ಸಲ್ಲಿಸಬೇಕು. ಹೊಸ ಕಂಪನಿಯು ನಿಮ್ಮನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬಹುದು. ಹಿಂದಿನ ವಿಮಾ ಕಂಪನಿಯ ಬಳಿ ನೀವು ಯಾವುದೇ ಕ್ಲೇಮ್ ಸಲ್ಲಿಸದೆ ಇದ್ದರೆ ಅದರ ಬಗ್ಗೆ ಹೊಸ ಕಂಪನಿಗೆ ಸ್ಪಷ್ಟವಾಗಿ ಮಾಹಿತಿ ಒದಗಿಸಬೇಕಿರುವುದು ಮಹತ್ವದ್ದು. ಹೀಗೆ ಮಾಡಿದಾಗ ಹಿಂದೆ ಇದ್ದ 'ನೋ ಕ್ಲೇಮ್ ಬೋನಸ್' ಸೌಲಭ್ಯವನ್ನು ಮುಂದುವರಿಸಿಕೊಳ್ಳಲು ಅನುಕೂಲ ಆಗುತ್ತದೆ. ಅಲ್ಲದೆ, ಪೋರ್ಟಿಂಗ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅಗತ್ಯವಿರುವ ಎಲ್ಲ ದಾಖಲೆಗಳನ್ನು, ಹೊಸ ವಿಮಾ ಕಂಪನಿಯವರು ಕೇಳುವ ಅಗತ್ಯ ದಾಖಲೆಗಳನ್ನು ಒದಗಿಸಬೇಕಾಗುತ್ತದೆ.

● **ಹೊಸ ಪಾಲಿಸಿ ಪಡೆದುಕೊಳ್ಳುವುದು:** ಅಗತ್ಯ ಎದುರಾದರೆ ವೈದ್ಯಕೀಯ ಪರೀಕ್ಷೆಗೆ ಒಳಗಾಗಿ, ಅಗತ್ಯವಿರುವ ಎಲ್ಲ ದಾಖಲೆಗಳನ್ನು ಸಲ್ಲಿಸಿದ ನಂತರದಲ್ಲಿ, ಹೊಸ ಕಂಪನಿಯು ತನ್ನ ಕಡೆಯಿಂದ ಎಲ್ಲ ಪರಿಶೀಲನೆಗಳನ್ನು ನಡೆಸುತ್ತದೆ. ಇದು ಸಾಮಾನ್ಯವಾಗಿ ಎರಡು ವಾರಗಳ ಪ್ರಕ್ರಿಯೆಯಾಗಿರುತ್ತದೆ. ಕಂಪನಿಯವರು ತಮಗೆ ಹೆಚ್ಚುವರಿಯಾಗಿ ಯಾವುದೇ ಮಾಹಿತಿ ಬೇಕು ಎಂದು ಭಾವಿಸಿದರೆ, ಅದರ ಬಗ್ಗೆ ಅರ್ಜಿದಾರರ ಬಳಿ ತಕ್ಷಣವೇ ಕೇಳುತ್ತಾರೆ. ಕಂಪನಿಯ ಕಡೆಯಿಂದ ಅನುಮೋದನೆ ಸಿಕ್ಕ ನಂತರದಲ್ಲಿ ನಿಮ್ಮ ಹೊಸ ಆರೋಗ್ಯ ವಿಮಾ ಪಾಲಿಸಿಯು ಮಂಜೂರಾಗುತ್ತದೆ.

ಹೊಸ ಪಾಲಿಸಿ ಮಂಜೂರಾದ ನಂತರದಲ್ಲಿ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸರಿಯಾಗಿ ಓದಿಕೊಳ್ಳುವುದು ಬಹಳ ಮಹತ್ವದ್ದು. ಹಾಗೆ ಓದಿದಾಗ ಮಾತ್ರ, ಹಳೆಯ ಪಾಲಿಸಿಯಲ್ಲಿನ ಸೌಲಭ್ಯಗಳು ಹೊಸ ಪಾಲಿಸಿಯಲ್ಲಿಯೂ ಮುಂದುವರಿದಿವೆಯೇ ಎಂಬದನ್ನು ಖಾತರಿಪಡಿಸಿಕೊಳ್ಳಲು ಸಾಧ್ಯ. ಹಿಂದಿನ ಪಾಲಿಸಿಯಲ್ಲಿ ಒಗ್ಗೂಡಿದ್ದ 'ನೋ ಕ್ಲೇಮ್ ಬೋನಸ್' ಮೊತ್ತವು ಸರಿಯಾಗಿ ವರ್ಗಾವಣೆ ಆಗಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಿ. ಹಾಲಿ ಇರುವ ಆರೋಗ್ಯ ಸಮಸ್ಯೆಗಳ ಬಗ್ಗೆ ಹಿಂದಿನ ಪಾಲಿಸಿಯಲ್ಲಿ ಇದ್ದ 'ಕಾಯುವಿಕೆ ಅವಧಿ'ಯು ಹೊಸ ಪಾಲಿಸಿಯಲ್ಲಿಯೂ ಮುಂದುವರಿದಿದೆಯೇ ಎಂಬುದನ್ನು ಗಮನಿಸಿ. ಹೊಸ ಪಾಲಿಸಿಯು ಮಂಜೂರಾದ ನಂತರದಲ್ಲಿ ಅದರಲ್ಲಿ ಸೌಲಭ್ಯಗಳನ್ನು ನೀವು ಯಾವ ಸಮಸ್ಯೆಗಳೂ ಇಲ್ಲದೆ ಬಳಸಿಕೊಳ್ಳಲು ಸಾಧ್ಯವಾಗಬೇಕು.

ವೈದ್ಯಕೀಯ ವೆಚ್ಚಗಳು ಹೆಚ್ಚಾಗುತ್ತಿರುವ ಈ ಕಾಲಘಟ್ಟದಲ್ಲಿ ಆರೋಗ್ಯ ವಿಮೆಯನ್ನು ಹೊಂದಿರುವುದು ಅತ್ಯಗತ್ಯ. ಆರೋಗ್ಯ ವಿಮೆ ಬೇಡ ಎನ್ನಲು ವಾಸ್ತವದಲ್ಲಿ ಅವಕಾಶವೇ ಇಲ್ಲ. ತಾವು ಏನನ್ನೇ ಖರೀದಿಸಿದರೂ ಅದು ತಮ್ಮ ನಿರೀಕ್ಷೆ ಮೀರಿ ಚೆನ್ನಾಗಿರಲಿ ಎಂದು ಗ್ರಾಹಕರು ಬಯಸುತ್ತಾರೆ. ಆರೋಗ್ಯ ವಿಮೆಗೂ ಇದೇ ಮಾತು ಅನ್ವಯ. ಆರೋಗ್ಯ ವಿಮೆಯು ಅದನ್ನು ಪಡೆದಾತನ ನಿರೀಕ್ಷೆಗಿಂತ ಹೆಚ್ಚು ಚೆನ್ನಾಗಿರಬೇಕು. ಇಂದು ಹಲವು ಕಂಪನಿಗಳು ಆರೋಗ್ಯಸೇವಾ ವೆಚ್ಚಗಳನ್ನು ಭರಿಸುವುದರ ಜೊತೆಯಲ್ಲೇ, ಸಮಗ್ರ ಆರೋಗ್ಯ–ಆರೈಕೆ ಸೇವೆಗಳ ವೆಚ್ಚಗಳನ್ನೂ ಒಳಗೊಳ್ಳುತ್ತಿವೆ. ಈ ರೀತಿ ಎಲ್ಲ ಬಗೆಯ ವೆಚ್ಚಗಳನ್ನೂ ಒಳಗೊಳ್ಳುವ ಆರೋಗ್ಯ ವಿಮೆಗಳು ನಿಮ್ಮ ಅಗತ್ಯಗಳಿಗೆ ಹೆಚ್ಚು ಸೂಕ್ತವಾಗಬಹುದು.

ಬೇರೆ ಕಂಪನಿಗಳು ಹೆಚ್ಚು ಉತ್ತಮವಾದ ವಿಮಾ ಯೋಜನೆಗಳನ್ನು ಹೊಂದಿವೆ ಎಂದು ನಿಮಗೆ ಅನ್ನಿಸಿದರೆ, ಪೋರ್ಟ್ ಮಾಡುವ ಬಗ್ಗೆ ಆಲೋಚಿಸಿ. ನೀವು ಈಗಾಗಲೇ ಪಾವತಿ ಮಾಡಿರುವ ಪ್ರೀಮಿಯಂ ಮೊತ್ತಕ್ಕೆ ಪ್ರತಿಯಾಗಿ ಪಡೆದ ಪ್ರಯೋಜನಗಳು ನಷ್ಟವಾಗುವುದಿಲ್ಲ ಎಂಬುದು ನೆನಪಿನಲ್ಲಿರಲಿ.

ಲೇಖಕ ಡಿಜಿಟ್ ಇನ್ಶೂರೆನ್ಸ್ ಕಂಪನಿಯ ಹಿರಿಯ ಅಧಿಕಾರಿ (Appointed Actuary)

2025: ವರ್ಷವೊಂದು, ಗಳಿಕೆ ಎಷ್ಟು?



ನಿಫ್ಟಿ–50 ಸೂಚ್ಯಂಕವು 2026ರ ಡಿಸೆಂಬರ್‌ಗೆ 29,150ಕ್ಕೆ ತಲುಪಬಹುದು ಎಂದು ಅಂದಾಜು ಮಾಡುತ್ತಿದ್ದೇವೆ. ಅಂದರೆ 2026ರ ಕ್ಯಾಲೆಂಡರ್ ವರ್ಷದಲ್ಲಿ ನಿಫ್ಟಿ–50 ಶೇ 12ರಷ್ಟು ಲಾಭ ತಂದುಕೊಡಬಹುದು. ಹಣದುಬ್ಬರ ಕಡಿಮೆ ಮಟ್ಟದಲ್ಲಿರುವುದು, ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿರುವುದು ಕಂಪನಿಗಳ ವರಮಾನ ಹೆಚ್ಚಳ ಆಗಬಹುದು ಎಂಬುದನ್ನು ಸೂಚಿಸುತ್ತಿವೆ.

ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ 'ಇಂಡಿಯಾ ಮಾರ್ಕೆಟ್ ಸ್ಟ್ರ್ಯಾಟಜಿ – 2026' ವರದಿ



(ಬೆಂಗಳೂರಿನಲ್ಲಿ 24 ಕ್ಯಾರಟ್ ಪರಿಶುದ್ಧತೆಯ ಚಿನ್ನದ ದರ)



ಬೆಂಗಳೂರಿನ ದರ

ಝೈಡಸ್ ವೆಲ್‌ನೆಸ್

ಬ್ರೋಕರೇಜ್ ಮಾತು

ಪೌಷ್ಟಿಕ ಆಹಾರ ಉತ್ಪನ್ನಗಳನ್ನು ತಯಾರಿಸುವ ಝೈಡಸ್ ವೆಲ್‌ನೆಸ್ ಕಂಪನಿಯ ಷೇರಿನ ಮೌಲ್ಯ ₹575 ಆಗಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಕಂಪನಿಯು ₹4 ಸಾವಿರ ಕೋಟಿ ವರಮಾನ ಹೊಂದಿದೆ. ಗ್ಲುಕೋಸ್ ಪುಡಿ, ಚರ್ಮದ ಆರೈಕೆ ಉತ್ಪನ್ನಗಳು, ಆರೋಗ್ಯ ವರ್ಧಕ ಆಹಾರ ಉತ್ಪನ್ನಗಳು, ಪೌಷ್ಟಿಕ ಪೇಯಗಳು ಸೇರಿದಂತೆ ವಿವಿಧ ಉತ್ಪನ್ನಗಳನ್ನು ಸಿದ್ಧಪಡಿಸುತ್ತದೆ.

ಕಂಪನಿಯು ಇತ್ತೀಚೆಗೆ 'ನ್ಯಾಚುರೆಲ್' ಮತ್ತು 'ಕಂಫರ್ಟ್ ಕ್ಲಿಕ್' ಕಂಪನಿಗಳನ್ನು ಸ್ವಾಧೀನಪಡಿಸಿಕೊಂಡಿದೆ. ಇದು ಕಂಪನಿಯ ಉತ್ಪಾದನಾ ವಿಭಾಗವನ್ನು ಬಲಪಡಿಸಲಿದೆ.

ಶುಗರ್ ಫ್ರೀ ಗ್ರೀನ್, ಗ್ಲುಕೋನ್–ಡಿ ಆ್ಯಕ್ಟಿವರ್ಸ್ ಆರ್‌ಟಿಡಿ ಮತ್ತು ಇಮ್ಯುನೊವ್ರೋಲ್ಟ್ ಉತ್ಪನ್ನಗಳ ಮೂಲಕ ಕಂಪನಿ ತನ್ನ ಉತ್ಪಾದನಾ ವಿಭಾಗವನ್ನು ವಿಸ್ತರಿಸಿಕೊಳ್ಳುತ್ತಿದ್ದು, ಗ್ರಾಹಕರನ್ನು ಹೆಚ್ಚಿಸಿಕೊಳ್ಳುತ್ತಿದೆ. ಕಂಪನಿಯು 1,950ಕ್ಕೂ ಹೆಚ್ಚು ವಿತರಕರು, 2,800 ಮಾರಾಟಗಾರರು, 25 ಗೋದಾಮುಗಳನ್ನು ಹೊಂದಿದೆ.

ಕಂಪನಿಯ ತೆರಿಗೆ, ಬಡ್ಡಿ, ಸಾಲ ತೀರುವಳಿ (ಇಬಿಐಟಿಡಿಎ) ಸಂಯುಕ್ತ ವಾರ್ಷಿಕ ಬೆಳವಣಿಗೆ ದರ ಶೇ 14ರಷ್ಟು ಎಂದು ಮೋತಿಲಾಲ್ ಓಸ್ವಾಲ್ ಹೇಳಿದೆ. ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಬೆಲೆ ₹454 ರಷ್ಟಾಗಿತ್ತು.

(ಬ್ರೋಕರೇಜ್ ಸಂಸ್ಥೆಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾ ರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

I. Four alternatives are given for each of the following questions/incomplete statements. Only one of them is correct or most appropriate. Choose the correct alternative and write the complete answer along with its letter of alphabet.

1) Choose the appropriate question tag and fill in the blank :

(a) Students shouted in the classroom
(A) don't they ? (B) do they?
(C) didn't they? (D) diad they

Ans:- (C) didn't they?

(b) She never comes to school late, ...
(A) doesn't she ? (B) didn't she ?
(C) does she ? (D) did she ?

Ans. :(C) does she ?

2) Read the following and choose the infinitive
We sent a surveyor to survey your land so a make a deed
(A) sent (B) survey
(C) make (D) to survey

Ans:- (D) to survey

3)(a) Read the given convers choose the language function underlined sentence:

Sanjay : Good morning madam, ***Can I go home an hour early today***?
Teacher: Why? What happned?
Sanjay: My Sister is not well. I've to take her to the hospital.
Teacher: Okay, you can go
a) Asking,
b) Asking permission.
c) Making suggestion.
d) Offering help.

Ans: (b) Asking permission.

(b) **Mamaj**: Hi, Nirmalla. How are you?
Nirmale: Hello, I'm fine, thank you..
Mamay: Would you please give me your science record book?
Nirmala: Sure. I will give it to you
(A) Agreeing (B) Requestting
(C) Seeking direction (D) Offering help

Ans:- (B) Requestting

4) (a) Read the conversation and fill in the blank with correct 'If clause' choosing from the given alternatives :

Vandana : You are still here ! did you miss the bus?
Aishwarya: Yes. by the time I reached the bus stop it was already 7:40 !
Vandana: Oh! if you had started early, you .... missed the bus.
a) would have b) wouldn't have
c) should have d) shouldn't have

Ans:-(b) wouldn't have

(b) Read the following conversation and fill in the blank choosing the most appropriate words

Student: Good morning Sir
Teacher: Good morning. Why are you late?
Student: Sorry siz I couldn't catch the bus
Teacher: If you had reached the bus stop in time, you missed the bus.
(A) will have (B) would harve
(C) wouldn't have (D) shall have

Ans:- (C) wouldn't have

4) Read the conversation and choose the correct infinitive :

Meghana : Hi Arati, will you come with me to the market? I want to buy vegetables.
Arati : Sure. Shall we go by bus?
Meghana : No. Let's take an auto.
a) take b) come
c) to buy d) go

Ans:- (c) to buy

II. Do as directed:

1. Which one of the following words has one syllable?
cleaning, clear, calm, cleaner

Ans:- clear/ calm

2. Fill in the blank with appropriate tense forms of the verbs given in brackets:
Prajwal ....(be+study) in a government high school.

Ans:- is studying

3. Fill in the blank with appropriate 'preposition':
Raghav is a teacher. He works hard ....the welfare of his students.

Ans:- for

4. Fill in the blank using suitable linker:
.............he was ill, Kiran completed his work.

Ans:- Though

5. Fill in the blanks choosing the appropriate words given in the brackets:
The .... (whether, weather) looked so unpredictable that we did not know ....(weather, whether) to carry the umbrella or not.

Ans:- The **weather** (whether, weather) looked so unpredictable that we did not know **whether** (weather, whether) to carry the umbrella or not.

6. Combine the word in column 'A' with its collective word in column 'B' :

A	B
.............Street	(road, Park, light, avenue)

Ans:- Park

ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Chemistry

REVISION : MODEL QUESTIONS

Multiple Choice Questions

1) Incorrect statement regarding vitamins,
a) Excess vitamin intake is harmful
b) Most of the vitamins contain amino groups
c) Vitamins can be produced by plants
d) Vitamin deficiency causes diseases

Ans: b) Most of the vitamins contain amino groups

2) Glycine is an optically inactive α-amino acid due to
a) presence of asymmetric carbon atom
b) absence of asymmetric carbon atom
c) α-carbon attached to 4 different groups
d) its acidic nature

Ans:- D

3) The role of CO2 in Kolbe's reaction is.........
a) acts as catalyst b) act as nucleophile
c) act as weak electrophile
d) act as strong electrophile.

Ans:- C

4) Camphor in nitrogen gas, is an example of ____________.
a) liquid Solutions b) solid Solutions
c) gaseous Solutions d) aqueous solution

Ans:(c) gaseous Solutions

5) **Statement I**: Enantiomers are non-superimposable mirror images on each other.
Statement II: A racemic mixture shows zero optical rotation.

Identify the correct statement
a) Both statement I and II are correct
b) Both statement I and II are incorrect
c) Statement I is correct and statement II is incorrect.
d) Statement I is incorrect and statement II is correct

Ans:- (a) Both statement I and II are correct

6) Which of the following is not a subdivision of structural isomerism?
a) Coordination isomerism
b) Linkage isomerism
c) Ionisation isomerism
d) Geometrical isomerism

Ans: (d) Geometrical isomerism

7) Which of the reactions below can result in ketones?
a) Oxidation of primary alcohols
b) Oxidation of secondary alcohols
c) Dehydrogenation of tertiary alcohols
d) Dehydrogenation of primary alcohols

Ans: b
Expln: Ketones are formed when secondary alcohols are oxidised and dehydrogenated. Aldehydes are produced by the same processes with primary alcohols.

8)The geometry and magnetic behaviour of the complex [Ni(CO)4] are
(a) Square planar and paramagnetic
(b) Tetrahedral and diamagnetic
(c) Square planar and diamagnetic
(d) Tetrahedral and paramagnetic

Ans:- (b) Tetrahedral and diamagnetic

9) When compared to ΔT_f-value of a 0.01M glucose solution, the ΔT_f - value of 0.01M $MgCl_2$ solution
a) increases about three times
b) increases about six times
c) increases about ten times
d) remains same

Ans: (a) increases about three times

10) The volume occupied by a single gas in a mixture at the same temperature and pressure is referred to as the single-gas volume.
a) Absolute volume b) Partial volume
c) Total volume of a gas mixture
d) None of the mentioned

Ans: b
Expln: At the same temperature and pressure, the volume occupied by a single gas alone in a combination is a portion of a volume.

11) When acetamide is converted to methylamine, what is the name of the reaction?
a) Friedel-Craft's reaction
b) Hofmann reaction
c) Hoffmann bromamide degradation reaction
d) Hinsberg reaction

Ans: c
Expln: When bromine is added to an amide in an aqueous or ethanolic sodium hydroxide solution, the amide degrades, resulting in the creation of primary amine. Hoffmann bromamide degradation reaction is a reaction that involves the degradation of an amide.

12) Which of the following assertions about the main cell is correct?
a) An example of a primary cell is a mercury cell
b) An example of a primary cell is a nickel-cadmium storage cell
c) The electrode reactions can be reversed
d) It can be recharged

Ans: a
Expln: A primary cell is one in which the electrode reactions only happen once and cannot be reversed with electrical energy. As a result, primary cells are unable to be recharged. A main cell, such as a mercury cell, is different from a secondary cell, such as a nickel-cadmium storage cell.

ಎ.ಸಿ ಕೋರ್ಟ್ ಕಲಾಪ: ನೇರ ಪ್ರಸಾರ

ಆನ್‌ಲೈನ್ ಮೂಲಕ ಭೂ ವ್ಯಾಜ್ಯಗಳಿಗೆ ಸಂಬಂಧಿಸಿದ ಕಲಾಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಉಪ ವಿಭಾಗಾಧಿಕಾರಿಗಳ (ಎ.ಸಿ) ನ್ಯಾಯಾಲಯಗಳಲ್ಲಿ ನಡೆಯುವ ಕಲಾಪಗಳನ್ನು ಆನ್‌ಲೈನ್ ಮೂಲಕ ನಡೆಸಲು ಕಂದಾಯ ಇಲಾಖೆ ಮುಂದಾಗಿದೆ. ಪ್ರಾಯೋಗಿಕವಾಗಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಈ ವ್ಯವಸ್ಥೆ ಜಾರಿಗೆ ಬರಲಿದೆ.

ಕಂದಾಯ ನ್ಯಾಯಾಲಯಗಳ ಕಾರ್ಯವೈಖರಿಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಈ ಹೆಜ್ಜೆ ಇಟ್ಟಿರುವ ಇಲಾಖೆ, ವಾದಿ-ಪ್ರತಿವಾದಿಗಳು ಮನೆಯಲ್ಲಿಯೇ ಕುಳಿತು ತಮ್ಮ ಪ್ರಕರಣಗಳ ವಿಚಾರಣೆಯಲ್ಲಿ ಭಾಗವಹಿಸಬಹುದು. ನ್ಯಾಯಾಲಯದ ಕಲಾಪಗಳ 'ಲೈವ್ ಸ್ಟ್ರೀಮಿಂಗ್' ಆಗಲಿದೆ.

'ಕಂದಾಯ ನ್ಯಾಯಾಲಯಗಳನ್ನು ಹೇಗೆ ನಡೆಸಬೇಕೆಂದು ಯಾವುದೇ ನಿಯಮಗಳು ಇರಲಿಲ್ಲ. ಹೀಗಾಗಿ, ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಆದೇಶಗಳನ್ನು ಹೊರಡಿಸಿರುವ ಉದಾಹರಣೆಗಳು ಸಾಕಷ್ಟಿವೆ. ಕಂದಾಯ ನ್ಯಾಯಾಲಯಗಳನ್ನು ಜನಸ್ನೇಹಿಗೊಳಿಸುವ ಜೊತೆಗೆ, ನ್ಯಾಯಿಕ ತೀರ್ಮಾನಗಳನ್ನು ಪಾರದರ್ಶಕಗೊಳಿಸಬೇಕೆಂಬ ಕಾರಣಕ್ಕೆ ಹೊಸ ವ್ಯವಸ್ಥೆ ಅಳವಡಿಸಿಕೊಳ್ಳಲು ಉದ್ದೇಶಿಸಲಾಗಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.


ಕೃಷ್ಣ ಬೈರೇಗೌಡ

'ಕಂದಾಯ ನ್ಯಾಯಾಲಯಗಳಲ್ಲಿ ರೆವಿನ್ಯೂ ಕೋರ್ಟ್ ಕೇಸ್ ಮಾನಿಟರಿಂಗ್ ಸಿಸ್ಟಂ (ಆರ್‌ಸಿಸಿಎಂಎಸ್) ತಂತ್ರಾಂಶ ಸೇರಿದಂತೆ ಡಿಜಿಟಲೀಕರಣದ ಮೂಲಕ ಆದೇಶಗಳನ್ನು ನೀಡುವ ವ್ಯವಸ್ಥೆಗೆ ಈಗಾಗಲೇ ಚಾಲನೆ ನೀಡಲಾಗಿದೆ. ಸರ್ಕಾರಿ ಕಚೇರಿಗಳಿಗೆ ಜನರು ಅಲೆಯುವುದನ್ನು ತಪ್ಪಿಸಬೇಕೆಂಬ ಉದ್ದೇಶದಿಂದಲೇ 'ಇ-ಆಡಳಿತ'ಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಇದೀಗ ಕಲಾಪಗಳನ್ನು ಆನ್‌ಲೈನ್ ಮೂಲಕ ನಡೆಸುವ ವ್ಯವಸ್ಥೆ ಮಾಡಲಾಗುತ್ತಿದೆ' ಎಂದಿದ್ದಾರೆ.

'ನ್ಯಾಯಾಲಯ ಕಲಾಪಗಳ ನೇರ ಪ್ರಸಾರ ಮತ್ತು ವಿಡಿಯೊ ಸಂವಾದ ಪಾರದರ್ಶಕತೆ, ಶಿಸ್ತು ಮತ್ತು ಕಂದಾಯ ನ್ಯಾಯಾಲಯಗಳಲ್ಲಿನ ದುಷ್ಕೃತ್ಯದ ಆರೋಪಗಳಿಗೆ ಕಡಿವಾಣ ಹಾಕಲಿದೆ. ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಸರಳೀಕರಿಸಲು ಮತ್ತು ಸಾರ್ವಜನಿಕ ಸೇವೆಗಳನ್ನು ನಾಗರಿಕ ಸ್ನೇಹಿ ಮತ್ತು ಜವಾಬ್ದಾರಿಯುತ ರೀತಿಯಲ್ಲಿ ತಲುಪಿಸುವ ಉದ್ದೇಶದ ಈ ವ್ಯವಸ್ಥೆಗೆ, ಜನರು ವ್ಯಕ್ತಪಡಿಸುವ ಪ್ರತಿಕ್ರಿಯೆ ಪರಿಗಣಿಸಿ ಹಂತ ಹಂತವಾಗಿ ವಿಸ್ತರಿಸಲಾಗುವುದು' ಎಂದಿದ್ದಾರೆ.

'ಜನ-ಕೇಂದ್ರಿತ ಆಡಳಿತದತ್ತ ಹೆಜ್ಜೆ'

'ಹೊಸ ವ್ಯವಸ್ಥೆಯು ಜನ-ಕೇಂದ್ರಿತ ಆಡಳಿತ ಮತ್ತು ಪಾರದರ್ಶಕ ಆಡಳಿತದ ಕಡೆಗಿನ ಮಹತ್ವದ ಹೆಜ್ಜೆ. ಕಂದಾಯ ನ್ಯಾಯಾಲಯದ ವಿಚಾರಣೆಗಳ ನೇರ ಪ್ರಸಾರವನ್ನು ಪ್ರಾಯೋಗಿಕವಾಗಿ ಆರಂಭಿಸಲು ಆದೇಶ ಹೊರಡಿಸಲಾಗಿದೆ. ಪ್ರಕರಣಗಳ ಅರ್ಜಿದಾರರು ಮತ್ತು ಪ್ರತಿವಾದಿಗಳು ನ್ಯಾಯಾಲಯದ ವಿಚಾರಣೆಗಳನ್ನು ಆನ್‌ಲೈನ್‌ನಲ್ಲಿ ವೀಕ್ಷಿಸಲು ಮತ್ತು ವಿಡಿಯೊ ಸಂವಾದದ ಮೂಲಕ ಭಾಗವಹಿಸಲು ಸಾಧ್ಯವಾಗುತ್ತದೆ. ಇದು ಕಂದಾಯ ಇಲಾಖೆಯ ಕಚೇರಿಗಳಿಗೆ ಜನರು ಪದೇ ಪದೇ ಓಡಾಡುವ ಅಗತ್ಯವನ್ನು ಕಡಿಮೆ ಮಾಡುತ್ತದೆ. ಈ ಕ್ರಮವು ಸರ್ಕಾರ ಮತ್ತು ನಾಗರಿಕರ ನಡುವೆ ವಿಶ್ವಾಸವನ್ನು ಬಲಪಡಿಸುವ ಗುರಿ ಹೊಂದಿದೆ' ಎಂದು ಕೃಷ್ಣ ಬೈರೇಗೌಡ ವಿವರಿಸಿದ್ದಾರೆ.

ಹೊಸ ವ್ಯವಸ್ಥೆಯಿಂದ ಲಾಭವೇನು?

- ಕಂದಾಯ ನ್ಯಾಯಾಲಯದ ವಿಚಾರಣೆಗೆ ಕಚೇರಿಗೆ ಅಲೆಯುವುದು ತಪ್ಪಲಿದೆ
- ಕಕ್ಷಿದಾರರು ವಿಡಿಯೊ ಸಂವಾದ ಮೂಲಕ ವಿಚಾರಣೆಯಲ್ಲಿ ಭಾಗವಹಿಸಬಹುದು
- ಕಲಾಪಗಳ ನೇರ ಪ್ರಸಾರ ಇರುವುದರಿಂದ ನೀಡುವ ಆದೇಶ ಬಹಿರಂಗ ಆಗಲಿದೆ
- ನ್ಯಾಯಾಲಯಗಳಲ್ಲಿ ದುಷ್ಕೃತ್ಯ ನಡೆಯುತ್ತಿದೆ ಎಂಬ ಆರೋಪಗಳಿಗೆ ಕಡಿವಾಣ

ಧಾರವಾಡದ ಮಲ್ಲಿಕಾರ್ಜುನ ಮನಸೂರ ಟ್ರಸ್ಟ್ ಬುಧವಾರ ಆಯೋಜಿಸಿದ್ದ ಮಲ್ಲಿಕಾರ್ಜುನ ಮನಸೂರ ಅವರ ಜನ್ಮದಿನೋತ್ಸವದಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದೆ ಪುಣೆಯ ಅಲಕಾ ದೇವ್ ಮಾರುಲ್ಕರ್ ಅವರಿಗೆ ರಾಷ್ಟ್ರೀಯ ಪ್ರಶಸ್ತಿ, ಗದಗಿನ ತಬಲಾ ವಾದಕ ನಾಗಲಿಂಗ ಮುರಗಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಗಾಯಕ ಹರೀಶ ಹೆಗಡೆ ಅವರಿಗೆ ರಾಷ್ಟ್ರೀಯ ಯುವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕ ಕುಮಾರ ಬೆಕ್ಕೇರಿ, ಕಲಾವಿದೆ ನೀಲಾ ಎಂ.ಕೊಡ್ಲಿ, ಟ್ರಸ್ಟ್ ಸದಸ್ಯೆ ಅಕ್ಕಮಹಾದೇವಿ, ಅಧ್ಯಕ್ಷ ಎಂ.ವೆಂಕಟೇಶಕುಮಾರ, ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ, ಅಥಣಿಯ ಮುರುಗೇಂದ್ರ ಶಿವಯೋಗಿ ಮಠದ ಸಿದ್ಧಲಿಂಗ ಸ್ವಾಮೀಜಿ, ಕಲಾವಿದ ಶಫಿ ಖಾನ್ ಪಾಲ್ಗೊಂಡಿದ್ದರು

ಸರ್ಕಾರದ ಕೈಗೆ ಕೋವಿಡ್ ವರದಿ

ಒಂದನೇ ಪುಟದಿಂದ...

ಲಾಕ್‌ಡೌನ್ ಆರಂಭವಾದ ದಿನದಿಂದ 2022ರ ಡಿಸೆಂಬರ್ 31ರವರೆಗಿನ ಅವಧಿಯಲ್ಲಿನ ಆರೋಪ, ನಿಯಮ ಉಲ್ಲಂಘನೆ, ಲೋಪಗಳ ಕುರಿತು ತನಿಖೆ ನಡೆಸುವಂತೆ ಆಯೋಗಕ್ಕೆ ಸೂಚಿಸಲಾಗಿತ್ತು. ಆಯೋಗವು 1,722 ಪುಟಗಳ ತನ್ನ ಮೊದಲ ತನಿಖಾ ವರದಿಯನ್ನು 2024ರ ಸೆಪ್ಟೆಂಬರ್‌ನಲ್ಲಿ ಸಲ್ಲಿಸಿತ್ತು. ₹3,741.36 ಕೋಟಿ ಮೊತ್ತದ ಖರೀದಿಯಲ್ಲಿ ₹769 ಕೋಟಿಯ ಅವ್ಯವಹಾರ ನಡೆದಿರುವುದನ್ನು ಆಯೋಗವು ಪತ್ತೆ ಮಾಡಿತ್ತು.

ಎರಡನೇ ಮಧ್ಯಂತರ ವರದಿ: ಆಯೋಗ ಎರಡನೇ ಮಧ್ಯಂತರ ವರದಿಯನ್ನು 2025ನೇ ಏಪ್ರಿಲ್‌ನಲ್ಲಿ ಸಲ್ಲಿಸಿತ್ತು.

ಈ ವರದಿಯು 1,808 ಪುಟಗಳ ಏಳು ಸಂಪುಟಗಳನ್ನು ಒಳಗೊಂಡಿತ್ತು. ಅದರಲ್ಲಿನ ನಾಲ್ಕು ಸಂಪುಟಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ನಡೆದ ಹಗರಣಗಳ ಮಾಹಿತಿಯನ್ನು ಒಳಗೊಂಡಿದ್ದವು. ಬಿಬಿಎಂಪಿ ವ್ಯಾಪ್ತಿಯ ಬೊಮ್ಮನಹಳ್ಳಿ ವಲಯ, ದಕ್ಷಿಣ ವಲಯ, ಪಶ್ಚಿಮ ವಲಯ, ಯಲಹಂಕ ವಲಯಗಳ ಹಗರಣಗಳಿಗೆ ಸಂಬಂಧಪಟ್ಟ ವಿವರಗಳು ಪ್ರತ್ಯೇಕ ಸಂಪುಟಗಳಲ್ಲಿದ್ದವು. ಉಳಿದ ಮೂರು ಸಂಪುಟಗಳು ಬೆಂಗಳೂರು ನಗರ ಜಿಲ್ಲೆ, ಗ್ರಾಮಾಂತರ ಜಿಲ್ಲೆ ಮತ್ತು ಗದಗ ಹಾಗೂ ಕೊಪ್ಪಳ ಜಿಲ್ಲೆಗಳ ಹಗರಣಗಳ ಮಾಹಿತಿ ಒಳಗೊಂಡಿದ್ದವು.

ಈಗಿನ ಕಾನೂನು ಸಚಿವ ಎಚ್‌.ಕೆ. ಪಾಟೀಲ ಅಧ್ಯಕ್ಷತೆಯ ವಿಧಾನಸಭೆಯ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ (2020-21) ಸಲ್ಲಿಸಿದ್ದ ವರದಿಯಲ್ಲಿ ಪ್ರಸ್ತಾಪಿಸಿದ ವಿಷಯಗಳು, ಸಕ್ಷಮ ಅಧಿಕಾರಿಗಳು ಕೆಟಿಪಿಪಿ ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘಿಸಿ ನೀಡಿದ್ದ ಅನುಮೋದನೆ, ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಇತರ ಇಲಾಖೆಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಂಸ್ಥೆಗಳಲ್ಲಿ ಔಷಧ, ಸಾಮಗ್ರಿಗಳ ಖರೀದಿಯಲ್ಲಿ ನಡೆದಿರುವ ಅವ್ಯವಹಾರ, ಕುರಿತು ಆಯೋಗವು ವಿಸ್ತೃತ ತನಿಖೆ ನಡೆಸಿದೆ. ಅಲ್ಲದೇ, ಎರಡು ಮಧ್ಯಂತರ ವರದಿಗಳ ಆಧಾರದ ಮೇಲೆ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲು ಎಸ್‌ಐಟಿ ರಚನೆ ಮಾಡಲು 2024 ನವೆಂಬರ್‌ನಲ್ಲಿ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿತ್ತು.

ಎಲ್ಲೆಲ್ಲಿ ಅಕ್ರಮ (ಕೋಟಿಗಳಲ್ಲಿ)



- ವೈದ್ಯಕೀಯ ಉಪಕರಣಗಳು, ಅಕ್ರಮ ಕಾಮಗಾರಿಗಳು, ವಿವಿಧ ಶುಲ್ಕಗಳ ಪಾವತಿಯಲ್ಲಿ ನಡೆದ ಅಕ್ರಮದ ಮೊತ್ತ
- ಅವಧಿ ಮುಗಿದ ಔಷಧ-ಕಳಪೆ ಕಿಟ್‌ಗಳ ಖರೀದಿ, ಪೂರೈಕೆಯಲ್ಲಿ ವಿಳಂಬಕ್ಕೆ ದಂಡ ವಿಧಿಸದೇ ಇರುವುದು, ಹಲವು ಪಟ್ಟು ಹೆಚ್ಚು ದರ ನೀಡಿದ್ದರಿಂದ ಉಂಟಾದ ನಷ್ಟದ ಮೊತ್ತ
- ಲೆಕ್ಕಕ್ಕೆ ಸಿಗದ/ದಾಖಲೆ ಇಲ್ಲದ ವೆಚ್ಚಗಳ ಮೊತ್ತ

ಅಂಕಿ ಅಂಶಗಳು

₹769 ಕೋಟಿ ಈವರೆಗೆ ಪತ್ತೆಯಾದ ಅಕ್ರಮದ ಮೊತ್ತ

₹3,741.36 ಕೋಟಿ ಆಯೋಗವು ಪರಿಶೀಲನೆಗೆ ಒಳಪಡಿಸಿದ ವಹಿವಾಟುಗಳ ಒಟ್ಟು ಮೊತ್ತ

ಅಕ್ರಮದ ಸ್ವರೂಪ

- ರಾಜ್ಯದ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು ಸ್ಥಳೀಯವಾಗಿ ಒಟ್ಟು ₹203.66 ಕೋಟಿ ಮೌಲ್ಯದಷ್ಟು ಪಿಪಿಇ ಕಿಟ್‌ಗಳನ್ನು ಖರೀದಿಸಿದ್ದು, ಅಷ್ಟೂ ವಹಿವಾಟು ಸಂಪೂರ್ಣವಾಗಿ ಅಕ್ರಮ
- ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು 1,137 ವೆಂಟಿಲೇಟರ್‌ಗಳನ್ನು ಖರೀದಿಸಿದೆ. ಇದರಲ್ಲಿ ₹16 ಕೋಟಿಯಷ್ಟು ಅಕ್ರಮ ನಡೆದಿದ್ದು, ಇನ್ನೂ ₹106 ಕೋಟಿಯಷ್ಟು ಶಂಕಾಸ್ಪದ ಅಕ್ರಮ ವಹಿವಾಟು ನಡೆದಿದೆ
- ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು ಮೂರು ಸಾವಿರಕ್ಕೂ ಹೆಚ್ಚು 'ಐಸಿಯು ಕಾಟ್'ಗಳನ್ನು ಖರೀದಿಸಿತ್ತು. ₹98,000ರಲ್ಲಿ ಲಭ್ಯವಿದ್ದ ಕಾಟ್‌ಗಳನ್ನು ₹1.91 ಲಕ್ಷಕ್ಕೆ ಖರೀದಿಸಿದೆ. ದುಪ್ಪಟ್ಟು ದರಕೊಟ್ಟು ಖರೀದಿ ಮಾಡಿದ್ದರಿಂದ ₹25.49 ಕೋಟಿ ಅಕ್ರಮ
- ವೈದ್ಯಕೀಯ ಶಿಕ್ಷಣ ಇಲಾಖೆಯು ₹181 ಕೋಟಿ ವೆಚ್ಚದಲ್ಲಿ ಮಲ್ಟಿಪಾರಾ ಮಾನಿಟರ್‌ಗಳನ್ನು ಖರೀದಿಸಲಾಗಿದ್ದು, ಇದರಲ್ಲಿ ₹124.78 ಕೋಟಿಯಷ್ಟು ಅಕ್ರಮ. ₹36,499ರ ಮೊತ್ತದ ಮಾನಿಟರ್‌ಗಳನ್ನು ತಲಾ ಒಂದಕ್ಕೆ ₹2.85 ಲಕ್ಷ ಪಾವತಿಸಲಾಗಿದೆ

ದ್ವೇಷ ಭಾಷಣ ಮಸೂದೆ ತಡೆಗೆ ಜೆಡಿಎಸ್ ಮನವಿ

ಬೆಂಗಳೂರು: ದ್ವೇಷ ಭಾಷಣ ಮಸೂದೆಗೆ ಸಹಿ ಹಾಕದಂತೆ ಜೆಡಿಎಸ್ ಮುಖಂಡರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಮಾಡಿದ್ದಾರೆ.

ರಾಜ್ಯಪಾಲರನ್ನು ಬುಧವಾರ ಭೇಟಿ ಮಾಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ನೇತೃತ್ವದ ನಿಯೋಗ, 'ಕಾಂಗ್ರೆಸ್ ನೇತೃತ್ವದ ಸರ್ಕಾರ ಜಾರಿಗೆ ತರಲು ಹೊರಟಿರುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆಯು ರಾಜ್ಯದ ಜನರ ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆ ತರಲಿದೆ. ಸದನದಲ್ಲಿ ಚರ್ಚೆಗೆ ಅವಕಾಶ ನೀಡದೆ ಗದ್ದಲದ ಮಧ್ಯೆ ಅಂಗೀಕಾರ ಪಡೆದಿದ್ದಾರೆ. ಜನರ ಹಿತಾಸಕ್ತಿಗೆ ವಿರುದ್ಧವಾಗಿರುವ ಇಂತಹ ಮಸೂದೆಯನ್ನು ತಿರಸ್ಕರಿಸಬೇಕು' ಎಂದು ಕೋರಿದರು.

ರಾಜ್ಯಪಾಲರ ಭೇಟಿ ನಂತರ ಸುದ್ದಿಗಾರರ ಜತೆ ಮಾತನಾಡಿದ ಸುರೇಶ್ ಬಾಬು, 'ಅತಿವೃಷ್ಟಿ, ಅನುದಾನದ ಕೊರತೆಯಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ಉತ್ತರ ಕರ್ನಾಟಕದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಜನರ ಸಮಸ್ಯೆಗೆ ನೆರವಾಗಬೇಕಾದ ಸರ್ಕಾರ ದ್ವೇಷ ಭಾಷಣ ಮಸೂದೆ ರೂಪಿಸುವಂತಹ ಕೆಲಸದಲ್ಲಿ ಮಗ್ನವಾಗಿದೆ. ವಿರೋಧ ಪಕ್ಷಗಳನ್ನು ನಿಯಂತ್ರಿಸಲು ಹೊರಟಿದೆ. ಸರ್ಕಾರದ ನಡೆಯ ವಿರುದ್ಧ ಜೆಡಿಎಸ್ ಹೋರಾಟ ಮಾಡಲಿದೆ' ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ: ನವೀಕರಣಗೊಳ್ಳದ ಶಾಲೆಗಳಿಗೆ ಸಂಕಷ್ಟ

ಬೆಂಗಳೂರು: ಮಾನ್ಯತೆ ನವೀಕರಣಗೊಳ್ಳದ ಪ್ರೌಢಶಾಲೆಗಳ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಸಮೀಪದ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯುವಂತೆ ಸೂಚಿಸಿರುವ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಸುತ್ತೋಲೆಗೆ ಖಾಸಗಿ ಶಾಲಾ ಆಡಳಿತ ಮಂಡಳಿಗಳು ಆಕ್ಷೇಪ ವ್ಯಕ್ತಪಡಿಸಿವೆ.

'2025-26ನೇ ಸಾಲಿಗೆ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳ ಮಾನ್ಯತೆ ನವೀಕರಣಕ್ಕಾಗಿ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಕೆಲ ಷರತ್ತುಗಳನ್ನು ಸಡಿಲಿಸುವಂತೆ ಶಿಕ್ಷಣ ಸಚಿವರ ಜತೆ ಚರ್ಚಿಸಿದ್ದು, ಕಠಿಣ ನಿಯಮಗಳನ್ನು ಸಡಿಲಿಸಲು ಉಪ ಸಮಿತಿ ರಚಿಸಲಾಗಿದೆ. ಸಮಿತಿಯು ವರದಿ ಸಲ್ಲಿಸುವ ಮೊದಲೇ ಮಂಡಳಿ ಸುತ್ತೋಲೆ ಹೊರಡಿಸಿರುವುದು ಸರಿಯಲ್ಲ' ಎಂದು ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘ ಸಂಚಾಲಕ ಡಿ. ಶಶಿಕುಮಾರ್ ದೂರಿದ್ದಾರೆ.

'ಮಾನ್ಯತೆ ನವೀಕರಣ ವಿಷಯ ಅನುದಾನಿತ ಹಾಗೂ ಖಾಸಗಿ ಪ್ರೌಢಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಕ್ರಮ ಜರುಗಿಸಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭರವಸೆ ನೀಡಿದ್ದರೂ ಪರೀಕ್ಷಾ ಮಂಡಳಿ ಸುತ್ತೋಲೆ ಹೊರಡಿಸಿದೆ. ವಿದ್ಯಾರ್ಥಿಗಳನ್ನು ಪರೀಕ್ಷಾ ಸಮಯದಲ್ಲಿ ಅತಂತ್ರ ಮಾಡುವುದು ಸರಿಯಲ್ಲ. ಸುತ್ತೋಲೆ ವಾಪಸ್ ಪಡೆಯಬೇಕು' ಎಂದು ವಿಧಾನಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಒತ್ತಾಯಿಸಿದ್ದಾರೆ.

ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ಪುಟ್ಟಣ್ಣ ನೇತೃತ್ವದಲ್ಲಿ ಖಾಸಗಿ ಶಾಲೆಗಳ ಆಡಳಿತ ಮಂಡಳಿ ಸದಸ್ಯರು ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಅವರನ್ನು ಬುಧವಾರ ಭೇಟಿ ಮಾಡಿ, ಸುತ್ತೋಲೆ ವಾಪಸ್ ಪಡೆಯಲು ಮನವಿ ಮಾಡಿದ್ದಾರೆ.

ಚಿಟಿಕೆ ಸುದ್ದಿ

ಒಂದೂವರೆ ತಾಸಿನಲ್ಲಿ 21 ಮಂದಿಗೆ ಕಚ್ಚಿದ ನಾಯಿ!

ಕೋಲಾರ: ನಗರದಲ್ಲಿ ಬುಧವಾರ ಬೀದಿನಾಯಿಯೊಂದು ಒಂದೂವರೆ ತಾಸಿನಲ್ಲಿ ಮೋಟಾರು ವಾಹನ ನಿರೀಕ್ಷಕ ಸೇರಿದಂತೆ 21 ಜನರನ್ನು ಕಚ್ಚಿ ಗಾಯಗೊಳಿಸಿದೆ.

ಆರ್‌ಟಿಒ ಕಚೇರಿ ಮುಂಭಾಗ, ಹಾಗೂ ಸುತ್ತಮುತ್ತ ಹಾಗೂ ಬಿಜಿಎಸ್ ಪಿಯು ಕಾಲೇಜು ಬಳಿ ಓಡಾಡುತ್ತಿದ್ದವರನ್ನು ಕಚ್ಚಿ ಗಾಯಗೊಳಿಸಿದೆ. ಕೋಲಾರ ನಗರಸಭೆ ಆಯುಕ್ತ ನವೀನ್ ಚಂದ್ರ, ಕೆಜಿಎಫ್‌ನಿಂದ ನಾಯಿ ಹಿಡಿಯುವವರನ್ನು ಕರೆಸಲು ಮುಂದಾಗಿದ್ದರು. ಅಷ್ಟರಲ್ಲಿ ನಾಯಿಯನ್ನು ಸಾರ್ವಜನಿಕರು ಹೊಡೆದು ಕೊಂದಿದ್ದಾರೆ.

ನಾಯಿಯಿಂದ ಕಡಿತಕ್ಕೊಳಗಾದ ಗಾಯಾಳುಗಳನ್ನು ಕೂಡಲೇ ನಗರದ ಎಸ್‌ಎನ್‌ಆರ್ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಯಿತು. ಪ್ರಥಮ ಚಿಕಿತ್ಸೆ ಮಾಡಿಸಿ ಲಸಿಕೆ ನೀಡಿ ಕಳಿಸಲಾಯಿತು.

ಎನ್‌ಐಪಿಇಆರ್: ಕೇಂದ್ರಕ್ಕೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಔಷಧ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯನ್ನು (ಎನ್‌ಐಪಿಇಆರ್) ಕರ್ನಾಟಕದಲ್ಲಿ ಆರಂಭಿಸಬೇಕು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಈ ಸಂಸ್ಥೆಯ ಸ್ಥಾಪನೆಗೆ ಅಗತ್ಯವಿರುವ ಜಮೀನು, ಮೂಲಸೌಕರ್ಯ, ಸಹಭಾಗಿತ್ವ ಸೇರಿ ಎಲ್ಲ ರೀತಿಯ ನೆರವು ನೀಡಲಾಗುವುದು ಎಂದೂ ಅವರು ಹೇಳಿದ್ದಾರೆ.

ಈ ಸಂಸ್ಥೆಯನ್ನು ಕರ್ನಾಟಕದಲ್ಲಿ ಆರಂಭಿಸಬೇಕೆಂದು ಕೇಂದ್ರ ಸರ್ಕಾರ ಹಿಂದೊಮ್ಮೆ ಆಲೋಚಿಸಿತ್ತು. ಆದರೆ, ಅದು ಕಾರ್ಯರೂಪಕ್ಕೆ ಬರಲಿಲ್ಲ. ರಾಜ್ಯದಲ್ಲಿರುವ ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳು, ಜೈವಿಕ ತಂತ್ರಜ್ಞಾನ ಕಂಪನಿ ಇತ್ಯಾದಿಗಳನ್ನು ಪರಿಗಣಿಸಿ ಈ ಚಿಂತನೆಗೆ ಮರುಜೀವ ನೀಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಪಾಟೀಲ

ರಾಜ್ಯವು ಔಷಧ ವಿಜ್ಞಾನ, ಬಿ.ಟಿ ಮತ್ತು ಆರೋಗ್ಯ ಸೇವೆಗಳಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ಅದರಲ್ಲೂ ಬೆಂಗಳೂರು ಒಂದರಲ್ಲೇ 400ಕ್ಕೂ ಹೆಚ್ಚು ಬಿ.ಟಿ ಕಂಪನಿಗಳಿವೆ. ಜತೆಗೆ ಇಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ, ರಾಷ್ಟ್ರೀಯ ಜೀವ ವಿಜ್ಞಾನಗಳ ಕೇಂದ್ರ (ಎನ್‌ಸಿಬಿಎಸ್), ಬಯೋ ಇನ್‌ಫರ್ಮ್ಯಾಟಿಕ್ಸ್ ಮತ್ತು ಅಪ್ಲೈಡ್ ಬಯೋಟೆಕ್ನಾಲಜಿ (ಐಬಿಎಬಿ) ಮುಂತಾದ ಪ್ರತಿಷ್ಠಿತ ಸಂಸ್ಥೆಗಳಿವೆ. ರಾಜ್ಯ ಸರ್ಕಾರದ ಬಯೋ- ಇನ್ನೊವೇಶನ್ ಸೆಂಟರ್ ಮತ್ತು ರಚನಾತ್ಮಕ ಬಿ.ಟಿ ನೀತಿಯ ಮೂಲಕ ಈ ಕ್ಷೇತ್ರದ ನವೋದ್ಯಮಗಳಿಗೆ ಬೆಂಬಲ ಕೊಡಲಾಗುತ್ತಿದೆ ಎಂದು ಅವರು ವಿವರಿಸಿದ್ದಾರೆ.

'ದೇಶದಲ್ಲಿರುವ ಬಿ.ಟಿ.ಕಂಪನಿಗಳ ಪೈಕಿ ಶೇ 60ರಷ್ಟು ರಾಜ್ಯದಲ್ಲೇ ಇವೆ. ಭಾರತವು ಮಾಡುತ್ತಿರುವ ಒಟ್ಟು ಔಷಧ ರಫ್ತಿನಲ್ಲಿ ರಾಜ್ಯದ ಪಾಲು ಶೇ 12 ಇದೆ. ಅಲ್ಲದೆ, ಕ್ಲಿನಿಕಲ್ ಸಂಶೋಧನೆ, ವೈದ್ಯಕೀಯ ಸಾಧನ- ಸಲಕರಣೆಗಳ ತಯಾರಿಕೆ ಮತ್ತು ಎಪಿಐ ಉತ್ಪಾದನೆಯ ಕಾರ್ಯಜಾಲ ನಮ್ಮಲ್ಲಿದೆ. ಇವೆಲ್ಲವುಗಳನ್ನು ಪರಿಗಣಿಸಿ ರಾಜ್ಯಕ್ಕೆ ರಾಷ್ಟ್ರೀಯ ಔಷಧ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯನ್ನು ಮಂಜೂರು ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.

ಮುಖ್ಯಾಂಶ

- ಸಂಸ್ಥೆ ಸ್ಥಾಪನೆಗೆ ಜಮೀನು ಭರವಸೆ

ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ಬುಧವಾರ ಹೊಸ ವರ್ಷಾಚರಣೆ ಅಂಗವಾಗಿ ಆಯೋಜಿಸಿದ್ದ ಸಮಾರಂಭದಲ್ಲಿ 'ಪ್ರಜಾವಾಣಿ'ಯ ಕೆ.ಜೆ.ಮರಿಯಪ್ಪ, ಮಂಜುಶ್ರೀ ಕಡಕೋಳ, ಬಿ.ವಿ.ಶ್ರೀನಾಥ ಹಾಗೂ ಆರ್‌ಮಂಜುನಾಥ ಅವರು 2025ನೇ ಸಾಲಿನ ವಾರ್ಷಿಕ ಪ್ರಶಸ್ತಿ ಸ್ವೀಕರಿಸಿದರು

ಹಂಪಿ: 23 ದೇಶಗಳ ಆರ್‌ಎಸ್‌ಎಸ್ ಪ್ರಚಾರಕರು ಭೇಟಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಧ್ಯೇಯ, ಉದ್ದೇಶಗಳ ಕುರಿತು 23 ದೇಶಗಳಲ್ಲಿ ಪ್ರಚಾರದಲ್ಲಿ ತೊಡಗಿರುವ ಪ್ರಚಾರಕರು, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ನೇತೃತ್ವದಲ್ಲಿ ಬುಧವಾರ ಹಂಪಿಯ ವಿಜಯ ವಿಠ್ಠಲ ದೇವಸ್ಥಾನಕ್ಕೆ ಭೇಟಿ ನೀಡಿದರು.

ಹಂಪಿ ಸಮೀಪದ ಆನೆಗೊಂದಿಯಲ್ಲಿ ನಡೆಯುವ ಮೂರು ದಿನಗಳ ಚಿಂತನ ಮಂಥನ ಸಭೆಯಲ್ಲಿ ಪಾಲ್ಗೊಳ್ಳಲು ಬಂದಿರುವ ಅವರು, ಸಭೆಯ ನಡುವೆ ಬಿಡುವು ಮಾಡಿಕೊಂಡು ಹಂಪಿಗೆ ಭೇಟಿ ನೀಡಿದರು. 'ಅಮೆರಿಕ, ಕೆನಡಾ, ದುಬೈ, ನೈಜೀರಿಯಾ, ಮ್ಯಾನ್ಮಾರ್ ಸೇರಿ 23 ದೇಶಗಳಲ್ಲಿ ಅವರು ಪ್ರಚಾರಕರಾಗಿದ್ದಾರೆ. ಅವರೆಲ್ಲ ವಿದೇಶದಲ್ಲೇ ಹುಟ್ಟಿದ ಭಾರತೀಯ ಮೂಲದವರು. ವಿಶ್ವ ಪಾರಂಪರಿಕ ತಾಣ ಹಂಪಿಯ ದರ್ಶನದ ಜತೆಗೆ ಇಲ್ಲೇ ಆರ್‌ಎಸ್‌ಎಸ್ ಕುರಿತಂತೆ ಅವರಿಗೆ ಇನ್ನಷ್ಟು ಮಾಹಿತಿ ಒದಗಿಸಲು ಈ ಸಭೆ ಆಯೋಜಿಸಲಾಗಿದೆ, ಇದಕ್ಕೆ ಸ್ಥಳೀಯ ಸ್ವಯಂಸೇವಕರು, ಮುಖಂಡರು ಸೇರಿ ಯಾರಿಗೂ ಪ್ರವೇಶ ಇಲ್ಲ' ಎಂದು ಸಂಘದ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಆರ್‌ಎಸ್‌ಎಸ್ ಈಗ ಶತಮಾನೋತ್ಸವ ಆಚರಿಸುತ್ತಿದೆ. ವಿದೇಶಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಆರ್‌ಎಸ್‌ಎಸ್ ಕುರಿತು ಜನರಿಗೆ ಮನವರಿಕೆ ಮಾಡಿಕೊಡಲು ಈ ಸಭೆ ನಡೆಸಲಾಗುತ್ತಿದೆ' ಎಂದು ಅವರು ಹೇಳಿದರು.

ತೆಂಗು ಅಭಿವೃದ್ಧಿ ಮಂಡಳಿ
(ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ) ಕೊಚ್ಚಿ, ಕೇರಳ. ಫೋನ್:0484-2377266,67
Coconut Development Board
[MINISTRY OF AGRICULTURE & FARMERS WELFARE, GOVERNMENT OF INDIA]
KOCHI, KERALA. PH : 0484-2377266, 67
Email: ho-publicity@coconutboard.gov.in, Website:https://coconutboard.gov.in

ತೆಂ.ಅ.ಮಂ. ಇವರಿಂದ 2022–24ನೇ ಸಾಲಿನ ರಾಷ್ಟ್ರೀಯ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ತೆಂಗು ಅಭಿವೃದ್ಧಿ ಮಂಡಳಿ ಇವರ 2022–24ನೇ ಸಾಲಿನ ರಾಷ್ಟ್ರೀಯ ಪ್ರಶಸ್ತಿಗಾಗಿ ಕೆಳಕಂಡ ಪ್ರವರ್ಗಗಳಲ್ಲಿ ಅರ್ಜಿ ಆಹ್ವಾನಿಸಲಾಗಿದೆ.
1. ಅತ್ಯುತ್ತಮ ರಾಷ್ಟ್ರೀಯ ತೆಂಗು ಕೃಷಿಕ – ಸಾಂಪ್ರದಾಯಿಕ
2. ಅತ್ಯುತ್ತಮ ರಾಷ್ಟ್ರೀಯ ತೆಂಗು ಕೃಷಿಕ – ಸಾಂಪ್ರದಾಯಿಕೇತರ
3. ಅತ್ಯುತ್ತಮ ತೆಂಗು ಸಂಸ್ಕರಣೆಗಾರ
4. ತೆಂಗು ವಲಯದ ಅತ್ಯುತ್ತಮ ವಿಸ್ತರಣ ಸಿಬ್ಬಂದಿ
5. ಅತ್ಯುತ್ತಮ ತೆಂಗಿನ ಮರ ಏರುವವರು
6. ಮಹಿಳೆಯರಿಂದ ನಿರ್ವಹಿಸಲ್ಪಡುತ್ತಿರುವ ಅತ್ಯುತ್ತಮ ತೆಂಗು ಸಂಸ್ಕರಣಾ ಘಟಕ
ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ 15ನೇ ಜನವರಿ 2026. ಮಾರ್ಗಸೂಚಿಗಳು ಮತ್ತು ಆನ್‌ಲೈನ್ ಅರ್ಜಿ ನಮೂನೆಗಳು, ಮಂಡಳಿಯ https://coconutboard.gov.in/CDBNationalAward_2022-24.htm ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ.
डाब - आपके स्वास्थ्य के लिए रोज़ाना खुराक ಕಿಸಾನ್ ಕಾಲ್ ಸೆಂಟರ್ ಟೋಲ್ ಫ್ರೀ ನಂಬರ್: 1800-180-1551

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಮೈಸೂರು ನಗರ ವಿಭಾಗ, ಮೈಸೂರು
ಸಂಖ್ಯೆ: ಕರಾಸಾ/ಮೈನವಿ/ಸಂ/ವಾಣಿಜ್ಯ/2477/2025–26 ದಿನಾಂಕ: 29.12.2025
ಟೆಂಡರ್ ಪ್ರಕಟಣೆ (KPP Portal ಮೂಲಕ)
ಕ.ರಾ.ರ.ಸಾ.ನಿಗಮ, ಮೈಸೂರು ನಗರ ವಿಭಾಗದ ವ್ಯಾಪ್ತಿಗೆ ಒಳಪಡುವ 10 ಬಸ್ ನಿಲ್ದಾಣಗಳ ಸ್ವಚ್ಛತಾ ನಿರ್ವಹಣೆ ಮತ್ತು ಶೌಚಾಲಯ/ಮೂತ್ರಾಲಯಗಳ ಸ್ವಚ್ಛತಾ ನಿರ್ವಹಣೆ ಹಾಗೂ ವಿಭಾಗೀಯ ಕಚೇರಿ, ವಿಭಾಗೀಯ ಕಾರ್ಯಾಗಾರ, ಅತಿಥಿ ಗೃಹ, ಕುವೆಂಪುನಗರ, ಸಾತಗಳ್ಳಿ, ವಿಜಯನಗರ ಮತ್ತು ನಂಜನಗೂಡು ಘಟಕಗಳ ಸಿಬ್ಬಂದಿ ವಿಶ್ರಾಂತಿ ಗೃಹಗಳ ಶೌಚಾಲಯ/ಮೂತ್ರಾಲಯಗಳ ಸ್ವಚ್ಛತಾ ನಿರ್ವಹಣೆ ಕಾರ್ಯದ ಗುತ್ತಿಗೆಯನ್ನು ಯಾಂತ್ರೀಕೃತ ಮತ್ತು ಯಾಂತ್ರೀಕೃತ ರಹಿತ ಹೌಸ್ ಕೀಪಿಂಗ್ ಪದ್ಧತಿಗನುಗುಣವಾಗಿ ನಿರ್ವಹಿಸಲು ಅರ್ಹ ಸ್ವಚ್ಛತಾ ಗುತ್ತಿಗೆದಾರರಿಂದ ಅರ್ಜಿಗಳನ್ನು ದಿನಾಂಕ: 30.12.2025 ರಿಂದ 20.01.2026 ರವರೆಗೆ KPP Portal ಮೂಲಕ ಇ-ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಇ-ಟೆಂಡರ್:– ಡಿಜಿಟಲ್–ಕೀ–ಹೊಂದಿರುವ ಆಸಕ್ತರು ಮಾತ್ರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ದಿನಾಂಕ: 30.12.2025 ರಿಂದ 20.01.2026 ರವರೆಗೆ ಇ-ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಬಿಡ್ ಸಲ್ಲಿಸಬಹುದು. ಇ-ಟೆಂಡರ್‌ನ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 23.01.2026, 11.00 ಗಂಟೆಗೆ ಮತ್ತು ಆರ್ಥಿಕ ಬಿಡ್ಡನ್ನು ದಿನಾಂಕ: 28.01.2026, 12.00 ಗಂಟೆಗೆ ತೆರೆಯಲು ನಿಗದಿಗೊಳಿಸಲಾಗಿದೆ. (ತಾಂತ್ರಿಕ ತೊಂದರೆ ಇಲ್ಲದೆ ಇದ್ದಲ್ಲಿ)
ಹೆಚ್ಚಿನ ವಿವರಗಳಿಗೆ ವಿ.ಸಂ.ಅರ ದೂ.ಸಂ: 9606978102 ಹಾಗೂ ವಿಷಯ ನಿರ್ವಾಹಕರ ದೂ.ಸಂ: 9480665919 ಗಳನ್ನು ಸಂಪರ್ಕಿಸಬಹುದು. ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿಗಳು
ಮೈಸೂರು ನಗರ ವಿಭಾಗ, ಮೈಸೂರು
ವಾಸಾಸಂಇ/ವಾ.ಪ್ರ/4766/ಎಂಎಎ/2025–26

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ.16/ಐ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560 052, ದೂ: 080–2226 0932/2209 6555/2209 6512
E-mail: admnkfcsc123@yahoo.com
ಸಂಖ್ಯೆ: ಕಆನಾಸನಿನಿ/ಆಡಳಿತ/ನೇ.ನೇ/746/2025–26/ ದಿನಾಂಕ: 31.12.2025
ಪ್ರಕಟಣೆ
ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತವು ಹಿರಿಯ ಸಹಾಯಕರು, ಹಿರಿಯ ಸಹಾಯಕರು(ಲೆಕ್ಕ), ಗುಣಮಟ್ಟ ನಿರೀಕ್ಷಕರು ಹಾಗೂ ಕಿರಿಯ ಸಹಾಯಕರ ಹುದ್ದೆಯ ನೇಮಕಾತಿ ಸಂಬಂಧ 1:3 ಅಂತಿಮ ಪಟ್ಟಿಯ ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನೆಯನ್ನು ದಿನಾಂಕ.27.11.2025 ರಿಂದ 03.12.2025ರವರೆಗೆ ಕೈಗೊಳ್ಳಲಾಗಿದ್ದು, ದಾಖಲಾತಿ ಪರಿಶೀಲನೆಗೆ ಹಾಜರಾಗದ ಅಭ್ಯರ್ಥಿಗಳಿಗೆ ಮತ್ತೊಮ್ಮೆ ದಿನಾಂಕ.19.12.2025 ರಿಂದ 23.12.2025ರವರೆಗೆ ದಾಖಲಾತಿ ಪರಿಶೀಲನೆಯನ್ನು ಕೈಗೊಳ್ಳಲಾಗಿರುತ್ತದೆ. ಆದರೆ, ಕೆಲವು ಅರ್ಹ ಅಭ್ಯರ್ಥಿಗಳು ಮರು ನಿಗದಿಪಡಿಸಿದ ದಿನಾಂಕದಂದು ಸಹ ದಾಖಲಾತಿ ಪರಿಶೀಲನೆಗೆ ಹಾಜರಾಗಿರುವುದಿಲ್ಲ. ಆದ್ದರಿಂದ ದಿನಾಂಕ.02.01.2026 ರಿಂದ 05.01.2026 ರೊಳಗಾಗಿ ದಾಖಲಾತಿ ಪರಿಶೀಲನೆಯ ದಿನಾಂಕವನ್ನು ಮತ್ತೊಮ್ಮೆ ಮರು ನಿಗಧಿಪಡಿಸಲಾಗಿರುತ್ತದೆ. ಮರು ನಿಗದಿಪಡಿಸಲಾದ ದಿನಾಂಕದಂದು ಕೇಂದ್ರ ಕಛೇರಿ, ನಂ.16/I, ಮಿಲ್ಲರ್ಸ್‌ಟ್ಯಾಂಕ್ ಬೆಡ್ ಏರಿಯಾ, ಬೆಂಗಳೂರು–560052 ಇಲ್ಲಿ 10:30 ರಿಂದ 5:30 ರೊಳಗಾಗಿ ಖುದ್ದಾಗಿ ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗಲು ತಿಳಿಸಿದೆ. ಇದು ಅಂತಿಮ ಕರೆಯಾಗಿದ್ದು, ಮರು ನಿಗದಿಪಡಿಸಲಾದ ದಿನಾಂಕದಂದು ಹಾಜರಾಗದ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು ಹಾಗೂ ಹುದ್ದೆಗಳನ್ನು ದಾಖಲಾತಿ ಪರಿಶೀಲನೆಗೆ ಹಾಜರಾಗಿರುವ 1:3 ಅಂತಿಮ ಪಟ್ಟಿಯ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲು ನಿಗಮವು ಕ್ರಮ ಕೈಗೊಳ್ಳುತ್ತದೆ ಎಂದು ಈ ಮೂಲಕ ಸ್ಪಷ್ಟಪಡಿಸಿದೆ. ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ https://kfcsc.karnataka.gov.in ಅನ್ನು ವೀಕ್ಷಿಸುವುದು.
ಸಹಿ/–
ಪ್ರಧಾನ ವ್ಯವಸ್ಥಾಪಕರು

KARNATAKA NEERAVARI NIGAM LIMITED
(A Government of Karnataka Enterprises)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ ಕನೀನಿನಿ,ಘಬದಂಕಾನಿ ವಿಭಾಗ ಸಂ.3 ಗೋಕಾಕ ಫೋನ ನಂ. 08332–225213.
ಸಂಖ್ಯೆ: ಕನೀನಿನಿ/ಜಿಆರ್‌ಬಿಸಿಸಿವಿ–3/ಡಿಬಿ/ಲೆ.ಶಿ.4701ಕಿ.ಕೆ.ತುಂ.ಯೋ/ದರ ವಿಚಾರಣೆ/2025–26/ ದಿನಾಂಕ:–31–12–2025
ಅಂದಾಜು ಪತ್ರಿಕೆಯಲ್ಲಿ ದರಗಳನ್ನು ಅಳವಡಿಸಿಕೊಳ್ಳುವ ಸಲುವಾಗಿ ದರ ವಿಚಾರಣೆ ಅಧಿಸೂಚನೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರು, ಕನೀನಿನಿ, ಘ.ಬ.ದಂ.ಕಾ.ನಿ. ವಿಭಾಗ ಸಂ.3, ಗೋಕಾಕ ಕಚೇರಿಯಲ್ಲಿ ಕೆಳಕಂಡ ಕಾಮಗಾರಿಯ ಅಂದಾಜು ಪತ್ರಿಕೆಯಲ್ಲಿ ದರಗಳನ್ನು ಅಳವಡಿಸಿಕೊಳ್ಳುವ ಸಲುವಾಗಿ ಮಾತ್ರ ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಿದ ಮೊಹರಬಂದ ಮಾಡಿದ ಲಕೋಟೆಯಲ್ಲಿ ಅಥವಾ ಈ ಕಚೇರಿಯ ಇಮೇಲ್‌ಗೆ ಸ್ಪರ್ಧಾತ್ಮಕ ದರಗಳನ್ನು ಆಹ್ವಾನಿಸಿ ಈ ದರ ವಿಚಾರಣೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.
ಕ್ರ ಸಂ:1:ಕಾಮಗಾರಿ ಹೆಸರು: ಕಿತ್ತೂರ 64 ಕೆರೆ ತುಂಬಿಸುವ ಯೋಜನೆಯಲ್ಲಿ ಬಿಟ್ಟು ಹೋಗಿರುವ 04 ಗ್ರಾಮಗಳ 07 ಕೆರೆಗಳನ್ನು ತುಂಬಿಸುವ ಯೋಜನಾ ವರದಿಯನ್ನು ತಯಾರಿಸಲು ಸರ್ವೆ ಕನ್ಸಲ್ಟೆನ್ಸಿ ಕಾಮಗಾರಿ.
ಆಸಕ್ತಿಯುಳ್ಳ ಮತ್ತು ಅರ್ಹತೆ ಹೊಂದಿದ ನೊಂದಾಯಿತ ಏಜನ್ಸಿ/ಅನುಭವವುಳ್ಳ ಗುತ್ತಿಗೆದಾರರು/ಸಲಹೆಗಾರರು ಪ್ರತ್ಯೇಕವಾಗಿ ದಿನಾಂಕ 07–01–2026 ರ ಸಂಜೆ 4.00 ಗಂಟೆಯೊಳಗಾಗಿ ಅಂಚೆ ಮೂಲಕವಾಗಲಿ ಅಥವಾ ಖುದ್ದಾಗಿಯಾಗಲಿ ಮೇಲಿನ ವಿಳಾಸದ ಕಛೇರಿಗೆ ತಲುಪುವಂತೆ ಕಳುಹಿಸಿಕೊಡಲು ಈ ಮೂಲಕ ಕೋರಲಾಗಿದೆ. ದರ ಕೋರಿರುವ ಐಟಂಗಳ ವಿವರಗಳನ್ನೊಳಗೊಂಡ ಪಟ್ಟಿಯ ನಮೂನೆಯು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಘಬದಂಕಾನಿ ಉಪ ವಿಭಾಗ ಸಂ. 7 ಗೋಕಾಕ ಇವರ ಕಛೇರಿಯಲ್ಲಿ ಲಭ್ಯವಿರುವುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿದವರನ್ನು ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಘಬದಂಕಾನಿ ಉಪ ವಿಭಾಗ ಸಂ. 7 ಗೋಕಾಕ ಇವರನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿಯಾಗಲಿ ಅಥವಾ ದೂರವಾಣಿ ಸಂ. 08332–225213 ಮುಖಾಂತರವಾಗಲಿ ಸಂಪರ್ಕಿಸಿ ಪಡೆಯಬಹುದಾಗಿದೆ ಹಾಗೂ ದರಗಳನ್ನು ಮೇಲೆ ತಿಳಿಸಲಾದ ಈ ಕಛೇರಿಯ E-mail:knnlgrbccd3.gokak@gmail.com ಮುಖಾಂತರ ಸಹ ನಿಗದಿತ ದಿನಾಂಕ ಹಾಗೂ ಸಮಯದೊಳಗಾಗಿ ಸಲ್ಲಿಸಲು ಕೋರಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು
DIPR/BGM/RO-NO-1554/KSMCA/2025-26 ಕನೀನಿನಿ ಜಿಆರ್‌ಬಿಸಿಸಿ ವಿಭಾಗ ನಂ–3, ಗೋಕಾಕ

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪುಲಿಕೇಶಿನಗರ ವಿಭಾಗ, ರಾಬರ್ಟ್‌ಸನ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು – 560005.
ಸಂಖ್ಯೆ: ಕಾಅ/ಪುನ/ಟೆಂಡರ್/ಪಿಆರ್/04/2025–26 ದಿನಾಂಕ: 30–12–2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ವಿಭಾಗ, ಬೆಂಉನಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ನೋಂದಾಯಿಸಿರುವ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ–2, ಕೆಡಬ್ಲ್ಯೂ–3 ಮತ್ತು ಕೆಡಬ್ಲ್ಯೂ–4)

ಕ್ರ. ಸಂ.	ಕಾಮಗಾರಿಯ ಹೆಸರು
	ಸಾಮಾನ್ಯ ಪ್ರವರ್ಗದ ಕಾಮಗಾರಿಗಳು
1	ವಾರ್ಡ್ ಸಂಖ್ಯೆ. 48 (71), ಮುನೇಶ್ವರನಗರ (ಬ್ಲಾಕ್ ಸಂಖ್ಯೆ. 44 ಮತ್ತು 46) ರಲ್ಲಿನ ಕುಪಂ ಬೀದಿ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆ ಹಾಗೂ ಚರಂಡಿಯ ಸುಧಾರಣೆಗಳ ಕಾಮಗಾರಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 50.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 100000.00
2	ಪುಲಿಕೇಶಿನಗರ ವಿಭಾಗದ ವಾರ್ಡ್ ಸಂಖ್ಯೆ. 31, ಕುಶಾಲನಗರ ಇಲ್ಲಿನ ಬಸವನಗರ ಮತ್ತು ಅಶೋಕನಗರ ಸುತ್ತಮುತ್ತಲ ಅಡ್ಡರಸ್ತೆಗಳಲ್ಲಿ ರಸ್ತೆ ಸುಧಾರಣೆ ಹಾಗೂ ಆರ್‌ಸಿಸಿ ಚರಂಡಿ ನಿರ್ಮಾಣ ಕಾಮಗಾರಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 200000.00
3	ವಾರ್ಡ್ ಸಂಖ್ಯೆ. 69 (32), ಕಾವಲ್‌ಬೈರಸಂದ್ರ ಹಾಗೂ ಸುತ್ತಮುತ್ತ ಪ್ರದೇಶ (ಬ್ಲಾಕ್ ಸಂಖ್ಯೆ. 19) ರಲ್ಲಿನ ಶಾಂಪುರ ಓಲ್ಡ್ ವಿಲೇಜ್ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿಯ ಸುಧಾರಣೆಗಳ ಕಾಮಗಾರಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 50.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 100000.00
4	ವಾರ್ಡ್ ಸಂಖ್ಯೆ. 47, ಡಿ.ಜೆ. ಹಳ್ಳಿ ಇಲ್ಲಿನ ತಂಗಮ್ಮಲೈನಗರ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆಗಳು ಹಾಗೂ ಚರಂಡಿಯ ಸುಧಾರಣೆಗಳ ಕಾಮಗಾರಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 300.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 450000.00
5	ಡಿ.ಜೆ. ಹಳ್ಳಿ ವಾರ್ಡ್‌ನಲ್ಲಿನ ದೊಡ್ಡಮ್ಮನಗರ ಕಾಲೋನಿ ಮತ್ತು 'ಇ' ಬ್ಲಾಕ್ ನಲ್ಲಿ ರಸ್ತೆಗಳು ಹಾಗೂ ಚರಂಡಿಯ ಸುಧಾರಣೆಗಳ ಕಾಮಗಾರಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 200.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 300000.00
6	2025–26 ನೇ ಸಾಲಿಗೆ ವಾರ್ಡ್ ಸಂಖ್ಯೆ. 72 (47), ಡಿ.ಜೆ. ಹಳ್ಳಿಯಲ್ಲಿರುವ ರೋಷನ್‌ನಗರ ಹತ್ತಿರದ ಬಿಬಿಎಂಪಿ ಕ್ವಾರ್ಟರ್ಸ್‌ಗೆ ಹೆಚ್ಚುವರಿ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 200000.00
	ಪರಿಶಿಷ್ಟ ಜಾತಿ ಪ್ರವರ್ಗದ ಕಾಮಗಾರಿ
1	ಪುಲಿಕೇಶಿನಗರ ವಿಭಾಗದ ವಾರ್ಡ್ ಸಂಖ್ಯೆ. 71 (48) ರಲ್ಲಿರುವ ಅಂಬೇಡ್ಕರ್ ಫುಟ್ಬಾಲ್ ಮೈದಾನ ಮತ್ತು ಕನ್ನಡ ಮಾದರಿ ಶಾಲೆ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆ ಹಾಗೂ ಚರಂಡಿಯ ಸುಧಾರಣೆ ಕಾಮಗಾರಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 100000.00
	ಪರಿಶಿಷ್ಟ ಪಂಗಡ ಪ್ರವರ್ಗದ ಕಾಮಗಾರಿಗಳು
1	ವಾರ್ಡ್ ಸಂಖ್ಯೆ. 31 (70), ಕುಶಾಲನಗರ (ಬ್ಲಾಕ್ ಸಂಖ್ಯೆ. 25) ರಲ್ಲಿನ ಅಶೋಕನಗರ ಸರ್ಕಾರಿ ಕನ್ನಡ ತಮಿಳು ಕಿರಿಯ ಪ್ರಾಥಮಿಕ ಶಾಲೆ ಹತ್ತಿರ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆಗಳು ಹಾಗೂ ಚರಂಡಿಯ ಸುಧಾರಣೆಗಳ ಕಾಮಗಾರಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 50.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50000.00
2	2025–26 ನೇ ಸಾಲಿಗೆ ವಾರ್ಡ್ ಸಂಖ್ಯೆ. 69 (32) ಕಾವಲ್‌ಬೈರಸಂದ್ರದಲ್ಲಿ ವಾರ್ಡ್ ಕಛೇರಿ ಕಟ್ಟಡ ಹಾಗೂ ಇತರೆ ಕ್ಷೇತ್ರದ ಕೆಲಸಗಳ ಕಾಮಗಾರಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 100000.00
	ಪ್ರವರ್ಗ–I ಪ್ರವರ್ಗದ ಕಾಮಗಾರಿ
1	ಪುಲಿಕೇಶಿನಗರ ವಿಭಾಗದ ವಾರ್ಡ್ ಸಂಖ್ಯೆ. 48 ರಲ್ಲಿರುವ ಪೆರಿಯಾರ್‌ನಗರ ಸುತ್ತಮುತ್ತಲಿನ ಅಡ್ಡರಸ್ತೆ ಮತ್ತು ಡಿ.ಜೆ. ಹಳ್ಳಿ ಮೆಟರ್ನಿಟಿ ಆಸ್ಪತ್ರೆ ಸುತ್ತಮುತ್ತಲಿನ ರಸ್ತೆ ಪ್ರದೇಶದಲ್ಲಿನ ಅಡ್ಡರಸ್ತೆಗಳಲ್ಲಿ ರಸ್ತೆ ಹಾಗೂ ಚರಂಡಿಯ ಸುಧಾರಣೆ ಕಾಮಗಾರಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 100000.00
	ಪ್ರವರ್ಗ–II(ಎ) ಪ್ರವರ್ಗದ ಕಾಮಗಾರಿ
1	ವಾರ್ಡ್ ಸಂಖ್ಯೆ. 48 (71), ಮುನೇಶ್ವರನಗರ (ಬ್ಲಾಕ್ ಸಂಖ್ಯೆ. 56 ಮತ್ತು 57) ರಲ್ಲಿನ ರಾಮ ದೇವಸ್ಥಾನ ಮತ್ತು ಪೆರಿಯಾರ್‌ನಗರ ಅಡ್ಡರಸ್ತೆಗಳು ಹಾಗೂ ಸುತ್ತಮುತ್ತ ಪ್ರದೇಶದಲ್ಲಿ ರಸ್ತೆ ಹಾಗೂ ಚರಂಡಿಯ ಸುಧಾರಣೆಗಳ ಕಾಮಗಾರಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 50.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 50000.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 09–01–2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯು ದಿನಾಂಕ: 19–01–2026 ರಂದು 15.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಪುಲಿಕೇಶಿನಗರ ವಿಭಾಗ, ರಾಬರ್ಟ್‌ಸನ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು – 560005 ಇಲ್ಲಿ ನಡೆಯುವುದು. 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 30–01–2026 ರಂದು 16.00 ಗಂಟೆವರೆಗೆ. 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 31–01–2026 ರಂದು 16.30 ಗಂಟೆಯ ನಂತರ. 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಯ ನಂತರ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ಪುಲಿಕೇಶಿನಗರ ವಿಭಾಗ, ಬೆಂಉನಪಾ.

‘ನೆರೆ ಸಂತ್ರಸ್ತರಿಗೆ ಮನೆ ಯಾವಾಗ ನೀಡ್ತೀರಿ?’

ಕೋಗಿಲು ಒತ್ತುವರಿ ಪ್ರದೇಶಕ್ಕೆ ಬಿಜೆಪಿ ನಿಯೋಗ ಭೇಟಿ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ವಿಪಕ್ಷ ನಾಯಕ ಅಶೋಕ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅತಿವೃಷ್ಟಿಯಲ್ಲಿ ಸೂರು ಕಳೆದುಕೊಂಡ ರಾಜ್ಯದ 13,000 ಕುಟುಂಬಗಳಿಗೆ ಮನೆ ಯಾವಾಗ ನೀಡುತ್ತೀರಿ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದರು.

ಈಚೆಗೆ ಒತ್ತುವರಿ ತೆರವು ಕಾರ್ಯಾಚರಣೆ ನಡೆದಿದ್ದ ನಗರದ ಕೋಗಿಲು ಗ್ರಾಮದ ಕಲ್ಲು ಕ್ವಾರಿ ಪ್ರದೇಶದಲ್ಲಿ ಇರುವ ಫಕೀರ ಕಾಲೊನಿ ಮತ್ತು ವಸೀಂ ಕಾಲೊನಿಗೆ ಆರ್. ಅಶೋಕ ನೇತೃತ್ವದ ಬಿಜೆಪಿ ನಿಯೋಗವು ಬುಧವಾರ ಭೇಟಿ ನೀಡಿತ್ತು. ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಸಿ.ಎನ್.ಅಶ್ವತ್ಥ ನಾರಾಯಣ್ ಮತ್ತು ಸ್ಥಳೀಯ ಬಿಜೆಪಿ ಮುಖಂಡರು ನಿಯೋಗದಲ್ಲಿ ಇದ್ದರು.

ತೆರವು ಕಾರ್ಯಾಚರಣೆಯಲ್ಲಿ ಕೆಡವಲಾದ ಮನೆಗಳ ಅವಶೇಷಗಳ ಮೇಲೆ ನಿರ್ಮಿಸಿಕೊಂಡಿರುವ ಟೆಂಟ್‌ಗಳನ್ನು ಪರಿಶೀಲಿಸಿದ ಅವರು, ಅಲ್ಲಿದ್ದವರಿಗೆ ಹತ್ತಾರು ಪ್ರಶ್ನೆಗಳನ್ನು ಹಾಕಿದರು. ‘ನಿಮ್ಮ ಊರು ಯಾವುದು? ಯಾವ ದೇಶದವರು? ಬಾಂಗ್ಲಾದವರಾ’ ಎಂದು ಪ್ರಶ್ನಿಸಿದರು.

‘ಎಷ್ಟು ವರ್ಷದಿಂದ ಇಲ್ಲಿದ್ದೀಯಮ್ಮಾ’ ಎಂದು ಮುಸ್ಲಿಂ ಮಹಿಳೆಯೊಬ್ಬರನ್ನು ಅಶೋಕ ಅವರು ಪ್ರಶ್ನಿಸಿದಾಗ ಆಕೆ, ‘25 ವರ್ಷಗಳಿಂದ’ ಎಂದು ಅರೆಬರೆ ಕನ್ನಡದಲ್ಲಿ ಉತ್ತರಿಸಿದರು. ಅದಕ್ಕೆ ಅಶೋಕ, ‘25 ವರ್ಷಗಳಿಂದ ಇಲ್ಲಿದ್ದರೆ ಕನ್ನಡ ಏಕೆ ಬರುವುದಿಲ್ಲ? ಸುಳ್ಳು ಹೇಳುತ್ತಿದ್ದೀರಾ’ ಎಂದು ಮರುಪ್ರಶ್ನಿಸಿದರು. ಮತ್ತೊಬ್ಬ ಮುಸ್ಲಿಂ ವ್ಯಕ್ತಿ ಕನ್ನಡದಲ್ಲಿ ಉತ್ತರಿಸಿದಾಗ, ‘ಬಿಜೆಪಿಯವರು ಇಲ್ಲಿಗೆ ಬರುತ್ತಾರೆಂದು ಗೊತ್ತಾದ ಮೇಲೆ ಕನ್ನಡ ಗೊತ್ತಿರುವವರನ್ನು ಇಲ್ಲಿಗೆ ಕರೆಸಿದ್ದಾರಾ’ ಎಂದರು.

ಮನೆ ಕಳೆದುಕೊಂಡವರ ಆಧಾರ್ ಚೀಟಿ, ಮತದಾರರ ಗುರುತಿನ ಚೀಟಿ ಮತ್ತು ಪಡಿತರ ಚೀಟಿಗಳನ್ನು ಬಿಜೆಪಿ ನಾಯಕರು ಪರಿಶೀಲಿಸಿದರು. ಜತೆಗೆ ಅವರ ವಿವರಗಳನ್ನು ಬರೆದುಕೊಂಡರು.

ಭೇಟಿಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಅಶೋಕ ಅವರು, ‘ಇವರೆಲ್ಲಾ ಅಕ್ರಮ ವಲಸಿಗರು, ಬಾಂಗ್ಲಾದೇಶದಿಂದ ಬಂದಿದ್ದಾರೆ. ಕಾಂಗ್ರೆಸ್ ಸರ್ಕಾರವು ಇವರಿಗೆ ಯಾವ ಆಧಾರದಲ್ಲಿ ಮನೆ ನೀಡುತ್ತದೆ? ಅತಿವೃಷ್ಟಿಯಿಂದ ಮನೆ ಕಳೆದುಕೊಂಡ 13,000 ಕುಟುಂಬಗಳು ಈಗಲೂ ಬೀದಿಯಲ್ಲಿವೆ. 2,500 ಶಾಲೆಗಳಿಗೆ ಹಾನಿಯಾಗಿದೆ. ಕನ್ನಡಿಗರಿಗೆ ಮನೆ ನೀಡದ ಸರ್ಕಾರ, ಅಕ್ರಮ ವಲಸಿಗರಿಗೆ ಫ್ಲ್ಯಾಟ್‌ಗಳನ್ನು ನೀಡುತ್ತಿದೆ. ಇಲ್ಲಿ ಮಿನಿ ಬಾಂಗ್ಲಾದೇಶ ನಿರ್ಮಿಸುತ್ತಿದೆ’ ಎಂದು ಆರೋಪಿಸಿದರು.

‘ರಾಜ್ಯದಲ್ಲಿ 4 ಲಕ್ಷ ಬಡ ಜನರ ಮನೆಗಳಿಗೆ ವಿದ್ಯುತ್ ಸಂಪರ್ಕವಿಲ್ಲ. ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆ ನಿರ್ಮಿಸಿದ್ದವರಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿದ್ಯುತ್ ಸಂಪರ್ಕ ಹೇಗೆ ನೀಡಿದರು’ ಎಂದು ಪ್ರಶ್ನಿಸಿದರು.

ಜ. 2ಕ್ಕೆ ಮನೆಗಳ ಹಂಚಿಕೆ: ಜಮೀರ್

‘ಕೋಗಿಲು ಕ್ವಾರಿ ಪ್ರದೇಶದಲ್ಲಿ ಮನೆ ಕಳೆದುಕೊಂಡವರ ಪೈಕಿ ಅರ್ಹರಿಗೆ ಜನವರಿ 2ರಂದು ಮನೆಗಳನ್ನು ಹಂಚಿಕೆ ಮಾಡಲಾಗುವುದು’ ಎಂದು ವಸತಿ ಸಚಿವ ಬಿ.ಝೆಡ್. ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

‘ಅರ್ಹರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದಿಂದ ಪರ್ಯಾಯವಾಗಿ ಶಾಶ್ವತ ವಸತಿ ವ್ಯವಸ್ಥೆ ಮಾಡಿ ಕೊಡಲಾಗುತ್ತಿದೆ’ ಎಂದಿದ್ದಾರೆ.

‘ಅಕ್ರಮ ಮನೆಗಳ ತೆರವು ಕಾರ್ಯಾಚರಣೆಯಿಂದ ಮನೆ ಕಳೆದುಕೊಂಡವರಲ್ಲಿ ಅರ್ಹರು ಯಾರಿದ್ದಾರೆ ಎಂಬ ಬಗ್ಗೆ ದಾಖಲೆ ಪರಿಶೀಲನೆ ನಡೆಯುತ್ತಿದೆ. ಅರ್ಹರಿಗಷ್ಟೇ ಮನೆ ನಿರ್ಮಾಣ ಮಾಡಿಕೊಡುವುದು ಸರ್ಕಾರದ ಉದ್ದೇಶ. ಹೀಗಾಗಿ, ತರಾತುರಿ ಮಾಡಿದೇ ದಾಖಲೆಗಳ ಸಮಗ್ರ ಪರಿಶೀಲನೆ ಮಾಡುವಂತೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಕಂದಾಯ ಇಲಾಖೆ ಹಾಗೂ ಬಿಬಿಎಂಪಿ ಅಧಿಕಾರಿಗಳು ಆ ಕಾರ್ಯದಲ್ಲಿ ನಿರತರಾಗಿದ್ದಾರೆ’ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

> **ಇಲ್ಲಿದ್ದ ಬಾಂಗ್ಲಾದೇಶದ ಅಕ್ರಮ ವಲಸಿಗರನ್ನು ರಾಜ್ಯ ಸರ್ಕಾರದ ಸಚಿವರೇ ಬಂದು ಬೇರೆಡೆಗೆ ಸ್ಥಳಾಂತರ ಮಾಡಿಸಿದ್ದಾರೆ. ಈ ಪ್ರಕರಣವನ್ನು ಎನ್‌ಐಎ ತನಿಖೆಗೆ ಒಪ್ಪಿಸಬೇಕು**
> **ಛಲವಾದಿ ನಾರಾಯಣಸ್ವಾಮಿ,** ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ

> **ಅಕ್ರಮ ವಲಸಿಗರನ್ನು ದೇಶದಿಂದ ಹೊರಹಾಕುವ ಕೆಲಸ ಆಗಬೇಕು. ಆದರೆ ರಾಜ್ಯ ಸರ್ಕಾರವು ಇಲ್ಲಿ ನೆಲೆಸಿದ್ದವರು ಬಾಂಗ್ಲಾದವರು ಎಂಬ ಸತ್ಯವನ್ನೇ ಮುಚ್ಚಿಹಾಕಲು ಹೊರಟಿದೆ**
> **ಸಿ.ಎನ್.ಅಶ್ವತ್ಥ ನಾರಾಯಣ್** ಬಿಜೆಪಿ ಶಾಸಕ

ಕೋಗಿಲು ಗ್ರಾಮದ ಫಕೀರ ಕಾಲೊನಿ ಮತ್ತು ವಸೀಂ ಕಾಲೊನಿಯಲ್ಲಿ ನಡೆದಿದ್ದ ತೆರವು ಕಾರ್ಯಾಚರಣೆಯಲ್ಲಿ ಮನೆ ಕಳೆದುಕೊಂಡ ನಿವಾಸಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಬಿಜೆಪಿಯ ಅಶ್ವತ್ಥ ನಾರಾಯಣ್, ಆರ್.ಅಶೋಕ ಮತ್ತು ಛಲವಾದಿ ನಾರಾಯಣಸ್ವಾಮಿ ಅವರು ಪರಿಶೀಲಿಸಿದರು

ಕೋಗಿಲು: ಬಿಜೆಪಿ ಸತ್ಯ ಶೋಧನಾ ತಂಡ ರಚನೆ

ಕೋಗಿಲು ಬಡಾವಣೆಯಲ್ಲಿ ಇತ್ತೀಚೆಗೆ ಮನೆಗಳನ್ನು ನೆಲಸಮ ಮಾಡಿರುವ ಘಟನೆಗೆ ಸಂಬಂಧಿಸಿದಂತೆ ಅಧ್ಯಯನ ನಡೆಸಿ ವರದಿ ಪಡೆಯಲು ಬಿಜೆಪಿಯು ಸತ್ಯ ಶೋಧನಾ ತಂಡವನ್ನು ರಚಿಸಿದೆ.

ಶಾಸಕರಾದ ಎಸ್.ಆರ್.ವಿಶ್ವನಾಥ್, ಎಸ್.ಮುನಿರಾಜು, ವಿಧಾನಪರಿಷತ್ ಸದಸ್ಯ ಕೆ.ಎಸ್. ನವೀನ್, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ಕಾರ್ಯದರ್ಶಿ ತಮ್ಮೇಶ್ ಗೌಡ, ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಹರೀಶ್, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ತಂಡದಲ್ಲಿದ್ದಾರೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> **ಕೋಗಿಲು ಬಡಾವಣೆಯಲ್ಲಿ ಅಕ್ರಮವಾಗಿ ನೆಲೆಸಿದ್ದ ವಲಸಿಗರು ಯಾರು? ಅವರು ಅಲ್ಲಿ ನೆಲೆಸಲು ಅವಕಾಶ ಕೊಟ್ಟಿದ್ದು ಯಾರು ಎಂಬುದರ ಬಗ್ಗೆ ಸಮಗ್ರ ತನಿಖೆಗೆ ಎಸ್‌ಐಟಿ ರಚಿಸಬೇಕು**
> **ಡಾ.ವೈ. ಭರತ್ ಶೆಟ್ಟಿ,** ಶಾಸಕ, ಮಂಗಳೂರು

ಸುದ್ದಿ 2 ನಿಮಿಷ

ಪೊಲೀಸರಿಗೆ ವರ್ಷಕ್ಕೆ 13 ತಿಂಗಳು ವೇತನ

ಬೆಂಗಳೂರು: ಕಾನ್‌ಸ್ಟೆಬಲ್‌ಗಳಿಂದ ಎಸ್.ಪಿ ದರ್ಜೆಯ (ನಾನ್ ಐಪಿಎಸ್) ಅಧಿಕಾರಿಗಳಿಗೆ ‘ಪತ್ರಾಂಕಿತ ರಜೆ’ (ಗೆಜೆಟೆಡ್ ಲೀವ್) ಸೌಲಭ್ಯ ಮಂಜೂರು ಮಾಡಲು ಪೊಲೀಸ್ ಮಹಾ ನಿರ್ದೇಶಕರು ಮುಂದಾಗಿದ್ದು, ಇದಕ್ಕಾಗಿ ಹೆಚ್ಚುವರಿ ಅನುದಾನ ಬಿಡುಗಡೆಗೆ ಕ್ರಮಕೈಗೊಳ್ಳುವಂತೆ ಕೋರಿ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಹಬ್ಬಗಳ ಸಂದರ್ಭದಲ್ಲೂ ರಜೆ ಸಿಗದೇ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿ, ಅಧಿಕಾರಿಗಳಿಗೆ ಶೀಘ್ರದಲ್ಲೇ ವಾರ್ಷಿಕವಾಗಿ 13 ತಿಂಗಳು ವೇತನ ದೊರೆಯುವ ಸಾಧ್ಯತೆಯಿದೆ.

ಇಲಾಖೆಯ ಪ್ರಸ್ತಾವಕ್ಕೆ ಸರ್ಕಾರ ಒಪ್ಪಿಗೆ ಸೂಚಿಸಿ ಆರ್ಥಿಕ ನೆರವು ಒದಗಿಸಿದರೆ, ಪೊಲೀಸ್ ಇನ್‌ಸ್ಪೆಕ್ಟರ್, ಆರ್‌ಪಿಐ, ಡಿವೈಎಸ್‌ಪಿ (ಸಿವಿಲ್ ಹಾಗೂ ಸಶಸ್ತ್ರ), ಎಸ್.ಪಿ (ಸಿವಿಲ್ ಹಾಗೂ ಸಶಸ್ತ್ರ –ನಾನ್ ಐಪಿಎಸ್), ಹುದ್ದೆಯವರಿಗೆ 30 ದಿನ ಹೆಚ್ಚುವರಿ ವೇತನ ಸೌಲಭ್ಯ ದೊರೆಯಲಿದೆ.

ಸರ್ಕಾರಿ ರಜಾ ದಿನಗಳಂದು ಕೆಲಸ ಮಾಡುವ ಕಾನ್‌ಸ್ಟೆಬಲ್, ಹೆಡ್ ಕಾನ್‌ಸ್ಟೆಬಲ್‌ಗಳಿಗೆ ಮಾತ್ರ 30 ದಿನ ರಜೆ ಸೌಲಭ್ಯವಿದೆ. ಎಎಸ್‌ಐ, ಪಿಎಸ್‌ಐ ಹುದ್ದೆಗೆ 15 ದಿನ ಪತ್ರಾಂಕಿತ ರಜೆ ನೀಡಲಾಗುತ್ತಿದೆ. ಎಎಸ್‌ಐ–ಪಿಎಸ್‌ಐಗಳಿಗೆ ಕೊಡುತ್ತಿರುವ ಹೆಚ್ಚುವರಿ ಅರ್ಧ ತಿಂಗಳ ವೇತನವನ್ನು 30 ದಿನಕ್ಕೆ ವಿಸ್ತರಿಸಲು ಹಾಗೂ ಹೊಸದಾಗಿ ಇನ್‌ಸ್ಪೆಕ್ಟರ್ ಹುದ್ದೆಯಿಂದ ಎಸ್.ಪಿ ಹುದ್ದೆವರೆಗೆ 30 ದಿನ ರಜಾ ಸೌಲಭ್ಯ ಕಲ್ಪಿಸಲು ಉನ್ನತಾಧಿಕಾರಿಗಳ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಸಭೆಯ ವರದಿಯನ್ನು ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸಲ್ಲಿಸಲಾಗಿದೆ.

ಎಎಸ್‌ಐ ಮತ್ತು ಪಿಎಸ್‌ಐಗಳಿಗೆ ನೀಡುತ್ತಿರುವ 15 ದಿನಗಳ ರಜಾ ವೇತನವನ್ನು 30 ದಿನಗಳಿಗೆ ಹೆಚ್ಚಿಸಲು ₹60.76 ಕೋಟಿ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. ಅದೇ ರೀತಿ ಪಿ.ಐಯಿಂದ ಎಸ್.ಪಿ ಹುದ್ದೆವರೆಗೆ 30 ದಿನಗಳ ಪತ್ರಾಂಕಿತ ರಜಾ ಸೌಲಭ್ಯಕ್ಕೆ ಅಂದಾಜು ₹28.55 ಕೋಟಿ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ.

‘ಪೊಲೀಸ್ ಸಿಬ್ಬಂದಿ ಹೊರತುಪಡಿಸಿ ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರಿಗೆ ಹಬ್ಬದಗಳಲ್ಲಿ ರಜೆ ದೊರೆಯುತ್ತಿದೆ. ಆದರೆ, ಪೊಲೀಸರು ಹಬ್ಬದ ಸಂದರ್ಭದಲ್ಲೂ ರಜೆ ಸಿಗದೇ ಕೆಲಸ ಮಾಡುತ್ತಿದ್ದು, ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಹೆಚ್ಚುವರಿ ವೇತನ ನೀಡುವುದರಿಂದ ಸಿಬ್ಬಂದಿಗೆ ಅನುಕೂಲ ಆಗಲಿದೆ’ ಎಂದು ಅಧಿಕಾರಿ ಯೊಬ್ಬರು ಹೇಳಿದರು.

ಬಿಡಿಎ ಸರ್ವೆ ಮೇಲ್ವಿಚಾರಕ ₹1.53 ಕೋಟಿ ಒಡೆಯ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಪ್ರಕರಣದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಸರ್ವೆ ಮೇಲ್ವಿಚಾರಕ ಡಿ.ವೆಂಕಟೇಶ್ ಅವರ ಮನೆಯ ಮೇಲೆ ದಾಳಿ ನಡೆಸಿದ್ದ ಲೋಕಾಯುಕ್ತ ಪೊಲೀಸರು, ₹1.53 ಕೋಟಿ ಮೊತ್ತದ ಆಸ್ತಿಗಳನ್ನು ಪತ್ತೆ ಮಾಡಿದ್ದಾರೆ.

ವೆಂಕಟೇಶ್ ಅವರ ವಿರುದ್ಧ ಬಾಗಲಕೋಟೆಯ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಬೆಂಗಳೂರಿನಲ್ಲಿ ವೆಂಕಟೇಶ್ ಅವರಿಗೆ ಸೇರಿದ ಐದು ಸ್ಥಳಗಳಲ್ಲಿ ಬುಧವಾರ ಬೆಳಿಗ್ಗೆ ದಾಳಿ ನಡೆಸಿದ್ದ ಲೋಕಾಯುಕ್ತ ಪೊಲೀಸರು, ತಡರಾತ್ರಿಯ ವರೆಗೆ ಶೋಧ ನಡೆಸಿದ್ದರು. ಈ ವೇಳೆ ವೆಂಕಟೇಶ್ ಅವರಿಗೆ ಸೇರಿದ ₹90.77 ಲಕ್ಷ ಮೌಲ್ಯದ 7 ನಿವೇಶನಗಳು, 6 ಎಕರೆ 20 ಗುಂಟೆ ಕೃಷಿ ಜಮೀನು ಮತ್ತು ಒಂದು ಮನೆ ಪತ್ತೆಯಾಗಿದೆ. ₹29 ಲಕ್ಷ ಮೌಲ್ಯದ ಚಿನ್ನಾಭರಣಗಳು, ₹32 ಲಕ್ಷ ಮೌಲ್ಯದ ವಾಹನಗಳು ಪತ್ತೆಯಾಗಿವೆ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಐಪಿಎಸ್ ಅಧಿಕಾರಿಗಳಿಗೆ ಮುಂಬಡ್ತಿ, ವರ್ಗಾವಣೆ

ಬೆಂಗಳೂರು: 48 ಐಪಿಎಸ್ ಅಧಿಕಾರಿಗಳಿಗೆ ಮುಂಬಡ್ತಿ ನೀಡಿ ಮತ್ತು ವಿವಿಧ ಜಿಲ್ಲೆಗಳ ಎಸ್‌ಪಿಗಳು ಹಾಗೂ ಬೆಂಗಳೂರು ನಗರದ ಡಿಸಿಪಿಗಳನ್ನು ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಇಬ್ಬರು ಅಧಿಕಾರಿಗಳಿಗೆ ಐಜಿಪಿ ಹುದ್ದೆಗೆ ಪದೋನ್ನತಿ ನೀಡಲಾಗಿದೆ. 23 ಅಧಿಕಾರಿಗಳಿಗೆ ಡಿಐಜಿ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ. ಬೆಂಗಳೂರು ನಗರ, ಬೆಳಗಾವಿ, ಮೈಸೂರು, ಶಿವಮೊಗ್ಗ, ಕೊಡಗು ಸೇರಿದಂತೆ ಪ್ರಮುಖ ಜಿಲ್ಲೆಗಳ ಎಸ್‌ಪಿ ಮತ್ತು ನಗರದ ಡಿಸಿಪಿಗಳನ್ನು ಬದಲಾಯಿಸಲಾಗಿದೆ.

ಬೆಂಗಳೂರು ನಗರದಲ್ಲಿ ವೈಟ್‌ಫೀಲ್ಡ್ ವಿಭಾಗಕ್ಕೆ ಸೈದುಲು ಅದಾವತ್, ಪಶ್ಚಿಮ ವಿಭಾಗಕ್ಕೆ ಎನ್. ಯತೀಶ್, ಈಶಾನ್ಯ ವಿಭಾಗಕ್ಕೆ ಮಿಥುನ್ ಕುಮಾರ್, ಪೂರ್ವ ವಿಭಾಗಕ್ಕೆ ವಿಕ್ರಮ್ ಆಮ್ಟೆ ಹಾಗೂ ಆಗ್ನೇಯ ವಿಭಾಗಕ್ಕೆ ಮಹಮ್ಮದ್ ಸುಜೀತಾ ಅವರನ್ನು ಡಿಸಿಪಿಗಳಾಗಿ ವರ್ಗಾವಣೆ ಮಾಡಲಾಗಿದೆ. ಬೆಳಗಾವಿ ಎಸ್‌ಪಿ ಭೀಮಾಶಂಕರ್ ಗುಳೇದ್ ಅವರಿಗೆ ಡಿಐಜಿ ಆಗಿ ಮುಂಬಡ್ತಿ ನೀಡಿ ಸಿಐಡಿ (ಆರ್ಥಿಕ ಅಪರಾಧ) ವಿಭಾಗಕ್ಕೆ ವರ್ಗಾಯಿಸಲಾಗಿದೆ.

ಮುಂಬಡ್ತಿ ಮತ್ತು ವರ್ಗಾವಣೆಗೊಂಡವರು

- **ಡಾ. ಎಂ.ಬಿ. ಬೋರಲಿಂಗಯ್ಯ**– ಐಜಿಪಿ, ದಕ್ಷಿಣ ವಲಯ, ಮೈಸೂರು
- **ಭೀಮಾಶಂಕರ್ ಗುಳೇದ್**– ಡಿಐಜಿಪಿ, ಸಿಐಡಿ (ಆರ್ಥಿಕ ಅಪರಾಧ)
- **ಇಲಾಕ್ಕಿಯ ಕರುಣಾಕರನ್**– ಡಿಐಜಿಪಿ, ವೈರ್‌ಲೆಸ್ (ನಿಸ್ತಂತು)
- **ವೇದಮೂರ್ತಿ**– ಡಿಐಜಿಪಿ, ರಾಜ್ಯ ಗುಪ್ತಚರ
- **ಕೆ.ಎಂ. ಶಾಂತರಾಜು**– ಡಿಐಜಿಪಿ, ಐಎಸ್‌ಡಿ
- **ಹನುಮಂತರಾಯ**– ಡಿಐಜಿಪಿ, ಎಸ್‌ಎಚ್‌ಆರ್‌ಸಿ
- **ಡಿ. ದೇವರಾಜು**– ಡಿಐಜಿಪಿ, ತರಬೇತಿ
- **ಡಾ. ಸಿರಿ ಗೌರಿ**– ಡಿಐಜಿಪಿ, ಲೋಕಾಯುಕ್ತ
- **ಡಾ. ಕೆ. ಧರಣಿ ದೇವಿ**– ಡಿಐಜಿಪಿ, ಗುಪ್ತಚರ
- **ಎಸ್. ಸವಿತಾ**– ಡಿಐಜಿಪಿ, ಗೃಹ ರಕ್ಷಕ ದಳ
- **ಸಿ.ಕೆ. ಬಾಬಾ**– ಡಿಐಜಿಪಿ, ಕೆಎಸ್‌ಆರ್‌ಪಿ
- **ಅಬ್ದುಲ್ ಅಹದ್** – ನಿರ್ದೇಶಕ, ಬಿಎಂಟಿಸಿ (ದರ್ಜೆ ಏರಿಕೆ)
- **ಎಸ್. ಗಿರೀಶ್**– ಡಿಐಜಿಪಿ, ಎಎನ್‌ಟಿಎಫ್
- **ಎಂ. ಪುಟ್ಟಮಾದಯ್ಯ**– ಡಿಐಜಿಪಿ, ಪ್ರಾಂಶುಪಾಲರು, ಪಿಟಿಸಿ ಕಲಬುರಗಿ
- **ಟಿ. ಶ್ರೀಧರ**– ಡಿಐಜಿಪಿ, ಕೇಂದ್ರ ಕಚೇರಿ
- **ಎ.ಎನ್. ಪ್ರಕಾಶ್ ಗೌಡ**– ಡಿಐಜಿಪಿ, ಎಸ್‌ಎಫ್
- **ಜಿನೇಂದ್ರ ಖನಗಾವಿ**– ಡಿಐಜಿಪಿ, ಕಾರಾಗೃಹ
2	A-87	2000	ಸಾಮಾನ್ಯ	7039	14078000	1407800	703900
3	B Spl-88	1881.60	ಸಾಮಾನ್ಯ	7039	13244582	1324458	662229
4	B Spl -110	1472.05	ಸಾಮಾನ್ಯ	7039	10361760	1036176	518088
5	B Spl -109	1245.05	ಸಾಮಾನ್ಯ	7039	8763907	876391	438195
6	B Spl-123	1157.50	ಸಾಮಾನ್ಯ	7039	8147643	814764	407382
7	B Spl-38	1045.50	ಸಾಮಾನ್ಯ	7039	7359275	735927	367964
8	C Spl-127	893.75	ಸಾಮಾನ್ಯ	7039	6291106	629111	314555
9	D Spl-145	770.28	ಸಾಮಾನ್ಯ	7039	5422001	542200	271100
10	C Spl -02	651.60	ಸಾಮಾನ್ಯ	7039	4586612	458661	229331
11	C Spl -03	573.25	ಸಾಮಾನ್ಯ	7039	4035107	403511	201755
12	C Spl -121	552	ಸಾಮಾನ್ಯ	7039	3885528	388553	194276
13	C Spl-115	547.50	ಸಾಮಾನ್ಯ	7039	3853853	385385	192693
14	C Spl-117	540	ಸಾಮಾನ್ಯ	7039	3801060	380106	190053
15	C-129, C-125, C Spl -122, C-66, C-65, C-53,	500 ಪ್ರತಿ ನಿವೇಶನ	ಸಾಮಾನ್ಯ	7039	3519500 ಪ್ರತಿ ನಿವೇಶನಕ್ಕೆ	351950 ಪ್ರತಿ ನಿವೇಶನಕ್ಕೆ	175975 ಪ್ರತಿ ನಿವೇಶನನಕ್ಕೆ
16	C Spl-128	456.25	ಸಾಮಾನ್ಯ	7039	3211544	321154	160577
17	D Spl-132	441.26	ಸಾಮಾನ್ಯ	7039	3106029	310603	155301
18	D Spl -108	432.50	ಸಾಮಾನ್ಯ	7039	3044368	304437	152218
19	D Spl-119	420	ಸಾಮಾನ್ಯ	7039	2956380	295638	147819
20	D Spl -139	387.50	ಸಾಮಾನ್ಯ	7039	2727613	272761	136381
21	D Spl-143	375	ಸಾಮಾನ್ಯ	7039	2639625	263963	131981
22	D Spl-113	342	ಸಾಮಾನ್ಯ	7039	2407338	240734	120367
23	D Spl-112	342	ಸಾಮಾನ್ಯ	7039	2407338	240734	120367
24	D Spl-138	338.52	ಸಾಮಾನ್ಯ	7039	2382842	238284	119142
25	D Spl-39	325	ಸಾಮಾನ್ಯ	7039	2287675	228768	114384
26	D-Spl-07	312.84	ಸಾಮಾನ್ಯ	7039	2202081	220208	110104
27	D-142, D-141, D-135, D-134, D-133, D-105, D-104, D-103, D-101, D-100, D-99, D-98, D-97, D-96, D-95, D-93, D-92, D-91, D-85, D-84, D-83, D-82, D-81, D-71, D-67, D-62, D-59, D-58, D-57, D-56, D-45, D-43, D-42, D-41, D-40, D-35, D-33, D-29, D-28, D-26, D-25, D-24, D-23, D-22, D-21, D-19, D-17, D-16, D-15, D-11, D-08, D-04	300 ಪ್ರತಿ ನಿವೇಶನ	ಸಾಮಾನ್ಯ	7039	2111700 ಪ್ರತಿ ನಿವೇಶನಕ್ಕೆ	211170 ಪ್ರತಿ ನಿವೇಶನಕ್ಕೆ	105585 ಪ್ರತಿ ನಿವೇಶನಕ್ಕೆ
28	D Spl -107	262.50	ಸಾಮಾನ್ಯ	7039	1847738	184774	92387
29	D Spl-68	262.5	ಸಾಮಾನ್ಯ	7039	1847738	184774	92387
30	D-Spl-06	286.08	ಸಾಮಾನ್ಯ	7039	2013717	201372	100686
31	D-18, D-31, D-37, D-47, D-55, D-60, D-140	300 ಪ್ರತಿ ನಿವೇಶನ	ಸಾಮಾನ್ಯ–ಮಹಿಳೆ	7039	2111700 ಪ್ರತಿ ನಿವೇಶನಕ್ಕೆ	211170 ಪ್ರತಿ ನಿವೇಶನಕ್ಕೆ	105585 ಪ್ರತಿ ನಿವೇಶನಕ್ಕೆ
32	B-Spl.-52	1735	ಸಾಮಾನ್ಯ–ಮಹಿಳೆ	7039	12212665	1221267	610633
33	D-Spl.111	342	ಸಾಮಾನ್ಯ–ಮಹಿಳೆ	7039	2407338	240734	120367
34	D-13, D-14, D-102	300 ಪ್ರತಿ ನಿವೇಶನ	ಪ.ಜಾ ಪ್ರವರ್ಗ–ಎ	7039	2111700 ಪ್ರತಿ ನಿವೇಶನಕ್ಕೆ	– ಪ್ರತಿ ನಿವೇಶನ	105585 ಪ್ರತಿ ನಿವೇಶನ
35	D Spl-64	325	ಪ.ಜಾ ಪ್ರವರ್ಗ–ಎ	7039	2287675	–	114384
36	C-89	500	ಪ.ಜಾ ಪ್ರವರ್ಗ–ಎ	7039	3519500	–	175975
37	D Spl-120	249.60	ಪ.ಜಾ ಪ್ರವರ್ಗ–ಎ	7039	1756934	–	87847
38	D-48	300	ಪ.ಜಾ ಪ್ರವರ್ಗ–ಎ–ಮಹಿಳೆ	7039	2111700	–	105585
39	D-78	300	ಪ.ಜಾ ಪ್ರವರ್ಗ–ಎ–ಮಹಿಳೆ	7039	2111700	–	105585
40	C Spl-118	500	ಪ.ಜಾ ಪ್ರವರ್ಗ–ಎ–ಮಹಿಳೆ	7039	3519500	–	175975
41	D-10, D-12, D-44, D-94	300 ಪ್ರತಿ ನಿವೇಶನ	ಪ.ಜಾ ಪ್ರವರ್ಗ–ಬಿ	7039	2111700 ಪ್ರತಿ ನಿವೇಶನಕ್ಕೆ	–	105585 ಪ್ರತಿ ನಿವೇಶನಕ್ಕೆ
42	B Spl-51	1246.56	ಪ.ಜಾ ಪ್ರವರ್ಗ–ಬಿ	7039	8774536	–	438727
43	C-130	500	ಪ.ಜಾ ಪ್ರವರ್ಗ–ಬಿ	7039	3519500	–	175975
44	D-74	300	ಪ.ಜಾ ಪ್ರವರ್ಗ–ಬಿ–ಮಹಿಳೆ	7039	2111700	–	105585
45	C-126	500	ಪ.ಜಾ ಪ್ರವರ್ಗ–ಬಿ–ಮಹಿಳೆ	7039	3519500	–	175975
46	C Spl -01	602.83	ಪ.ಜಾ ಪ್ರವರ್ಗ–ಸಿ	7039	4243320	–	212166
47	D Spl-05	290.02	ಪ.ಜಾ ಪ್ರವರ್ಗ–ಸಿ	7039	2041451	–	102073
48	D-09, D-20, D-137	300 ಪ್ರತಿ ನಿವೇಶನ	ಪ.ಜಾ ಪ್ರವರ್ಗ–ಸಿ	7039	2111700 ಪ್ರತಿ ನಿವೇಶನಕ್ಕೆ	–	105585 ಪ್ರತಿ ನಿವೇಶನಕ್ಕೆ
49	D-30	300	ಪ.ಜಾ ಪ್ರವರ್ಗ–ಸಿ–ಮಹಿಳೆ	7039	2111700	–	105585
50	D-136	300	ಪ.ಜಾ ಪ್ರವರ್ಗ–ಸಿ–ಮಹಿಳೆ	7039	2111700	–	105585
51	C Spl-116	580	ಪ.ಜಾ ಪ್ರವರ್ಗ–ಸಿ–ಮಹಿಳೆ	7039	4082620	–	204131
52	D-36, D-72, D-75, D-80	300 ಪ್ರತಿ ನಿವೇಶನ	ಪ.ಪಂ	7039	2111700 ಪ್ರತಿ ನಿವೇಶನಕ್ಕೆ	–	105585 ಪ್ರತಿ ನಿವೇಶನಕ್ಕೆ
‘53	C-86	500	ಪ.ಪಂ	7039	3519500	–	175975
54	D Spl-114	346.80	ಪ.ಪಂ	7039	2441125	–	122056
55	D Spl-144	642.36	ಪ.ಪಂ	7039	4521572	–	226079
56	D-27	300	ಪ.ಪಂ – ಮಹಿಳೆ	7039	2111700	–	105585
57	D-76	300	ಪ.ಪಂ – ಮಹಿಳೆ	7039	2111700	–	105585
58	C Spl-131	515.75	ಪ.ಪಂ – ಮಹಿಳೆ	7039	3630364	–	181518
59	C-49	500	ಪ್ರವರ್ಗ–1	7039	3519500	351950	175975
60	D-79	300	ಪ್ರವರ್ಗ–1	7039	2111700	211170	105585
61	D-90	300	ಪ್ರವರ್ಗ–1	7039	2111700	211170	105585
62	D-61, D-69, D-106	300 ಪ್ರತಿ ನಿವೇಶನ	ಪ್ರವರ್ಗ–2	7039	2111700 ಪ್ರತಿ ನಿವೇಶನಕ್ಕೆ	211170 ಪ್ರತಿ ನಿವೇಶನಕ್ಕೆ	105585 ಪ್ರತಿ ನಿವೇಶನಕ್ಕೆ
63	D-46	300	ಮಾಜಿ ಸೈನಿಕರು	7039	2111700	211170	105585
64	D-63	300	ಮಾಜಿ ಸೈನಿಕರು	7039	2111700	211170	105585
65	C-124	500	ಮಾಜಿ ಸೈನಿಕರು	7039	3519500	351950	175975
66	D-32, D-34, D-73	300 ಪ್ರತಿ ನಿವೇಶನ	ವಿಕಲಚೇತನರು	7039	2111700 ಪ್ರತಿ ನಿವೇಶನಕ್ಕೆ	211170 ಪ್ರತಿ ನಿವೇಶನಕ್ಕೆ	105585 ಪ್ರತಿ ನಿವೇಶನಕ್ಕೆ
67	D-54, D-70, D-77	300 ಪ್ರತಿ ನಿವೇಶನ	ಅಲ್ಪಸಂಖ್ಯಾತರು	7039	2111700 ಪ್ರತಿ ನಿವೇಶನಕ್ಕೆ	211170 ಪ್ರತಿ ನಿವೇಶನಕ್ಕೆ	105585 ಪ್ರತಿ ನಿವೇಶನಕ್ಕೆ

E&OE

ನಿಗದಿತ ಅರ್ಜಿ ನಮೂನೆಗಳನ್ನು ನಿಗಮದ ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಮೇಲಿನ ಕೈಗಾರಿಕಾ ವಸಾಹತುಗಳಲ್ಲಿರುವ ಕೈಗಾರಿಕಾ ನಿವೇಶನಗಳ ವಿವರಗಳಾದ ವಿಸ್ತೀರ್ಣ, ಮೌಲ್ಯ, ಮುಂಗಡ ಠೇವಣಿ ಮೊಬಲಗು, ಪರಿಶೀಲನಾ ಶುಲ್ಕ, ನೀಡಲಾಗುವ ಸಹಾಯಧನ, ಪ್ರವರ್ಗವಾರು ಮೀಸಲಾತಿ ವಿವರ, ಹಂಚಿಕೆ ಷರತ್ತು ಮತ್ತು ನಿಬಂಧನೆಗಳು ಹಾಗೂ ಇತರೆ ಸಮಗ್ರ ವಿವರಗಳನ್ನು ಸಂಬಂಧಪಟ್ಟ ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ),ಕಲಬುರಗಿ (ಮೊಬೈಲ್ ಸಂಖ್ಯೆ 9448104599) ಇವರಿಂದ ಪಡೆಯಬಹುದಾಗಿದೆ ಹಾಗೂ ಸದರಿ ವಿವರಗಳನ್ನು ನಿಗಮದ ವೆಬ್‌ಸೈಟ್ www.kssidc.co.in ನಲ್ಲಿಯೂ ವೀಕ್ಷಿಸಬಹುದಾಗಿರುತ್ತದೆ. ಭರ್ತಿ ಮಾಡಿದ ಅರ್ಜಿಗಳನ್ನು ಅರ್ಜಿ ಶುಲ್ಕ, ಮುಂಗಡ ಠೇವಣಿ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ದಿನಾಂಕ 31–01–2026 ಸಾಯಂಕಾಲ 5–00 ಗಂಟೆ ಒಳಗೆ ಸಂಬಂಧಪಟ್ಟ ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ವಿಭಾಗೀಯ ಕಛೇರಿ, ಕಲಬುರಗಿ ಕಛೇರಿಯಲ್ಲಿ ಸಲ್ಲಿಸಬಹುದಾಗಿದೆ.

ವಾ.ಸಾ.ಸಂ.ಇ/ವಾಪ್ರ/4758/ಆಕಾರ್/2025–26

ವ್ಯವಸ್ಥಾಪಕ ನಿರ್ದೇಶಕರು

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಬಾಳಿನ ಬೆನ್ನೆಲುಬು ವಿಶ್ವಾಸ. ವಿಶ್ವಾಸವೇ ವಿಶ್ವಚಾಲನೆಯ ಶ್ವಾಸ.

–ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ರಸ್ತೆ ಸುರಕ್ಷತೆ: ರಾಜಿ ಬೇಡ ಜೀವದೊಂದಿಗೆ ಆಟ ಸಲ್ಲದು

ಹಿರಿಯೂರು ತಾಲ್ಲೂಕು ಗೋರ್ಲಡುಕು ಕ್ರಾಸ್ ಬಳಿ ಡಿಸೆಂಬರ್ 25ರಂದು ಸಂಭವಿಸಿದ ಸ್ಲೀಪರ್ ಬಸ್ ಬೆಂಕಿಗೆ ಆಹುತಿಯಾದ ದುರಂತ ಮತ್ತೊಂದು ಅಪಘಾತದ ಘಟನೆ ಮಾತ್ರವಲ್ಲ; ಅದು, ಸುರಕ್ಷತೆಯನ್ನು ಐಚ್ಛಿಕ ಎಂದಷ್ಟೇ ಭಾವಿಸುವ ಸಾರಿಗೆ ವ್ಯವಸ್ಥೆಯ ನಿರೀಕ್ಷಿತ ಫಲಶ್ರುತಿಯಾಗಿದೆ. ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಖಾಸಗಿ ಸ್ಲೀಪರ್ ಬಸ್ ಹಾಗೂ ಕಂಟೇನರ್ ನಡುವೆ ಸಂಭವಿಸಿದ ಡಿಕ್ಕಿಯಲ್ಲಿ, ಕೆಲವೇ ನಿಮಿಷಗಳಲ್ಲಿ ಬಸ್ ಬೆಂಕಿಗೆ ತುತ್ತಾಗಿತ್ತು. ಆ ದುರ್ಘಟನೆಯಲ್ಲಿ ಏಳು ಜನರು ಸಾವಿಗೀಡಾಗಿ, ಹಲವರು ಗಾಯಗೊಂಡಿದ್ದರು. ಕುದಿ ಕುಲುಮೆಯಂತಾದ ಬಸ್ ನಿದ್ದೆಯಲ್ಲಿದ್ದವರ ಜೀವಗಳನ್ನು ಬಲಿತೆಗೆದುಕೊಂಡಿತ್ತು. ಹೊತ್ತಿ ಉರಿಯಬಹುದಾದ ತೈಲದ ಕ್ಯಾನ್‌ಗಳನ್ನು ಬಸ್‌ನಲ್ಲಿ ಸಾಗಿಸುತ್ತಿದ್ದು, ಅವುಗಳಿಂದಾಗಿಯೇ ಅಪಘಾತದಿಂದ ಉಂಟಾದ ಬೆಂಕಿಯು ತೀವ್ರ ಸ್ವರೂಪ ಪಡೆದುಕೊಂಡಿತು ಎನ್ನಲಾಗುತ್ತಿದೆ. ಎರಡು ತಿಂಗಳ ಹಿಂದಷ್ಟೇ, ಹೈದರಾಬಾದ್‌ನಿಂದ ಬೆಂಗಳೂರಿಗೆ ಬರುತ್ತಿದ್ದ ಸ್ಲೀಪರ್ ಬಸ್ ಆಂಧ್ರಪ್ರದೇಶದ ಕರ್ನೂಲ್ ಬಳಿ ಅಪಘಾತಕ್ಕೀಡಾಗಿ ಹೊತ್ತಿಕೊಂಡ ಬೆಂಕಿಯಲ್ಲಿ ಇಪ್ಪತ್ತು ಪ್ರಯಾಣಿಕರು ಸುಟ್ಟುಹೋಗಿದ್ದರು. ಆ ಬಸ್‌ನಲ್ಲಿ ಸಾಗಿಸುತ್ತಿದ್ದ ಸ್ಮಾರ್ಟ್ ಫೋನ್‌ಗಳ ಲಿಥಿಯಂ–ಅಯಾನ್ ಬ್ಯಾಟರಿಗಳ ಸ್ಫೋಟ ದುರಂತದ ತೀವ್ರತೆಯನ್ನು ಹೆಚ್ಚಿಸಿತು ಎನ್ನಲಾಗಿದೆ. ಆ ದುರಂತದಿಂದ ವ್ಯವಸ್ಥೆ ಯಾವ ಪಾಠವನ್ನೂ ಕಲಿಯಲಿಲ್ಲ ಎನ್ನುವುದಕ್ಕೆ ಹಿರಿಯೂರು ಸಮೀಪ ನಡೆದ ದುರ್ಘಟನೆಯು ಉದಾಹರಣೆಯಂತಿದೆ.

ಪ್ರಯಾಣಿಕರ ಸುರಕ್ಷತೆಯನ್ನು ಗಮನದಲ್ಲಿ ಇರಿಸಿಕೊಂಡು ಬಸ್‌ಗಳನ್ನು ವಿನ್ಯಾಸ ಮಾಡಲಾಗಿದೆಯೆ? ಬಸ್‌ಗಳಲ್ಲಿ ಯಾವೆಲ್ಲ ವಸ್ತುಗಳನ್ನು ಸಾಗಿಸಲು ಅನುಮತಿ ನೀಡಲಾಗಿದೆ? ಸಾವುನೋವಿನ ಘಟನೆಗಳ ನಂತರವಷ್ಟೇ ಕಾನೂನು ಉಲ್ಲಂಘನೆಗಳು ಬೆಳಕಿಗೆ ಬರುವುದು ಏಕೆ? ಹೀಗೆ, ಸರ್ಕಾರಕ್ಕೆ ಹಿತಕರವಲ್ಲದ ಪ್ರಶ್ನೆಗಳನ್ನು ಪಟ್ಟಿ ಮಾಡಬಹುದು. ಅಪಘಾತಕ್ಕೀಡಾದ ನಿರ್ದಿಷ್ಟ ಬಸ್ ತಪಾಸಣೆಗೆ ಒಳಗಾಗಿತ್ತು ಹಾಗೂ ಆ ತಪಾಸಣೆಯಲ್ಲಿ ಸದೃಢತೆಯ ಪ್ರಮಾಣಪತ್ರ, ತುರ್ತು ನಿರ್ಗಮನ ವ್ಯವಸ್ಥೆ ಸೇರಿದಂತೆ ಅದರ ಎಲ್ಲ ದಾಖಲೆಗಳೂ ಕ್ರಮಬದ್ಧವಾಗಿದ್ದವು ಎನ್ನಲಾಗಿದೆ. ಆದರೆ, ಈ ನಿರ್ದಿಷ್ಟ ಉದಾಹರಣೆ ಇಡೀ ವ್ಯವಸ್ಥೆ ಸಮರ್ಪಕವಾಗಿದೆ ಎನ್ನುವುದಕ್ಕೆ ಸಾಕ್ಷ್ಯವಲ್ಲ. ತುರ್ತು ನಿರ್ಗಮನ ವ್ಯವಸ್ಥೆ ಇಲ್ಲದ, ಬೆಂಕಿ ಹೊತ್ತಿ ಉರಿಯಬಹುದಾದ ಒಳಾಂಗಣ ವ್ಯವಸ್ಥೆ ಹೊಂದಿರುವ ಹಾಗೂ ವಿನ್ಯಾಸದಲ್ಲಿ ನಿಯಮಬದ್ಧವಲ್ಲದ ರೂಪಾಂತರಗಳನ್ನು ಹೊಂದಿರುವ ಕೆಲವು ಸ್ಲೀಪರ್ ಬಸ್‌ಗಳ ಸಂಚಾರ ಈಗಲೂ ಮುಂದುವರಿದಿದೆ. ದುರಂತಗಳು ಸಂಭವಿಸಿದಾಗ ಅತಿವೇಗದ ಚಾಲನೆಯನ್ನು ತೆಗಳುವ ಅಥವಾ, ಚಾಲಕರ ನಿರ್ಲಕ್ಷ್ಯವನ್ನು ಎತ್ತಿತೋರಿಸುವಂಥ ಸಿದ್ಧ ಮಾದರಿಯ ಪ್ರತಿಕ್ರಿಯೆಗಳು ಎದುರಾಗುತ್ತವೆ. ಇವೆಲ್ಲವೂ ಸಕಾರಣಗಳೇ ಆದರೂ, ಬಹು ಮುಖ್ಯವಾದ ಸತ್ಯವೊಂದನ್ನು ಮರೆಮಾಚಲಾಗುತ್ತಿದೆ. ಅದು, ಹೆದ್ದಾರಿಯ ವಿನ್ಯಾಸವೇ ತನ್ನಷ್ಟಕ್ಕೆ ನಿಶ್ಶಬ್ದ ಹಂತಕನಂತಿದ್ದು ಅಪಘಾತಗಳಿಗೆ ಪೂರಕವಾಗಿರುವುದು. ಇದಕ್ಕೆ ಬೆಂಗಳೂರು–ಮೈಸೂರು ಹೆದ್ದಾರಿ ಅತ್ಯುತ್ತಮ ಉದಾಹರಣೆ. ಈ ಹೆದ್ದಾರಿ ಬಳಕೆಗೆ ಮುಕ್ತವಾದಾಗಿನಿಂದ 1,500ಕ್ಕೂ ಹೆಚ್ಚು ಅಪಘಾತಗಳು ಹಾಗೂ 200ಕ್ಕೂ ಹೆಚ್ಚು ಸಾವುಗಳನ್ನು ಕಂಡಿದೆ. ಅವೈಜ್ಞಾನಿಕ ಪ್ರವೇಶ ಹಾಗೂ ನಿರ್ಗಮನ ಕೇಂದ್ರಗಳು, ರಸ್ತೆಯಲ್ಲಿ ನೀರು ತುಂಬಿಕೊಳ್ಳುವ ದುಃಸ್ಥಿತಿ, ಹಳ್ಳಿಗಳಿಗೆ ಸುರಕ್ಷಿತ ದಾಟುವಿಕೆ ವ್ಯವಸ್ಥೆ ಇಲ್ಲದಿರುವುದು, ಇವೆಲ್ಲದರಿಂದಾಗಿ ಸಣ್ಣದೊಂದು ಪ್ರಮಾದವೂ ಮಾರಣಾಂತಿಕ ಅಪಾಯವಾಗಿ ಬದಲಾಗುವ ಸಾಧ್ಯತೆಯಿದೆ.

ದುರ್ಘಟನೆಗಳನ್ನು ತಡೆಗಟ್ಟಲಿಕ್ಕೆ ಕೈಗೊಳ್ಳಬೇಕಾದ ಕ್ರಮಗಳು ಸ್ಪಷ್ಟವಾಗಿವೆ. ಸ್ಲೀಪರ್ ಬಸ್‌ಗಳಿಗೆ ಅನ್ವಯಿಸುವ ಕೇಂದ್ರ ಸರ್ಕಾರ ರೂಪಿಸಿರುವ ಬೆಂಕಿ ಪತ್ತೆ ಮತ್ತು ನಿರೋಧಕ ನಿಯಮಗಳನ್ನು ಚಾಚೂ ತಪ್ಪದೆ ಅನುಷ್ಠಾನಕ್ಕೆ ತರಬೇಕಾಗಿದೆ. ಬಸ್‌ಗಳ ಭೌತಿಕ ಸಾಮರ್ಥ್ಯವನ್ನು ಕಠಿಣ ಪರೀಕ್ಷೆಗಳಿಗೆ ಒಳಪಡಿಸಬೇಕಾಗಿದೆ ಹಾಗೂ ಸಾರ್ವಜನಿಕ ವಾಹನಗಳಲ್ಲಿ ಅಪಾಯಕಾರಿ ವಸ್ತುಗಳನ್ನು ಅಕ್ರಮವಾಗಿ ಸಾಗಿಸುವ ಪ್ರಕರಣಗಳಲ್ಲಿ ಕಠಿಣ ಶಿಕ್ಷೆ ವಿಧಿಸಬೇಕಾಗಿದೆ. ಇದೆಲ್ಲದರ ಜೊತೆಗೆ ಅಪಾಯಕಾರಿ ಹಾಗೂ ಅವೈಜ್ಞಾನಿಕವಾದ ಹೆದ್ದಾರಿ ವಲಯಗಳಲ್ಲಿ, ವೇಗಮಿತಿ ಫಲಕಗಳ ಅಳವಡಿಕೆಗಷ್ಟೇ ಸುರಕ್ಷತಾ ಕ್ರಮ ಸೀಮಿತಗೊಳ್ಳದೆ, ರಸ್ತೆಯ ವಿನ್ಯಾಸದ ಪರಿಷ್ಕರಣೆಯ ಬಗ್ಗೆಯೂ ಗಮನಹರಿಸಬೇಕಾಗಿದೆ. ಅವಘಡ ಸಂಭವಿಸಿದಾಗಷ್ಟೇ ಎಚ್ಚತ್ತು ಪ್ರತಿಕ್ರಿಯಿಸುವ ಪ್ರವೃತ್ತಿಯಿಂದ ಸರ್ಕಾರ ಹೊರ ಬರಬೇಕಾಗಿದೆ. ಹಿರಿಯೂರು ಸಮೀಪದ ದುರ್ಘಟನೆಯನ್ನು ಒಂದು ಗಂಭೀರ ಎಚ್ಚರಿಕೆಯನ್ನಾಗಿ ಸರ್ಕಾರ ಪರಿಗಣಿಸಬೇಕು. ಚಲಿಸುವ ಅರಗಿನ ಮನೆಗಳಂತೆ ಕಾಣಿಸುತ್ತಿರುವ ಸ್ಲೀಪರ್ ಬಸ್‌ಗಳ ಸುರಕ್ಷತೆಯನ್ನು ಖಾತರಿಗೊಳಿಸಲು, ಎಲ್ಲ ಅಗತ್ಯ ಕ್ರಮಗಳನ್ನು ವಿಳಂಬವಿಲ್ಲದೆ ಕೈಗೊಳ್ಳಬೇಕು.

> ದುರ್ಘಟನೆ ಸಂಭವಿಸಿದಾಗ ಸುರಕ್ಷತೆಯ ಬಗ್ಗೆ ಚರ್ಚಿಸುವ ಪ್ರವೃತ್ತಿ ಕೊನೆಗೊಳ್ಳಬೇಕು. ಸ್ಲೀಪರ್ ಬಸ್‌ಗಳಿಗೆ ಸಂಬಂಧಿಸಿದ ಸುರಕ್ಷತಾ ಕ್ರಮಗಳನ್ನು ಸರ್ಕಾರ ವಿಳಂಬವಿಲ್ಲದೆ ಜಾರಿಗೊಳಿಸಬೇಕು.

ವಿರೋಧಾಭಾಸ

ಅಗ್ಗದಲ್ಲಿ ದುಡಿಸಿಕೊಳ್ಳಲು, ಸಂಪತ್ತನ್ನು ಗುಡ್ಡೆ ಹಾಕಲು, ಜೀತದಾಳು ತರಹ ನಡೆಸಿಕೊಳ್ಳಲು ವಲಸೆ ಕಾರ್ಮಿಕರು ಬೇಕು. ರಾಜಕಾರಣ ಮಾಡಲು– ಅವರನ್ನೇ ನುಸುಳುಕೋರರು, ಹೊರದಬ್ಬಿ ಅಂತ ಭಾಷಣ ಹೊಡೆಯಬೇಕು, ದ್ವೇಷ ಹುಟ್ಟಿಸಬೇಕು. ಎಂತಹ ಡಬ್ಬಲ್ ಸ್ಟಾಂಡರ್ಡ್ ಇದು.

ಮುನೀರ್ ಕಾಟಿಪಳ್ಳ, ಸಾಮಾಜಿಕ ಹೋರಾಟಗಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ

ರಾಜ್ಯದಲ್ಲಿ ನೆರೆ ಹಾವಳಿಯಿಂದ 13 ಸಾವಿರಕ್ಕೂ ಹೆಚ್ಚು ಮನೆಗಳು ಹಾನಿಗೀಡಾಗಿವೆ. ಆ ಸಂತ್ರಸ್ತರಿಗೆ ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರಕ್ಕೆ ಮನಸ್ಸಿಲ್ಲ. ಆದರೆ, ಕೋಗಿಲು ಬಳಿಯ ನಿವಾಸಿಗಳಿಗೆ ಎರಡೇ ದಿನದಲ್ಲಿ ಮನೆಗಳನ್ನು ಮಂಜೂರು ಮಾಡಿರುವುದು ಎಷ್ಟು ಸರಿ?

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 1-1-2001

• ನೇಕಾರರಿಗೆ ರಿಯಾಯ್ತಿ ವಿದ್ಯುತ್: ಭರವಸೆ

ಬೆಂಗಳೂರು, ಡಿ. 31– ವಿದ್ಯುತ್ ದರ ಏರಿಕೆಯಿಂದ ವಿದ್ಯುತ್ ಮಗ್ಗಗಳಿಗೆ ತೊಂದರೆಯಾಗುವ ಹಿನ್ನೆಲೆಯಲ್ಲಿ ಆ ಕ್ಷೇತ್ರಕ್ಕೆ ವಿದ್ಯುತ್ ದರ ಕಡಿಮೆ ಮಾಡುವುದರ ಬಗ್ಗೆ ತಾವು ಪ್ರಯತ್ನಿಸುವುದಾಗಿ ಜವಳಿ ಹಾಗೂ ರೇಷ್ಮೆ ಸಚಿವ ಎಂ. ಮಹದೇವ ಇಂದು ಇಲ್ಲಿ ಭರವಸೆ ನೀಡಿದರು.

ಕೇಂದ್ರ ಸರ್ಕಾರದ ನೂತನ ಜವಳಿ ನೀತಿಗೆ ಪೂರಕವಾಗಿ ರಾಜ್ಯ ಸರ್ಕಾರವೂ ತನ್ನದೇ ಆದ ಜವಳಿ ನೀತಿ ರೂಪಿಸುತ್ತದೆ ಎಂದು ಸರ್ಕಾರದ ಶ್ರೀಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ತಾಂತ್ರಿಕ ಸಂಸ್ಥೆಯ ವಜ್ರಮಹೋತ್ಸವ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡುತ್ತಾ ಸಚಿವರು ತಿಳಿಸಿದರು.

• ಸರ್ಕಾರಿ ಖಜಾನೆ ಹಣ ಸಮೇತ ಅಧಿಕಾರಿ ಪರಾರಿ

ಚಿತ್ರದುರ್ಗ, ಡಿ. 31– ಚಳ್ಳಕೆರೆಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬ ಸುಮಾರು 4.7 ಲಕ್ಷ ರೂಪಾಯಿ ದುರುಪಯೋಗ ಮಾಡಿಕೊಂಡು, ಆ ಪೈಕಿ ಖಜಾನೆಯ ಸುಮಾರು 3.7 ಲಕ್ಷ ಹಣದೊಡನೆ ಒಂದು ವಾರದಿಂದ ತಲೆಮರೆಸಿಕೊಂಡಿದ್ದಾರೆ. ಈತ ಇಂದಿರಾ ಮಹಿಳಾ ಕೇಂದ್ರ ಯೋಜನೆಯ 1.3 ಲಕ್ಷ ರೂಪಾಯಿಗಳನ್ನು 2 ತಿಂಗಳ ಹಿಂದೆಯೇ ತೆಗೆದು ತಮ್ಮ ವಶದಲ್ಲಿ ಇಟ್ಟುಕೊಂಡಿದ್ದರು.

75 ವರ್ಷಗಳ ಹಿಂದೆ

ಸೋಮವಾರ, 1-1-1951

• ವಿಶ್ವ ಸಮಸ್ಯೆ ಪರಿಹಾರಕ್ಕೆ ಸಾಧನವಾಗಲಿ

ನವದೆಹಲಿ, ಡಿ. 31– ಜಗತ್ತನ್ನು ಇಂದು ಕವಿದಿರುವ ನಿರಾಶಾಂಧಕಾರವನ್ನು ಲಂಡನ್ನಿನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನ ಕಡಿಮೆ ಮಾಡೀತೆಂಬ ಭರವಸೆಯನ್ನು ಭಾರತದ ಪ್ರಧಾನಿ ಜವಾಹರರು ಇಂದು ವ್ಯಕ್ತಪಡಿಸಿದರು.

ಪ್ರಧಾನಿಗಳು ರಾಷ್ಟ್ರದ ಜನತೆಯನ್ನುದ್ದೇಶಿಸಿ ನೂತನ ಸಂವತ್ಸರಾರಂಭಕ್ಕೆ ಹಿಂದಿನ ಸಂಜೆ ರೇಡಿಯೋ ಮೂಲಕ ಭಾಷಣ ಮಾಡುತ್ತಾ, 'ಸರಿಯಾದ ಮಾರ್ಗದಲ್ಲಿ ಅಲ್ಪದೂರ ಸಾಗಿದರೂ ಸಮ್ಮೇಳನ ಕೃತಾರ್ಥವೆನಿಸೀತು' ಎಂದು ಅವರು ಹೇಳಿದರು.

ಇಂದಿನ ಭಾರತ 'ಗಾಂಧಿ ಭಾರತ'

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

> 'ಭಾರತೀಯತೆ' ತಳಹದಿಯ ಮೇಲೆ ಇಡೀ ದೇಶದ ಜನರನ್ನು ಮಾನಸಿಕವಾಗಿ ಒಗ್ಗೂಡಿಸಿದ ಸಾಧನೆ ಮಹಾತ್ಮ ಗಾಂಧಿ ಅವರದು. ಯಾವ ದೃಷ್ಟಿಯಿಂದ ನೋಡಿದರೂ, ಇಂದಿನ ಭಾರತವನ್ನು ಕಟ್ಟಿದ ಶ್ರೇಯಸ್ಸು ಮಹಾತ್ಮರಿಗೇ ಸಲ್ಲುವಂತಹದ್ದು.

ತುಳುನಾಡಿಗೆ ಮಹಾತ್ಮ ಗಾಂಧೀಜಿ ಬಂದ ಕಾಲದ ಹಾಸ್ಯರಸ ಪ್ರಕರಣವೊಂದು ಹೀಗಿದೆ: ಗಾಂಧಿ ಮಂಗಳೂರಿಗೆ ಬಂದಿದ್ದಾಗ ಅಲ್ಲಿಗೆ ಹೋಗಲು ಸಾಧ್ಯವಾಗದೆ ಇದ್ದ ರೈತಾಪಿ ವರ್ಗದವರು, ತಾವೂ ಕೂಡ ಗಾಂಧಿ ಹೇಳಿದ್ದರಲ್ಲಿ ಏನಾದರೂ ಮಾಡಬೇಕೆಂದು ನಿರ್ಧರಿಸಿದರು. ಅವರ ಊರಿನ ಗಾಂಧಿ ಅನುಯಾಯಿ ಜಮೀನ್ದಾರನ ಬಳಿಗೆ ಹೋಗಿ ತಮ್ಮ ಇರಾದೆಯನ್ನು ಹೇಳಿದರು. 'ಊರಿನಲ್ಲಿ ಗಡಂಗು ರದ್ದಾಗಬೇಕು' ಎಂದು ಘೋಷಣೆ ಕೂಗುತ್ತಾ ಜನಜಾಗೃತಿ ಮೂಡಿಸಲು ಜಮೀನ್ದಾರ ಸಲಹೆ ನೀಡಿದ. ಜಾಥಾ ಹೊರಟಾಗ ಶರಾಬು ಅಂಗಡಿಯವನಿಗೆ ಚಿಂತೆ ಶುರುವಾಯಿತು. ಹೋರಾಟಗಾರರನ್ನು ಒಲಿಸಿಕೊಳ್ಳಲು ಆತ ಜಾಥಾ ಹೋಗುತ್ತಿದ್ದವರಿಗೆ ಉಚಿತ ಶರಾಬು ಹಂಚಿಕೆಯ ವ್ಯವಸ್ಥೆ ಮಾಡಿದ. ಜಾಥಾ ಹೋಗುತ್ತಿದ್ದವರಲ್ಲಿ ಬಹುತೇಕರು ಉಚಿತವಾಗಿ ಸಿಕ್ಕಿದ್ದನ್ನು ಬೇಕಾದಷ್ಟು ಕುಡಿದರು. ಹಲವರದ್ದು ನಾಲಗೆ ತೊದಲತೊಡಗಿತು. ಜಾಥಾ ಮುಂದೆ ಮುಂದೆ ಹೋಗುತ್ತಿದ್ದ ಹಾಗೆ ತುಳು ಭಾಷೆಯಲ್ಲಿ 'ಗಡಂಗ್ ರದ್ದಾವೊಡು' ಘೋಷಣೆ, 'ಗಡಂಗ್ ರಡ್ಡಾವೊಡು' (ಶರಾಬು ಅಂಗಡಿ ಎರಡಾಗಬೇಕು) ಎಂದು ಬದಲಾಯಿತು. ನಂತರ ಜಮೀನ್ದಾರನ ಪ್ರವೇಶ ಆಗಿ, ಒಂದಷ್ಟು ಮಂದಿ ಮದ್ಯಪಾನ ತ್ಯಜಿಸಿದ್ದೆಲ್ಲ ನಡೆದಿತ್ತು. ಆ ವಿಚಾರ ಇಲ್ಲಿ ಮುಖ್ಯ ಅಲ್ಲ. ಗಾಂಧಿ ತತ್ತ್ವ, ಗಾಂಧಿ ಚಿಂತನೆ, ರಾಷ್ಟ್ರೀಯ ಉದ್ದೇಶ ಇಂಥವುಗಳನ್ನೆಲ್ಲ ವೈಚಾರಿಕ ಸ್ಪಷ್ಟತೆಯಿಂದ ಗ್ರಹಿಸಲಾಗದ ಜನರೂ, 'ಏನೋ ಒಳ್ಳೆಯದನ್ನು ಮಾಡುತ್ತಿರುವ ಗಾಂಧಿ ಅವರನ್ನು ನಾವು ಬೆಂಬಲಿಸಬೇಕು' ಎಂಬ ಭಾವವನ್ನು ತಳೆದದ್ದು ಮುಖ್ಯ. ರೈತಾಪಿ ವರ್ಗ ಊಟಕ್ಕೂ ಕಷ್ಟಪಡುತ್ತಿದ್ದ ಕಾಲವದು. ಆದರೂ, ಆ ಜನರನ್ನು ಸೆಳೆಯಲು ಗಾಂಧಿ ಶಕ್ತರಾಗಿದ್ದರು.

ಗಾಂಧಿ ಗೊತ್ತಿಲ್ಲದ ಯಾವ ಸ್ಥಳವೂ ಬಹುಶಃ ಆಗ ಭಾರತದಲ್ಲಿ ಇರಲಿಲ್ಲ, ಈಗಲೂ ಇಲ್ಲ. ಸಂಪರ್ಕ ಮಾಧ್ಯಮಗಳು ತೀರಾ ದುರ್ಬಲವಿದ್ದ ಕಾಲದಲ್ಲಿ ಇಡೀ ಭಾರತವನ್ನು ಸಂಪರ್ಕಿಸಿದವರು ಗಾಂಧಿ. ಯಾವ ಊರಿಗೆ ಹೋದರೂ ತಮ್ಮ ಊರಿನ ಈ ಜಾಗಕ್ಕೆ ಗಾಂಧಿ ಬಂದಿದ್ದರು, ಆ ಜಾಗದಲ್ಲಿ ನಿಂತು ಭಾಷಣ ಮಾಡಿದ್ದರು, ತಮ್ಮೂರಿಗೆ ಗಾಂಧಿ ಬಂದಿದ್ದಾಗ ಹೀಗೆ ಆಗಿತ್ತು ಎಂದು ಹೇಳುವ ಗಾಂಧಿ ನೆನಪುಗಳು ಇವೆ. ಭೂಮಿಯನ್ನು ಒಂದೂವರೆ ಬಾರಿ ಸುತ್ತಿದಷ್ಟು ದೂರ ನಡೆದ ಗಾಂಧಿ ಈ ರೀತಿಯ ಅದ್ಭುತ ಸಂಪರ್ಕ ಜಾಲವನ್ನು ರೂಪಿಸಿದ್ದರು. ಆ ಸಂಪರ್ಕವೇ ಸಂಘಟನೆಯಾಗಿ ಇಂದಿನ ಭಾರತದ ನಿರ್ಮಾಣವಾಗಿದೆ.

ರಾಜರುಗಳ ಕಾಲದಲ್ಲೇ ಬ್ರಿಟಿಷರ ವಿರುದ್ಧ ಸಾಕಷ್ಟು ಯುದ್ಧಗಳಾಗಿದ್ದವು. ಬ್ರಿಟಿಷರನ್ನು ಎದುರಿಸಿ ದವರಿಗೆಲ್ಲ ದೇಶದ ಎಲ್ಲ ಭಾಗದವರೂ ಒಟ್ಟಾಗಿ ಎದುರಿಸಿದರೆ ಮಾತ್ರ ಬ್ರಿಟಿಷರನ್ನು ಹೊರಗಟ್ಟಬಹುದು ಎಂದು ಗೊತ್ತಿರಲಿಲ್ಲ ಎಂದು ಭಾವಿಸಬೇಕಾಗಿಲ್ಲ. ಷಾ ಆಲಂ, ಮೀರ್ ಖಾಸಿಂ, ಟಿಪ್ಪು ಸುಲ್ತಾನ್, ನವಾಬ್ ವಜೀದ್ ಆಲಿ ಷಾ, ನಾನಾ ಫಡ್ನವೀಸ್ ಮುಂತಾದ ರಾಜರುಗಳೆಲ್ಲ ಬ್ರಿಟಿಷರ ವಿರುದ್ಧ ಎಲ್ಲರನ್ನೂ ಸಂಘಟಿಸಲು ಹೊರಟವರೇ ಆಗಿದ್ದರು. 1834–37ರಲ್ಲಿ ರೈತರೇ ನಡೆಸಿದ ಕೊಡಗು ಮತ್ತು ಕರಾವಳಿ ಬಂಡಾಯದಲ್ಲಿ ಹುಲಿಕಡಿದ ನಂಜಯ್ಯ ಎಂಬ ಬಂಡಾಯಗಾರ ಹೂಜಿ (ಸಂಕೇತ) ತೆಗೆದುಕೊಂಡು ಲಾಹೋರ್‌ವರೆಗೂ ಹೋಗಿದ್ದರು. ಅಂದರೆ ಎಲ್ಲರೂ ಒಟ್ಟಾಗಿಯೇ ಬ್ರಿಟಿಷರನ್ನು ಎದುರಿಸಬೇಕು ಎನ್ನುವುದು ಹೋರಾಟಗಾರರಿಗೂ ಗೊತ್ತಿತ್ತು. ಆದರೆ, ಆ ಕಾಲಕ್ಕೆ ಹೋರಾಟ ಎಂದರೆ ಕೊಲ್ಲುವುದು ಅಥವಾ ಸಾಯುವುದು. ಮನುಷ್ಯನನ್ನು ಹೋರಾಟದಿಂದ ಹಿಂದಕ್ಕೆ ಎಳೆಯುವ ಪ್ರಬಲ ಶಕ್ತಿ ಎಂದರೆ ಸಾವಿನ ಭಯ. ಗಾಂಧೀಜಿಯವರ ಹೋರಾಟದ ಸ್ವರೂಪ ಮಾಡಿದ ಮಹತ್ಕಾರ್ಯವೆಂದರೆ, ಮನುಷ್ಯನ ಸಾವಿನ ಭಯವನ್ನು ನಿವಾರಿಸಿದ್ದು.

ಸತ್ಯಾಗ್ರಹ ಮಾಡುವಾಗ ಬಂಧಿತರಾದರೆ ಹೆಚ್ಚೆಂದರೆ ನಾಲ್ಕೈದು ವರ್ಷ ಜೈಲಾಗಬಹುದು; ಮರಣದಂಡನೆ ಅಂತೂ ಆಗುವುದಿಲ್ಲ ಎಂದು ಯಾವಾಗ ಖಾತರಿಯಾಯಿತೋ ಆಗ ಜನ ಸ್ವಾತಂತ್ರ್ಯ ಹೋರಾಟಕ್ಕೆ ಪ್ರವಾಹದೋಪಾದಿಯಲ್ಲಿ ಬಂದರು. ದೇಶಕ್ಕಾಗಿ ಮಗ ಸಾಯಲಿ ಎಂದು ಬಯಸುವ ತಾಯಿ ವಿರಳ. ಆದರೆ, ಸಾವಿನ ಭಯದಿಂದ ಮುಕ್ತವಾಗಿದ್ದ ಗಾಂಧೀಜಿಯ ಹೋರಾಟ ಮಹಿಳೆಯರನ್ನು ತಲಪಿತು. ಒಂದು ಕುಟುಂಬದಲ್ಲಿ ಒಬ್ಬನೇ ಗಂಡು ಮಗ ಇದ್ದರೆ ಆತ ಸತ್ಯಾಗ್ರಹದಲ್ಲಿ ಭಾಗವಹಿಸತಕ್ಕದ್ದಲ್ಲ ಎನ್ನುವ ಗಾಂಧೀಜಿಯವರ ನಿಯಮದಿಂದಾಗಿ, ದೇಶದ ಕೆಲಸಕ್ಕಾಗಿ ಕುಟುಂಬ ತನ್ನ ಮಕ್ಕಳನ್ನು ಕಳೆದುಕೊಂಡು ದುರ್ಬಲಗೊಳ್ಳುವುದು ತಪ್ಪಿತು. ಇತ್ತೀಚೆಗೆ, ಗಾಂಧಿ–ನೆಹರೂ ಅವರನ್ನು ಅಂಡಮಾನಿನ ಕರಿನೀರಿನ ಶಿಕ್ಷೆಗೆ ಯಾಕೆ ಒಳಪಡಿಸಲಿಲ್ಲ ಎಂದು ಕೇಳುವವರಿಗೆ, 'ಧಿಕ್ಕಾರ ಕೂಗಿದವನಿಗೂ ಕೊಲೆ ಮಾಡಿದವನಿಗೂ ಒಂದೇ ಶಿಕ್ಷೆ ಇರುವುದಿಲ್ಲ' ಎಂದು ಗೊತ್ತಿಲ್ಲದಿರುವುದು ಜಾಣ ದಡ್ಡತನ.

ಒಂದೇ ಉದ್ದೇಶದ ಹೋರಾಟಕ್ಕೆ ದೇಶದ ಎಲ್ಲ ಭಾಗಗಳಿಂದ ಜನರು ತೊಡಗಿಕೊಂಡಾಗ ಅನುಭವಗಳ ವಿನಿಮಯವಾಗುತ್ತವೆ, ಭಾವನೆಗಳ ಹೊಂದಾಣಿಕೆ ಏರ್ಪಡುತ್ತದೆ, ಎಲ್ಲರ ನಡುವೆಯೂ ಸಾಮಾನ್ಯತೆಯನ್ನು ರೂಪಿಸುವ ಸಂಗತಿಗಳು ಪ್ರಕಟವಾಗುತ್ತವೆ. 'ನಾವೆಲ್ಲರೂ ಒಂದೇ' ಎನ್ನುವ ಭಾವನೆ ಬೆಳೆಯಲು ಇಂತಹ ಅಂಶಗಳೇ ಆಧಾರವಾಗುತ್ತವೆ. ಬ್ರಿಟಿಷರು ಹೋದ ನಂತರ ಏನು ಮಾಡಬೇಕು ಎನ್ನುವ ಚಿಂತನೆಯೊಂದು ಸ್ವಾತಂತ್ರ್ಯ ಹೋರಾಟದ ಕಾಲದಲ್ಲೆ ಸ್ಪಷ್ಟವಾಗಿ ಕಾಣಿಸಿಕೊಂಡದ್ದು ಗಾಂಧೀಜಿಯವರ ಬಳಗದಿಂದಲೇ ಆಗಿದೆ. ಅಂದರೆ, ಗಾಂಧಿ ಚಳವಳಿಯು ಬ್ರಿಟಿಷರನ್ನು ಹೊರ ಹಾಕುವುದಕ್ಕಿಂತ ಹೆಚ್ಚಾಗಿ ಭಾರತೀಯರನ್ನು ಒಗ್ಗೂಡಿಸಿದ ಹೋರಾಟವಾಗಿತ್ತು.

ಬ್ರಿಟಿಷ್ ವಿರೋಧಿ ಸತ್ಯಾಗ್ರಹವಷ್ಟೇ ಆಗಿದ್ದರೆ ಗಾಂಧೀಜಿಯವರ ಒಗ್ಗೂಡಿಸುವಿಕೆಯ ಪ್ರಯತ್ನ ಬ್ರಿಟಿಷರ ನೇರ ಅಧೀನದಲ್ಲಿದ್ದ 17 ಸಂಸ್ಥಾನಗಳಿಗೆ ಸೀಮಿತವಾಗುತ್ತಿತ್ತು. 565 ರಾಜರುಗಳ ಸಂಸ್ಥಾನದ ಜನರಿಗೆ ಬ್ರಿಟಿಷರನ್ನು ತೊಲಗಿಸಿ ಆಗಬೇಕಾದ ದೊಡ್ಡ ಅಗತ್ಯವೇನೂ ಇರಲಿಲ್ಲ. ಅವರಿಗೆ ಅವರದೇ ರಾಜರು ಇದ್ದರು. ಬ್ರಿಟಿಷ್ ಸಾಮ್ರಾಟನಿಗೆ ಕೊಡಬೇಕಾದ್ದನ್ನು ಕೊಟ್ಟರೆ ವಿದೇಶಾಂಗ, ಮಿಲಿಟರಿಯಂಥ ವಿಚಾರಗಳ ಹೊರತಾಗಿ ಉಳಿದೆಲ್ಲ ವಿಷಯಗಳಲ್ಲಿ ರಾಜರುಗಳಿಗೆ ಸ್ವಾತಂತ್ರ್ಯ ಇತ್ತು. ರಾಜರುಗಳ ಪ್ರಜೆಗಳೂ ಬ್ರಿಟಿಷರ ಅಧೀನದಲ್ಲಿದ್ದ ಪ್ರಾಂತ್ಯಗಳ ಜನರೊಂದಿಗೆ ಸೇರಿಕೊಳ್ಳಬೇಕಾದರೆ ರಾಜರುಗಳ ಪ್ರಜೆಗಳಿಗೆ ಅಗತ್ಯವಾದ ಸಂಗತಿಗಳೂ ಬೇಕಾಗಿದ್ದವು. ಚರಕದಿಂದ ಬಟ್ಟೆ ತಯಾರಿಸಿಕೊಳ್ಳುವುದು, ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿಷೇಧ, ದೇವಾಲಯಗಳಿಗೆ ಅಸ್ಪೃಶ್ಯರ ಪ್ರವೇಶ, ಗುಡಿ ಕೈಗಾರಿಕೆಯಂತಹ ವಿಚಾರಗಳು ಬ್ರಿಟಿಷರ ಅಧೀನದಲ್ಲಿದ್ದ ಪ್ರಜೆಗಳಿಗೂ, ರಾಜರುಗಳ ಅಧೀನದಲ್ಲಿದ್ದ ಪ್ರಜೆಗಳಿಗೂ ಸಮಾನವಾಗಿ ಅನ್ವಯವಾಗುವ ಸಂಗತಿಗಳಾಗಿದ್ದವು. ಗಾಂಧಿ ಚಿಂತನೆಗಳು ಮತ್ತು ಗಾಂಧಿ ತತ್ತ್ವ ಹಾಗೂ ಹೋರಾಟದ ಮಾದರಿಗಳು ಬ್ರಿಟಿಷರನ್ನು ತೊಲಗಿಸುವಷ್ಟಕ್ಕೆ ಸೀಮಿತವಾಗದೆ ಭಾರತವನ್ನು ಕಟ್ಟುವ, ಭಾರತೀಯರ ಬದುಕನ್ನು ಹಸನುಗೊಳಿಸುವ ಹಲವು ರೂಪಗಳಲ್ಲಿ ಇದ್ದುದರಿಂದ ಎಲ್ಲರನ್ನೂ ಸಾಮಾನ್ಯವಾದ ಒಂದು ರಾಷ್ಟ್ರೀಯ ವೇದಿಕೆಯ ಪ್ರಜ್ಞೆಯಲ್ಲಿ ಸಂಘಟಿಸಲು ಸಾಧ್ಯವಾಯಿತು. ಇದರ ಪರಿಣಾಮವನ್ನು 1947ರಲ್ಲಿ ಭಾರತ ಸ್ವಾತಂತ್ರ್ಯ ಶಾಸನ ಅನುಷ್ಠಾನಕ್ಕೆ ಬಂದ ತಕ್ಷಣದಿಂದಲೇ ನಾವು ಕಾಣಬಹುದು.

ನಿಜವಾಗಿ ಯಾವ ರಾಜರುಗಳಿಗೂ ಅವರ ಅಧಿಕಾರವನ್ನು ಭಾರತ ಸರ್ಕಾರಕ್ಕೆ ಕೊಟ್ಟು ತಾವು ಸಾಮಾನ್ಯ ಪೌರನಾಗಿ ಬಾಳುವುದು ಇಷ್ಟವಿರಲಿಲ್ಲ. ಜನರು ಒತ್ತಡ ತಂದದ್ದರ ಪರಿಣಾಮವಾಗಿ ರಾಜರು ತಮ್ಮ ಸಂಸ್ಥಾನಗಳನ್ನು ಭಾರತೀಯ ಒಕ್ಕೂಟಕ್ಕೆ ಸೇರಿಸುವುದು ಅನಿವಾರ್ಯವಾಯಿತು. ಜನರು ಈ ರೀತಿ ಒಂದು ಒಕ್ಕೂಟದ ಆಶ್ರಯಕ್ಕೆ ಬರಲು ಕಾರಣವಾದದ್ದು ಗಾಂಧಿಯವರ ಚಳವಳಿಗಳು ರೂಪಿಸಿದ ಏಕಸೂತ್ರವಾಗಿತ್ತು.

ಆ ಕಾಲಕ್ಕೆ ಗೋವಾ ಸ್ವತಂತ್ರ ರಾಷ್ಟ್ರ. ಆದರೆ, ಗೋವಾದ ನಾಗರಿಕರಿಗೂ ಗಾಂಧಿ ಬಳಗದ ಜನರಿಗೂ ಸಂಪರ್ಕ ಮತ್ತು ಪರಸ್ಪರ ತೊಡಗಿಕೊಳ್ಳುವಿಕೆ ಇದ್ದವು. ಗೋವಾ ವಿಮೋಚನಾ ಚಳವಳಿಯ ನಾಯಕ ತ್ರಿಸ್ಟಾವೊ ಬ್ರಗಾನ್ಜ ದೆ ಕುನ್ಹ ಅವರು ನೆಹರೂ ಅವರೊಂದಿಗೆ ಒಡನಾಟ ಹೊಂದಿದ್ದರು. ಗೋವಾದಲ್ಲಿ ಸತ್ಯಾಗ್ರಹಿಗಳು ಸತ್ಯಾಗ್ರಹ ನಡೆಸಿ, ಪೂರಕ ಪರಿಸ್ಥಿತಿ ಸೃಷ್ಟಿಸಿದ ನಂತರ ಭಾರತ ಸರ್ಕಾರ ಗೋವಾಕ್ಕೆ ಸೈನ್ಯ ಕಳಿಸಿತು. ಗೋವಾದ ವಿಚಾರದಲ್ಲಿ ಅಂತಿಮ ಹಂತದಲ್ಲಿ ಡಿಯು, ಡಾಮನ್‌ಗಳನ್ನು ವಶಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಆರ್‌ಎಸ್‌ಎಸ್ ಸ್ವಯಂಸೇವಕರೂ ಕೆಲಸ ಮಾಡಿದ್ದರು. ಆರ್‌ಎಸ್‌ಎಸ್ ಬ್ರಿಟಿಷರ ವಿರುದ್ಧ ಹೋರಾಟ ಮಾಡಲಿಲ್ಲ. ಆದರೆ, ಪೋರ್ಚುಗೀಸರ ವಿರುದ್ಧ ಸೀಮಿತ ವ್ಯಾಪ್ತಿಯ ಹೋರಾಟ ಮಾಡಿದೆ. ಆದರೆ ಅಲ್ಲಿಯೂ ಭಾರತೀಯ ಒಕ್ಕೂಟಕ್ಕೆ ಸೇರಬೇಕೆಂಬ ಪ್ರಜ್ಞೆಯನ್ನು ವ್ಯಾಪಕಗೊಳಿಸಿದ್ದವರು ಸತ್ಯಾಗ್ರಹಿಗಳೇ. ಪಾಂಡಿಚೆರಿಯಲ್ಲೂ ಫ್ರೆಂಚರಿಂದ ಸ್ವತಂತ್ರಗೊಂಡು ಭಾರತೀಯ ಒಕ್ಕೂಟಕ್ಕೆ ಸೇರಲು ಒತ್ತಡ ಸೃಷ್ಟಿಸಿದವರು ಸತ್ಯಾಗ್ರಹಿಗಳೇ ಆಗಿದ್ದರು.

ಭಾರತೀಯ ಸಮಗ್ರತೆಯನ್ನು ರೂಪಿಸುವ ಸಂಗತಿಗಳು ಗಾಂಧಿಗಿಂತ ಮೊದಲು ಇರಲಿಲ್ಲ ಎಂದಲ್ಲ. ಸ್ವತಃ ಗಾಂಧೀಜಿಯೇ, 'ಭಾರತದಲ್ಲಿ ಆಡಳಿತಾತ್ಮಕ ಏಕತೆಯನ್ನು ಬ್ರಿಟಿಷರು ರೂಪಿಸಿದ್ದು ಹೌದಾದರೂ, ಧಾರ್ಮಿಕ ಕೇಂದ್ರಗಳು ಧಾರ್ಮಿಕ ಏಕತೆಯನ್ನು ಸಾವಿರಾರು ವರ್ಷಗಳ ಹಿಂದೆಯೇ ರೂಪಿಸಿದ್ದವು' ಎಂದು ಹೇಳಿದ್ದಾರೆ. ಅಶೋಕ ಮತ್ತು ಸಮುದ್ರಗುಪ್ತರು ಭಾರತವನ್ನು ಒಟ್ಟಾಗಿಸುವ ಕೆಲಸ ಮಾಡಿದ್ದರು. ಆದರೆ, ಅಶೋಕ ಮೌರ್ಯ ಒಟ್ಟಾಗಿಸಿದ ಭಾರತ ದಶರಥ ಮೌರ್ಯನ ಕಾಲಕ್ಕೆ ಉಳಿದಿರಲಿಲ್ಲ. ಸಮುದ್ರಗುಪ್ತ ಒಟ್ಟಾಗಿಸಿದ ಭಾರತವು ಕುಮಾರಗುಪ್ತನ ಕಾಲಕ್ಕೆ ಉಳಿದಿರಲಿಲ್ಲ. ಏಕೆಂದರೆ, ಇಡೀ ಭಾರತಕ್ಕೆ ಅನ್ವಯವಾಗುವ ಶಾಸನಾತ್ಮಕ ಒಕ್ಕೂಟವನ್ನು ರೂಪಿಸಲು ಆ ಸಂದರ್ಭದಲ್ಲಿ ಸಾಧ್ಯವಾಗಿರಲಿಲ್ಲ. ಆದರೆ, ಗಾಂಧಿ ಕಟ್ಟಿದ ಭಾರತವನ್ನು ಒಟ್ಟಾಗಿಯೇ ಉಳಿಸಲು 'ಭಾರತ ಸಂವಿಧಾನ' ಎನ್ನುವ ಸಾರ್ವತ್ರಿಕ ಅನ್ವಯದ ಶಾಸನವನ್ನು ರೂಪಿಸಲು ಸಾಧ್ಯವಾಗಿದೆ. ಆದ್ದರಿಂದ ಇಂದಿನ ಭಾರತ, ಗಾಂಧಿ ಕಟ್ಟಿದ ದೇಶವಲ್ಲದೆ ಬೇರೆ ಯಾರೂ ಕಟ್ಟಿದ ದೇಶ ಅಲ್ಲ.



ವಾಚಕರ ವಾಣಿ

ವಿದ್ಯಾರ್ಥಿವೇತನ: ಅರ್ಜಿ ಸಲ್ಲಿಕೆಗೆ ವಿಘ್ನ

ಪರಿಶಿಷ್ಟ ಜಾತಿಯ ಬಡ ವಿದ್ಯಾರ್ಥಿಗಳು ಮೆಟ್ರಿಕ್‌ನಂತರದ ವಿದ್ಯಾರ್ಥಿ ವೇತನಕ್ಕೆ ಸ್ಟೇಟ್ ಸ್ಕಾಲರ್‌ಶಿಪ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬೇಕಿದೆ. ಈ ಪೋರ್ಟಲ್‌ನಲ್ಲಿ ಲಾಗಿನ್ ಆದರೆ, ಕೆಇಎಗೆ ಸಂಬಂಧಿಸಿದ ಯಾವುದೇ ಮಾಹಿತಿ ಲಭ್ಯವಿಲ್ಲವೆಂದು ತೋರಿಸುತ್ತಿದೆ. ಹಾಗಾಗಿ, ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ವಿದ್ಯಾರ್ಥಿ ವೇತನ ಅವಲಂಬಿಸಿ ಖಾಸಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದಿರುವ ಗ್ರಾಮೀಣ ಮತ್ತು ನಗರ ಪ್ರದೇಶದ ಬಡ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ. ತಕ್ಷಣವೇ ತಾಂತ್ರಿಕ ದೋಷ ಸರಿಪಡಿಸಲು ಕೆಇಎ ಮತ್ತು ಸಮಾಜ ಕಲ್ಯಾಣ ಇಲಾಖೆ ಮುಂದಾಗಬೇಕಿದೆ.

ಆರ್. ಕುಮಾರ್, ಬೆಂಗಳೂರು

ಓದುವ ಸಂಸ್ಕೃತಿಗೆ ಸರ್ಕಾರದಿಂದ ಪೆಟ್ಟು

ಸರ್ಕಾರವು ಕಳೆದ ನಾಲ್ಕು ವರ್ಷದಿಂದ ಸಾರ್ವಜನಿಕ ಗ್ರಂಥಾಲಯಗಳಿಗೆ ಹೊಸ ಪುಸ್ತಕಗಳನ್ನಾಗಲೀ, ಮರುಮುದ್ರಿತ ಕೃತಿಗಳನ್ನಾಗಲೀ ಖರೀದಿಸುತ್ತಿಲ್ಲ. ಆದರೆ, ಪ್ರತಿವರ್ಷವೂ ಗ್ರಂಥಾಲಯ ಸೆಸ್ ಸಂಗ್ರಹಿಸುತ್ತಿದೆ. ಈ ಹಣದಲ್ಲಿ ಕಡ್ಡಾಯವಾಗಿ ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿಸಬೇಕಿದೆ. ಕೈಯಲ್ಲಿ ಸ್ವಲ್ಪ ಹಣವಿರುವ ಒಂದಿಷ್ಟು ಮಂದಿ ಪುಸ್ತಕಗಳನ್ನು ಕೊಂಡು ಓದುತ್ತಾರೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೋಗುವವರು, ಜ್ಞಾನಾರ್ಜನೆಗೆ ಓದುವವರು, ಸಾಹಿತ್ಯಾಸಕ್ತರು, ಪುಸ್ತಕ ಕೊಳ್ಳಲು ಸಾಧ್ಯವಾಗದ ಓದಿನ ಹಸಿವು ಉಳ್ಳವರು... ಇವರೆಲ್ಲರೂ ಸಾರ್ವಜನಿಕ ಗ್ರಂಥಾಲಯವನ್ನೇ ನಂಬಿರುತ್ತಾರೆ. ಹೊಸ ಆವಿಷ್ಕಾರ, ಪ್ರಚಲಿತ ವಿದ್ಯಮಾನ, ಹೊಸ ಕಥೆ, ಕಾದಂಬರಿಗಳ ಓದಿನಿಂದ ಅವರೆಲ್ಲ ವಂಚಿತರಾಗುತ್ತಿದ್ದಾರೆ. ಇದಕ್ಕೆಲ್ಲ ಸರ್ಕಾರವೇ ನೇರ ಕಾರಣ.

ವಿಶಾಲಾಕ್ಷಿ ಶರ್ಮಾ, ಬೆಂಗಳೂರು

ಅರಣ್ಯೀಕರಣಕ್ಕೆ ಹೆಚ್ಚಿನ ಒತ್ತು ದೊರೆಯಲಿ

ದೆಹಲಿಯ ವಾಯು ಗುಣಮಟ್ಟವು ಸುಧಾರಣೆ ಕಂಡರೂ ಕಳಪೆ ಸ್ಥಿತಿಯಲ್ಲಿಯೇ ಇದೆ. ಈ ಪರಿಸ್ಥಿತಿಯು ಇಡೀ ದೇಶದ ತುಂಬೆಲ್ಲ ಹರಡುವ ಸಮಯ ದೂರವಿಲ್ಲ. ವಾತಾವರಣದಲ್ಲಿನ ಇಂಗಾಲದ ಡೈಆಕ್ಸೈಡ್ ಅನ್ನು ಹೀರಿಕೊಳ್ಳುವಲ್ಲಿ ಗಿಡ–ಮರಗಳು ಹಾಗೂ ಅರಣ್ಯದ ಪಾತ್ರ ಹಿರಿದು. ಆದರೆ, ಅಭಿವೃದ್ಧಿ ಹೆಸರಿನಲ್ಲಿ ರಸ್ತೆ, ಕಾರ್ಖಾನೆ ನಿರ್ಮಾಣ, ಗಣಿಗಾರಿಕೆ ಹೆಚ್ಚುತ್ತಿದೆ. ಇಂತಹ ಸಂದಿಗ್ಧ ಸನ್ನಿವೇಶದಲ್ಲಿ ಪರಿಸರ ಸಂರಕ್ಷಣೆಗೆ ಸರ್ಕಾರಗಳು ಅಗತ್ಯ ಕ್ರಮಕೈಗೊಳ್ಳಬೇಕಿದೆ. ಈಗಾಗಲೇ, ದೇಶದಲ್ಲಿ ಜಾರಿಯಲ್ಲಿರುವ ಹಸಿರು ಭಾರತ ಮಿಷನ್, ನಗರ ಅರಣ್ಯ ಯೋಜನೆ, ತಾಯಿಯ ಹೆಸರಿನಲ್ಲಿ ಒಂದು ಮರ ಯೋಜನೆಗಳಿಗೆ ಮತ್ತಷ್ಟು ಒತ್ತು ನೀಡಬೇಕಿದೆ. ಅರಣ್ಯೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಿದರೆ ಪರಿಸರ ಸಮತೋಲನ ಕಾಯ್ದುಕೊಳ್ಳಲು ಸಾಧ್ಯ.

ಪ್ರಸನ್ನ ಶಿವಾಜಿ ನಾಯಕ, ಜಮಖಂಡಿ

ಹೊಸತೆಂಬುದು

ಎದೆಯ ಮಾತುಗಳು
ಹಾಡುಗಳಾಗಿ
ಎದುರಿನವರ ಮನ ತಾಕಲಿ
ಹಳೆಯ ಹೊಸತರ ನಡುವೆ
ನಮ್ಮತನ ಒಲವ ಬಂಧ
ಸದಾ ಕಾಯಲಿ
ಜಾತಿ ಭಾಷೆ ಧರ್ಮ ದೈವ
ಅವುಗಳ ಪಾಡಿಗೆ ಅವು
ಆರಾಮಾಗಿ ಇರಲಿ
ಮನುಜ ಮನುಜನ ನಡುವೆ
ಪ್ರೀತಿ ಸೇತುವೆ ಮೂಡಲಿ
ಹೊಸತೆಂಬ ಹೃದಯ ಭಾಷೆ
ಮನ ಮನ ಬೆಸೆಯಲಿ

ಸಂತೆಬೆನ್ನೂರು ಫೈಜ್ನಟ್ರಾಜ್

ಅಶ್ಲೀಲ ಶೈಲಿ ಗೀತೆಗಳಿಗೆ ಕಡಿವಾಣ ಹಾಕಿ

ಉತ್ತರ ಕರ್ನಾಟಕದಲ್ಲಿ ಜಾನಪದದ ಹೆಸರಿನಲ್ಲಿ ಅಶ್ಲೀಲ ಗೀತೆಗಳನ್ನು ರಚಿಸಿ ಹಾಡುವ ಹಾವಳಿ ಹೆಚ್ಚುತ್ತಿದೆ. ಸಾರ್ವಜನಿಕ ಸಮಾವೇಶ, ಧಾರ್ಮಿಕ ಕಾರ್ಯಕ್ರಮ, ಉತ್ಸವ, ಜಾತ್ರೆ ಹಾಗೂ ರಸಮಂಜರಿಗಳಲ್ಲಿ ಇವುಗಳನ್ನು ಹಾಡುವುದು ಸಾಮಾನ್ಯವಾಗಿದೆ. ಈ ಬೆಳವಣಿಗೆಯು ಮಹಿಳೆಯರು ಮತ್ತು ಮಕ್ಕಳ ಮೇಲೆ ಪರಿಣಾಮ ಬೀರಲಿದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಅಭಿರುಚಿಹೀನ ಗೀತೆಗಳನ್ನು ಪ್ರಸ್ತುತಪಡಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕಿದೆ. ಟ್ರ್ಯಾಕ್ಟರ್‌ಗಳಲ್ಲಿ ಬಳಸುವ ಧ್ವನಿವರ್ಧಕಗಳ ಕರ್ಕಶ ಶಬ್ದದ ತಡೆಗೂ ನಿಯಮಾವಳಿ ರೂಪಿಸಿ.

ಬಿ.ಎಸ್. ಮುಳ್ಳೂರ, ರಾಮದುರ್ಗ

ಮಾದಕ ವಸ್ತುಗಳಿಂದ ಬಾಳು ಹಾಳು

ದೇಶದ ಭವಿಷ್ಯವಾದ ಯುವಜನಾಂಗ ಸಾಗುತ್ತಿರುವ ಹಾದಿಯು ನಿಜಕ್ಕೂ ಗಾಬರಿ ಹುಟ್ಟಿಸುತ್ತದೆ. ಯುವಜನರು ವಿದ್ಯಾರ್ಥಿ ಜೀವನದಲ್ಲಿ ಚೆನ್ನಾಗಿ ಓದಿ ತಂದೆ–ತಾಯಿ ಇರಿಸಿಕೊಂಡಿರುವ ನಂಬಿಕೆ ಉಳಿಸಿಕೊಳ್ಳುವ ದಿಸೆಯಲ್ಲಿ ಹೆಜ್ಜೆ ಇಡುತ್ತಿಲ್ಲ. ಡ್ರಗ್ಸ್, ಮದ್ಯಪಾನ, ಧೂಮಪಾನದಂತಹ ದುಶ್ಚಟಗಳಿಗೆ ದಾಸರಾಗುತ್ತಿರುವುದು ನೋವಿನ ಸಂಗತಿ. ಮಾದಕ ವಸ್ತುಗಳನ್ನು ತಯಾರಿಸುವವರು, ಪೂರೈಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕಿರುವುದು ಪೊಲೀಸರ ಜವಾಬ್ದಾರಿ. ಆದರೆ, ಕೆಲವು ಅಧಿಕಾರಿಗಳೇ ಪೆಡ್ಲರ್‌ಗಳ ಜೊತೆಗೆ ಕೈಜೋಡಿಸಿರುವುದು ಸರ್ಕಾರದ ವೈಫಲ್ಯಕ್ಕೆ ಹಿಡಿದ ಕೈಗನ್ನಡಿ.

ಚಂದ್ರಕುಮಾರ್ ಡಿ., ಬೆಂಗಳೂರು

ಸ್ಕಾಲರ್‌ಶಿಪ್ ವಿಳಂಬದಿಂದ ಪರದಾಟ

ಸ್ನಾತಕೋತ್ತರ ಪದವಿಗೆ ಪ್ರವೇಶಾತಿ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೂ ರಾಜ್ಯ ಸರ್ಕಾರದಿಂದ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಆದರೆ, ಸರ್ಕಾರ ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿ ವೇತನದ ಹಣವನ್ನು ಬಿಡುಗಡೆ ಮಾಡಿಲ್ಲ. ಪದವಿ ಮುಗಿದ ತಕ್ಷಣ ಸ್ನಾತಕೋತ್ತರ ಪದವಿ ಪಡೆಯುವ ಆಸೆ ಎಲ್ಲರಲ್ಲಿಯೂ ಇರುತ್ತದೆ. ಬಡ ವಿದ್ಯಾರ್ಥಿಗಳು ಸ್ಕಾಲರ್‌ಶಿಪ್ ನಂಬಿಕೊಂಡಿರುತ್ತಾರೆ. ಸಕಾಲದಲ್ಲಿ ಹಣ ಬಿಡುಗಡೆ ಮಾಡದಿದ್ದರೆ ಉನ್ನತ ಶಿಕ್ಷಣ ಪಡೆಯಬೇಕೆಂಬ ಅವರ ಆಶಯಕ್ಕೆ ಪೆಟ್ಟು ಬೀಳಲಿದೆ.

ಸಾಗರ್ ಗೌಡ ದರೂರ್, ಬಳ್ಳಾರಿ

ಚುರುಮುರಿ

ಸರ್ಕಾರಿ ಪಿಕಪ್ ಡ್ರಾಪ್!

• ಗುರು ಪಿ.ಎಸ್.

'ಹಲೋ, ಸರ್ ನಾನು... ನೀವು ಪೊಲೀಸ್‌ನವರಾ?' ನ್ಯೂ ಇಯರ್ ಪಾರ್ಟಿ ಮುಗಿಸಿ ಸುಸ್ತಾಗಿದ್ದ ವಿಜಿ 100 ಸಂಖ್ಯೆಗೆ ಫೋನ್ ಮಾಡಿದ.

'ಹೌದು, ಹೇಳಿ...' ಪೊಲೀಸಪ್ಪನ ಗಡಸು ದನಿ.

'ಸಾರ್, ಎಣ್ಣೆ ಜಾಸ್ತಿಯಾಗಿ ಕಣ್ಣು ಮಿಣಮಿಣ ಅಂತಿದೆ. ನೀವು ಠಣ್ ಅಂತ ಇಲ್ಲಿಗೆ ಬಂದ್ರೆ ಟಂಟಡಣ್ ಅಂತ ನಾನು ಮನೆ ಸೇರ್ಕೋತಿನಿ...'

'ಸರಿ, ಎಲ್ಲಿದಿರಾ ಹೇಳಿ, ಬರ್ತೀವಿ'.

'ಇಲ್ಲೇ ಇದೀನಿ ಸಾರ್, ಇಲ್ಲೇ...'

'ಇಲ್ಲೇ ಅಂದ್ರೆ ಎಲ್ಲಿ ರೀ, ಲ್ಯಾಂಡ್ ಮಾರ್ಕ್ ಹೇಳಿ'.

'ಇಲ್ಲೊಂದು ಬಾರ್ ಇದೆ ಸರ್, ಅದರ ಮುಂದಿನ ರಸ್ತೆಬದಿ ಮಲಗಿದೀನಿ'.

ಮೊಬೈಲ್ ನೆಟ್‌ವರ್ಕ್ ಆಧಾರದ ಮೇಲೆ ಲೊಕೇಷನ್‌ಗೆ ಬಂದರು ಪೊಲೀಸರು.

'ಅಬ್ಬಬ್ಬಾ, ಏನ್ ಆಕ್ಯುರೇಟು. ಸರ್ಕಾರದ ಸೇವೆ ಇಷ್ಟು ನೇರವಾಗಿ ಇದೇ ಮೊದಲ ಬಾರಿ ನಾನು ಪಡ್ಕೊಳ್ತಿರೋದು' ಅಂತ ಹೆಮ್ಮೆಯಿಂದ ಹೇಳಿದ ವಿಜಿ.

'ಆಯ್ತು, ಮನೆ ರೂಟ್ ಆದ್ರು ಕರೆಕ್ಟ್ ಆಗಿ ಹೇಳಿ' ಎಂದ ಪೊಲೀಸ್, ಜೀಪ್ ಸ್ಟಾರ್ಟ್ ಮಾಡಿದರು.

'ಸ್ಟ್ರೈಟ್ ಹೋಗಿ, ಲೆಫ್ಟ್ ತಗೊಳ್ಳಿ, ಮತ್ತೆ ಲೆಫ್ಟ್ ಟರ್ನ್ ಮಾಡಿ, ಮತ್ತೆ ಎಡಕ್ಕೆ ತಿರುಗಿಸಿ, ಅಲ್ಲೊಂದು ಪರಮೇಶ್ವರ ದೇವಸ್ಥಾನ ಇದೆ, ಅದರ ಹತ್ತಿರ ನಿಲ್ಲಿಸಿ'.

'ರೀ, ಇದು ಪರಶಿವನ ದೇವಸ್ಥಾನ ಅಲ್ಲ. ನಮ್ ಹೋಂ ಮಿನಿಸ್ಟರ್ ಪರಮೇಶ್ವರರ ಮನೆ'.

'ಅಯ್ಯೋ ಹೌದಾ, ನಮಗಾಗಿ ಇಷ್ಟೆಲ್ಲ ವ್ಯವಸ್ಥೆ ಮಾಡಿರೋ ಅವರು ನಮಗೆ ದೇವರ ಸಮಾನವೇ' ಕೈ ಮುಗಿದ.

'ಆಯ್ತು ಇಳೀರಿ' ಎಂದರು ಪೊಲೀಸರು.

'ಓಯ್, ಮನೆವರೆಗೂ ಡ್ರಾಪ್ ಕೊಡಿ. ಇಲ್ಲಾಂದ್ರೆ ಇಲ್ಲೇ ನಿಮ್ ಮಿನಿಸ್ಟರ್‌ಗೆ ಕಂಪ್ಲೇಂಟ್ ಮಾಡ್ತೀನಿ ನೋಡಿ'.

ತಲೆ ಚಚ್ಚಿಕೊಂಡ ಪೊಲೀಸರು ವಿಜಿಯನ್ನು ಮತ್ತೆ ಜೀಪ್ ಏರಿಸಿದರು.

'ರೈಟ್ ತಿರುಗಿಸಿ, ಮತ್ತೆ ಬಲಕ್ಕೆ ಹೊರಳಿಸಿ, ಮತ್ತೆ ರೈಟ್...' ಜೀಪು ವಿಧಾನಸೌಧದ ಮುಂದೆ ಬಂದು ನಿಂತಿತು!

ಸಂಗತ

ಕೋರೆಗಾಂವ್: ದಮನಿತರ ಹೊಸ ಗುರುತು

ಕೋರೆಗಾಂವ್ ಯುದ್ಧ ಅಸ್ಪೃಶ್ಯರ ಪಾಲಿಗೆ ಸ್ಫೂರ್ತಿದಾಯಕ ಕಥನ. ಚರಿತ್ರೆಯಲ್ಲಿ ಹುದುಗಿದ್ದ ವಿದ್ಯಮಾನವನ್ನು ಅಂಬೇಡ್ಕರ್ ಸ್ವಾಭಿಮಾನದ ಸಂಕೇತವಾಗಿಸಿದರು.

• ಅರುಣ್ ಜೋಳದಕೂಡ್ಲಿಗಿ

ಕಳೆದ ಒಂದು ದಶಕದಲ್ಲಿ ದಮನಿತ ಸಮುದಾಯಗಳು 1818ರ ಜನವರಿ 1ರಂದು ನಡೆದಿದ್ದ ಕೋರೆಗಾಂವ್ ವಿಜಯೋತ್ಸವವನ್ನು ಪ್ರತಿ ವರ್ಷ ಆಚರಿಸುತ್ತಿವೆ. ಈ ಆಚರಣೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಅಂಬೇಡ್ಕರ್ ಪ್ರತಿಮೆಯಂತೆ ಕೋರೆಗಾಂವ್ ವಿಜಯೋತ್ಸವದ ಸ್ತಂಭಗಳು ಸ್ಥಾಪನೆಗೊಳ್ಳುತ್ತಿವೆ. ದಮನಿತರೇ ಈ ಆಚರಣೆಯನ್ನು ಹೆಚ್ಚಾಗಿ ಮಾಡುತ್ತಿದ್ದಾರೆ. 'ಭೀಮಾ ಕೋರೆಗಾಂವ್ ಯುದ್ಧ' ಅಸ್ಪೃಶ್ಯ ಸಮುದಾಯಗಳನ್ನು ಏಕೆ ಆಕರ್ಷಿಸುತ್ತಿದೆ? ಬಾಬಾ ಸಾಹೇಬ ಅಂಬೇಡ್ಕರ್ ಅವರು ಈ ಚರಿತ್ರೆಯನ್ನು ಏಕೆ ಕೆದಕಿದರು? ಇಂಗ್ಲಿಷ್‌ನಲ್ಲಿ ಅಂಬೇಡ್ಕರ್ ಬಗೆಗೆ ಬರುತ್ತಿರುವ ಹೊಸ ಪುಸ್ತಕಗಳಲ್ಲಿ 'ಕೋರೆಗಾಂವ್' ವಿದ್ಯಮಾನವನ್ನು ಸಾಮಾನ್ಯ ಸಂಗತಿಯಂತೆ ಉಲ್ಲೇಖಿಸಿ ಮುಂದೆ ಹೋಗುತ್ತಿರುವುದು ಏಕೆ? ಎನ್ನುವುದನ್ನು ಚರ್ಚಿಸಬೇಕಿದೆ.

ಸರಿಯಾಗಿ 207 ವರ್ಷಗಳ ಹಿಂದೆ ಆಂಗ್ಲೊ ಮರಾಠ ಯುದ್ಧ ಸರಣಿಯ ಅಂತಿಮ ಯುದ್ಧವು ಪುಣೆಯ ಬಳಿಯ ಭೀಮಾ ನದಿಯ ದಡದಲ್ಲಿರುವ ಕೋರೆಗಾಂವ್ ಗ್ರಾಮದಲ್ಲಿ ನಡೆಯಿತು. ಈ ಯುದ್ಧದಲ್ಲಿ ಸಿಕ್ಕ ಗೆಲುವು ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಳ್ಳಲು ನಿರ್ಣಾಯಕವಾಗಿತ್ತು. ಹಾಗಾಗಿ ಬ್ರಿಟಿಷರು ಯುದ್ಧದ ಗೆಲುವಿನ ನೆನಪಿಗೆ 65 ಅಡಿ ಎತ್ತರದ ಒಂದು ಯುದ್ಧಸ್ಮಾರಕ (ಒಬೆಲಿಸ್ಕ್) ನಿರ್ಮಿಸಿದರು. ಅದರಲ್ಲಿ 49 ಹೆಸರುಗಳಿದ್ದು, 'ನಕ್' ಪ್ರತ್ಯಯಗಳಿಂದ ಕೊನೆಗೊಳ್ಳುವ 22 ಹೆಸರುಗಳನ್ನು ಮಹಾರ್‌ಗಳೆಂದು ಗುರುತಿಸಲಾಗಿದೆ. ಹಾಗಾಗಿ, ಈ ಯುದ್ಧವು ಮಹಾರ್ ಸೈನಿಕರ ಶೌರ್ಯ ಸಾಹಸದ ಫಲ ಎನ್ನುವ ವಿಶ್ಲೇಷಣೆ ಮುನ್ನೆಲೆಗೆ ಬಂದಿದೆ.

ಬ್ರಿಟಿಷರು 1893ರಲ್ಲಿ ಸೈನ್ಯದಲ್ಲಿ ಮಹಾರ್‌ರ ನೇಮಕಾತಿಯನ್ನು ನಿಲ್ಲಿಸಿದಾಗ, ಮಹಾರರ ನೇತಾರರಾಗಿದ್ದ ಗೋಪಾಲ ಬಾಬಾ ವಾಲಂಗ್ಕರ್, ಶಿವರಾಜ ಜನಬಾ ಕಾಂಬ್ಳೆ ಮತ್ತು ಬಿ.ಆರ್. ಅಂಬೇಡ್ಕರ್ ಅವರ ತಂದೆ ರಾಮ್‌ಜಿ ಸಕ್ಪಾಲ್ ಕೋರೆಗಾಂವ್ ಯುದ್ಧದ ಗೆಲುವನ್ನು ಮುನ್ನೆಲೆಗೆ ತಂದು, ಸೈನ್ಯದಲ್ಲಿ ಮಹಾರರನ್ನು ಸೇರಿಸಿಕೊಳ್ಳಲು ಬ್ರಿಟಿಷರಿಗೆ ಮನವಿ ಮಾಡಿದ್ದರು.

ಕೋರೆಗಾಂವ್ ಯುದ್ಧಕ್ಕೂ ಮೊದಲು ಪೇಶ್ವೆಗಳು ಹಿಂದಿನ ಎರಡು ಆಂಗ್ಲೊ–ಮರಾಠ ಯುದ್ಧಗಳಿಂದ ದುರ್ಬಲಗೊಂಡಿದ್ದರು. ಪೇಶ್ವೆಗಳ ಎರಡನೇ ಬಾಜೀರಾವ್ ಮುಂದಾಳತ್ವದ ಪಡೆ 20 ಸಾವಿರ ಅಶ್ವಸೈನ್ಯ, 8 ಸಾವಿರ ಕಾಲಾಳುಗಳನ್ನು ಒಳಗೊಂಡಿತ್ತು. ಅದರಲ್ಲಿ ಅರಬ್ಬರು ಬಹುಸಂಖ್ಯಾತರಾಗಿದ್ದರು. ಬ್ರಿಟಿಷ್ ಕಂಪನಿಯ ಪಡೆ 834 ಸೈನಿಕರನ್ನು ಒಳಗೊಂಡಿತ್ತು. ಅದರಲ್ಲಿ ಬಾಂಬೆ ಸ್ಥಳೀಯ ಪದಾತಿ ದಳದ 1ನೇ ರೆಜಿಮೆಂಟಿನ 2ನೇ ಬೆಟಾಲಿಯನ್‌ನ ಸುಮಾರು 500 ಸೈನಿಕರು ಸೇರಿದ್ದರು. ಆ ಪಡೆಯನ್ನು ಮಹಾರ್ ಸೈನಿಕರು ಮುನ್ನಡೆಸುತ್ತಿದ್ದರು. ಯುದ್ಧದಲ್ಲಿ ಎರಡನೇ ಬಾಜೀರಾವ್ ಸೋಲನ್ನಪ್ಪಿದ. ಆ ಯುದ್ಧವನ್ನು ಅಂಬೇಡ್ಕರ್ ಅವರು ಪೇಶ್ವೆಗಳ ಬ್ರಾಹ್ಮಣ ಆಳ್ವಿಕೆಯ ವಿರುದ್ಧದ ಮಹಾರ್‌ಗಳ ಗೆಲುವೆಂದು, ದಮನಿತರ ಚಳವಳಿ ಕಟ್ಟಲು ಸ್ಫೂರ್ತಿಯ ಕಥೆಯನ್ನಾಗಿ ಬಳಸಿದರು.

ಜನವರಿ 1, 1927ರಲ್ಲಿ ಕೋರೆಗಾಂವ್ ಧ್ವಜಸ್ತಂಭದ ಬಳಿ ಆಯೋಜಿಸಿದ ಸಭೆಯಲ್ಲಿ ಅಂಬೇಡ್ಕರ್ ಭಾಗವಹಿಸಿದ ಫೋಟೊ ಲಭ್ಯವಿದೆ. ಅದರಲ್ಲಿ ಐದಾರು ಚಿಕ್ಕ ಮಕ್ಕಳನ್ನು ಒಳಗೊಂಡಂತೆ 40 ಜನರಿದ್ದಾರೆ. ಆ ದಿನ ಅಂಬೇಡ್ಕರ್ ಭಾಷಣ ಮಾಡುತ್ತಾರೆ. ಅದರಲ್ಲಿ ಪೇಶ್ವೆ ಕಾಲದಲ್ಲಿ ಅಸ್ಪೃಶ್ಯರು ಅನುಭವಿಸಿದ ಶೋಷಣೆಯನ್ನು ನೆನೆದು, ಇದು ಬ್ರಾಹ್ಮಣ್ಯದ ವಿರುದ್ಧದ ಮಹಾರರ ಗೆಲುವು ಎಂದು ಹೇಳಿದ್ದಾರೆ. ಅದಾದ ನಂತರ 1931–32ರ ರೌಂಡ್ ಟೇಬಲ್ ಕಾನ್ಫರೆನ್ಸ್‌ಗೆ ಹೋದಾಗ ಬರೆದರು ಎನ್ನುವ 'ಅಸ್ಪೃಶ್ಯರು ಮತ್ತು ಬ್ರಿಟಿಷ್ ಆಳ್ವಿಕೆ' ಎನ್ನುವ ದೀರ್ಘ ಬರಹದಲ್ಲಿ ಕೋರೆಗಾಂವ್ ಯುದ್ಧದ ಬಗ್ಗೆ ಆಳವಾದ ಅಧ್ಯಯನ ಮಾಡಿ, 1859ರಲ್ಲಿ ನೇಮಕವಾದ ಪೀಲ್ ಕಮಿಷನ್ ವರದಿಯಲ್ಲಿ ಮಾರ್ಕೆಸ್ ಟ್ವೀಡ್ ಡೇಲ್ ಅವರು ಭಾರತದ ಸೈನ್ಯದ ಪುನರ್ ರಚನೆಯ ಸಂದರ್ಭದಲ್ಲಿ ಕೋರೆಗಾಂವ್ ಯುದ್ಧದಲ್ಲಿ ಮಹಾರರ ಕೊಡುಗೆಯನ್ನು ನೆನಪಿಸಿಕೊಂಡಿರುವುದನ್ನು ಉಲ್ಲೇಖಿಸಿದ್ದಾರೆ.

ಬ್ರಿಟಿಷ್ ಸೈನ್ಯದಲ್ಲಿದ್ದ ಮಹಾರಾಷ್ಟ್ರದ ಮಹಾರ್‌ಗಳು, ತಮಿಳುನಾಡಿನ ಪರೈಗಳನ್ನು ಒಳಗೊಂಡಂತೆ ಅಸ್ಪೃಶ್ಯರು, ಬ್ರಿಟಿಷರ ಗೆಲುವಿಗೆ ಕಾರಣವಾದದ್ದನ್ನು ಅಂಬೇಡ್ಕರ್ ವಿಶ್ಲೇಷಿಸುತ್ತಾರೆ. ಬ್ರಿಟಿಷರಿಂದ ಅಸ್ಪೃಶ್ಯ ಸಮುದಾಯಗಳಿಗೆ ಅನ್ಯಾಯವಾದಾಗಲೆಲ್ಲ ಕೋರೆಗಾಂವನ್ನು ಮುನ್ನೆಲೆಗೆ ತರುತ್ತಾರೆ. 1938ರಿಂದ 1941ರ ಅವಧಿಯಲ್ಲಿ ಮಾಡಿದ ಮೂರು ಸಾರ್ವಜನಿಕ ಭಾಷಣಗಳಲ್ಲಿ ಕೋರೆಗಾಂವ್ ಕದನವನ್ನು ನೆನೆಯುತ್ತ, ಯಾರಿಗೆ ದೇಶವನ್ನು ದೊರಕಿಸಿ ಕೊಟ್ಟೆವೋ ಅವರೇ ನಮ್ಮನ್ನು ಒದೆಯಲು ಮುಂದಾಗಿದ್ದಾರೆ ಎಂದು ಹೇಳಿದ್ದಾರೆ.

ಆನಂದ ತೇಲ್ತುಂಬ್ಡೆ ಅವರು ಚಳವಳಿಯನ್ನು ಕಟ್ಟಲು ಅಂಬೇಡ್ಕರ್ ಕೋರೆಗಾಂವ್ ಕದನವನ್ನು ಮುನ್ನೆಲೆಗೆ ತಂದದ್ದನ್ನು ಗೌರವಿಸುತ್ತಲೇ, 'ಅದು ಜಾತಿ ಶೋಷಣೆಯ ಅರಿವು ಮೂಡದ ಕಾಲದ ಎರಡು ಪ್ರಭುತ್ವಗಳ ವಿರುದ್ಧದ ಹೋರಾಟವಾಗಿತ್ತು. ಹಾಗಾಗಿ, ಕೋರೆಗಾಂವ್ ಕದನದ ನೆಪದಲ್ಲಿ ಹುಟ್ಟಿದ ಆಧಾರರಹಿತ ಮೌಖಿಕ ನಿರೂಪಣೆಗಳನ್ನು ಜಾತಿ ಶ್ರೇಣೀಕರಣ ವಿರುದ್ಧದ ಹೋರಾಟದ ಚಾರಿತ್ರಿಕ ಆಕರವಾಗಿ ಬಳಸುವುದು ತಪ್ಪು' ಎನ್ನುತ್ತಾರೆ. ಸೂಕ್ಷ್ಮವಾದ ಈ ಎಚ್ಚರವನ್ನು ಇಟ್ಟುಕೊಂಡೇ ಕೋರೆಗಾಂವ್ ನೆನಪನ್ನು ಅಸ್ಪೃಶ್ಯರ ಧೈರ್ಯ, ಕೆಚ್ಚು, ಸಾಹಸದ ಚಾರಿತ್ರಿಕ ಗುರುತಾಗಿ ಕಾಣಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ಅಂಗೀಕಾರಗೊಂಡ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ತಡೆ) ಮಸೂದೆ–2025ಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಮತ್ತು ಬಿಜೆಪಿ ನಡುವೆ ವಾಗ್ವಾದ ನಡೆಯುತ್ತಿದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವ ಮಸೂದೆ, ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಜಾರಿಗೆ ತರಲು ಸರ್ಕಾರ ಹೊರಟಿದೆ ಎಂದು ಬಿಜೆಪಿ ಆರೋಪಿಸಿದೆ. ಇದಕ್ಕೆ ರಾಜ್ಯಪಾಲರು ಸಹಿ ಹಾಕಬಾರದು ಎಂದೂ ಅದು ಒತ್ತಾಯಿಸಿದೆ. ದ್ವೇಷ ಭಾಷಣದ ಮೂಲಕ ಸಮಾಜದ ಸ್ವಾಸ್ಥ್ಯ, ಸಾಮರಸ್ಯ ಹಾಳುಗೆಡಹುವುದನ್ನು, ಜನ/ಸಮುದಾಯಗಳ ನಡುವೆ ದ್ವೇಷ ಹುಟ್ಟುಹಾಕುವುದನ್ನು ತಡೆಯುವುದಕ್ಕೆ ಹೊಸ ಕಾನೂನು ಅಗತ್ಯ ಎಂದು ಸರ್ಕಾರ ಹೇಳಿದೆ. ರಾಜ್ಯಪಾಲರು ಇನ್ನಷ್ಟೇ ಮಸೂದೆಗೆ ಸಹಿ ಹಾಕಬೇಕಾಗಿದೆ. ಮಸೂದೆಯ ವಿವರ ಇಲ್ಲಿದೆ

ದ್ವೇಷ ಅಪರಾಧಕ್ಕೆ ತಡೆ ಮಸೂದೆ ತಿರುಳೇನು?

ಪ್ರಜಾವಾಣಿ ವಾರ್ತೆ

ನಿರ್ದಿಷ್ಟ ವ್ಯಕ್ತಿ, ಸಮೂಹ, ಸಮುದಾಯ, ಅಥವಾ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ಸಮಾಜದ ಸಾಮರಸ್ಯ ಕದಡುವ ರೀತಿಯಲ್ಲಿ ದ್ವೇಷ ಭಾಷಣ ಮಾಡುವುದು, ಅವುಗಳ ಪ್ರಕಟಣೆ, ಪ್ರಸರಣ, ಪ್ರಚೋದನೆ ತಡೆಯುವ ಉದ್ದೇಶದಿಂದ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ತಡೆ) ಮಸೂದೆ-2025 ಅನ್ನು ಸಿದ್ಧಪಡಿಸಲಾಗಿದೆ ಎಂದು ರಾಜ್ಯ ಸರ್ಕಾರ ಹೇಳಿದೆ. ದ್ವೇಷ ಅಪರಾಧ ಎಸಗುವವರನ್ನು ದಂಡಿಸುವುದು ಮತ್ತು ಸಂತ್ರಸ್ತರಿಗೆ ತಕ್ಕ ಪರಿಹಾರ ನೀಡುವ ಉದ್ದೇಶವೂ ಈ ಮಸೂದೆಗೆ ಇದೆ.

ಭಾರತೀಯ ನ್ಯಾಯ ಸಂಹಿತೆ–2023ರ (ಬಿಎನ್‌ಎಸ್) 196ನೇ ಸೆಕ್ಷನ್ ಕೂಡ ದ್ವೇಷ ಅಪರಾಧದ ಕುರಿತಾಗಿ ಇದೆ. ಇದಕ್ಕೆ ಹೆಚ್ಚುವರಿಯಾಗಿ ಈ ಮಸೂದೆ ರೂಪಿಸಲಾಗಿದೆ. ಇದರ ಪ್ರಕಾರ, ಸಮಾಜದಲ್ಲಿ ದ್ವೇಷ ಹರಡುವಂತೆ ಮಾಡುವ ಯಾವುದೇ ಕೃತ್ಯ ಶಿಕ್ಷಾರ್ಹ ಅಪರಾಧ. ಅಲ್ಲದೇ, ಇದರ ಅಡಿಯಲ್ಲಿ ದಾಖಲಾಗುವ ಪ್ರಕರಣ ಗಂಭೀರ ಸ್ವರೂಪದ್ದಾಗಿದ್ದು, ಆರೋಪಿಗಳಿಗೆ ಜಾಮೀನು ಸಿಗುವುದಿಲ್ಲ.

ಕಾನೂನು ಸುವ್ಯವಸ್ಥೆ: ಕ್ರಮ ಯಾವಾಗ?

ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ದ್ವೇಷ ಅಪರಾಧ ಎಸಗುವ ಸಾಧ್ಯತೆ ಇದೆ ಅಥವಾ ಅಪರಾಧ ಎಸಗುವ ಬೆದರಿಕೆ ಒಡ್ಡಿದರೆ ಮತ್ತು ಅದನ್ನು ತಡೆಯಲು ಕ್ರಮ ಕೈಗೊಳ್ಳುವುದು ಅಗತ್ಯವಿದೆ ಎಂಬುದು ಮನವರಿಕೆಯಾದರೆ ಸಮಾಜದಲ್ಲಿ ಶಾಂತಿ, ಕಾನೂನು ಸುವ್ಯವಸ್ಥೆ ಕಾಪಾಡುವುದಕ್ಕಾಗಿ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ಉಪ ಪೊಲೀಸ್ ವರಿಷ್ಠಾಧಿಕಾರಿ (ಡಿಎಸ್‌ಪಿ) ದರ್ಜೆಯ ಅಧಿಕಾರಿಯು ಅಗತ್ಯ ಕ್ರಮಗಳನ್ನು ಕೈಗೊಳ್ಳಬಹುದು.

ವಿಷಯ ನಿರ್ಬಂಧಿಸುವ/ ತೆಗೆದುಹಾಕುವ ಅಧಿಕಾರ

ದ್ವೇಷ ಭಾಷಣ ಅಥವಾ ಅದಕ್ಕೆ ಸಂಬಂಧಿಸಿದ ವಿಷಯ, ವಸ್ತುಗಳನ್ನು ಮೂಲದಿಂದಲೇ ತೆಗೆದುಹಾಕುವ ಅಥವಾ ನಿರ್ಬಂಧಿಸುವ ಅಧಿಕಾರ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿಯೋಜಿಸಿರುವ ಯಾವುದೇ ಅಧಿಕಾರಿಗೆ ಇರುತ್ತದೆ. ಈ ಅಧಿಕಾರಿಯು ಎಲೆಕ್ಟ್ರಾನಿಕ್ ಮಾಧ್ಯಮವೂ ಸೇರಿದಂತೆ ಯಾವುದೇ ಸೇವಾದಾತ ಸಂಸ್ಥೆ, ಮಧ್ಯವರ್ತಿ, ವ್ಯಕ್ತಿ ಅಥವಾ ಸಂಸ್ಥೆಗೆ ವಿಷಯ ವಸ್ತುಗಳನ್ನು ತಡೆ ಹಿಡಿಯುವಂತೆ ಅಥವಾ ಸಂಪೂರ್ಣವಾಗಿ ತೆಗೆದುಹಾಕುವಂತೆ ನಿರ್ದೇಶಿಸಬಹುದು.

ದ್ವೇಷ ಭಾಷಣ ಮತ್ತು ದ್ವೇಷ ಅಪರಾಧ ತಡೆಗಾಗಿ ಪ್ರತ್ಯೇಕವಾದ ಮಸೂದೆ ರೂಪಿಸಿದ ಮೊದಲ ರಾಜ್ಯ ಕರ್ನಾಟಕ

ಯಾವುದಕ್ಕೆ ವಿನಾಯಿತಿ?

ಎಲೆಕ್ಟ್ರಾನಿಕ್ ಅಥವಾ ಬೇರೆ ಯಾವುದೇ ರೂಪದಲ್ಲಿರುವ ಪುಸ್ತಕ, ಕರಪತ್ರ, ಕಾಗದ, ಬರಹ, ರೇಖಾಚಿತ್ರ, ವರ್ಣಚಿತ್ರ ರೂಪಕ ಅಥವಾ ಚಿತ್ರಗಳನ್ನು ವಿಜ್ಞಾನ, ಸಾಹಿತ್ಯ, ಕಲೆ ಅಥವಾ ಕಲಿಕೆ ಅಥವಾ ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದ ಉದ್ದೇಶದಿಂದ ಪ್ರಕಟಣೆ ಮಾಡಿದ್ದರೆ ಮತ್ತು ಅವುಗಳು ಜನಹಿತಕ್ಕಾಗಿ ಇರುವುದೆಂದು ಸಾಬೀತಾದರೆ ಅಥವಾ ಸದ್ಭಾವನಾಪೂರ್ವಕವಾಗಿ ಪರಂಪರೆ ಅಥವಾ ಧಾರ್ಮಿಕ ಉದ್ದೇಶಗಳಿಗಾಗಿ ಈ ಪ್ರಕಟಣೆಗಳನ್ನು ಇಟ್ಟುಕೊಂಡಿದ್ದರೆ ಅಥವಾ ಬಳಕೆಯಲ್ಲಿದ್ದರೆ ಈ ಮಸೂದೆಯಲ್ಲಿನ ನಿಯಮಗಳು ಅನ್ವಯವಾಗುವುದಿಲ್ಲ

ಪದಗಳ ವ್ಯಾಖ್ಯಾನ

ದ್ವೇಷ ಭಾಷಣ

ಯಾವುದೇ ಧರ್ಮ, ಜನಾಂಗ, ಜಾತಿ ಅಥವಾ ಸಮುದಾಯ, ಲಿಂಗ, ಲಿಂಗತ್ವ, ಲೈಂಗಿಕ ಮನೋಗುಣ, ಜನ್ಮ ಸ್ಥಳ, ವಾಸ ಸ್ಥಳ, ಭಾಷೆ, ನ್ಯೂನತೆ ಅಥವಾ ಪಂಗಡಗಳ ಆಧಾರದಲ್ಲಿ ಪೂರ್ವಗ್ರಹಪೀಡಿತವಾಗಿ ಯಾವುದೇ ಮೃತ/ಜೀವಂತ ವ್ಯಕ್ತಿ, ವ್ಯಕ್ತಿಗಳ ವರ್ಗ/ಗುಂಪು ಅಥವಾ ಸಮುದಾಯದ ವಿರುದ್ಧ ಹಾನಿ, ಸಾಮರಸ್ಯ ಕದಡುವ ವೈರತ್ವದ ಅಥವಾ ದ್ವೇಷದ ಅಥವಾ ಕೆಡುಕಿನ ಭಾವನೆಗಳನ್ನು ಮೂಡಿಸುವ ಉದ್ದೇಶದಿಂದ ಸಾರ್ವಜನಿಕವಾಗಿ ಮೌಖಿಕ ಅಥವಾ ಲಿಖಿತ ರೂಪದಲ್ಲಿ ಅಥವಾ ಸಂಕೇತಗಳ ಮೂಲಕ ಅಥವಾ ದೃಶ್ಯ ರೂಪಕಗಳ ಮೂಲಕ ಅಥವಾ ಎಲೆಕ್ಟ್ರಾನಿಕ್ ಸಂವಹನಗಳ ಮೂಲಕ ಅಥವಾ ಬೇರೆ ಯಾವುದೇ ರೀತಿಯಲ್ಲಿ ಮಾಡಲಾದ, ಪ್ರಕಟಿಸಲಾದ, ಪಸರಿಸಲಾದ ಅಭಿವ್ಯಕ್ತಿ

ದ್ವೇಷ ಅಪರಾಧ

ಬದುಕಿರುವ ಅಥವಾ ಮೃತಪಟ್ಟಿರುವ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹ ಅಥವಾ ಸಂಸ್ಥೆಯ ವಿರುದ್ಧ ಸಾಮರಸ್ಯವನ್ನು ಹಾಳುಮಾಡುವ ಅಥವಾ ಹಗೆತನ ಅಥವಾ ದ್ವೇಷ ಅಥವಾ ಕೆಡುಕಿನ ಭಾವನೆಗಳನ್ನು ಮೂಡಿಸಲು ದ್ವೇಷ ಭಾಷಣವನ್ನು ಮಾಡುವುದು, ಪ್ರಕಟಿಸುವುದು ಅಥವಾ ಹರಡುವ ಮೂಲಕ ಅಂಥ ದ್ವೇಷ ಭಾಷಣವನ್ನು ಪ್ರಚಾರ ಮಾಡುವುದು, ವ್ಯಾಪಕಗೊಳಿಸುವುದು, ಪ್ರಚೋದಿಸುವುದು ಅಥವಾ ಅದಕ್ಕೆ ಪ್ರಯತ್ನಿಸುವುದು



ದಂಡನೆ ಏನೇನು?

ಮಸೂದೆಯ 3ನೇ ಸೆಕ್ಷನ್ ಅಪರಾಧಿಗೆ ನೀಡಲಾಗುವ ಶಿಕ್ಷೆಯ ಬಗ್ಗೆ ವಿವರಿಸುತ್ತದೆ.

- ಯಾವುದೇ ವ್ಯಕ್ತಿ ದ್ವೇಷ ಅಪರಾಧ ಎಸಗಿರುವುದು ಸಾಬೀತಾದರೆ ಕನಿಷ್ಠ ಒಂದು ವರ್ಷದಿಂದ ಗರಿಷ್ಠ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹50 ಸಾವಿರ ದಂಡ
- ವ್ಯಕ್ತಿಯೊಬ್ಬ ಎರಡನೇ ಬಾರಿಗೆ ಅಥವಾ ಪುನರಾರ್ತಿತವಾಗಿ ಅಪರಾಧ ಎಸಗಿದರೆ ಕನಿಷ್ಠ ಎರಡು ವರ್ಷಗಳಿಂದ ಗರಿಷ್ಠ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆ ಮತ್ತು ₹1 ಲಕ್ಷ ದಂಡ

- ಈ ಅಪರಾಧಗಳು ಗಂಭೀರ ಸ್ವರೂಪದ್ದಾಗಿದ್ದು, ಜಾಮೀನುರಹಿತವಾಗಿರುತ್ತವೆ. ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅವರಿಂದ ವಿಚಾರಣೆಗೆ ಒಳಪಡುತ್ತದೆ
- **ಪರಿಹಾರ:** ಅಪರಾಧದ ಪರಿಣಾಮದ ತೀವ್ರತೆಯ ಆಧಾರದ ಮೇಲೆ ನ್ಯಾಯಾಲಯವು ಸಂತ್ರಸ್ತರಿಗೆ ಆಗಿರುವ ಹಾನಿಯನ್ನು ಲೆಕ್ಕಹಾಕಿ ಅದಕ್ಕೆ ತಕ್ಕಷ್ಟು ಪರಿಹಾರವನ್ನು ನೀಡಬಹುದು

ಭಾರತೀಯ ನ್ಯಾಯ ಸಂಹಿತೆಯಲ್ಲೇನಿದೆ?

ಭಾರತೀಯ ದಂಡ ಸಂಹಿತೆ (ಐಪಿಸಿ) ಬದಲಾಗಿ ಹೊಸದಾಗಿ ಜಾರಿಗೆ ಬಂದಿರುವ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) 196ನೇ ಸೆಕ್ಷನ್ ದ್ವೇಷ ಅಪರಾಧದ ಕುರಿತು ವಿವರಿಸುತ್ತದೆ.

ಧರ್ಮ, ಜನಾಂಗ, ಹುಟ್ಟಿದ ಸ್ಥಳ, ವಾಸ ಸ್ಥಳ, ಭಾಷೆ, ಜಾತಿ, ಸಮುದಾಯ... ಇನ್ನಿತರ ವಿಷಯಗಳ ಆಧಾರದಲ್ಲಿ ವಿವಿಧ ಗುಂಪುಗಳ (ಧಾರ್ಮಿಕ, ಸಮುದಾಯ, ಜಾತಿ ಇತ್ಯಾದಿ) ನಡುವೆ ವೈರತ್ವವನ್ನು ಉಂಟು ಮಾಡುವ ಮತ್ತು ಪೂರ್ವಗ್ರಹ ಪೀಡಿತರಾಗಿ ಸಮಾಜದ ಸಾಮರಸ್ಯ ಕದಡುವ ಕೃತ್ಯ ಎಸಗುವವರಿಗೆ, ಇಂತಹ ಕೃತ್ಯಗಳಿಗೆ ಪ್ರೋತ್ಸಾಹ, ಪ್ರಚಾರ ನೀಡುವವರಿಗೆ ಅಥವಾ ದ್ವೇಷ ಉಂಟು ಮಾಡುವಂತಹ ಕಾರ್ಯಕ್ರಮಗಳನ್ನು ಆಯೋಜಿಸಿದವರಿಗೆ ಗರಿಷ್ಠ ಐದು ವರ್ಷಗಳ ಶಿಕ್ಷೆ ಮತ್ತು ದಂಡ ವಿಧಿಸುವುದಕ್ಕೆ ಬಿಎನ್‌ಎಸ್‌ನಲ್ಲಿ ಅವಕಾಶ ಇದೆ.

2000ರ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ ‘66ಎ’ಯು ಆನ್‌ಲೈನ್‌ನಲ್ಲಿ ಅವಮಾನಕರ ಭಾಷೆಗಳನ್ನು ಬಳಸುವ ಅಥವಾ ದುರ್ವತನೆಯ ಸಂದೇಶಗಳನ್ನು ಕಳುಹಿಸಿದವರನ್ನು ದಂಡಿಸುವುದಕ್ಕೆ ಅವಕಾಶ ಕಲ್ಪಿಸಿತ್ತು. ಆದರೆ, ಸುಪ್ರೀಂ ಕೋರ್ಟ್ 2015ರಲ್ಲಿ ಈ ಸೆಕ್ಷನ್ ಅನ್ನು ರದ್ದು ಮಾಡಿದೆ.

ನೋಂದಣಿ ಮಾಡದ ಸಂಸ್ಥೆಗೂ ಅನ್ವಯ

ಪ್ರಸ್ತಾವಿತ ಕಾನೂನು ವ್ಯಕ್ತಿಗಳಿಗೆ ಮಾತ್ರವಲ್ಲ; ದ್ವೇಷ ಅಪರಾಧ ಎಸಗುವ ‘ಸಂಘ ಅಥವಾ ಸಂಸ್ಥೆ’ಗಳಿಗೂ ಅನ್ವಯವಾಗುತ್ತದೆ. ನೋಂದಣಿ ಆಗಿರುವ ಅಥವಾ ನೋಂದಣಿ ಆಗದಿರುವ ಸಂಘ/ಸಂಸ್ಥೆಗಳೂ ಇದರ ವ್ಯಾಪ್ತಿಗೆ ಬರುತ್ತವೆ.

ಅಪರಾಧ ಎಸಗಿದ ಸಮಯದಲ್ಲಿ ಸಂಘ ಅಥವಾ ಸಂಸ್ಥೆಯ ಕಾರ್ಯಾಚರಣೆಯ ಪ್ರಭಾರ ಮತ್ತು ಜವಾಬ್ದಾರಿ ಹೊತ್ತಿರುವ ಪ್ರತಿಯೊಬ್ಬ ವ್ಯಕ್ತಿ ಹಾಗೂ ಆ ಸಂಘ ಅಥವಾ ಸಂಸ್ಥೆಯೂ ತಪ್ಪಿತಸ್ಥರು ಎಂದು ಪರಿಗಣಿಸಲಾಗುತ್ತದೆ. ಪದಾಧಿಕಾರಿಗಳು ಹಾಗೂ ಸಂಸ್ಥೆಯು ಶಿಕ್ಷೆ ಮತ್ತು ದಂಡನೆಗೆ ಅರ್ಹವಾಗಿರುತ್ತಾರೆ.

ಒಂದು ವೇಳೆ ನಡೆದ ಅಪರಾಧವು ಜವಾಬ್ದಾರಿ ಹೊತ್ತಿದ್ದವರ ಅರಿವಿಗೆ ಬಾರದೇ ಇದ್ದರೆ ಅಥವಾ ಅಪರಾಧ ತಡೆಯಲು ಅವರು ಎಲ್ಲ ಮುನ್ನೆಚ್ಚರಿಕೆಗಳನ್ನು ಕೈಗೊಂಡಿದ್ದನ್ನು ಸಾಬೀತು ಪಡಿಸಿದಲ್ಲಿ ಅವರು ದಂಡನೆಗೆ ಅರ್ಹರಾಗುವುದಿಲ್ಲ.

ರಾಷ್ಟ್ರೀಯ

ಗಂಟೆಗೆ 180 ಕಿ.ಮೀ. ವೇಗ
ವಂದೇ ಭಾರತ್ ಸ್ಲೀಪರ್ ರೈಲು: ಹೊಸ ಮೈಲಿಗಲ್ಲು

ನವದೆಹಲಿ (ಪಿಟಿಐ): ಸ್ವದೇಶಿ ವಿನ್ಯಾಸದ ವಂದೇ ಭಾರತ್ ಸ್ಲೀಪರ್ ರೈಲಿನ ಅಂತಿಮ ಸುತ್ತಿನ ‘ಗರಿಷ್ಠ ವೇಗ’ ಪರೀಕ್ಷೆ ಯಶಸ್ವಿಯಾಗಿದ್ದು, ಸುಧಾರಿತ ತಂತ್ರಜ್ಞಾನ, ಸುರಕ್ಷತೆಯಲ್ಲಿ ಭಾರತೀಯ ರೈಲ್ವೆ ಹೊಸ ಮೈಲಿಗಲ್ಲು ಸ್ಥಾಪಿಸಿದೆ.

ರೈಲ್ವೆ ಸುರಕ್ಷತಾ ಆಯುಕ್ತರ (ಸಿಆರ್‌ಎಸ್) ಮೇಲ್ವಿಚಾರಣೆಯಲ್ಲಿ, ರಾಜಸ್ಥಾನದ ಕೋಟಾ–ಮಧ್ಯಪ್ರದೇಶದ ನಾಗ್ದಾ ವಲಯದಲ್ಲಿ 16 ಕೋಚ್‌ಗಳಿದ್ದ ವಂದೇ ಭಾರತ್ ಸ್ಲೀಪರ್ ರೈಲಿನ ಗರಿಷ್ಠ ವೇಗವನ್ನು ಪರೀಕ್ಷೆಗೆ ಒಳಪಡಿಸಲಾಗಿದೆ.

‘ರೈಲು ಗಂಟೆಗೆ ಗರಿಷ್ಠ 180 ಕಿ.ಮೀ ವೇಗದಲ್ಲಿ ಚಲಿಸಿದೆ, ಸುರಕ್ಷತಾ ಅಂಶಗಳು ಸಂಪೂರ್ಣ ತೃಪ್ತಿದಾಯಕವಾಗಿದೆ’ ಎಂದು ರೈಲ್ವೆ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ದಿನ ನಿಗದಿಯಾಗಿಲ್ಲ: ವಂದೇ ಭಾರತ್ ಸ್ಲೀಪರ್ ರೈಲು ಎಂದಿನಿಂದ ಕಾರ್ಯಾಚರಣೆ ಆರಂಭಿಸಲಿದೆ ಎನ್ನುವುದನ್ನು ರೈಲ್ವೆ ಸಚಿವಾಲಯ ಇನ್ನೂ ಸ್ಪಷ್ಟಪಡಿಸಿಲ್ಲ. ಈಗಾಗಲೇ ಹಲವು ಬಾರಿ ಉದ್ಘಾಟನೆಯನ್ನು ಮುಂದೂಡಲಾಗಿದೆ. ಡಿಸೆಂಬರ್ 2025ರ ಒಳಗಾಗಿ ವಂದೇ ಭಾರತ್ ಸ್ಲೀಪರ್ ಕಾರ್ಯಾರಂಭ ಮಾಡಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಈ ಹಿಂದೆ ಹೇಳಿದ್ದರು.

> ವಂದೇ ಭಾರತ್ ಸ್ಲೀಪರ್ ರೈಲಿನ ಗರಿಷ್ಠ ವೇಗ ಪರೀಕ್ಷೆ ಯಶಸ್ವಿಯಾಗಿದ್ದು, ಸುರಕ್ಷತಾ ಅಂಶಗಳು ಸಂಪೂರ್ಣ ತೃಪ್ತಿದಾಯಕವಾಗಿದೆ ಎಂದು ‘ಸಿಆರ್‌ಎಸ್’ ಘೋಷಿಸಿದೆ
> **ಅಶ್ವಿನಿ ವೈಷ್ಣವ್**, ರೈಲ್ವೆ ಸಚಿವ

‘ರೈಲಿನ ವೇಗ ಮತ್ತು ಸುರಕ್ಷತಾ ಪರೀಕ್ಷೆಯ ವಿಡಿಯೊವನ್ನು ಅಶ್ವಿನಿ ವೈಷ್ಣವ್ ಬುಧವಾರ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಇದರಲ್ಲಿ ರೈಲಿನ ಗಾಜಿನ ಗುಣಮಟ್ಟ ಮತ್ತು ಸ್ಥಿರತೆಯನ್ನು ಪರೀಕ್ಷಿಸುತ್ತಿರುವ ದೃಶ್ಯವಿದೆ. ‘ರೈಲು ಗಂಟೆಗೆ 180 ಕಿ.ಮೀ ವೇಗದಲ್ಲಿ ಚಲಿಸುವಾಗಲೂ, ರೈಲಿನ ಗಾಜಿನ ಮೇಲಿರುವ ನೀರ ಹನಿಗಳು ಕದಲದಿರುವ ದೃಶ್ಯವನ್ನು ಕಾಣಬಹುದು. ‘ಇದು ಹೊಸ ತಲೆಮಾರಿನ ಅತ್ಯಾಧುನಿಕ ತಂತ್ರಜ್ಞಾನದ ರೈಲು’ ಎಂದು ವೈಷ್ಣವ್ ಬಣ್ಣಿಸಿದ್ದಾರೆ.

ಯಾವೆಲ್ಲ ಪರೀಕ್ಷೆ?

ರೈಲು ಗರಿಷ್ಠ ವೇಗ ತಲುಪಿದಾಗ ಹೊಯ್ದಾಡುವಿಕೆ, ಚಾಲನಾ ಸ್ಥಿರತೆ, ಕಂಪನ, ಬ್ರೇಕಿಂಗ್ ಕಾರ್ಯಕ್ಷಮತೆ, ಸುರಕ್ಷತಾ ಅಂಶಗಳು ಮತ್ತು ಇತರೆ ಕ್ಲಿಷ್ಟಕರ ವಿಷಯಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ.

ಏನೆಲ್ಲ ಇರಲಿದೆ?

‘ಸುಧಾರಿತ ಸಸ್ಪೆನ್ಷನ್ ವ್ಯವಸ್ಥೆ, ಸ್ವಯಂ ಚಾಲಿತ ಬಾಗಿಲು, ಅತ್ಯಾಧುನಿಕ ಶೌಚಾಲಯ, ಅಗ್ನಿ ಆಕಸ್ಮಿಕ ಮತ್ತು ಸುರಕ್ಷತಾ ನಿಗಾ ವ್ಯವಸ್ಥೆ, ಸಿ.ಸಿ.ಟಿ.ವಿ. ಆಧಾರಿತ ನಿಗಾ ವ್ಯವಸ್ಥೆ, ಪ್ರಯಾಣಿಕರ ಡಿಜಿಟಲ್ ಮಾಹಿತಿ ವ್ಯವಸ್ಥೆ, ಕಡಿಮೆ ಇಂಧನ ಬಳಕೆ ಸೇರಿದಂತೆ ಹಲವು ಸುಧಾರಿತ ತಂತ್ರಜ್ಞಾನ ಒಳಗೊಂಡ ಆತ್ಮನಿರ್ಭರ ಭಾರತದ ಸಂಕೇತವಾಗಿರುವ ವಂದೇ ಭಾರತ್ ಸ್ಲೀಪರ್ ರೈಲು, ಪ್ರಯಾಣಿಕರಿಗೆ ಸುರಕ್ಷಿತ ಮತ್ತು ವಿಶ್ವದರ್ಜೆಯ ಪ್ರಯಾಣದ ಅನುಭವವನ್ನು ಖಾತ್ರಿಪಡಿಸುತ್ತದೆ’ ಎಂದು ಭಾರತೀಯ ರೈಲ್ವೆ ಹೇಳಿದೆ.

‘ಎಸ್‌ಎಸ್‌ಎಲ್‌ವಿ ಪರೀಕ್ಷೆ ಯಶಸ್ವಿ’

ಬೆಂಗಳೂರು(ಪಿಟಿಐ): ತಾಂತ್ರಿಕವಾಗಿ ಸುಧಾರಿಸಲಾದ, ಸಣ್ಣ ಉಪಗ್ರಹಗಳ ಉಡ್ಡಯನಕ್ಕೆ ಬಳಸುವ ರಾಕೆಟ್‌ನ (ಎಸ್‌ಎಸ್‌ಎಲ್‌ವಿ) ಮೂರನೇ ಹಂತದ ಪರೀಕ್ಷೆಯನ್ನು ಶ್ರೀಹರಿಕೋಟದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ಮಂಗಳವಾರ ಯಶಸ್ವಿಯಾಗಿ ನೆರವೇರಿಸಲಾಗಿದೆ ಎಂದು ಇಸ್ರೊ ತಿಳಿಸಿದೆ.

‘ಈ ಪರೀಕ್ಷೆಯು 108 ಸೆಕೆಂಡುಗಳವರೆಗೆ ನಡೆಯಿತು. ಉಪಗ್ರಹಗಳ ಉಡ್ಡಯನಕ್ಕೆ ಬಳಸಲು ರಾಕೆಟ್ ಸನ್ನದ್ಧ ಎಂಬುದನ್ನು ಈ ಪರೀಕ್ಷೆ ದೃಢಪಡಿಸಿತು’ ಎಂದು ಇಸ್ರೊ ತಿಳಿಸಿದೆ.

‘ಎಸ್‌ಎಸ್‌ಎಲ್‌ವಿಯನ್ನು ಇಸ್ರೊ ಅಭಿವೃದ್ಧಿಪಡಿಸಿದೆ. ಉದ್ದಿಮೆಗಳು ಕೂಡ ಇದನ್ನು ತಯಾರಿಸಬಹುದು ಹಾಗೂ ಇದರ ಮರುಬಳಕೆ ಕೂಡ ಸಾಧ್ಯ’ ಎಂದು ಅದು ಪ್ರಕಟಣೆಯಲ್ಲಿ ತಿಳಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮೊಬೈಲ್‌ನಲ್ಲಿ ಮಾತನಾಡುತ್ತಿರುವ ಮಹಿಳೆಯೊಬ್ಬರು ಮಗುವನ್ನು ರೆಫ್ರಿಜರೇಟರ್‌ನಲ್ಲಿ ಇಡುವ ಮತ್ತು ಆಕೆಯ ಗಂಡ ಊಟ ಕೊಡುವಂತೆ ಕೇಳಿದಾಗ ಖಾಲಿ ತಟ್ಟೆಯನ್ನು ಕೊಡುವ ವಿಡಿಯೊವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಲಾಗುತ್ತಿದೆ. ದಂಪತಿ ಮಗುವಿಗಾಗಿ ಹುಡುಕಾಡುವ ದೃಶ್ಯವೂ ಅದರಲ್ಲಿದೆ. ಇದೊಂದು ನೈಜವಾದ ಘಟನೆ ಎಂಬಂತೆ ಸಾಮಾಜಿಕ ಜಾಲತಾಣಗಳಲ್ಲಿ ಬಿಂಬಿಸಲಾಗುತ್ತಿದೆ. ಆದರೆ, ಇದು ಸುಳ್ಳು.

ವಿಡಿಯೊದ ಕೀ ಫ್ರೇಮ್ ಒಂದನ್ನು ರಿವರ್ಸ್ ಇಮೇಜ್ ಸರ್ಚ್ ವಿಧಾನದಲ್ಲಿ ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ, 2024ರ ಏಪ್ರಿಲ್ 6ರಂದು ಫೇಸ್‌ಬುಕ್‌ನಲ್ಲಿ ‘ಐಡಿಯಾಸ್ ಫ್ಯಾಕ್ಟರಿ’ ಎಂಬ ಖಾತೆಯಲ್ಲಿ ಪೋಸ್ಟ್ ಮಾಡಲಾಗಿತ್ತು. ಆ ವಿಡಿಯೊದಲ್ಲಿ ಮಗುವನ್ನು ರೆಫ್ರಿಜರೇಟರ್‌ನಿಂದ ಸುರಕ್ಷಿತವಾಗಿ ಹೊರತೆಗೆಯುವ ದೃಶ್ಯವೂ ಇದೆ. ಅದೇ ವಿಡಿಯೊದಲ್ಲಿ ಡಿಸ್‌ಕ್ಲೇಮರ್ ಕೂಡ ಇದ್ದು, ಇದು ಕಾಲ್ಪನಿಕ ಘಟನೆಯಾಗಿದ್ದು, ಜಾಗೃತಿ ಮತ್ತು ಮನರಂಜನೆಯ ಉದ್ದೇಶಕ್ಕೆ ಈ ವಿಡಿಯೊವನ್ನು ಮಾಡಲಾಗಿದೆ ಎಂದು ಅದರಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಆ ಖಾತೆಯನ್ನು ಪರಿಶೀಲಿಸಿದಾಗ, ಅದರಲ್ಲಿ ಇಂತಹ ವಿಡಿಯೊಗಳೇ ಇರುವುದು ಕಂಡು ಬಂತು. ಪೂರ್ವ ಯೋಜಿತವಾಗಿ ಚಿತ್ರಿಸಿದ ವಿಡಿಯೊವನ್ನು ನಿಜವಾದ ಘಟನೆ ಎಂದು ಬಿಂಬಿಸಿ ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6271

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಲೀಸು ಎಂದು ಹೀಗೆ ಹೇಳಿ (3)
3.ಅಶ್ವಯುಜ ಶುದ್ಧ ನವಮಿಯಂದು ಆಚರಿಸುವ ಹಬ್ಬ (5)
5.ಹೆಚ್ಚು ಬೆಲೆಯನ್ನು ಹೀಗೆನ್ನಿ (3)
6.ಬಿಡುವು ಈ ರೀತಿ ಬಂದಿದೆ (3)
7.ಅಸುರನ ಜೊತೆಗಿರುವ ದೇವತೆ (2)
8.ಅಸಂಭವವಾದುದನ್ನು ಹೀಗೂ ಹೇಳಬಹುದು (6)
10.ಕರ್ನಾಟಕದ ಕಾಶ್ಮೀರ ಎಂದು ಹೆಸರಾದ ಕಾರವಾರ ಈ ಜಿಲ್ಲೆಯಲ್ಲಿದೆ (6)
12. ಜಾಲಾಡುವಾಗ ಸಿಕ್ಕಿರುವ ಸುಳಿವು! (2)
13.ಕಾಯ ಬಗ್ಗಿಸಿ ಮಾಡಿದ ಕೆಲಸ (3)
15.ಸ್ವಚ್ಛತೆ ಅಥವಾ ನೈರ್ಮಲ್ಯ (3)
16.ಪತಿಯ ನಡುವೆ ಬಾಗಿಲು ಕಾಯುವವಳು ಇದ್ದಾಳಲ್ಲಾ! (5)
17.ಮನಸ್ಸಿನ ಅಸ್ವಾಸ್ಥ್ಯ (3)

ಮೇಲಿಂದ ಕೆಳಕ್ಕೆ

1.ಈತ ಒಳ್ಳೆಯ ಕವಿ (3)
2.ಲಗ್ನವಾಗುತ್ತಿರುವವನು ಇಲ್ಲಿದ್ದಾನೆ (4)
3.ಕಮರಿಯಲ್ಲಿ ಎಳೆ ಪ್ರಾಣಿ ಕಾಣುತ್ತಿದೆ (2)
4.ಕಾಡು ಕುಸುಮ (4)
9.ಸೊಂಟದಿಂದ ಪ್ರಾರಂಭವಾದ ಕಂಪನ (3)
10.ಅಕ್ಕಮಹಾದೇವಿಯ ಜನ್ಮಸ್ಥಳ (4)
11.ಕೊಳ್ಳೆಯನ್ನು ಹೀಗೂ ಹೇಳುತ್ತಾರೆ (4)
14.ನಕಲು ಎಂದರೆ ಈ ರೀತಿ ಕೋಪವೇ? (3)
15.ಸವತಿ ಜೊತೆಯಿರುವ ಪತ್ನಿ (2)



6270ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕವಳ 4.ಡಾಮರ
5.ಅನುಭೂತಿ 6.ತಾಪತ್ರಯ
7.ನಗು 9.ತಮ
13.ತಳಮಳ 14.ಪ್ರತೀಹಾರ
15.ಗಂಜಲ 16.ಪ್ರಚಂಡ

ಮೇಲಿಂದ ಕೆಳಕ್ಕೆ:
1.ಗಂಡಾಗುಂಡಿ 2.ಕರತಾಡನ
3.ವಿಭೂತಿ 5.ಅಯಸ್ಕಾಂತ
8.ಗುರುತರ 10.ಮಗಳಗಂಡ
11.ತರುಲತೆ 12.ಪ್ರತೀಕ

ಸುಡೊಕು 6655

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3					8	2	7	
	5		4	9				3
		8			2		5	
	3			4			8	
		1	7		5	6	2	
	6			1				
6			5	2		1		7
	1				4			
9		5		7		3		8

6654 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

ಸೇವೆಯೇ ಧ್ಯಾನ

ನುಡಿ ಬೆಳಗು

ಪಿ.ಚಂದ್ರಿಕಾ

ವಿವೇಕಾನಂದರು ಸಭೆಯೊಂದನ್ನು ಮುಗಿಸಿ ಹೊರಬಂದಾಗ ಅಲ್ಲೊಬ್ಬ ಶಿಷ್ಯ ಖಿನ್ನನಾಗಿ ನಿಂತಿದ್ದನ್ನು ಕಂಡು, ‘ಯಾಕಿಷ್ಟು ವಿಚಲಿತನಾಗಿರುವೆ’ ಎಂದು ಕೇಳಿದರು. ಯುವಕ, ‘ನಾನೂ ಏನೇನೋ ಪ್ರಯತ್ನ ಪಡುತ್ತಿರುವೆ, ಆದರೂ ಧ್ಯಾನದಲ್ಲಿ ಮನಸ್ಸು ನಿಲ್ಲುತ್ತಿಲ್ಲ. ಮನಸ್ಸಿಗೆ ಶಾಂತಿ ಸಿಗುತ್ತಿಲ್ಲ. ಹೀಗೇ ಆದರೆ ಮುಕ್ತಿ ಸಿಗುವುದಾದರೂ ಹೇಗೆ’ ಎಂದ. ವಿವೇಕಾನಂದರು ಕೇಳಿದರು, ‘ಧ್ಯಾನವನ್ನು ಹೇಗೆ ಮಾಡುತ್ತಿರುವಿ?’ ಯುವಕ ಹೇಳಿದ, ‘ಕೋಣೆಯೊಳಗೆ ಹೊರಗಿನ ಒಂದು ಸಣ್ಣ ಶಬ್ದವೂ ಕೇಳಬಾರದು, ಹಾಗೆ ಬಾಗಿಲು ಕಿಟಕಿಗಳನ್ನೆಲ್ಲಾ ಮುಚ್ಚಿ, ಮನಸ್ಸನ್ನು ಕೇಂದ್ರೀಕರಿಸಿ ಎಷ್ಟು ಹೊತ್ತು ಸಾಧ್ಯವೋ ಅಷ್ಟೂ ಹೊತ್ತು ಕೂರುತ್ತೇನೆ. ಆದರೆ ನನ್ನ ಪ್ರಯತ್ನ ಫಲ ಕೊಡುತ್ತಿಲ್ಲ- ಸಾಧನೆ ಸಾಧ್ಯವಾಗುತ್ತಿಲ್ಲ’ ಎಂದ. ವಿವೇಕಾನಂದರು ಮತ್ತೆ ಕೇಳಿದರು, ‘ನಿಜಕ್ಕೂ ಕಿಟಕಿ ಬಾಗಿಲುಗಳನ್ನು ಮುಚ್ಚಿದ್ದೀಯಾ?’ ಯುವಕ ಉತ್ತರಿಸಿದ, ‘ಹೌದು ನಿಸ್ಸಂದೇಹವಾಗಿ. ಇಲ್ಲದಿದ್ದರೆ ಧ್ಯಾನ ಮಾಡಲು ಹೇಗಾದೀತು? ಇಷ್ಟೆಲ್ಲಾ ತಯಾರಿ ಮಾಡಿಕೊಂಡರೂ ಮನಸ್ಸು ಒಂದೆಡೆ ನಿಲ್ಲುತ್ತಿಲ್ಲ. ದಯವಿಟ್ಟು ದಾರಿ ತೋರಿ’ ಎಂದು ಬೇಡಿಕೊಂಡ. ಆಗ ವಿವೇಕಾನಂದರು, ‘ನಿನಗೆ ಆತ್ಮೋನ್ನತಿ ಬೇಕೆಂದರೆ ನನ್ನ ಮಾತನ್ನು ಕೇಳು, ಮೊದಲು ಮುಚ್ಚಿರುವ ಎಲ್ಲ ಕಿಟಕಿಯ ಬಾಗಿಲುಗಳನ್ನು ತೆಗೆ- ಮುಖ್ಯವಾಗಿ ನಿನ್ನ ಮನಸ್ಸಿನ ಕಿಟಕಿ ಬಾಗಿಲುಗಳನ್ನು. ನೋಡು, ನಿನ್ನ ಸುತ್ತ ಜನರ ಕಷ್ಟ, ಸುಖಗಳಿವೆ, ಅಸಹಾಯಕರಾದ ಅವರಿಗೆ ನೆರವು ನೀಡಲು ಶಕ್ತಿಮೀರಿ ಪ್ರಯತ್ನಿಸು. ಬಡವರಿಗೆ, ರೋಗಿಗಳಿಗೆ ಅನ್ನ, ಆಹಾರವನ್ನು ಒದಗಿಸು. ಅಕ್ಷರವೇ ಕಲಿಯದವರಿಗೆ ಕಲಿಸು. ಇಂಥಾ ಮಹತ್ ಕಾರ್ಯವನ್ನು ಬಿಟ್ಟು ಧ್ಯಾನವೆಂದು ಒಂಟಿಯಾಗಿ ಕುಳಿತರೆ ಏನು ಸಾಧಿಸಿದ ಹಾಗೆ ಆಯಿತು?’ ಎಂದರು.

‘ಹಾಗಾದರೆ ಧ್ಯಾನದಿಂದ ಏನೂ ಆಗುವುದಿಲ್ಲವೇ? ಮನಃಶಾಂತಿಯೂ ಸಿಗುವುದಿಲ್ಲ ಎಂದರೆ ಅದನ್ನು ಮುಕ್ತಿಯ ಮಾರ್ಗ ಎಂದು ಯಾಕೆ ಕರೆದಿದ್ದಾರೆ’ ಎಂದ ಯುವಕ ಅಚ್ಚರಿಯಲ್ಲಿ. ವಿವೇಕಾನಂದರು ನಕ್ಕರು, ‘ಮನಃಶಾಂತಿ ಬೇಕೆಂದರೆ ಒಂಟಿಯಾಗಬೇಡ. ಸಾಧಿಸಬೇಕೆಂದರೆ ಎಲ್ಲರೊಳಗೊಂದಾಗು. ಯಾರಿಗೋ ನಿನ್ನಿಂದ ಸಣ್ಣ ಸಹಾಯವಾದರೂ ಆಗಿ ನಿನ್ನ ಮನಸ್ಸು ತುಂಬಿ ಬರುತ್ತದೆ. ಸೇವೆಗಿಂತ ದೊಡ್ಡದು ಯಾವುದೂ ಇಲ್ಲ. ಆದರೆ ಅದಕ್ಕೆ ಶಕ್ತಿ ಮೀರಿ ದುಡಿಯಬೇಕು’ ಎಂದರು. ‘ಏನು ಹೇಳುತ್ತಿದ್ದೀರಿ? ನಿಮಗೆ ಧ್ಯಾನದಲ್ಲಿ ನಂಬಿಕೆಯಿಲ್ಲವಾ’ ಯುವಕ ಕೇಳಿದ. ‘ಅಧ್ಯಾತ್ಮ ಸಾಧನೆ ಎಲ್ಲಾ ಸರಿಯೇ. ನಾನೂ ಹಿಮಾಲಯದ ಗುಹೆಗಳಲ್ಲಿ ಎಲ್ಲವನ್ನು ಮರೆತು ಧ್ಯಾನದಲ್ಲಿ ಮುಳುಗಿದ್ದೆ. ಎಚ್ಚರವಾದಾಗ ಲೋಕದಲ್ಲೇ ಇದ್ದೆ. ಅಚ್ಚರಿಯಾಯಿತು, ಬಿಡುಗಡೆ ಎಂದರೆ ಏನು ಎಂದು ಪ್ರಶ್ನಿಸಿಕೊಂಡೆ. ಆಗ ಅರ್ಥವಾಗಿದ್ದು ನನ್ನೊಬ್ಬನಿಗೆ ಮುಕ್ತಿ ಸಿಗುವುದು ಮುಖ್ಯವಲ್ಲ. ಎಂದೋ ಸತ್ತ ಮೇಲೆ ಸಿಗುವ ಮುಕ್ತಿಗಾಗಿ ಜೀವನ ಪೂರ್ತಿ ಅದರ ಬೆನ್ನುಬೀಳುವುದಕ್ಕಿಂತ, ಇನ್ನೊಬ್ಬರಿಗೆ ಉಪಯುಕ್ತವಾಗುವಂತೆ ಬದುಕಬೇಕು. ಅಲ್ಲಿ ಆನಂದವಿದೆ, ಭಗವಂತನಿದ್ದಾನೆ. ಸಮಾಜದಲ್ಲಿ ಇದ್ದ ಮೇಲೆ ಇದು ನಮ್ಮ ಕರ್ತವ್ಯ ಕೂಡ. ನೀನು ನನ್ನ ಶಿಷ್ಯನಾದರೆ ಸೇವೆಯಲ್ಲಿ ಸಾರ್ಥಕ್ಯ ಕಾಣು. ಇನ್ನೊಬ್ಬರ ಒಳಿತನ್ನು ಬಯಸುವುದೇ ನಿಜವಾದ ಧ್ಯಾನ ಎಂದು ತಿಳಿ’ ಎಂದರು.

ಒಬ್ಬರ ಉದ್ಧಾರಕ್ಕಿಂತ ನೂರು ಜನರ ಬದುಕು ಮುಖ್ಯ ಅಲ್ಲವೇ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

01 ಜನವರಿ 2026 ಗುರುವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ತ್ರಯೋದಶಿ ಗಂ 22-23 **ನಕ್ಷತ್ರ:** ರೋಹಿಣಿ ಗಂ 22-49 **ಯೋಗ:** ಶುಭ ಗಂ. 17-13 **ಕರಣ:** ಕೌಲವ ಗಂ. 12-07 ಧನು ಮಾಸದ 17 ನೇ ದಿನ. **ಮಳೆ ನಕ್ಷತ್ರ :** ಪೂರ್ವಾಷಾಢ 2 ನೇ ಪಾದ. **ರಾಹುಕಾಲ :** ಮಧ್ಯಾಹ್ನ 01-30 - 03-00 **ಸೂರ್ಯೋದಯ :** 06-57 **ಸೂರ್ಯಾಸ್ತ :** 06-11 **ಮುಸ್ಲಿಂ ದಿನಾಂಕ :** 11 ರಜಬ್ **ದಿನ ವಿಶೇಷ :** ನ್ಯೂ ಇಯರ್ ಡೇ **ಅದೃಷ್ಟ ಸಂಖ್ಯೆ :** 12, 1

ಮೇಷ: ಅಧಿಕಾರಿಗಳ ಭೇಟಿಯಿಂದ ಕಾರ್ಯ ಸಾಧನೆಗೆ ಅನುವು. ಮನೆಯಲ್ಲಿ ಎಲ್ಲರ ಆರೋಗ್ಯ ಚೆನ್ನಾಗಿದ್ದು, ಮನಸ್ಸಿಗೆ ನೆಮ್ಮದಿ ಇರುವುದು. ತಾಳ್ಮೆಯಿಂದ ಕೆಲಸ ನಿರ್ವಹಿಸಬೇಕಾಗುವುದು. ವ್ಯಾಪಾರದಲ್ಲಿ ಚತುರ ನಡೆ ಇರಲಿ.

ವೃಷಭ: ಮುಕ್ತಾಯ ಹಂತದ ಯೋಜನೆಗಳು ನಿಮ್ಮ ಗಡಿಬಿಡಿಯಿಂದಾಗಿ ವ್ಯತ್ಯಾಸವಾಗಬಹುದು. ನೂತನವಾಗಿ ಹೂಡಿಕೆ ಸದ್ಯಕ್ಕೆ ಉತ್ತಮವಲ್ಲ. ನ್ಯಾಯಾಂಗ ಇಲಾಖೆಯವರಿಗೆ ಬಡ್ತಿ ಅಥವಾ ವರ್ಗಾವಣೆ ಉಂಟಾಗುವುದು.

ಮಿಥುನ: ಈ ದಿನ ಸಮಾಜದಲ್ಲಿ ಅದರಲ್ಲೂ ವಿಶೇಷವಾಗಿ ಹೆಂಡತಿಯ ಬಳಗದಲ್ಲಿ ಆದಷ್ಟು ಮೌನವಾಗಿರಲು ನಿಶ್ಚಯಿಸಿ. ಬಹಳ ದಿನಗಳಿಂದ ಕಾಡುತ್ತಿದ್ದ ನಿಮ್ಮ ಸಮಸ್ಯೆಯೊಂದು ಇಂದು ದೂರಾಗುವುದು.

ಕರ್ಕಾಟಕ: ನಿಮ್ಮಲ್ಲಿರುವ ಮಾತಿನ ಚತುರತೆಯಿಂದ ನಿಮ್ಮ ಎಲ್ಲಾ ಕೆಲಸಗಳು ಸರಾಗವಾಗಿ ನೆರವೇರುವುದು. ದೇಹದಲ್ಲಿ ವಾಯು ಪೀಡೆ ಹೆಚ್ಚಾಗುವುದರಿಂದ ಕಿರಿಕಿರಿ ಎನಿಸಲಿದೆ. ರಸಗೊಬ್ಬರದ ವ್ಯಾಪಾರ ಮಾಡುವವರಿಗೆ ಲಾಭ.

ಸಿಂಹ: ಅಣ್ಣತಮ್ಮಂದಿರ ನಡುವಿನ ವಿಚಾರದಲ್ಲಿ ನೀವು ಈಗ ತೆಗೆದುಕೊಂಡಿದ್ದ ನಿರ್ಧಾರಗಳು ಸರಿಯಾಗಿದೆಯೇ ಎಂದು ಇನ್ನೊಮ್ಮೆ ಪರಾಮರ್ಶಿಸಿಕೊಳ್ಳಿ. ಮನೆ ಬದಲಾಯಿಸುವ ಯೋಚನೆ ಮಾಡಬೇಕಾಗಲಿದೆ.

ಕನ್ಯಾ: ನಿಮ್ಮಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲ್ಯಗಳನ್ನು ಹೊರ ತೆಗೆಯಲು ಶಿಕ್ಷಕಿಯೊಬ್ಬರು ಸಹಾಯ ಮಾಡುವರು. ವಿದೇಶ ವ್ಯವಹಾರಗಳಿಂದ ಆದಾಯ ಕೈಗೂಡಲಿದೆ. ನಿವೃತ್ತ ಶಿಕ್ಷಕರಿಗೆ ಗೌರವಯುತ ಸ್ಥಾನಮಾನ ಸಿಗಲಿದೆ.

ತುಲಾ: ಗಣಿತಶಾಸ್ತ್ರಜ್ಞರಿಗೆ, ಆಧ್ಯಾತ್ಮ ಚಿಂತಕರಿಗೆ ಈ ದಿನ ಅತ್ಯಂತ ವಿಶೇಷವಾದ ದಿನವೆನಿಸಲಿದೆ. ಸತ್ಕಾರ್ಯಗಳಲ್ಲಿ ಬಂಧುಗಳು ಸಹಕರಿಸುವರು. ಕನಸುಗಳು ಕೈಗೂಡುವ ದಿನ ಇದಾಗಿದೆ.

ವೃಶ್ಚಿಕ: ಯಾವುದೇ ಸಂಕೋಚವಿಲ್ಲದೆ ನೂತನ ಕಾರ್ಯಭಾರವನ್ನು ಹೆಗಲಿಗೇರಿಸಿಕೊಳ್ಳಿ. ಕಾನೂನು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಯಶಸ್ಸು ದೊರಕುವುದು. ಕೃಷಿಯಲ್ಲಿ ಬೇಸಾಯದ ಕೆಲಸಗಳಿಂದಾಗಿ ಹೆಚ್ಚು ಖರ್ಚು

ಧನು: ಸೇವಕ ವರ್ಗದವರಿಗೆ ಆದಾಯ ಹೆಚ್ಚಿದಂತೆ ಕೆಲಸದ ಸಮಯ ಅಥವಾ ವಿಸ್ತೀರ್ಣವೂ ಹೆಚ್ಚುವುದು. ಆಹಾರದಲ್ಲಿ ಗುಣಮಟ್ಟ ಮತ್ತು ಶುಚಿತ್ವವನ್ನು ಕಾಪಾಡಿ. ಅನಗತ್ಯವಾಗಿ ನೀವು ಸಮಯವನ್ನು ವ್ಯರ್ಥ ಮಾಡದಿರಿ.

ಮಕರ: ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹಾಗು ತಂದೆ-ತಾಯಿಯ ಆರೋಗ್ಯದ ಬಗ್ಗೆ ಗಮನವಹಿಸುವುದು ಅಗತ್ಯ. ಕುಟುಂಬದಲ್ಲಿ ನಿಮ್ಮ ಮೇಲಿನ ತಪ್ಪು ಕಲ್ಪನೆ ಹೋಗಲಾಡಿಸಿಕೊಳ್ಳುವಿರಿ. ಮಹಿಳೆಯರಿಗೆ ಉದ್ಯೋಗದಲ್ಲಿ ಲಾಭವಿರುತ್ತದೆ

ಕುಂಭ: ಶಿಕ್ಷಕ ವೃತ್ತಿಯವರಿಗೆ ಮಕ್ಕಳ ಅಸಾಮಾನ್ಯ ಬುದ್ಧಿವಂತಿಕೆಯಿಂದಾಗಿ ತರಬೇತಿಯ ಅಗತ್ಯ ಕಾಣುವುದು. ಅಲಂಕಾರಿಕ ವಸ್ತುಗಳ ಮಾರಾಟ ಲಾಭವನ್ನು ತರುವುದು. ವೈಯಕ್ತಿಕ ಕೆಲಸಗಳಿಗೆ ಅಡಚಣೆ ಇರುವುದಿಲ್ಲ.

ಮೀನ: ದೂರದ ಸಂಚಾರ ತೋರಿಬಂದರೂ, ಅದನ್ನು ಮುಂದೂಡುವುದು ಅನಿವಾರ್ಯವಾಗುತ್ತದೆ. ಮನೆಗೆ ಬಂಧು ಮಿತ್ರರ ಆಗಮನ ನವ ಉಲ್ಲಾಸವನ್ನು ತರಲಿದೆ. ಇತರರ ಸಲಹೆಯನ್ನು ವಿಮರ್ಶಿಸದೇ ಒಪ್ಪಿಕೊಳ್ಳಬೇಡಿ.

ಗುಂಡಣ್ಣ

© 2014 by King Features Syndicate, Inc. World Rights reserved www.Blondie.com

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,938
ಇಂದಿನ ಅಂತ್ಯ:	26,129
ದಿನದ ಗರಿಷ್ಠ:	26,187
↑	190

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹705
12 ಕ್ಕೆ	₹96
ಮೈಸೂರು: 100 ಕ್ಕೆ	₹706

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹181
ಆರ್‌ಎಸ್‌ಎಸ್-5	₹176
ಗುಡ್ ಲಾಟ್	₹164

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹266-754
ದ್ವಿತಳಿ (ಬಿ.ವಿ)	₹345-900

ಮುದ್ರಮನೆ ಕಾಫಿ

ಎಪಿ	₹26750
ಎಸಿ	₹14560
ಆರ್‌ಪಿ	₹16500
ಆರ್‌ಸಿ	₹9675

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1285 (1285)
ಸೂರ್ಯಕಾಂತಿ (ರಿಫೈನ್ಡ್)	₹1490 (1490)
ಪಾಮೋಲಿನ್	₹1250 (1250)

ಅಡಿಕೆ ಧಾರಣೆ

ಕುಮಟಾ		ಸಿದ್ದಾಪುರ		ಶಿವಮೊಗ್ಗ	
ಬೆಟ್ಟೆ	34199-50099	ಹೊಸತು	26000-41500	ರಾಶಿ	50399-57199
ಚಾಲಿ	43599-48399	ಬಿಳಿಗೋಟು	26899-36889	ತಟ್ಟಿಬೆಟ್ಟೆ	35200-48299
ಚಿಪ್ಪು	27089-34699	ಚಾಲಿ	42199-47600	ಬೆಟ್ಟೆ	55559-68300
ಕೋಕ	15019-30109	ಕೋಕ	20699-29319	ಗೊರಬಲು	19009-43119
ಫ್ಯಾಕ್ಟರಿ	9089-24829	ಹೊಸಚಾಲಿ	36789-40699	ರಾಶಿ	43800-58399
ಪುತ್ತೂರು		ಕೆಂಪುಗೋಟು	31219-33400	ಸರಕು	68007-68007
ಕೋಕ	20000-35000				

ವಿಐಎಲ್‌ಗೆ ಹೆಚ್ಚುವರಿ ಸಮಯ

ಎಜಿಆರ್ ಬಾಕಿ ಪಾವತಿ ಇರಿಸಿಕೊಂಡಿರುವ ಕಂಪನಿ • ಕೇಂದ್ರ ಸಂಪುಟದ ತೀರ್ಮಾನ

ನವದೆಹಲಿ (ಪಿಟಿಐ): ವೊಡಾಫೋನ್ ಐಡಿಯಾ ಕಂಪನಿಯು (ವಿಐಎಲ್) ಬಾಕಿ ಉಳಿಸಿಕೊಂಡಿರುವ ಮೊತ್ತದ ಪಾವತಿಗೆ ಐದು ವರ್ಷಗಳ ಹೆಚ್ಚುವರಿ ಸಮಯ ನೀಡಲು ಕೇಂದ್ರ ಸಚಿವ ಸಂಪುಟವು ಬುಧವಾರ ತೀರ್ಮಾನಿಸಿದೆ.

ಅಲ್ಲದೆ, ಬಾಕಿ ಮೊತ್ತವು ಡಿಸೆಂಬರ್ 31ಕ್ಕೆ ಎಷ್ಟಿತ್ತೋ ಅದೇ ಮಟ್ಟದಲ್ಲಿ ಅದನ್ನು ಇರಿಸಲು ಕೂಡ ಸಂಪುಟ ನಿರ್ಧರಿಸಿದೆ. ಸಾಲದ ಸುಳಿಗೆ ಸಿಲುಕಿರುವ ವೊಡಾಫೋನ್ ಐಡಿಯಾ ಕಂಪನಿಗೆ ಈ ತೀರ್ಮಾನವು ಮಹತ್ವದ ನೆರವು ಎಂದು ಪರಿಗಣಿಸಲಾಗಿದೆ.

ಕಂಪನಿಯು ಬಾಕಿ ಇರಿಸಿಕೊಂಡಿರುವ ಎಜಿಆರ್ ಮೊತ್ತ ₹87,695 ಕೋಟಿ. ಇದನ್ನು ಈ ಮಟ್ಟದಲ್ಲೇ ಉಳಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಂಪುಟವು ನಿರ್ಧರಿಸಿದೆ. ಈ ಮೊತ್ತದ ಪಾವತಿಯನ್ನು ಕಂಪನಿಯು 2031-32ರಿಂದ ಆರಂಭಿಸಿ, 2040-41ರೊಳಗೆ ಪೂರ್ಣಗೊಳಿಸಬೇಕಿದೆ ಎಂದು ಸಂಪುಟದ ತೀರ್ಮಾನದ ಕುರಿತು ಮೂಲಗಳು ವಿವರಿಸಿವೆ.

ಹೊಂದಾಣಿಕೆ ಮಾಡಿದ ಒಟ್ಟು ವರಮಾನಕ್ಕೆ (ಎಜಿಆರ್) ಸಂಬಂಧಿಸಿದ ಬಾಕಿ ಅಂದರೆ, ದೂರಸಂಪರ್ಕ ಸೇವಾ ಕಂಪನಿಗಳು ತಮ್ಮ ಎಜಿಆರ್ ಆಧಾರದಲ್ಲಿ ಸರ್ಕಾರಕ್ಕೆ ಪಾವತಿಸಬೇಕಿರುವ ಮೊತ್ತ. ಈ ವರಮಾನದ ಆಧಾರದಲ್ಲಿ ಕಂಪನಿಗಳು ಸರ್ಕಾರಕ್ಕೆ ಪರವಾನಗಿ ಶುಲ್ಕ, ತರಂಗಾಂತರ ಬಳಕೆ ವೆಚ್ಚವನ್ನು ಪಾವತಿಸಬೇಕಾಗುತ್ತದೆ. ಕಂಪನಿಗಳ ಎಲ್ಲ ವರಮಾನಗಳನ್ನು (ಬಾಡಿಗೆ ವರಮಾನ, ಆಸ್ತಿ ಮಾರಾಟದಿಂದ ಬರುವ ವರಮಾನ ಇತ್ಯಾದಿ) ಇದು ಒಳಗೊಳ್ಳುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ.

ವೊಡಾಫೋನ್ ಐಡಿಯಾ ಲಿಮಿಟೆಡ್ ಕಂಪನಿಯು 2017-18 ಹಾಗೂ 2018-19ಕ್ಕೆ ಸಂಬಂಧಿಸಿದಂತೆ ಪಾವತಿ ಮಾಡಬೇಕಿರುವ ಎಜಿಆರ್ ಬಾಕಿಯನ್ನು ಕೂಡ ಸುಪ್ರೀಂ ಕೋರ್ಟ್‌ನ 2020ರ ಆದೇಶದ ನಂತರ ಅಂತಿಮಗೊಳಿಸಲಾಗಿದೆ. ಈ ಮೊತ್ತವನ್ನು ಕಂಪನಿಯು 2025-26ರಿಂದ ಆರಂಭಿಸಿ 2030-31ಕ್ಕೆ ಮೊದಲು ಪಾವತಿಸಬೇಕು, ಇದರಲ್ಲಿ ಬದಲಾವಣೆ ಇಲ್ಲ ಎಂದು ಮೂಲಗಳು ವಿವರಿಸಿವೆ.

ಈ ಮೊತ್ತವು ವಾರ್ಷಿಕ ಅಂದಾಜು ₹120 ಕೋಟಿಯಷ್ಟಾಗಲಿದೆ. ಆರು ವರ್ಷಗಳಲ್ಲಿ ಇದು ಅಂದಾಜು ₹700 ಕೋಟಿಯಿಂದ ₹800 ಕೋಟಿಯಷ್ಟು ಆಗಲಿದೆ ಎಂದು ಮೂಲಗಳು ತಿಳಿಸಿವೆ.

ವೊಡಾಫೋನ್ ಐಡಿಯಾ ಕಂಪನಿಯು ಬಹುಕಾಲದಿಂದ ಹಣಕಾಸಿನ ಸಮಸ್ಯೆಗೆ ಸಿಲುಕಿದೆ. ದೂರಸಂಪರ್ಕ ಕ್ಷೇತ್ರದಲ್ಲಿನ ತೀವ್ರ ದರಸಮರ, ಭಾರಿ ಮೊತ್ತದ ಸಾಲ, ಭಾರಿ ಮೊತ್ತದ ಎಜಿಆರ್ ಬಾಕಿ ಕಂಪನಿಯ ಪಾಲಿಗೆ ಸವಾಲಾಗಿವೆ. ಕಂಪನಿಯು ನಿರಂತರವಾಗಿ ನಷ್ಟ ಅನುಭವಿಸುತ್ತಿದೆ. ಅಲ್ಲದೆ, ಕಂಪನಿಯ ಚಂದಾದಾರರ ಸಂಖ್ಯೆ ಕಡಿಮೆ ಆಗುತ್ತಿದೆ, ತನ್ನ ಜಾಲವನ್ನು ವಿಸ್ತರಿಸಲು ಕಂಪನಿಗೆ ಹೆಚ್ಚು ಸಾಮರ್ಥ್ಯ ಇಲ್ಲದಂತಾಗಿದೆ.

ಸರ್ಕಾರವು ಮತ್ತೆ ಮತ್ತೆ ನೆರವು ನೀಡಿರುವುದು, ಬಾಕಿ ಮೊತ್ತವನ್ನು ಸರ್ಕಾರವು ಷೇರುಗಳನ್ನಾಗಿ ಪರಿವರ್ತನೆ ಮಾಡಿರುವುದು ಕಂಪನಿಯು ಮುಳುಗದಂತೆ ಕಾಪಾಡಿವೆ.

ಕೇಂದ್ರ ಸಂಪುಟವು ಎಜಿಆರ್ ಬಾಕಿಯಲ್ಲಿ ಒಂದಿಷ್ಟು ಪಾಲನ್ನು ಮನ್ನಾ ಮಾಡುತ್ತದೆ ಎಂಬ ನಿರೀಕ್ಷೆಯು ಕೆಲವರಲ್ಲಿ ಇತ್ತು. ಆದರೆ, ಈ ಬಗೆಯ ಕ್ರಮ ಕೈಗೊಳ್ಳದೆ, ಬಾಕಿ ಪಾವತಿಗೆ ಹೆಚ್ಚಿನ ಕಾಲಾವಕಾಶ ನೀಡುವ ತೀರ್ಮಾನವನ್ನು ಸಂಪುಟ ಕೈಗೊಂಡಿದೆ. ಕಂಪನಿಯಲ್ಲಿ ಈಗ ಕೇಂದ್ರ ಸರ್ಕಾರವು ಶೇ 48.9ರಷ್ಟು ಪಾಲು ಹೊಂದಿದೆ.

‘ಸರ್ಕಾರ ಬದ್ಧ’

ದೂರಸಂಪರ್ಕ ವಲಯವು ಬಹಳ ಮಹತ್ವದ ಮೂಲಸೌಕರ್ಯ ವಲಯ. ಇದಕ್ಕೂ ಅರ್ಥ ವ್ಯವಸ್ಥೆಯ ಬೆಳವಣಿಗೆಗೂ ಉದ್ಯೋಗ ಸೃಷ್ಟಿಗೂ ಬಲವಾದ ನಂಟಿದೆ. ಹೀಗಾಗಿ, ಈ ವಲಯಕ್ಕೆ ಬೆಂಬಲ ನೀಡಲು ಸರ್ಕಾರ ಬದ್ಧವಾಗಿದೆ ಎಂದು ಮೂಲಗಳು ವಿವರಿಸಿವೆ.

ಗ್ರಾಹಕರು ಮತ್ತು ಸ್ಪರ್ಧಾತ್ಮಕತೆಯ ಹಿತದೃಷ್ಟಿಯಿಂದ ಈ ವಲಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಪನಿಗಳು ಉಳಿಯಬೇಕು ಎಂಬುದು ಸರ್ಕಾರ ನಿಲುವಾಗಿದೆ. ಹೀಗಾಗಿ ಈ ಕಂಪನಿಯ ಉಳಿವು ಮುಖ್ಯ-ವಾಗುತ್ತದೆ ಎಂದು ಅವು ಹೇಳಿವೆ.

ಸುದ್ದಿ 2 ನಿಮಿಷ

ವರ್ಷದ ಅಂತಿಮ ದಿನ ಷೇರುಪೇಟೆ ಸೂಚ್ಯಂಕ ಏರಿಕೆ

ಮುಂಬೈ (ಪಿಟಿಐ): 2026ರ ಕ್ಯಾಲೆಂಡರ್ ವರ್ಷದ ಕೊನೆಯ ದಿನವಾದ ಬುಧವಾರ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ.

ರಿಲಯನ್ಸ್, ಟಾಟಾ ಸ್ಟೀಲ್ ಮತ್ತು ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರುಗಳ ಖರೀದಿ ಹೆಚ್ಚಳದಿಂದ ಷೇರುಪೇಟೆ ಸೂಚ್ಯಂಕಗಳು ಏರಿಕೆ ದಾಖಲಿಸಿದವು.

ದೇಶಿ ಹೂಡಿಕೆದಾರರು ಹೆಚ್ಚಿನ ಷೇರುಗಳನ್ನು ಖರೀದಿ ಮಾಡಿದ್ದು ಸಹ ಸೂಚ್ಯಂಕಗಳ ಏರಿಕೆಗೆ ನೆರವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 545 ಅಂಶ ಏರಿಕೆಯಾಗಿ, 85,220ಕ್ಕೆ ವಹಿವಾಟು ಕೊನೆಗೊಂಡಿದೆ. ವಹಿವಾಟಿನ ನಡುವಿನಲ್ಲಿ ಸೂಚ್ಯಂಕವು 762 ಅಂಶದವರೆಗೆ ಜಿಗಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 190 ಅಂಶ ಹೆಚ್ಚಳವಾಗಿ, 26,129ಕ್ಕೆ ಅಂತ್ಯಗೊಂಡಿದೆ.

ಪ್ರಸಕ್ತ ವರ್ಷದಲ್ಲಿ ಸೆನ್ಸೆಕ್ಸ್ 7,081 ಅಂಶ ಮತ್ತು ನಿಫ್ಟಿ 2,484 ಅಂಶ ಏರಿಕೆಯಾಗಿದೆ. ಸೂಚ್ಯಂಕಗಳ ಏರಿಕೆಯಿಂದ ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯಕ್ಕೆ ₹33.84 ಲಕ್ಷ ಕೋಟಿ ಸೇರ್ಪಡೆಯಾಗಿದೆ. ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯ ₹475 ಲಕ್ಷ ಕೋಟಿಗೆ ಏರಿದೆ.



ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮಂಗಳವಾರ ₹3,844 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರೆ, ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹6,159 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.31ರಷ್ಟು ಏರಿಕೆಯಾಗಿದೆ. ಪ್ರತಿ ಬ್ಯಾರಲ್ ದರವು 61.53 ಡಾಲರ್ ಆಗಿದೆ.

ವಿತ್ತೀಯ ಕೊರತೆ ₹9.76 ಲಕ್ಷ ಕೋಟಿ: ಸಿಎಜಿ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ನವೆಂಬರ್‌ವರೆಗಿನ ಅವಧಿಯಲ್ಲಿ ಕೇಂದ್ರ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವಾದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 62.3ರಷ್ಟಾಗಿದೆ.

ಹಣದ ಮೌಲ್ಯದ ಲೆಕ್ಕದಲ್ಲಿ ಇದು ₹9.76 ಲಕ್ಷ ಕೋಟಿಯಾಗಿದೆ ಎಂದು ಬುಧವಾರ ಬಿಡುಗಡೆ ಆಗಿರುವ ಮಹಾಲೇಖಪಾಲರ (ಸಿಎಜಿ) ವರದಿ ತಿಳಿಸಿದೆ. 2024-25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ವಿತ್ತೀಯ ಕೊರತೆಯು ಶೇ 52.5ರಷ್ಟಿತ್ತು.

2025-26ರ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 4.4ಕ್ಕೆ (ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ₹15.69 ಲಕ್ಷ ಕೋಟಿ) ತಗ್ಗಿಸಲು ಸರ್ಕಾರ ಬಜೆಟ್‌ನಲ್ಲಿ ಗುರಿ ನಿಗದಿ ಮಾಡಿದೆ.

ಏಪ್ರಿಲ್‌ನಿಂದ ನವೆಂಬರ್‌ವರೆಗೆ ಸರ್ಕಾರವು ₹19.49 ಲಕ್ಷ ಕೋಟಿ (ಬಜೆಟ್ ಅಂದಾಜಿನ ಶೇ 55.7ರಷ್ಟು) ವರಮಾನ ಸ್ವೀಕರಿಸಿದೆ. ಇದೇ ಅವಧಿಯಲ್ಲಿ ಸರ್ಕಾರದ ಒಟ್ಟು ವೆಚ್ಚವು ₹29.25 ಲಕ್ಷ ಕೋಟಿ (ಬಜೆಟ್ ಅಂದಾಜಿನ ಶೇ 57.8) ಆಗಿದೆ ಎಂದು ತಿಳಿಸಿದೆ.

ಚಿಟಿಕೆ ಸುದ್ದಿ

ಸಣ್ಣ ಉಳಿತಾಯದ ಬಡ್ಡಿ ಯಥಾಸ್ಥಿತಿ

ನವದೆಹಲಿ (ಪಿಟಿಐ): ಪಿಪಿಎಫ್, ಎನ್‌ಎಸ್‌ಸಿ ಸೇರಿದಂತೆ ವಿವಿಧ ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವನ್ನು ಕೇಂದ್ರ ಸರ್ಕಾರವು ಜನವರಿ-ಮಾರ್ಚ್ ತ್ರೈಮಾಸಿಕದ ಅವಧಿಗೆ ಯಥಾಸ್ಥಿತಿಯಲ್ಲಿ ಇರಿಸಿದೆ.

ಇದರಿಂದಾಗಿ ಈ ಯೋಜನೆಗಳ ಬಡ್ಡಿ ದರವು ಸತತ ಏಳು ತ್ರೈಮಾಸಿಕಗಳಲ್ಲಿ ಯಥಾಸ್ಥಿತಿಯಲ್ಲಿ ಉಳಿದಂತೆ ಆಗಲಿದೆ. ಬಡ್ಡಿ ದರದಲ್ಲಿ ಬದಲಾವಣೆ ಇಲ್ಲ ಎಂಬುದನ್ನು ಕೇಂದ್ರ ಹಣಕಾಸು ಸಚಿವಾಲಯ ಹೊರಡಿಸಿದ ಅಧಿಸೂಚನೆಯಲ್ಲಿ ಹೇಳಲಾಗಿದೆ.

ಸುಕನ್ಯಾ ಸಮೃದ್ಧಿ ಯೋಜನೆಯ ಅಡಿ ಶೇ 8.2ರಷ್ಟು, ಮೂರು ವರ್ಷಗಳ ಅವಧಿ ಠೇವಣಿಯು ಶೇ 7.1ರಷ್ಟು, ಪಿಪಿಎಫ್ ಶೇ 7.1ರಷ್ಟು, ಕಿಸಾನ್ ವಿಕಾಸ ಪತ್ರ ಶೇ 7.5ರಷ್ಟು, ಎನ್‌ಎಸ್‌ಸಿ ಶೇ 7.7ರಷ್ಟು, ಮಾಸಿಕ ಆದಾಯ ಯೋಜನೆಯು ಶೇ 7.4ರಷ್ಟು ಬಡ್ಡಿ ನೀಡಲಿವೆ.

ಮುಂಬೈ ಧಾರಣೆ (ಶೇಂಗಾ)

31-12-2025	
ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಪಾಮ್ ವಾರದ ಡೆಲಿವರಿ	1248 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1430)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,33,000 (1,34,300)
ಬೆಳ್ಳಿ ಕೆ.ಜಿಗೆ	2,31,000 (2,36,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹16000-17000
ದಾವಣಗೆರೆ	₹10200-10200
ವಿಜಯಪುರ	₹9000-9000

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಿಸಿ 90083 66666

support@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ https://bit.ly/40dPCqy

ಹುಂಡೈ ವಾಹನ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ವಾಹನ ತಯಾರಿಕಾ ಕಂಪನಿ ಹುಂಡೈ ಮೋಟರ್ ಇಂಡಿಯಾ (ಎಚ್‌ಎಂಐಎಲ್) ತನ್ನ ವಾಹನಗಳ ಬೆಲೆಯನ್ನು ಶೇ 0.6ರಷ್ಟು ಹೆಚ್ಚಳ ಮಾಡಿದೆ. ಪರಿಷ್ಕೃತ ದರವು ಜನವರಿ 1ರಿಂದ ಜಾರಿಗೆ ಬಂದಿದೆ.

ಪ್ರಮುಖ ಲೋಹಗಳು ಮತ್ತು ಸರಕುಗಳ ಬೆಲೆಯಲ್ಲಿ ಹೆಚ್ಚಳವಾಗಿದೆ. ಇದೇ ದರ ಏರಿಕೆಗೆ ಕಾರಣ ಎಂದು ಕಂಪನಿಯು ಷೇರುಪೇಟೆಗೆ ಬುಧವಾರ ತಿಳಿಸಿದೆ.

ಕಂಪನಿಯು ಹ್ಯಾಚ್‌ಬ್ಯಾಕ್ ‘ಐ10 ನಿಯೋಸ್’, ವಿದ್ಯುತ್ ಚಾಲಿತ ಎಸ್‌ಯುವಿ ‘ಐಓಎನ್‌ಐಕ್ಯು 5’ ಸೇರಿದಂತೆ ಹಲವು ವಾಹನಗಳನ್ನು ಮಾರಾಟ ಮಾಡುತ್ತಿದೆ. ವಾಹನಗಳ ಬೆಲೆ ₹5.47 ಲಕ್ಷದಿಂದ ₹47 ಲಕ್ಷದವರೆಗೆ (ಎಕ್ಸ್ ಷೋರೂಂ ದರ) ಇದೆ.

ಟಿ.ವಿ., ಸ್ಟವ್ ಮೇಲೆ ಇಂಧನ ದಕ್ಷತೆ ಮಾಹಿತಿ ನೀಡಿಕೆ ಕಡ್ಡಾಯ

ನವದೆಹಲಿ (ಪಿಟಿಐ): ರೆಫ್ರಿಜರೇಟರ್, ಟಿ.ವಿ., ಎಲ್‌ಪಿಜಿ ಗ್ಯಾಸ್ ಸ್ಟವ್‌ಗಳು, ಚಿಲ್ಲರ್‌ಗಳು ಸೇರಿದಂತೆ ವಿವಿಧ ಉತ್ಪನ್ನಗಳು ಅವು ಇಂಧನ ದಕ್ಷತೆಯ ದೃಷ್ಟಿಯಿಂದ ಎಷ್ಟು ‘ಸ್ಟಾರ್’ಗಳನ್ನು ಪಡೆದಿವೆ ಎಂಬುದನ್ನು ಉಲ್ಲೇಖಿಸುವುದು ಕಡ್ಡಾಯ ಎಂದು ಕೇಂದ್ರ ಸರ್ಕಾರ ಹೇಳಿದೆ. ಇದು ಜನವರಿ 1ರಿಂದಲೇ ಅನ್ವಯವಾಗಲಿದೆ.

ಇಂಧನ ದಕ್ಷತೆಯ ಬ್ಯೂರೊ ಇದಕ್ಕೆ ಸಂಬಂಧಿಸಿದ ಅಧಿಸೂಚನೆ ಹೊರಡಿಸಿದೆ. ಡೀಪ್ ಫ್ರೀಜರ್‌ಗಳು, ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಮತ್ತು ಗ್ರಿಡ್‌ಗೆ ಜೋಡಣೆಯಾಗುವ ಸೌರ ಇನ್ವ-ರ್ಟರ್‌ಗಳಿಗೂ ಇದು ಕಡ್ಡಾಯವಾಗಲಿದೆ.

ಈ ಮೊದಲು ‘ಸ್ಟಾರ್’ ಮೂಲಕ ಇಂಧನ ದಕ್ಷತೆಯ ಬಗ್ಗೆ ಮಾಹಿತಿ ಒದಗಿಸುವುದು ಫ್ರಾಸ್ಟ್-ಫ್ರೀ ರೆಫ್ರಿಜರೇಟರ್‌ಗಳಿಗೆ, ಡೀಪ್ ಫ್ರೀಜರ್‌ಗಳಿಗೆ, ಡೈರೆಕ್ಟ್ ಕೂಲ್ ರೆಫ್ರಿಜರೇಟರ್‌ಗಳಿಗೆ, ವಿವಿಧ ಬಗೆಯ ಹವಾನಿಯಂತ್ರಕಗಳಿಗೆ, ಕಲರ್ ಟಿ.ವಿ. ಹಾಗೂ ಯುಎಚ್‌ಡಿ ಟಿ.ವಿ.ಗಳಿಗೆ ಕಡ್ಡಾಯ ಆಗಿರಲಿಲ್ಲ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಎಂಟನೇ ವರ್ಷದ ಪುಣ್ಯಸ್ಮರಣೆ

ಹೇಮಾವತಿ ಎಂ.ವಿ

ನಿಮ್ಮ ನೆನಪು, ನಮ್ಮ ಮನದಲ್ಲಿ ಸದಾ ಹಚ್ಚ ಹಸಿರು ನಿಮ್ಮ ನಡೆ, ನುಡಿ ಮತ್ತು ತತ್ವಗಳು ನಮಗೆಲ್ಲಾ ದಾರಿದೀಪ. ನಿಮ್ಮ ಆತ್ಮಕ್ಕೆ ಶಾಂತಿ ಕೋರುವ

ಶ್ರೀರಾಮ ಹಾಗೂ ಕುಟುಂಬ ವರ್ಗದವರು ಶ್ರೀರಾಂಪುರಂ, ಬೆಂಗಳೂರು

ಹೊಸ ವರ್ಷದ ಮೊದಲ ದಿನವೇ ಮಮ್ದಾನಿ ಪದಗ್ರಹಣ

ನವದೆಹಲಿ (ಎಪಿ): ಭಾರತ ಸಂಜಾತ ಜೊಹ್ರಾನ್ ಮಮ್ದಾನಿ (34) ಅವರು ಹೊಸ ವರ್ಷದ ಮೊದಲ ದಿನವೇ ನ್ಯೂಯಾರ್ಕ್‌ನ ಮೇಯರ್ ಆಗಿ ಪ್ರಮಾಣವಚನ ಸ್ವೀಕರಿಸಲಿದ್ದು, ಈಗಾಗಲೇ ಸಂಭ್ರಮಾಚರಣೆ ಆರಂಭವಾಗಿದೆ.

ಜೊಹ್ರಾನ್ ಮಮ್ದಾನಿ

ಎರಡು ಕಡೆಗಳಲ್ಲಿ ಪ್ರತ್ಯೇಕವಾಗಿ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಸಲು ಡೆಮಾಕ್ರಟಿಕ್ ಪಕ್ಷದ ಮುಖಂಡರು ಸಿದ್ಧತೆ ಮಾಡಿಕೊಂಡಿದ್ದಾರೆ. ಗುರುವಾರ ಮಧ್ಯರಾತ್ರಿ ಓಲ್ಡ್ ಸಬ್‌ವೇ ಸ್ಟೇಷನ್‌ನಲ್ಲಿ ಮಮ್ದಾನಿ ಅವರ ಕುಟುಂಬದೊಂದಿಗೆ ನಡೆಯುವ ಖಾಸಗಿ ಕಾರ್ಯಕ್ರಮದಲ್ಲಿ ಅವರು ಮೊದಲಿಗೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ನಂತರ ಅದೇ ದಿನ ಮಧ್ಯಾಹ್ನ ಸಿಟಿ ಹಾಲ್ ಹೊರಗೆ ಬೃಹತ್ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು, ಅಲ್ಲಿ ಎರಡನೇ ಬಾರಿಗೆ ಪದಗ್ರಹಣ ಮಾಡಲಿದ್ದಾರೆ. ನ್ಯೂಯಾರ್ಕ್ ಅಟಾರ್ನಿ ಜನರಲ್ ಲೆಟಿಟಿಯಾ ಜೇಮ್ಸ್ ಅವರು ಪ್ರಮಾಣ ಬೋಧಿಸಲಿದ್ದಾರೆ.

ಹೊಸ ವರ್ಷಕ್ಕೆ ಕಾಲಿಡುತ್ತಿದ್ದಂತೆಯೇ ನೂತನ ಮೇಯರ್ ಅವರ ಅಧಿಕಾರಾವಧಿ ಆರಂಭವಾಗುತ್ತದೆ. ನಿರ್ಗಮಿತ ಮೇಯರ್ ಎರಿಕ್ ಆ್ಯಡಮ್ಸ್ ಅವರು ಟೈಮ್ಸ್ ಸ್ಕ್ವೇರ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದರು.

ಆಕ್ಲೆಂಡ್: ಹೊಸವರ್ಷಕ್ಕೆ ಮೊದಲ ಸಂಭ್ರಮದ ಸ್ವಾಗತ

ವೆಲ್ಲಿಂಗ್ಟನ್ (ಎಪಿ): ನ್ಯೂಜಿಲೆಂಡ್‌ನ ಉತ್ತರ ದ್ವೀಪದ ಪ್ರಮುಖ ಪಟ್ಟಣ ಆಕ್ಲೆಂಡ್‌ನಲ್ಲಿ ಬಾನೆತ್ತರಕ್ಕೆ ಚಿಮ್ಮಿದ ಪಟಾಕಿಯ ಬೆಳಕಿನ ಚಿತ್ತಾರದೊಂದಿಗೆ ಹೊಸವರ್ಷದ ಸಂಭ್ರಮಾಚರಣೆಗೆ ವಿಶ್ವವು ಮುನ್ನುಡಿ ಬರೆಯಿತು.

240 ಮೀಟರ್ ಎತ್ತರದ ಪ್ರಖ್ಯಾತ ಸ್ಕೈ ಟವರ್‌ನ ವಿವಿಧ ಮಹಡಿಗಳಿಂದ 3,500ಕ್ಕೂ ಅಧಿಕ ಪಟಾಕಿಗಳನ್ನು ಸಿಡಿಸಿ, ಜನರು 2026ನೇ ವರ್ಷವನ್ನು ಬರಮಾಡಿಕೊಂಡರು.

ನ್ಯೂಯಾರ್ಕ್‌ನ ಟೈಮ್ ಸ್ಕ್ವೇರ್‌ನಲ್ಲಿ ಬಾಲ್ ಡ್ರಾಪ್ ಮೂಲಕ ಹೊಸವರ್ಷದ ಶುಭಾರಂಭ ಮಾಡುವ 18 ಗಂಟೆಗೂ ಮುಂಚೆಯೇ ಆಕ್ಲೆಂಡ್‌ನಲ್ಲಿ ಹರ್ಷೋದ್ಗಾರ-ದೊಂದಿಗೆ ಆಚರಣೆ ಶುರುವಾಯಿತು.

ನ್ಯೂಜಿಲೆಂಡ್‌ನ ಸಂಭ್ರಮದ 2 ಗಂಟೆಯ ಬಳಿಕ ಆಸ್ಟ್ರೇಲಿಯಾದಲ್ಲೂ ಪಟಾಕಿಗಳ ಚಿತ್ತಾರದೊಂದಿಗೆ ಆಚರಣೆ ಆರಂಭಗೊಂಡಿದೆ. ಆದರೆ, ಇತ್ತೀಚೆಗಷ್ಟೇ ಭಯೋತ್ಪಾದಕ ದಾಳಿ ನಡೆದಿದ್ದ ಕಾರಣ ವಿಶ್ವದ ಹೊಸ ವರ್ಷಾಚರಣೆಯ ರಾಜಧಾನಿ ಎನಿಸಿಕೊಂಡಿದ್ದ ಸಿಡ್ನಿಯಲ್ಲಿ ಪೊಲೀಸರ ಬಿಗಿ ಬಂದೋಬಸ್ತ್‌ನೊಂದಿಗೇ ಹೊಸ ವರ್ಷವನ್ನು ಸ್ವಾಗತಿಸಲಾಗಿದೆ.

‘ತೈವಾನ್, ಚೀನಾದಲ್ಲಿ ಒಂದುಗೂಡುವುದನ್ನು ತಡೆಯಲಾಗದು’

ಬೀಜಿಂಗ್ (ಪಿಟಿಐ): ‘ಚೀನಾದೊಂದಿಗೆ ತೈವಾನ್ ಮತ್ತೆ ಒಂದು-ಗೂಡುವುದನ್ನು ತಡೆಯಲಾಗದು’ ಎಂದು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಹೊಸ ವರ್ಷದ ಸ್ವಾಗತ ಭಾಷಣದಲ್ಲಿ ಹೇಳಿದ್ದಾರೆ.

‘ತೈವಾನ್ ಜಲಸಂಧಿಯ ಎರಡೂ ಬದಿಗಳಲ್ಲಿರುವ ಚೀನಿಯರು ರಕ್ತ ಸಂಬಂಧದ ಬಾಂಧವ್ಯ ಹೊಂದಿದ್ದಾರೆ’ ಎಂದು ಅವರು ದೇಶವನ್ನು ಉದ್ದೇಶಿಸಿ ಹೊಸ ವರ್ಷದ ಸಂದೇಶ ನೀಡಿದ್ದಾರೆ.

‘ನಮ್ಮ ತಾಯ್ನಾಡಿನ ಪುನರ್ ಏಕೀಕರಣವು ಕಾಲದ ಬದಲಾವಣೆ. ಇದನ್ನು ತಡೆಯಲಾಗದು’ ಎಂದ ಅವರು, ಚೀನಾವು ಸುಧಾರಿತ ರಕ್ಷಣಾ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವುದನ್ನು, ಬ್ರಹ್ಮಪುತ್ರ ನದಿಗೆ ವಿಶ್ವದ ಅತಿ ದೊಡ್ಡ ಅಣೆಕಟ್ಟೆ ನಿರ್ಮಿಸುತ್ತಿರುವುದನ್ನು ಪ್ರಸ್ತಾಪಿಸಿದರು. ಅತ್ಯಾಧುನಿಕ ಯುದ್ಧ ವಿಮಾನ ವಾಹಕ ನೌಕೆ ‘ಫುಜಿಯಾನ್’ ಅನ್ನು ಸೇನೆಗೆ ನಿಯೋಜಿಸಿರುವುದು ಹೆಮ್ಮೆ’ ಎಂದರು.

ತೈವಾನ್ ವಶಪಡಿಸಿಕೊಳ್ಳಲು ಚೀನಾ 2022ರಿಂದ ಪ್ರಯತ್ನಿಸುತ್ತಿದ್ದು, ಮಿಲಿಟರಿ ಕಸರತ್ತುಗಳನ್ನು ತೀವ್ರಗೊಳಿಸುತ್ತಿದೆ. ಯಾರ್ಲುಂಗ್ ತ್ಸಾಂಗ್‌ಪೊ (ಬ್ರಹ್ಮಪುತ್ರ ನದಿಯ ಟಿಬೆಟ್ ಹೆಸರು) ನದಿಯ ಕೆಳಭಾಗದಲ್ಲಿ ಜಲವಿದ್ಯುತ್ ಯೋಜನೆ ಆರಂಭಗೊಂಡಿದೆ.

ಸಂಸತ್ ಆವರಣದಲ್ಲಿ ಅಂತ್ಯಕ್ರಿಯೆ • ಅಭಿಮಾನಿಗಳಿಂದ ಶ್ರದ್ಧಾಂಜಲಿ

ಖಾಲಿದಾ ಜಿಯಾಗೆ ಭಾವಪೂರ್ಣ ವಿದಾಯ

ಢಾಕಾ (ಪಿಟಿಐ): ಬಾಂಗ್ಲಾದೇಶದ ಮಾಜಿ ಪ್ರಧಾನಿ ಹಾಗೂ ಬಿಎನ್‌ಪಿ ಪಕ್ಷದ ಹಿರಿಯ ನಾಯಕಿಯಾಗಿದ್ದ ಖಾಲಿದಾ ಜಿಯಾ ಅವರ ಅಂತ್ಯಕ್ರಿಯೆ ಇಲ್ಲಿನ ಸಂಸತ್ ಕಟ್ಟಡದ ಆವರಣದಲ್ಲಿ ಬುಧವಾರ ನೆರವೇರಿತು.

ದೀರ್ಘಕಾಲದ ಅಸ್ವಸ್ಥತೆಯಿಂದ ಬಳಲುತ್ತಿದ್ದ ಜಿಯಾ, ಮಂಗಳವಾರ ನಿಧನರಾಗಿದ್ದರು.

ಜಿಯಾ ಅವರ ಪಾರ್ಥಿವ ಶರೀರವಿದ್ದ ಪೆಟ್ಟಿಗೆಗೆ ರಾಷ್ಟ್ರ ಧ್ವಜ ಹೊದಿಸಲಾಗಿತ್ತು. ಅವರ ನಿವಾಸದಿಂದ ಅಂತ್ಯಕ್ರಿಯೆ ನಡೆದ ಸ್ಥಳದವರೆಗೆ ಮೆರವಣಿಗೆ ಮೂಲಕ ಅವರ ಪಾರ್ಥಿವ ಶರೀರವನ್ನು ತರಲಾಯಿತು.

ಅಂತ್ಯಕ್ರಿಯೆ ನಡೆದ ಸ್ಥಳದ ಬಳಿ ಭಾರಿ ಸಂಖ್ಯೆಯಲ್ಲಿ ಸೇರಿದ್ದ ಅವರ ಅಭಿಮಾನಿಗಳು ತಮ್ಮ ನೆಚ್ಚಿನ ನಾಯಕಿಯ ಅಂತಿಮ ದರ್ಶನ ಪಡೆದು, ಭಾವಪೂರ್ಣ ವಿದಾಯ ಹೇಳಿದರು. ಅಂತ್ಯಕ್ರಿಯೆ ನಡೆದ ಸ್ಥಳದಲ್ಲಿ ಭಾರಿ ಬಂದೋಬಸ್ತ್ ಹಾಕಲಾಗಿತ್ತು.

ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷದ (ಬಿಎನ್‌ಪಿ) ಬೆಂಬಲಿಗರು ಜಿಯಾ ಅವರ ಭಾವಚಿತ್ರವಿರುವ ಬಾವುಟಗಳನ್ನು ಹಿಡಿದಿದ್ದರು.

ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಜುಬಯೇರ್ ರೆಹಮಾನ್ ಚೌಧರಿ, ಬಿಎನ್‌ಪಿ ಹಂಗಾಮಿ ಅಧ್ಯಕ್ಷರೂ ಆದ ಜಿಯಾ ಅವರ ಪುತ್ರ ತಾರಿಕ್ ರೆಹಮಾನ್ ಹಾಗೂ ಹಲವು ಗಣ್ಯರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಬೈತುಲ್ ಮೊಕರ್ರಂ ರಾಷ್ಟ್ರೀಯ ಮಸೀದಿಯ ಮುಖ್ಯ ಧರ್ಮ ಗುರು ಮೊಹಮ್ಮದ್ ಅಬ್ದುಲ್ ಕಾದರ್ ಅವರು ವಿಧಿ-ವಿಧಾನಗಳನ್ನು ನಡೆಸಿಕೊಟ್ಟರು.

ಢಾಕಾದಲ್ಲಿ ನಡೆದ ಮಾಜಿ ಪ್ರಧಾನಿ ಖಾಲಿದಾ ಜಿಯಾ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದ ಅವರ ಅಭಿಮಾನಿಗಳು ಹಾಗೂ ಬಿಎನ್‌ಪಿ ಬೆಂಬಲಿಗರು ಎಎಫ್‌ಪಿ ಚಿತ್ರ

ರೆಹಮಾನ್‌ಗೆ ಮೋದಿ ಪತ್ರ ಹಸ್ತಾಂತರಿಸಿದ ಜೈಶಂಕರ್

ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಖಾಲಿದಾ ಜಿಯಾ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡು, ಬಾಂಗ್ಲಾದೇಶದ ಮಾಜಿ ಪ್ರಧಾನಿಗೆ ಅಂತಿಮ ನಮನ ಸಲ್ಲಿಸಿದರು.

ಇದಕ್ಕೂ ಮುನ್ನ, ಢಾಕಾಕ್ಕೆ ಬಂದಿಳಿದ ಕೂಡಲೇ ಜಿಯಾ ಅವರ ಪುತ್ರ ಹಾಗೂ ಬಿಎನ್‌ಪಿ ಹಂಗಾಮಿ ಅಧ್ಯಕ್ಷ ತಾರಿಕ್ ರೆಹಮಾನ್ ಅವರನ್ನು ಜೈಶಂಕರ್ ಭೇಟಿ ಮಾಡಿದರು. ಸಂತಾಪ ಸೂಚಿಸಿ, ಪ್ರಧಾನಿ ನರೇಂದ್ರ ಮೋದಿ ಅವರು ಬರೆದ ಪತ್ರವನ್ನು ರೆಹಮಾನ್ ಅವರಿಗೆ ಹಸ್ತಾಂತರಿಸಿದರು.

‘ಪ್ರಧಾನಿ ಮೋದಿಯವರ ಪತ್ರ ಹಸ್ತಾಂತರಿಸುವ ಜೊತೆಗೆ, ಭಾರತದ ಜನತೆ ಹಾಗೂ ಸರ್ಕಾರದ ಪರವಾಗಿ ಸಂತಾಪ ಸೂಚಿಸಲಾಯಿತು’ ಎಂದು ಜೈಶಂಕರ್, ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆ ಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000ರಿಂದ 25,000 ಸಂಪಾದಿಸಿ. ಕೋರಿಯರ್ ಸೌಲಭ್ಯವಿದೆ. 9019593297, 8095133188.

Wanted

ತಕ್ಷಣ ಬೇಕಾಗಿದ್ದಾರೆ, ಮಾರ್ಕೆಟಿಂಗ್ ಅಲ್ಲ ಕರ್ನಾಟಕದಲ್ಲಿರುವ ಕಂಪನಿಗಳಿಗೆ ಹಳ್ಳಿಗಳಿಂದ ಬರುವ ಯುವಕರಿಗೆ ಯುವತಿಯರಿಗೆ ಸಂಬಳ 20000-35000 (ವಿದ್ಯಾರ್ಹತೆಯಿಲ್ಲದವರಿಗು) ವಸತಿಯೂಟವಿರುತ್ತದೆ. 9916788422

ಬೇಕಾಗಿದ್ದಾರೆ: ಸಂಸ್ಥೆಯೊಂದಕ್ಕೆ ಮಹಿಳೆ/ಪುರುಷ ಫೀಲ್ಡ್ ಸ್ಟಾಫ್. ಕಾಲೇಜು ವಿದ್ಯಾರ್ಥಿಗಳಿಗೂ ಅವಕಾಶ. ಸ್ಯಾಲರಿ & ಕಮಿಷನ್ ನೀಡಲಾಗುವುದು. ಸಂಪರ್ಕಿಸಿ: 8217846330

ವ್ಯಾಪಾರ

Business Offers

Distributors

ತನ್ಮಯಿ ಆಯಿಲ್ ಕಂಪನಿಯಲ್ಲಿ ಪ್ಯಾಕಿಂಗ್ ಕೆಲಸ ಮಾಡಲು 10 ಜನ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 15 ರಿಂದ 18 ಸಾವಿರ. ಸ್ಥಳ: ಶೇಷಾದ್ರಿಪುರಂ ಬೆಂಗಳೂರು ದೂರವಾಣಿ ಸಂಖ್ಯೆ: 9019626612.

ಭವಿಷ್ಯ

Astrology

★ಅಂಭಾಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನಗಳಲ್ಲಿ ಪರಿಹಾರ.9886755306

ಪ್ರವಾಸ

Travel

11ದಿನಗಳ ಗುಜರಾತ್ ರನ್‌ಆಫ್ ಕಚ್. 12 ದಿನಗಳ ಮಧ್ಯಪ್ರದೇಶ. 4 ದಿನಗಳ ಪುರಿಜಗನ್ನಾಥ್. 4 ದಿನಗಳ ಉಜ್ಜಯಿನಿ ಓಂಕಾರೇಶ್ವರ. 10ದಿನಗಳ ನೇಪಾಳ ಮುಕ್ತಿನಾಥ್. 8 ದಿನಗಳ ಅಸ್ಸಾಂ,ಮೇಘಾಲಯ ಕಾಜಿರಂಗ ಸಂಪರ್ಕಿಸಿ. ನಂದಿ ಹಾಲಿಡೇಸ್ ಬಸವನಗುಡಿ 9740228186 9035513332

★ಶ್ರೀಶ್ರೇಯಸ್ ಟೂರ್ಸ್★ 04.01.2026 7ದಿನಗಳು ಶ್ರೀರಂಗಂ,ನವಗ್ರಹ,ರಾಮೇಶ್ವರಂ ಕನ್ಯಾಕುಮಾರಿ,ಮದುರೈ,ಇತರೆ. 16.01.2026 6ದಿನಗಳು ಅಹೋಬಲಂ ನವನಾರಸಿಂಹ ನವನಂದಿ,ಶ್ರೀಶೈಲ,ಮಂತ್ರಾಲಯ ಗಂಡಿಕೋಟ,ಯಾಗಂಟಿ ಬೇಲಂಗುಹೆ.22.01.2026 10ದಿನಗಳು ಅಖಂಡ ಆಂಧ್ರ ತೆಲಂಗಾಣ ರಾಜ್ಯದ ಪಂಚರಾಮ ವಿಜಯವಾಡ,ಅನ್ನಾವರಂ ಪೀಠಾಪುರಂ,ಮಂಗಳಗಿರಿ,ಅರಕು ಭದ್ರಾಚಲಂ,ಯಾದಗಿರಿಗುಟ್ಟ ಇತರೆ.01.03.2026 12ದಿನಗಳು ಕಾಶೀ,ಅಯೋಧ್ಯೆ ಅಖಂಡ ನೇಪಾಳರಾಷ್ಟ್ರ (ಮುಕ್ತಿನಾಥ)ಕಾಮಾಕ್ಯ,ಶಕ್ತಿಪೀಠ. 22.02.2026 5ದಿನಗಳು ಅಖಂಡ ಒರಿಸ್ಸಾರಾಜ್ಯ ಪ್ರವಾಸ. 8073824856 9206979202 9846954639

26.12.25 5ದಿನಗಳು ದೆಹಲಿ,ಆಗ್ರಾ,ಜೈಪುರ್, ಫತೇಪುರ್ ಶಿಕ್ರಿ,ಇತ್ಯಾದಿ 38000 16.01.26 ಮತ್ತು`02.02.26 ಮಾಘಮೇಳ ಪ್ರಯುಕ್ತ 6ದಿನಗಳು ವಿಮಾನದಲ್ಲಿ ಪ್ರಯಾಗ್‌ರಾಜ್, ಕಾಶಿ,ಗಯಾ,ಅಯೋಧ್ಯ`33000 20.02.26 11ದಿನಗಳು ನೇಪಾಳ ಮುಕ್ತಿನಾಥ ಇತ್ಯಾದಿ.48000 "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9739847429/ 9845560219

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

‘ಚೀನಾದ ಮಧ್ಯಸ್ಥಿಕೆ’ ಹೇಳಿಕೆಗೆ ಪ್ರಧಾನಿ ಸ್ಪಷ್ಟನೆಗೆ ಜೈರಾಂ ರಮೇಶ್ ಒತ್ತಾಯ

‘ದೇಶದ ಭದ್ರತೆ ಗೇಲಿ ಮಾಡಿದ ಚೀನಾ’

ನವದೆಹಲಿ (ಪಿಟಿಐ): ‘ಭಾರತ ಮತ್ತು ಪಾಕಿಸ್ತಾನದ ನಡುವೆ ಕದನ ವಿರಾಮ ಘೋಷಣೆಯಲ್ಲಿ ಮಧ್ಯಸ್ಥಿಕೆ ವಹಿಸಿದ್ದೇವೆ ಎಂಬ ಹೇಳಿಕೆ ಮೂಲಕ ಚೀನಾ, ಭಾರತದ ರಾಷ್ಟ್ರೀಯ ಭದ್ರತೆಯನ್ನು ಗೇಲಿ ಮಾಡಿದೆ. ಈ ವಿಷಯದಲ್ಲಿ ಪ್ರಧಾನಿ ಮೌನ ಮುರಿಯಬೇಕು’ ಎಂದು ಕಾಂಗ್ರೆಸ್ ಒತ್ತಾಯಿಸಿದೆ.



ಜೈರಾಂ ರಮೇಶ್

ಚೀನಾದ ಹೇಳಿಕೆಯ ಬಗ್ಗೆ ದೇಶದ ಜನರು ಸ್ಪಷ್ಟತೆ ಬಯಸುತ್ತಿದ್ದಾರೆ. ಈ ಬಗ್ಗೆ ಪ್ರಧಾನಿ ಪ್ರತಿಕ್ರಿಯೆ ನೀಡಬೇಕು’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಆಗ್ರಹಿಸಿದ್ದಾರೆ.

‘ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈಗಾಗಲೇ 65ಕ್ಕೂ ಹೆಚ್ಚು ಬಾರಿ ಭಾರತ ಮತ್ತು ಪಾಕ್ ನಡುವಿನ ಯುದ್ಧವನ್ನು ನಿಲ್ಲಿಸಿದ್ದು ತಾವೇ ಎಂದು ಹೇಳಿಕೊಂಡಿದ್ದಾರೆ. ಆದರೆ, ಪ್ರಧಾನಿ ಈವರೆಗೂ ಈ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ, ಬದಲಿಗೆ ಟ್ರಂಪ್ ತಮ್ಮ ಆತ್ಮೀಯ ಸ್ನೇಹಿತ ಎಂದು ಹೇಳುವುದನ್ನು ಮುಂದುವರಿಸಿದ್ದಾರೆ. ಈಗ ಚೀನಾದ ಸರದಿ’ ಎಂದು ಜೈರಾಂ ರಮೇಶ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಭಾರತ-ಪಾಕ್ ಕದನ ವಿರಾಮ ಘೋಷಣೆಯಲ್ಲಿ ಮಧ್ಯಸ್ಥಿಕೆ ವಹಿಸಿದ್ದೇವೆ ಎಂದು ಅಲ್ಲಿನ ವಿದೇಶಾಂಗ ಸಚಿವ ವಾಂಗ್ ಯಿ ಮಂಗಳವಾರ ಹೇಳಿದ್ದರು. ಆದರೆ, ಭಾರತದ ಸೇನಾ ಸಿಬ್ಬಂದಿ ಉಪ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ರಾಹುಲ್ ಸಿಂಗ್ ಅವರು, 2025ರ ಜುಲೈ 4ರಂದು ಸಾರ್ವಜನಿಕವಾಗಿ, ‘ಆಪರೇಷನ್ ಸಿಂಧೂರ ಕಾರ್ಯಾಚರಣೆ ವೇಳೆ ಭಾರತವು ವಾಸ್ತವವಾಗಿ ಚೀನಾದ ವಿರುದ್ಧ ಹೋರಾಡಬೇಕಾಯಿತು ಎಂದು ಹೇಳಿದ್ದರು. ಇದು ಚೀನಾವು ಪಾಕಿಸ್ತಾನದೊಂದಿಗೆ ನಿರ್ಣಾಯಕ ಹೊಂದಾಣಿಕೆ ಮಾಡಿಕೊಂಡಿದ್ದನ್ನು ಸೂಚಿಸಿತ್ತು. ಈಗ ಚೀನಾವು ಮಧ್ಯಸ್ಥಿಕೆ ಮಂತ್ರದೊಂದಿಗೆ ಮುಂದೆ ಬಂದಿರುವುದು, ಭಾರತ- ಚೀನಾ ನಡುವಿನ ಏರುಪೇರಾದ ಸಂಬಂಧದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು. ಭಾರತದ ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದಲೂ ಇದು ಗಂಭೀರವಾಗಿ ಪರಿಗಣಿಸಬೇಕಾದ ವಿಷಯ’ ಎಂದು ಜೈರಾಂ ರಮೇಶ್ ಹೇಳಿದ್ದಾರೆ.

ನೇರ ಮಾತುಕತೆ: ಪಾಕಿಸ್ತಾನದ ಜತೆಗೆ ಮೇ 7ರಿಂದ 10ರವರೆಗೆ ನಡೆದ ಸೇನಾ ಸಂಘರ್ಷವನ್ನು ಸೇನಾ ಕಾರ್ಯಾಚರಣೆಗಳ ಮಹಾ ನಿರ್ದೇಶಕರ (ಡಿಜಿಎಂಒಎಸ್) ನಡುವಿನ ನೇರ ಮಾತುಕತೆಯ ಮೂಲಕ ಇತ್ಯರ್ಥಪಡಿಸಲಾಯಿತು ಎಂದು ಭಾರತ ಹೇಳಿದೆ. ಭಾರತ-ಪಾಕಿಸ್ತಾನದ ವಿಷಯದಲ್ಲಿ ಮೂರನೆಯ ವ್ಯಕ್ತಿ, ದೇಶಕ್ಕೆ ಅವಕಾಶ ಇಲ್ಲ ಎನ್ನುವುದನ್ನೂ ಈಗಾಗಲೇ ಸ್ಪಷ್ಟಪಡಿಸಿದೆ.

‘ಸ್ಪಷ್ಟತೆ ಬಯಸುತ್ತಿದ್ದಾರೆ’

‘ಭಾರತವು ಚೀನಾದೊಂದಿಗೆ ಸಂಬಂಧ ಮರುಸ್ಥಾಪನೆಗೆ ಪ್ರಯತ್ನಿಸುತ್ತಿದೆ. ಈ ಸಂದರ್ಭದಲ್ಲೇ ಚೀನಾದಿಂದ ಈ ರೀತಿಯ ಪ್ರತಿಕ್ರಿಯೆ ಬಂದಿರುವುದು ಕಳವಳಕಾರಿ. ಪ್ರಧಾನಿ ನರೇಂದ್ರ ಮೋದಿ ಅವರು 2020ರ ಜೂನ್ 19ರಂದೇ ಚೀನಾಕ್ಕೆ ‘ಕ್ಲೀನ್ ಚಿಟ್“ ನೀಡಿದ್ದಾರೆ. ಇದು ಮಾತುಕತೆ ವಿಷಯದಲ್ಲಿ ಭಾರತದ ಸ್ಥಾನ ದುರ್ಬಲಗೊಂಡಿರುವುದನ್ನು ಸೂಚಿಸುತ್ತದೆ. ಅರುಣಾಚಲ ಪ್ರದೇಶದ ವಿಷಯದಲ್ಲೂ ಚೀನಾದ ಪ್ರಚೋದನಕಾರಿ ನೀತಿಗೆ ತಡೆ ಬಿದ್ದಿಲ್ಲ. ಇಂತಹ ಸಂದರ್ಭದಲ್ಲಿ ಚೀನಾ ಹೇಳಿಕೆ ಬಗ್ಗೆ ದೇಶದ ಜನರು ಪ್ರಧಾನಿಯಿಂದ ಸ್ಪಷ್ಟತೆ ಬಯಸುತ್ತಿದ್ದಾರೆ ಎಂದು ಜೈರಾಂ ರಮೇಶ್ ಹೇಳಿದ್ದಾರೆ.

ನಿಮೆಸುಲೈಡ್ ಒಳಗೊಂಡ ಔಷಧ ನಿಷೇಧ

ನವದೆಹಲಿ (ಪಿಟಿಐ): 100 ಎಂಜಿಗಿಂತ ಹೆಚ್ಚು ನಿಮೆಸುಲೈಡ್ ನೋವು ನಿವಾರಕವನ್ನು ಒಳಗೊಂಡಿರುವ ಮಾತ್ರೆ ಸೇರಿದಂತೆ ಸೇವಿಸುವ ಎಲ್ಲ ಔಷಧಿಗಳ ಉತ್ಪಾದನೆ, ಮಾರಾಟ ಮತ್ತು ವಿತರಣೆಯನ್ನು ಕೇಂದ್ರ ಆರೋಗ್ಯ ಸಚಿವಾಲಯವು ನಿಷೇಧಿಸಿದೆ.

ಮಾನವನ ಆರೋಗ್ಯಕ್ಕೆ ಗಂಭೀರ ಅಪಾಯ ಇರುವ ಕಾರಣ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಂಆರ್) ಶಿಫಾರಸಿನ ಬಳಿಕ ಈ ನಿರ್ಧಾರ ಕೈಗೊಳ್ಳಲಾಗಿದೆ. ಸಾರ್ವಜನಿಕ ಹಿತಾಸಕ್ತಿಯ ಹಿತದೃಷ್ಟಿಯಿಂದ 100 ಎಂಜಿಗಿಂತ ಹೆಚ್ಚಿರುವ ನಿಮೆಸುಲೈಡ್ ಒಳಗೊಂಡ ಔಷಧಗಳ ಬಳಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಷೇಧಿಸಲಾಗಿದೆ ಎಂದು ತಿಳಿಸಿದೆ.

ಟಾಕ್ಸಿಕ್‌ನಲ್ಲಿ 'ಗಂಗಾ' ಆದ ನಯನತಾರಾ



ಮಾರ್ಚ್ 19 ರಂದು ವಿಶ್ವದಾದ್ಯಂತ ತೆರೆಕಾಣಲಿರುವ ಯಶ್ ನಟನೆಯ 'ಟಾಕ್ಸಿಕ್: ಎ ಫೇರಿಟೇಲ್ ಫಾರ್ ಗ್ರೋನ್ ಅಪ್ಸ್' ಕುತೂಹಲ ಹುಟ್ಟಿಸುತ್ತಿದೆ. ಕಥೆಯೊಳಗಿನ ಪಾತ್ರಗಳನ್ನು ಚಿತ್ರತಂಡ ಪರಿಚಯಿಸಲಾರಂಭಿಸಿದ್ದು, 'ಗಂಗಾ' ಎಂಬ ಪಾತ್ರದಲ್ಲಿ ಬಹುಭಾಷಾ ನಟಿ ನಯನತಾರಾ ಕಾಣಿಸಿಕೊಳ್ಳಲಿದ್ದಾರೆ.

ಮಲಯಾಳ ಹಾಗೂ ತಮಿಳು ಸಿನಿಮಾಗಳಲ್ಲಿ ಮಿಂಚಿರುವ ನಯನತಾರಾ 'ಟಾಕಿಕ್ಸ್'ನಲ್ಲಿ ಹೇಗಿರಲಿದ್ದಾರೆ ಎನ್ನುವುದನ್ನು ಫಸ್ಟ್‌ಲುಕ್ ಮೂಲಕ ತೋರಿಸಲಾಗಿದೆ. ಈಗಾಗಲೇ ಹಿಂದಿ, ತೆಲುಗು ಸಿನಿಮಾಗಳಲ್ಲಿ ನಟಿಸಿರುವ ಕಿಯಾರಾ ಅಡ್ವಾಣಿಯವರ 'ನಾದಿಯಾ' ಪಾತ್ರವನ್ನು ಹಾಗೂ ಹುಮಾ ಖುರೇಷಿ ಅವರ 'ಎಲಿಜಬೆತ್' ಪಾತ್ರವನ್ನು ಚಿತ್ರತಂಡ ಪರಿಚಯಿಸಿದೆ. ಕೈಯಲ್ಲಿ ಬಂದೂಕು ಹಿಡಿದು ಕಪ್ಪು ಉಡುಪಿನಲ್ಲಿ ನಯನತಾರಾ ಮಿಂಚಿದ್ದಾರೆ. ಉಪೇಂದ್ರ ನಟನೆಯ 'ಸೂಪರ್'ನಲ್ಲಿ ನಟಿಸಿದ್ದ ನಯನತಾರಾ 'ಟಾಕ್ಸಿಕ್' ಮೂಲಕ ಕನ್ನಡಕ್ಕೆ ಮರಳಿದ್ದಾರೆ.

ಯಶ್ ನಟನೆಯ 19ನೇ ಸಿನಿಮಾ ಇದಾಗಿದೆ. 'ಗಂಗಾ' ಪಾತ್ರವು ಸಿನಿಮಾದಲ್ಲಿನ ಪ್ರಮುಖ ಪಾತ್ರ ಎಂದು ಹೇಳಿದೆ ಚಿತ್ರತಂಡ. 'ಕಳೆದ ಎರಡು ದಶಕಗಳಿಂದ ನಯನತಾರಾ ಅವರನ್ನು ತೆರೆ ಮೇಲೆ ಎಲ್ಲರೂ ಗಮನಿಸಿರುತ್ತಾರೆ. ಆದರೆ 'ಟಾಕ್ಸಿಕ್'ನಲ್ಲಿ ಅವರೊಳಗಿನ ಪ್ರತಿಭೆಯ ಅನಾವರಣ ಎಲ್ಲರಿಗೂ ಆಶ್ಚರ್ಯ ಉಂಟುಮಾಡಲಿದೆ. ಹಿಂದೆಂದೂ ತೋರಿಸದ ರೀತಿಯಲ್ಲಿ ತೆರೆಯ ಮೇಲೆ ಅವರನ್ನು ತರಬೇಕೆಂಬುದು ನನ್ನ ಆಸೆಯಾಗಿತ್ತು. ಚಿತ್ರೀಕರಣದ ವೇಳೆಯಲ್ಲಿ ಪಾತ್ರಕ್ಕೆ ನಯನತಾರಾ ವ್ಯಕ್ತಿತ್ವವು ಎಷ್ಟು ಹತ್ತಿರವಾಗಿದೆ ಎಂಬುದು ನನಗೆ ಅರಿವಾಯಿತು' ಎಂದಿದ್ದಾರೆ ನಿರ್ದೇಶಕಿ ಗೀತು ಮೋಹನ್‌ದಾಸ್.

ಈ ಸಿನಿಮಾ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಏಕಕಾಲದಲ್ಲಿ ಚಿತ್ರೀಕರಣಗೊಂಡಿದೆ. ಸಿನಿಮಾವು ಹಿಂದಿ, ತಮಿಳು, ತೆಲುಗು, ಮಲಯಾಳ ಸೇರಿದಂತೆ ಹಲವು ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ಡಬ್ ಆಗಿ ರಿಲೀಸ್ ಆಗಲಿದೆ. ಹಾಲಿವುಡ್‌ನ 'ಜಾನ್ ವಿಕ್', 'ಫಾಸ್ಟ್ ಆ್ಯಂಡ್ ಫ್ಯೂರಿಯಸ್', 'ವಾರಿಯರ್' ಮುಂತಾದ ಸಿನಿಮಾಗಳಿಗೆ ಸಾಹಸ ನಿರ್ದೇಶಕರಾಗಿ ಕೆಲಸ ಮಾಡಿದ್ದ ಜೆ.ಜೆ.ಪೆರ್ರಿ 'ಟಾಕ್ಸಿಕ್'ನ ಸಾಹಸ ದೃಶ್ಯಗಳ ಸಂಯೋಜನೆ ಮಾಡಿದ್ದಾರೆ. 'ಕೆ.ಜಿ.ಎಫ್' ಖ್ಯಾತಿಯ ರವಿ ಬಸ್ರೂರು ಸಂಗೀತ ನಿರ್ದೇಶನ ಮಾಡಿದ್ದು, ರಾಜೀವ್ ರವಿ ಛಾಯಾಚಿತ್ರಗ್ರಹಣ, ಉಜ್ವಲ್ ಕುಲಕರ್ಣಿ ಸಂಕಲನ, ಟಿಪಿ ಅಬಿದ್ ನಿರ್ಮಾಣ ವಿನ್ಯಾಸ ಚಿತ್ರಕ್ಕಿದೆ. ❖

'ಮಾಜರ್' ಟ್ರೇಲರ್ ಬಿಡುಗಡೆ

ಸಂಗೀತ ಸಿನಿ ಹೌಸ್ ಲಾಂಛನದಲ್ಲಿ ಮುರುಗನಂದನ್ ಎಂ. ನಿರ್ಮಿಸಿರುವ, ಲೋಕಲ್ ಲೋಕಿ ನಿರ್ದೇಶನದ 'ಮಾಜರ್' ಸಿನಿಮಾ ರಿಲೀಸ್‌ಗೆ ಸಜ್ಜಾಗಿದೆ. ಸಿನಿಮಾದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು.

'ನಿರ್ಭಯ ಹತ್ಯೆ ಮುಂತಾದ ಘಟನೆಗಳೇ ಈ ಕಥೆ ಬರೆಯಲು ಮುಖ್ಯ ಕಾರಣ. ಇಂತಹ ಕೃತ್ಯಗಳನ್ನು ಪ್ರತಿಯೊಬ್ಬರೂ ಖಂಡಿಸಬೇಕು. ಹೆಣ್ಣುಮಕ್ಕಳಿಗೆ ನ್ಯಾಯ ಸಿಗಬೇಕು ಎಂಬುವುದೇ ಈ ಸಿನಿಮಾದ ಮುಖ್ಯ ಉದ್ದೇಶ. ನಾನು ಈ ಚಿತ್ರವನ್ನು ನಿರ್ದೇಶಿಸುವುದರ ಜೊತೆಗೆ ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದೇನೆ. ಎ.ಟಿ. ರವೀಶ್ ಸಂಗೀತ ನಿರ್ದೇಶನ, ರಾಜೇಶ್ ರಾಮನಾಥ್ ಹಿನ್ನಲೆ ಸಂಗೀತ ಹಾಗೂ ಗಗನ್ ಗೌಡ, ವಿನಯ್ ಗೌಡ, ಜಗನ್ ಬಾಬು ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಶ್ರೀಹಾನ್, ದೀಪಕ್, ಉಗ್ರಂ ರವಿ, ಸಂಭ್ರಮಶ್ರೀ, ರಾಜು, ರಂಜನ್, ಅಜಯ್ ಶರ್ಮ ಮುಂತಾದವರು ತಾರಾಬಳಗದಲ್ಲಿದ್ದಾರೆ. ಜನವರಿ 15ರಂದು ಚಿತ್ರ ಬಿಡುಗಡೆಯಾಗಲಿದೆ' ಎಂದಿದ್ದಾರೆ ಲೋಕಲ್ ಲೋಕಿ. ❖

ಲೋಕಿ, ಸಂಭ್ರಮಶ್ರೀ

ಅಮೃತಾ ಅಯ್ಯಂಗಾರ್, ಡಾರ್ಲಿಂಗ್ ಕೃಷ್ಣ, ನಾಗಭೂಷಣ್

ಮೊದಲಾರ್ಧದಲ್ಲೇ ಫಾದರ್

'ಆರ್.ಸಿ. ಸ್ಟುಡಿಯೊಸ್'ನಡಿ ನಿರ್ದೇಶಕ ಆರ್.ಚಂದ್ರು ನಿರ್ಮಾಣ ಮಾಡುತ್ತಿರುವ, ರಾಜ್‌ಮೋಹನ್ ನಿರ್ದೇಶನದ 'ಫಾದರ್' ಸಿನಿಮಾದ 'ಫಾದರ್ ಥೀಮ್ ವಿಡಿಯೊ' ಇತ್ತೀಚೆಗೆ ಬಿಡುಗಡೆಯಾಯಿತು.

ಆರ್.ಚಂದ್ರು

ಸಿನಿಮಾವನ್ನು 2026ರ ಮೊದಲಾರ್ಧದಲ್ಲೇ ಬಿಡುಗಡೆ ಮಾಡಲು ಆರ್.ಚಂದ್ರು ನಿರ್ಧರಿಸಿದ್ದಾರೆ. ಡಾರ್ಲಿಂಗ್ ಕೃಷ್ಣ ಈ ಸಿನಿಮಾದ ಮುಖ್ಯಭೂಮಿಕೆಯಲ್ಲಿದ್ದಾರೆ. ಅವರ ನಿರ್ದೇಶನದ 'ಲವ್ ಮಾಕ್ಟೇಲ್–3' ಕೂಡಾ ಬಿಡುಗಡೆಗೆ ಸಿದ್ಧವಿರುವ ಹಿನ್ನೆಲೆಯಲ್ಲಿ ಚರ್ಚಿಸಿ ದಿನಾಂಕ ಘೋಷಣೆ ಮಾಡುವುದಾಗಿ ತಿಳಿಸಿದ್ದಾರೆ ಆರ್. ಚಂದ್ರು. ಸಿನಿಮಾ ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ರಿಲೀಸ್ ಆಗಲಿದೆ.

'ಇಂಥ ಕಥೆಯ ಎಳೆ ಕೇಳಸಿಗುವುದೇ ಅಪರೂಪ. ಈ ಸಿನಿಮಾ ಮಾಡಲೇಬೇಕು ಎಂದು ಕಥೆ ಕೇಳಿದಾಗಲೇ ನಿರ್ಧರಿಸಿದ್ದೆ. ತಂದೆ–ಮಗನ ಕಥೆಗಳು ಹಲವು ಬಂದಿವೆ. ಆದರೆ ಈ ಸಿನಿಮಾದಲ್ಲಿ ನಡೆಯುವ ಘಟನೆ ಎಲ್ಲೂ ನೋಡಿರಲು ಸಾಧ್ಯವಿಲ್ಲ. ಕೌಟುಂಬಿಕ, ಸದಭಿರುಚಿಯ ಸಿನಿಮಾ ಮಾಡಬೇಕು ಎನ್ನುವುದು ನನ್ನ ಆಸೆ. ಬಹಳ ವರ್ಷ ಈ ಸಿನಿಮಾ ಮನಸ್ಸಿನಲ್ಲಿ ಉಳಿಯಲಿದೆ' ಎನ್ನುತ್ತಾರೆ ಡಾರ್ಲಿಂಗ್ ಕೃಷ್ಣ.

ತಂದೆ–ಮಗನ ಬಾಂಧವ್ಯದ ಕಥೆ ಹೊತ್ತ ಈ ಸಿನಿಮಾದಲ್ಲಿ ತಂದೆಯ ಪಾತ್ರದಲ್ಲಿ ಪ್ರಕಾಶ್ ರಾಜ್, ಮಗನ ಪಾತ್ರದಲ್ಲಿ ಡಾರ್ಲಿಂಗ್ ಕೃಷ್ಣ ನಟಿಸಿದ್ದಾರೆ. ಅಮೃತಾ ಅಯ್ಯಂಗಾರ್, 'ಟಗರುಪಲ್ಯ' ಖ್ಯಾತಿಯ ನಾಗಭೂಷಣ್ ತಾರಾಬಳಗದಲ್ಲಿದ್ದಾರೆ. ಮೈಸೂರು, ಧರ್ಮಸ್ಥಳ, ಮಂಗಳೂರು, ಬೆಂಗಳೂರು ಹಾಗೂ ವಾರಾಣಸಿಯಲ್ಲಿ ಚಿತ್ರೀಕರಣಗೊಂಡಿರುವ ಈ ಸಿನಿಮಾಗೆ ಸುಜ್ಞಾನ್ ಛಾಯಾಚಿತ್ರಗ್ರಹಣ, ನಕುಲ್ ಅಭಯಂಕರ್ ಸಂಗೀತ ನಿರ್ದೇಶನವಿದೆ. ❖

> ಪ್ರತಿ ಸಿನಿಮಾವೂ ಕಲಿಕೆಯೇ. ನನ್ನ ಕನಸಿಕ ಪೌರಾಣಿಕ ಕಥೆಯೊಂದಿದೆ. ಇದಕ್ಕೆ ಸಾಕಷ್ಟು ಪೂರ್ವಸಿದ್ಧತೆ ಬೇಕಾಗಿದೆ. 'ಫಾದರ್' ಸಿನಿಮಾದ ಕಥೆ ಎಲ್ಲರಿಗೂ ಬಹಳ ಕನೆಕ್ಟ್ ಆಗಲಿದೆ. ಇದೊಂದು ಕಾಂಟೆಂಟ್ ಚಿತ್ರ. ಸಿನಿಮಾ ಬಿಡುಗಡೆಗೆ ಸಮಯ, ಸಂದರ್ಭ ಮುಖ್ಯ. 2026ರ ಮೊದಲಾರ್ಧದಲ್ಲಿ ಬರುವ ಯೋಜನೆ ಹಾಕಿಕೊಂಡಿದ್ದೇವೆ
>
> **ಆರ್.ಚಂದ್ರು**, ನಿರ್ಮಾಪಕ

> ಈ ಸಿನಿಮಾ ನೋಡುವಾಗ ನಿಮಗೆ ನಿಮ್ಮ ಅಪ್ಪ ನೆನಪಾಗಲಿದ್ದಾರೆ. ನಿಮ್ಮ ಮಕ್ಕಳು ನೋಡುವಾಗ ನಿಮ್ಮ ನೆನಪು ಅವರಿಗಾಗಲಿದೆ. ನನಗೆ 15 ವರ್ಷವಿರುವಾಗ ಅಪ್ಪ ತೀರಿಕೊಂಡರು. ಅಪ್ಪ ಇದ್ದಿದ್ದರೆ ಏನಾಗುತ್ತಿತ್ತು ಎನ್ನುವುದೇ ಕಥಾಹಂದರ. ಇದೊಂದು ನೈಜ ಕಥೆ
>
> **ರಾಜ್‌ಮೋಹನ್**, ನಿರ್ದೇಶಕ

ಚಿಟಿಕೆ ಸುದ್ದಿ

ಕಲುಷಿತ ನೀರು ಸೇವಿಸಿ ಏಳು ಮಂದಿ ಸಾವು

ಇಂದೋರ್ (ಪಿಟಿಐ): ಇಲ್ಲಿನ ಭಾಗೀರಥಪುರದಲ್ಲಿ ಕಲುಷಿತ ನೀರು ಕುಡಿದು ವಾಂತಿ ಮತ್ತು ಅತಿಸಾರದಿಂದ ಏಳು ಮಂದಿ ಸಾವಿಗೀಡಾಗಿದ್ದು, 140ಕ್ಕೂ ಅಧಿಕ ಜನರು ಅಸ್ವಸ್ಥರಾಗಿದ್ದಾರೆ ಎಂದು ಇಂದೋರ್ ಮೇಯರ್ ಪುಷ್ಯಮಿತ್ರ ಭಾರ್ಗವ ತಿಳಿಸಿದ್ದಾರೆ.

'ಕುಡಿಯುವ ನೀರಿನ ಒಡೆದಿದ್ದ ಪೈಪಿಗೆ ಕೊಳಚೆ ನೀರು ಸೇರಿಕೊಂಡು ಕಲುಷಿತಗೊಂಡಿರುವುದು ಪ್ರಾಥಮಿಕ ಮಾಹಿತಿಯಲ್ಲಿ ತಿಳಿದುಬಂದಿದೆ' ಎಂದು ಅವರು ಹೇಳಿದ್ದಾರೆ.

ಆದರೆ, ಸ್ಥಳೀಯ ನಿವಾಸಿಗಳು ಮಾತ್ರ, ಕಳೆದ ಒಂದು ವಾರದಿಂದೀಚೆಗೆ ಆರು ಮಹಿಳೆಯರು ಸೇರಿ ಎಂಟು ಮಂದಿ ಮೃತಪಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ.

₹2 ಲಕ್ಷ ಪರಿಹಾರ: ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಮೃತರ ಕುಟುಂಬಗಳಿಗೆ ತಲಾ ₹ 2 ಲಕ್ಷ ಪರಿಹಾರ ಪ್ರಕಟಿಸಿದ್ದಾರೆ.

ಕಾಂಗ್ರೆಸ್ ಟೀಕೆ: 'ದೇಶದಲ್ಲೇ ಸ್ವಚ್ಛ ನಗರ ಎಂಬ ಇಂಧೋರ್‌ನ ಹೆಗ್ಗಳಿಕೆಗೆ ಈ ಘಟನೆ ಕಪ್ಪು ಚುಕ್ಕೆ' ಎಂದು ಮಧ್ಯಪ್ರದೇಶ ಕಾಂಗ್ರೆಸ್ ವಕ್ತಾರ ನೀಲಭ್ ಶುಕ್ಲಾ ಆರೋಪಿಸಿದ್ದಾರೆ.

ಬದುಕಿರುವಾಗಲೇ ಸಮಾಧಿ ನಿರ್ಮಾಣ!

ಹೈದರಾಬಾದ್ (ಪಿಟಿಐ): ತೆಲಂಗಾಣದ ಜಗಿತ್ಯಾಲ ಜಿಲ್ಲೆಯ 80 ವರ್ಷದ ವ್ಯಕ್ತಿಯೊಬ್ಬರು ಬದುಕಿರುವಾಗಲೇ ತಮ್ಮ ಸಮಾಧಿಯನ್ನು ನಿರ್ಮಿಸಿಕೊಂಡಿದ್ದಾರೆ.

ನಕ್ಕಾ ಇಂದ್ರಯ್ಯ ಅವರು ಜಿಲ್ಲೆಯ ಲಕ್ಷ್ಮಿಪುರಂ ಗ್ರಾಮದಲ್ಲಿ ತಮ್ಮ ಪತ್ನಿಯ ಸಮಾಧಿಯ ಪಕ್ಕದಲ್ಲಿಯೇ ತಮ್ಮ ಸಮಾಧಿಯನ್ನು ನಿರ್ಮಿಸಿಕೊಂಡಿದ್ದಾರೆ.

ಸಮಾಧಿ ಪಕ್ಕದಲ್ಲಿ ಜೀವನ ಮತ್ತು ಮರಣದ ಕಹಿ ಸತ್ಯದ ಕುರಿತ ಸಂದೇಶವಿರುವ ಫಲಕವನ್ನು ಹಾಕಿದ್ದಾರೆ. ಅದರಲ್ಲಿ 'ಮರಣ ಅನಿವಾರ್ಯ. ಸತ್ತ ನಂತರ ಯಾರೂ ಸಂಪತ್ತನ್ನು ಕೊಂಡೊಯ್ಯುವುದಿಲ್ಲ' ಎಂದು ಬರೆಯಲಾಗಿದೆ.

ಗ್ರಾನೈಟ್‌ನಲ್ಲಿ ನಿರ್ಮಿಸಲಾದ ಸಮಾಧಿಗೆ ಒಟ್ಟು ₹12 ಲಕ್ಷ ವೆಚ್ಚವಾಗಿದೆ.

ಇಂದ್ರಯ್ಯ ಅವರು ಪ್ರತಿನಿತ್ಯ ಸಮಾಧಿ ಸ್ಥಳಕ್ಕೆ ಬಂದು ಸ್ಥಳವನ್ನು ಸ್ವಚ್ಛಗೊಳಿಸುತ್ತಾರೆ, ಗಿಡಗಳಿಗೆ ನೀರುಣಿಸುತ್ತಾರೆ. ಕೆಲ ಕಾಲ ಕುಳಿತು ಸಮಯ ಕಳೆಯುತ್ತಾರೆ.

'ನಾನು ನಾಲ್ಕೈದು ಮನೆಗಳು, ಒಂದು ಶಾಲೆ, ಒಂದು ಚರ್ಚ್ ಕಟ್ಟಿದ್ದೇನೆ. ಈಗ ನನ್ನ ಸಮಾಧಿಯನ್ನೂ ನಿರ್ಮಿಸಿದ್ದೇನೆ. ಸಮಾಧಿಯ ನಿರ್ಮಾಣ ಹಲವರಿಗೆ ನೋವುಂಟು ಮಾಡಬಹುದು, ಆದರೆ ನನಗೆ ಸಂತೋಷವನ್ನು ನೀಡಿದೆ. ನನ್ನ ಮರಣದ ನಂತರ ಮಕ್ಕಳಿಗೆ ತೊಂದರೆ ಕೊಡಬಾರದೆಂದು ನಾನೇ ನಿರ್ಮಿಸಿದ್ದೇನೆ' ಎಂದು ಇಂದ್ರಯ್ಯ ಹೇಳಿದ್ದಾರೆ.

ಎರಡು ಹೆದ್ದಾರಿಗೆ ಕೇಂದ್ರ ಒಪ್ಪಿಗೆ

ನವದೆಹಲಿ: ಮಹಾರಾಷ್ಟ್ರ ಮತ್ತು ಒಡಿಶಾದಲ್ಲಿ ₹20,500 ಕೋಟಿ ವೆಚ್ಚದ ಎರಡು ಬೃಹತ್ ಹೆದ್ದಾರಿ ನಿರ್ಮಾಣ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಕೇಂದ್ರ ಸರ್ಕಾರ ಬುಧವಾರ ಅನುಮೋದನೆ ನೀಡಿದೆ. 6 ಪಥಗಳ ನಾಸಿಕ್–ಸೋಲಾಪುರ–ಅಕ್ಕಲಕೋಟ್ ಟೋಲ್ ರಸ್ತೆ ನಿರ್ಮಾಣಕ್ಕೆ ಒಪ್ಪಿಗೆ ನೀಡಿದೆ. ಕರ್ನೂಲ್ ಸಂಪರ್ಕಿಸುವ 374 ಕಿ.ಮೀ ಉದ್ದದ ರಸ್ತೆಗೆ ₹ 19,142 ಕೋಟಿ ವೆಚ್ಚವಾಗಲಿದೆ.

ಪ. ಬಂಗಾಳ: ದಿಲೀಪ್ ಬಿಜೆಪಿ ಮುಖ

ವಿಧಾನಸಭೆ ಚುನಾವಣೆ: ಬಿಜೆಪಿ ಗೆಲ್ಲಿಸಲು ಕಾರ್ಯತಂತ್ರ ● ಅಮಿತ್ ಶಾ ಸರಣಿ ಸಭೆ

ಕೋಲ್ಕತ್ತ(ಪಿಟಿಐ): ಮುಂದಿನ ಏಪ್ರಿಲ್‌ನಲ್ಲಿ ನಡೆಯುವ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲುವಿನ ದಡ ಮುಟ್ಟಿಸಬೇಕು ಎಂದು ನಿಶ್ಚಯಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ರಾಜ್ಯ ಘಟಕ ಆರಂಭಿಸಿರುವ ಸಿದ್ಧತೆಗಳನ್ನು ಬುಧವಾರ ಪರಿಶೀಲಿಸಿದರು.



ಅಮಿತ್ ಶಾ

ಮಹತ್ವದ ಬೆಳವಣಿಗೆಯಲ್ಲಿ, ಪಕ್ಷದ ರಾಜ್ಯ ಘಟಕದ ಮಾಜಿ ಅಧ್ಯಕ್ಷ ದಿಲೀಪ್ ಘೋಷ್ ಅವರನ್ನು ಮುಂಬರುವ ಚುನಾವಣೆಯಲ್ಲಿ ಕೇಸರಿ ಪಾಳಯದ ಪ್ರಮುಖ ಮುಖವಾಗಿ ಶಾ ಸೂಚ್ಯವಾಗಿ ಬಿಂಬಿಸಿರುವುದು ಗಮನಾರ್ಹ.

ಪಕ್ಷದ ಹಾಲಿ ಹಾಗೂ ಮಾಜಿ ಚುನಾಯಿತ ಪ್ರತಿನಿಧಿಗಳೊಂದಿಗೆ ರಹಸ್ಯ ಸಭೆ ನಡೆಸಿದ ಶಾ, ಮುಖಂಡರು ಹಾಗೂ ಕಾರ್ಯಕರ್ತರಿಗೆ ಹಲವು ಸೂಚನೆಗಳನ್ನು ನೀಡಿದರು ಎಂದು ಬಿಜೆಪಿ ರಾಜ್ಯ ಘಟಕದ ಮುಖಂಡರೊಬ್ಬರು ಸಭೆ ಬಳಿಕ ತಿಳಿಸಿದರು.

> ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತನಲ್ಲೂ ಉತ್ಸಾಹ ಇಮ್ಮಡಿಗೊಂಡಿದೆ. ಮುಂದಿನ ವರ್ಷ ನಡೆಯುವ ವಿಧಾನಸಭೆ ಚುನಾವಣೆಯಲ್ಲಿ ನಮ್ಮ ಗೆಲುವು ನಿಶ್ಚಿತ. ರಾಜ್ಯದಲ್ಲಿ ಬದಲಾವಣೆ ತರುತ್ತೇವೆ
>
> **ಸುವೇಂದು ಅಧಿಕಾರಿ** ವಿಪಕ್ಷ ನಾಯಕ

ದಿಲೀಪ್ ಘೋಷ್, ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಸುಕಾಂತ ಮಜುಂದಾರ್, ಹಾಲಿ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ, ವಿಧಾನಸಭೆ ವಿಪಕ್ಷ ನಾಯಕ ಸುವೇಂದು ಅಧಿಕಾರಿ ಅವರೊಂದಿಗೆ ಶಾ ಪ್ರತ್ಯೇಕ ಸಭೆ ನಡೆಸಿದರು. ಪಕ್ಷದ ಹಿರಿಯ ನಾಯಕರು ಹಾಗೂ ಹೊಸಬರ ನಡುವಿನ ಭಿನ್ನಾಭಿಪ್ರಾಯಗಳನ್ನು ನಿವಾರಿಸುವ ಪ್ರಯತ್ನದ ಭಾಗವಾಗಿ ಶಾ ಈ ಸಭೆ ನಡೆಸಿದರು ಎಂದು ಮತ್ತೊಬ್ಬ ನಾಯಕ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳಕ್ಕೆ ಪಕ್ಷದ ವೀಕ್ಷಕರಾದ ಸುನಿಲ್ ಬನ್ಸಾಲ್, ಭೂಪೇಂದ್ರ ಯಾದವ್, ಬಿಪ್ಲಬ್ ದೇವ್ ಹಾಗೂ ಅಮಿತ್ ಮಾಳವೀಯಾ ಅವರೂ ಸಭೆಯಲ್ಲಿ ಪಾಲ್ಗೊಂಡಿದ್ದರು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಘೋಷ್, 'ಸಭೆ ಕುರಿತಂತೆ ಹೆಚ್ಚಿಗೆ ಹೇಳುವುದಿಲ್ಲ. ನನ್ನ ಅನುಭವ ಹಾಗೂ ಅಭಿಪ್ರಾಯಗಳನ್ನು ಆಲಿಸಲು ಕರೆದಿದ್ದರು. ಮುಂದಿನ ವರ್ಷದ ಚುನಾವಣೆ ವೇಳೆ ನೀವು ಸಕ್ರಿಯ ದಿಲೀಪ್ ಘೋಷ್‌ನನ್ನು ಕಾಣುವಿರಿ ಎಂದಷ್ಟೆ ಹೇಳಬಲ್ಲೆ' ಎಂದು ಪ್ರತಿಕ್ರಿಯಿಸಿದರು.

ಸ್ವಾಮಿ ವಿವೇಕಾನಂದ, ಬಂಕಿಮ ಚಂದ್ರ ಚಟ್ಟೋಪಾಧ್ಯಾಯ, ರವೀಂದ್ರನಾಥ ಟ್ಯಾಗೋರ್ ಸೇರಿ ಹಲವು ಧೀಮಂತರ ಕುರಿತು ಸಭೆಯಲ್ಲಿ ಶಾ ಉಲ್ಲೇಖಿಸಿದರು ಎಂದೂ ತಿಳಿಸಿದ್ದಾರೆ.

ಸೂಚನೆಗಳು

- ಪಕ್ಷದ ನಾಯಕರು ವಾರದಲ್ಲಿ ಕನಿಷ್ಠ ನಾಲ್ಕು ದಿನ ತಮ್ಮ ಕ್ಷೇತ್ರಗಳಲ್ಲಿ ಇರಬೇಕು. ಈ ಅವಧಿಯಲ್ಲಿ ಕನಿಷ್ಠ ಐದು ಬೀದಿ ಬದಿ ಸಭೆಗಳನ್ನು ಆಯೋಜಿಸಬೇಕು
- ಟಿಕೆಟ್ ಆಕಾಂಕ್ಷಿಗಳು ಸ್ಪರ್ಧಿಸಲು ತಾವು ಏಕೆ ಅರ್ಹರು ಎಂಬುದನ್ನು ಮುಂದಿನ ಎರಡು ತಿಂಗಳಲ್ಲಿ ಸಾಬೀತುಪಡಿಸಬೇಕು
- ಬೂತ್ ಮಟ್ಟದಲ್ಲಿ ಕಾರ್ಯಕರ್ತರನ್ನು ಸಕ್ರಿಯೊಳಿಸಬೇಕು ಹಾಗೂ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ 'ವಿಸ್ತಾರಕ'ರನ್ನು ನಿಯೋಜನೆ ಮಾಡಬೇಕು

ಘೋಷ್‌ಗೆ ಮತ್ತೆ ಮಣೆ ಏಕೆ?



ದಿಲೀಪ್ ಘೋಷ್

ದಿಲೀಪ್ ಘೋಷ್ ಅವರು ಪಕ್ಷದ ರಾಜ್ಯ ಘಟಕದ ಮುಖ್ಯಸ್ಥರಾಗಿದ್ದ ವೇಳೆ, 2019ರಲ್ಲಿ ನಡೆದ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅತ್ಯುತ್ತಮ ಸಾಧನೆ ಮಾಡಿತ್ತು. ಮೂರು ಶಾಸಕರನ್ನು ಹೊಂದಿದ್ದ ಬಿಜೆಪಿ ಆ ಚುನಾವಣೆಯಲ್ಲಿ 70 ಸ್ಥಾನಗಳನ್ನು ಗೆದ್ದಿತ್ತು. 18 ಲೋಕಸಭಾ ಕ್ಷೇತ್ರಗಳಲ್ಲಿ ಗೆದ್ದು ಬೀಗಿತ್ತು. ಹೀಗಾಗಿ ಘೋಷ್ ಅವರನ್ನು ರಾಜ್ಯ ಘಟಕದ ಬಹು ಯಶಸ್ವಿ ಅಧ್ಯಕ್ಷ ಎಂದೇ ಪರಿಗಣಿಸಲಾಗುತ್ತಿತ್ತು.

ಆದರೆ, ಈ ವರ್ಷದ ಆರಂಭದಲ್ಲಿ ದಿಘಾ ಪಟ್ಟಣದಲ್ಲಿ ನಡೆದ ಜಗನ್ನಾಥ ದೇವಸ್ಥಾನ ಉದ್ಘಾಟನೆ ಸಮಾರಂಭದಲ್ಲಿ ಘೋಷ್ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೊಂದಿಗೆ ವೇದಿಕೆ ಹಂಚಿಕೊಂಡಿದ್ದರು. ಈ ದೃಶ್ಯಗಳು ಸುದ್ದಿವಾಹಿನಿಗಳಲ್ಲಿ ವ್ಯಾಪಕವಾಗಿ ಬಿತ್ತರಗೊಂಡಿದ್ದವು. ಅಂದಿನಿಂದ ಘೋಷ್ ಅವರನ್ನು ಬಿಜೆಪಿಯಲ್ಲಿ ನಿರ್ಲಕ್ಷಿಸಲಾಗಿತ್ತು ಎನ್ನಲಾಗುತ್ತಿದೆ. ಈಗ, ಅವರ ಕುರಿತ ಅಸಮಾಧಾನ ಶಮನಗೊಂಡಿದೆ. ಮುಂಬರುವ ಚುನಾವಣೆಯಲ್ಲಿ ಅವರಿಗೆ ಪಕ್ಷವನ್ನು ಗೆಲುವಿನ ದಡ ಮುಟ್ಟಿಸುವ ಮಹತ್ತರ ಜವಾಬ್ದಾರಿ ನೀಡುವ ಸಾಧ್ಯತೆ ಇದೆ ಎನ್ನಲಾಗುತ್ತಿದ್ದು, ಇದೇ ಕಾರಣಕ್ಕೆ ಅವರಿಗೆ ಬಿಜೆಪಿ ಮತ್ತೆ ಮಣೆ ಹಾಕಿದೆ.

ಚಲಿಸುವ ವ್ಯಾನ್‌ನಲ್ಲಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ

ಫರೀದಾಬಾದ್ (ಪಿಟಿಐ): ಚಲಿಸುವ ವ್ಯಾನ್‌ನಲ್ಲಿ 25 ವರ್ಷದ ವಿವಾಹಿತ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಬಳಿಕ ಆಕೆಯನ್ನು ರಸ್ತೆಗೆ ಎಸೆದ ಘಟನೆ ಗುರುಗ್ರಾಮ–ಫರೀದಾಬಾದ್‌ನಲ್ಲಿ ಸೋಮವಾರ ತಡರಾತ್ರಿ ನಡೆದಿದೆ.

ಪ್ರಕರಣಕ್ಕೆ ಸಂಬಂಧಿಸಿ ಇಬ್ಬರನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ್ದ ವಾಹನವನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಸಂತ್ರಸ್ತೆಯ ಮುಖ ಮತ್ತು ತಲೆಗೆ ಗಂಭೀರ ಗಾಯಗಳಾಗಿವೆ. ಆಕೆಯ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಹೇಳಿಕೆ ನೀಡಲೂ ಆಕೆಗೆ ಸಾಧ್ಯವಾಗುತ್ತಿಲ್ಲ' ಎಂದು ತಿಳಿಸಿದ್ದಾರೆ. ಮೂವರು ಮಕ್ಕಳ ತಾಯಿಯ ಮೇಲಿನ ಅತ್ಯಾಚಾರ ಕೃತ್ಯವು 13 ವರ್ಷಗಳ ಹಿಂದೆ ಡಿಸೆಂಬರ್‌ನಲ್ಲಿ ನಡೆದ ನಿರ್ಭಯಾ ಪ್ರಕರಣ ನೆನಪಿಸಿದೆ. ಆರೋಪಿಗಳು ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದವರಾಗಿದ್ದು, ಫರೀದಾಬಾದ್‌ನಲ್ಲಿ ನೆಲಸಿದ್ದರು. ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

'ವ್ಯಾನಿನಿಂದ ಎಸೆದು ಪರಾರಿಯಾಗಿದ್ದರು'

'ಮಹಿಳೆ ಮನೆ ಸೇರಲು ವಾಹನಕ್ಕಾಗಿ ಕಾಯುತ್ತಿದ್ದಾಗ, ವ್ಯಾನ್‌ನಲ್ಲಿ ಬಂದ ಆರೋಪಿಗಳು ಡ್ರಾಪ್ ನೀಡುವುದಾಗಿ ತಿಳಿಸಿದ್ದಾರೆ. ಬಳಿಕ ಅವರು ಆಕೆಯನ್ನು ಗುರುಗ್ರಾಮದ ಕಡೆಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದಾರೆ. ರಾತ್ರಿ ಇಡೀ ಆಕೆಯನ್ನು ವಾಹನದಲ್ಲಿ ಸುತ್ತಿಸಿ, ಮುಂಜಾನೆ ಮೂರು ಗಂಟೆ ಸುಮಾರಿಗೆ ವ್ಯಾನ್ ಗಂಟೆಗೆ 90 ಕಿ.ಮೀ ವೇಗದಲ್ಲಿ ಸಾಗುತ್ತಿರುವಾಗಲೇ ಆಕೆಯನ್ನು ರಾಜಾ ಚೌಕ್ ಬಳಿ ರಸ್ತೆಗೆ ಎಸೆದು ಪರಾರಿಯಾಗಿದ್ದಾರೆ' ಎಂದು ಪೊಲೀಸರು ಹೇಳಿದರು.

ರಕ್ತ ಸುರಿಯುತ್ತಿದ್ದರೂ ಮಹಿಳೆ ಹೇಗೋ ತಮ್ಮ ಸಹೋದರಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಸ್ಥಳಕ್ಕೆ ಧಾವಿಸಿದ ಸಹೋದರಿ, ಅವರನ್ನು ಬಾದಶಾಹ್ ಖಾನ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಸಂತ್ರಸ್ತೆಯನ್ನು ದೆಹಲಿಗೆ ಕರೆದೊಯ್ಯಲು ವೈದ್ಯರು ಸಲಹೆ ನೀಡಿದ್ದರು. ಆದರೆ ಸಂತ್ರಸ್ತೆಯ ಕುಟುಂಬಸ್ಥರು ಫರೀದಾಬಾದ್‌ನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ತಿಳಿಸಿದರು.

ಅಕ್ರಮ ಹಣ ವರ್ಗಾವಣೆ ಆರೋಪ: ಇ.ಡಿ. ದಾಳಿ

₹5.12 ಕೋಟಿ ನಗದು ಪತ್ತೆ

ನವದೆಹಲಿ (ಪಿಟಿಐ): ಸೂಟ್‌ಕೇಸ್‌ನ ತುಂಬಾ ₹8.80 ಕೋಟಿ ಮೌಲ್ಯದ ಬಂಗಾರದ ಮತ್ತು ವಜ್ರದ ಆಭರಣಗಳು, ₹5.12 ಕೋಟಿ ನಗದು, ₹35 ಕೋಟಿ ಮೌಲ್ಯದ ಆಸ್ತಿ ಪತ್ರಗಳು, ಬ್ಯಾಗ್ ತುಂಬಾ ಬ್ಯಾಂಕ್‌ನ ಚೆಕ್‌ಬುಕ್‌ಗಳು...

– ನಾಪತ್ತೆಯಾಗಿರುವ ಹರಿಯಾಣದ ಕ್ರಿಮಿನಲ್ ಇಂದರ್‌ಜೀತ್ ಸಿಂಗ್ ಯಾದವ್ ಎಂಬುವರ ಮೇಲಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಗಳಿಗೆ ಸಂಬಂಧಿಸಿ ದೆಹಲಿಯ 'ಸರ್ವಪ್ರಿಯ ವಿಹಾರ' ಎಂಬ ವಸತಿ ಸಮುಚ್ಚಯದಲ್ಲಿ ಇರುವ ಮನೆಯೊಂದರ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ದಾಳಿ ನಡೆಸಿದಾಗ ವಶಕ್ಕೆ ಪಡೆದುಕೊಂಡ ವಸ್ತುಗಳಿವು.

ಇಂದರ್‌ಜೀತ್ ಅವರ ಅಕ್ರಮಗಳಲ್ಲಿ ಸಹಕಾರ ನೀಡುತ್ತಾರೆ ಎನ್ನಲಾದ ಅಮಾನ್ ಕುಮಾರ್ ಎಂಬುವರಿಗೆ ಸೇರಿದ ಮನೆ ಇದಾಗಿದೆ. ಮಂಗಳವಾರವೇ ಈ ಮನೆಯ ಮೇಲೆ ದಾಳಿ ನಡೆಸಲಾಗಿದೆ.

ತನಿಖೆಯು ಬುಧವಾರವೂ ಮುಂದುವರಿದಿದ್ದು, ಹಣ ಎಣಿಸುವ ಯಂತ್ರವನ್ನು ತರಿಸಿಕೊಂಡು ಪರಿಶೀಲನೆಯನ್ನು ಮುಂದುವರಿಸಲಾಗಿದೆ.

ಇಂದರ್‌ಜೀತ್ ಮತ್ತು ಅವರ ಸಹಚರರ ವಿರುದ್ಧ ಹರಿಯಾಣ ಮತ್ತು ಉತ್ತರ ಪ್ರದೇಶ ಪೊಲೀಸರು ದಾಖಲಿಸಿಕೊಂಡ ಒಟ್ಟು 14 ಎಫ್‌ಐಆರ್‌ಗಳಿಗೆ ಸಂಬಂಧಿಸಿ ಇ.ಡಿ. ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಡಿ.26 ಮತ್ತು 27ರಂದು ದೆಹಲಿ, ಗುರುಗ್ರಾಮ ಮತ್ತು ಹರಿಯಾಣದ ರೋಹಟಕ್‌ನಲ್ಲಿ ಅಧಿಕಾರಿಗಳು ದಾಳಿ ನಡೆಸಿದ್ದರು. ಅಪೋಲೊ ಗ್ರೀನ್ ಎನರ್ಜಿ ಲಿ. ಎಂಬ ಕಂಪನಿಯ ಮೇಲೆಯು ದಾಳಿ ನಡೆಸಲಾಗಿದೆ.



ಇ.ಡಿ. ಅಧಿಕಾರಿಗಳು ದಾಳಿ ನಡೆಸಿದಾಗ ಸಿಕ್ಕ ನಗದು –ಪಿಟಿಐ ಚಿತ್ರ

ಹತ್ಯೆ, ಕಮಿಷನ್, ಭೂಕಬಳಿಕೆ...

'ಇಂದರ್‌ಜೀತ್ ಯಾದವ್ ಅವರು ತಲೆಮರೆಸಿಕೊಂಡಿದ್ದು, ಸದ್ಯ ಯುಎಇಯಿಂದ ಕಾರ್ಯನಿರ್ವಹಿಸುತ್ತಾರೆ' ಎಂದು ಇ.ಡಿ. ಅಧಿಕಾರಿಗಳು ಹೇಳುತ್ತಾರೆ. ಇಂದರ್‌ಜೀತ್ ಕೊಲೆ, ಸುಲಿಗೆ, ಖಾಸಗಿ ಫೈನಾನ್ಶಿಯರ್‌ಗಳಿಂದ ಸಾಲ ಕೊಡಿಸುವುದು ಮತ್ತು ಸಾಲ ಮರುಪಾವತಿ ಮಾಡಿಸಿಕೊಡುವುದು, ಭೂಕಬಳಿಕೆ, ವಂಚನೆಯೂ ಸೇರಿ ಹಲವು ಹಿಂಸಾತ್ಮಕ ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ.

ಜೆಮ್ ರೆಕಾರ್ಡ್ಸ್ ಎಂಟರ್‌ಟೈನ್ಮೆಂಟ್ ಪ್ರೈ.ಲಿ. ಎಂಬ ಕಂಪನಿಯನ್ನು ಇವರು ನಡೆಸುತ್ತಿದ್ದಾರೆ. ಹರಿಯಾಣದ ಢಿಘಲ್ ಮತ್ತು ಝೂಝುರ್ ಎಂಬ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವ ಖಾಸಗಿ ಫೈನಾನ್ಶಿಯರ್‌ಗಳಿಂದ ಅಪೋಲೊ ಗ್ರೀನ್ ಎನರ್ಜಿ ಲಿ. ಕಂಪನಿ ಸೇರಿದಂತೆ ಹಲವು ಕಂಪನಿಗಳು ನಗದು ಮೂಲಕ ನೂರಾರು ಕೋಟಿ ಮೊತ್ತದ ಹಣವನ್ನು ಸಾಲ ಪಡೆಯಲು ಇವರು ಸಹಕಾರ ನೀಡುತ್ತಾರೆ.

ಫೈನಾನ್ಶಿಯರ್ ಪರವಾಗಿ ಸಾಲ ಪಡೆದವರನ್ನು ಶಸ್ತ್ರಾಸ್ತ್ರಗಳ ಮೂಲಕ ಬೆದರಿಸಿ, ರೌಡಿ ಗ್ಯಾಂಗ್‌ಗಳ ಮೂಲಕ ಹೆದರಿಸಿ ಸಾಲ ಮರುಪಾವತಿಯನ್ನೂ ಇಂದರ್‌ಜೀತ್ ಮಾಡಿಸಿಕೊಡುತ್ತಾರೆ. ಈ ಎರಡೂ ಅಕ್ರಮಗಳಿಂದ ಇವರು ದೊಡ್ಡ ಮೊತ್ತದ ಕಮಿಷನ್ ಪಡೆದುಕೊಳ್ಳುತ್ತಾರೆ.

ಐಷಾರಾಮಿ ಜೀವನ

- ನಗದು ರೂಪದಲ್ಲಿ ಸಾಲ ಕೊಡಿಸಿಕೊಡುವ ದಂಧೆ ಮೂಲಕವೇ ಇಂದರ್‌ಜೀತ್ ಅವರು ನೂರಾರು ಕೋಟಿ ಹಣ ಸಂಪಾದಿಸುತ್ತಾರೆ. ಬಂದ ಹಣದಿಂದ ಚರಾಸ್ತಿ ಖರೀದಿ, ಕಾರುಗಳ ಖರೀದಿ ಸೇರಿದಂತೆ ಐಷಾರಾಮಿ ಜೀವನ ನಡೆಸುತ್ತಾರೆ. ಆದರೆ, ಸರ್ಕಾರಕ್ಕೆ ಕಡಿಮೆ ಆದಾಯ ಇರುವ ಬಗ್ಗೆ ದಾಖಲಾತಿ ತೋರಿಸುತ್ತಾರೆ
- ಕೆಲವು ದಿನಗಳ ಹಿಂದೆ ನಡೆಸಿದ್ದ ದಾಳಿಯ ವೇಳೆ, ₹17 ಲಕ್ಷ ನಗದು, ಐದು ದುಬಾರಿ ಬೆಲೆಯ ಕಾರುಗಳನ್ನು ಇ.ಡಿ ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದರು. ಕೆಲವು ಬ್ಯಾಂಕ್ ಖಾತೆಗಳನ್ನು ರದ್ದು ಪಡಿಸಲಾಗಿತ್ತು
- ಇದೇ ವೇಳೆ, ಕಂಪನಿಗಳು ಮತ್ತು ಖಾಸಗಿ ಫೈನಾನ್ಶಿಯರ್‌ಗಳ ಮಧ್ಯೆ ಸಾಲದ ವ್ಯವಹಾರ ಮಾಡಿಸಿಕೊಡಲು ಇಂದ್ರಜಿತ್ ಅವರು ವೆಬ್ ಪೋರ್ಟಲ್‌ವೊಂದನ್ನು ಅಭಿವೃದ್ಧಿ ಪಡಿಸಿ, ಬಳಸುತ್ತಿದ್ದರು ಎಂದೂ ತಿಳಿದುಬಂದಿತ್ತು

ಆತಂಕ ನಿವಾರಿಸದ ಆಯೋಗ: ಟಿಎಂಸಿ

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಸಂಬಂಧಿಸಿ ಚುನಾವಣಾ ಆಯೋಗವು ನಮ್ಮ ಅಹವಾಲು ಆಲಿಸಿಲ್ಲ, ಆತಂಕ ನಿವಾರಿಸಿಲ್ಲ. ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರು ಆಕ್ರಮಣಕಾರಿ ಮನೋಭಾವ ಹೊಂದಿದ್ದಾರೆ' ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮುಖಂಡ ಅಭಿಷೇಕ್ ಬ್ಯಾನರ್ಜಿ ಆರೋಪಿಸಿದ್ದಾರೆ.

ಬುಧವಾರ ಇಲ್ಲಿ ಎಸ್‌ಐಆರ್ ಬಗ್ಗೆ ಸಿಇಸಿ ಅವರೊಂದಿಗೆ ಚರ್ಚೆ ನಡೆಸಿದ ಬಳಿಕ, ಅಭಿಷೇಕ್ ಬ್ಯಾನರ್ಜಿ ಸುದ್ದಿಗಾರರೊಂದಿಗೆ ಮಾತನಾಡಿದರು. 'ನಾವು ಮಾತು ಆರಂಭಿಸುತ್ತಿದ್ದಂತೆ ಸಿಇಸಿ ಸಹನೆ ಕಳೆದುಕೊಂಡರು. ಎಸ್‌ಐಆರ್ ವಿಷಯವಾಗಿ ನಾವು ಕಾನೂನು ಹೋರಾಟ ಮುಂದುವರಿಸುತ್ತೇವೆ' ಎಂದು ಅವರು ಹೇಳಿದರು.

'ಚುನಾವಣೆಯಲ್ಲಿ ಮತಕಳವು ಮತದಾರರ ಪಟ್ಟಿಯ ಮೂಲಕ ನಡೆಯುತ್ತಿದೆಯೇ ಹೊರತು, ಇವಿಎಂ ಮೂಲಕ ಅಲ್ಲ. ಮಹಾರಾಷ್ಟ್ರ, ಹರಿಯಾಣ ಮತ್ತು ಬಿಹಾರದಲ್ಲಿ ಈ ವಿಷಯವನ್ನೇ ಪರಿಣಾಮಕಾರಿಯಾಗಿ ಮತದಾರರ ಎದುರು ತೆರೆದಿಟ್ಟಿದ್ದರೆ ವಿರೋಧ ಪಕ್ಷಗಳು ಗೆಲ್ಲಬಹುದಿತ್ತು' ಎಂದು ಅವರು ಹೇಳಿದರು.

ಶಿವಲಿಂಗ ವಿರೂಪ: ಆರೋಪಿ ಸೆರೆ

ಹೈದರಾಬಾದ್: ವ್ಯಕ್ತಿಯೊಬ್ಬ ಶಿವಲಿಂಗವನ್ನು ವಿರೂಪಗೊಳಿಸಿದ ಘಟನೆ ಆಂಧ್ರಪ್ರದೇಶದ ಐತಿಹಾಸಿಕ ದ್ರಾಕ್ಷಿರಾಮ ದೇವಾಲಯದಲ್ಲಿ ನಡೆದಿದೆ.

ಆರೋಪಿಯನ್ನು ರಾಮಚಂದ್ರಪುರ ಮಂಡಲದ ತೋಟಪೇಟ ನಿವಾಸಿ ಶ್ರೀಲಂ ಶ್ರೀನಿವಾಸ್ (38) ಎಂದು ಗುರುತಿಸಲಾಗಿದ್ದು, ಸೋಮವಾರ ರಾತ್ರಿ ಶಿವಲಿಂಗವನ್ನು ವಿರೂಪಗೊಳಿಸಿದ್ದಾನೆ ಎಂದು ಡಾ. ಬಿ.ಆರ್. ಅಂಬೇಡ್ಕರ್ ಕೊನಸೀಮ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಮೀನಾ ಬುಧವಾರ ತಿಳಿಸಿದ್ದಾರೆ.

ಕರ್ನಾಟಕ ತಂಡದ ಯಶಸ್ಸಿನ ಓಟ

ದೇವದತ್ತ, ಮಯಂಕ್ ಭರ್ಜರಿ ಶತಕ • ಕರುಣ್ ನಾಯರ್ ಬಿರುಸಿನ ಆಟ • 67 ರನ್‌ಗಳಿಂದ ಸೋತ ಪುದುಚೇರಿ



ಶತಕ ದಾಖಲಿಸಿದ ಕರ್ನಾಟಕ ತಂಡದ ಮಯಂಕ್ ಅಗರವಾಲ್ (ಎಡ), ದೇವದತ್ತ ಪಡಿಕ್ಕಲ್ ಸಂಗ್ರಹ ಚಿತ್ರಗಳು

ಅಹಮದಾಬಾದ್: ಅಮೋಘ ಲಯದಲ್ಲಿರುವ ದೇವದತ್ತ ಪಡಿಕ್ಕಲ್ (113, 116ಎ) ಅವರು ನಾಲ್ಕು ಪಂದ್ಯಗಳಲ್ಲಿ ಮೂರನೇ ಶತಕ ಬಾರಿಸಿದರೆ, ನಾಯಕ ಮಯಂಕ್ ಅಗರವಾಲ್ (132, 124ಎ) ಮೊದಲ ಶತಕ ಗಳಿಸಿದರು. ಈ ಅನುಭವಿ ಆಟಗಾರರು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪುದುಚೇರಿ ವಿರುದ್ಧದ ಪಂದ್ಯದಲ್ಲಿ ಕರ್ನಾಟಕದ ಗೆಲುವಿನಲ್ಲಿ ಗಮನಸೆಳೆದರು.

ಎಡಿಎಸ್‌ಎ ರೈಲ್ವೆ ಮೈದಾನದಲ್ಲಿ ಬುಧವಾರ ನಡೆದ ಎಲೀಟ್ 'ಎ' ಗುಂಪಿನ ಪಂದ್ಯದಲ್ಲಿ ಕರ್ನಾಟಕ 67 ರನ್‌ಗಳ ಜಯ ಪಡೆಯಿತು. ಇದು ಹಾಲಿ ಚಾಂಪಿಯನ್ ತಂಡಕ್ಕೆ ಸತತ ನಾಲ್ಕನೇ ಗೆಲುವು. ಮಧ್ಯ ಪ್ರದೇಶ ಸಹ ನಾಲ್ಕು ಗೆಲುವು ಸಾಧಿಸಿದ್ದು ನೆಟ್‌ರನ್ ರೇಟ್ ಆಧಾರದಲ್ಲಿ ಅಗ್ರಸ್ಥಾನಲ್ಲಿದೆ. ಕರ್ನಾಟಕ ಎರಡನೇ ಸ್ಥಾನದಲ್ಲಿದೆ.

ಈ ಹಿಂದಿನ ಮೂರು ಪಂದ್ಯಗಳಲ್ಲಿ ಮೊದಲು ಬೌಲಿಂಗ್ ಮಾಡಿದ್ದ ಕರ್ನಾಟಕ, ಇಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಲು ನಿರ್ಧರಿಸಿತು. ಅದಕ್ಕೆ ತಕ್ಕಂತೆ ಮಯಂಕ್ ಮತ್ತು ಪಡಿಕ್ಕಲ್ ಮೊದಲ ವಿಕೆಟ್‌ಗೆ 228 ರನ್‌ಗಳ (37.5 ಓವರ್) ಭರ್ಜರಿ ಜೊತೆಯಾಟ ಆಡಿದರು. ತಂಡ 4 ವಿಕೆಟ್‌ಗೆ 363 ರನ್‌ಗಳ ಭಾರಿ ಮೊತ್ತ ದಾಖಲಿಸಿತು.

ಒಂದು ಹಂತದಲ್ಲಿ ಪುದುಚೇರಿ 20 ಓವರುಗಳಲ್ಲಿ 1 ವಿಕೆಟ್‌ಗೆ 108 ರನ್ ಗಳಿಸಿ ಹೋರಾಟ ನಡೆಸುವಂತೆ ಕಂಡಿತು. ಆದರೆ ಕರುಣ್ ನಾಯರ್ (38ಕ್ಕೆ2) ಈ ಹಂತದಲ್ಲಿ ಎರಡು ವಿಕೆಟ್ ಪಡೆದು ಪುದುಚೇರಿ ಹೋರಾಟಕ್ಕೆ ಕಡಿವಾಣ ಹಾಕಿದರು. ನಂತರ ವಿದ್ವತ್ ಕಾವೇರಪ್ಪ (30ಕ್ಕೆ2) ಮತ್ತು ಮನ್ವಂತ್ ಕುಮಾರ್ (52ಕ್ಕೆ3) ನಿಯಮಿತವಾಗಿ ವಿಕೆಟ್‌ಗಳನ್ನು ಪಡೆದರು.

ಆರಂಭ ಆಟಗಾರ ನೇಯನ್ ಶ್ಯಾಮ್ ಕಂಗಾಯನ್ (68, 66ಎ) ಮತ್ತು ಕೆಳ ಮಧ್ಯಮ ಕ್ರಮಾಂಕದಲ್ಲಿ ಜಯಂತ್ ಯಾದವ್ (54, 35ಎ) ಅವರು ಹೋರಾಟ ತೋರಿದರು. ತಂಡ ಕೊನೆಯ ಎಸೆತದಲ್ಲಿ 296 ರನ್‌ಗಳಿಗೆ ಆಲೌಟ್ ಆಯಿತು.

ಇದಕ್ಕೆ ಮೊದಲು, ಮಯಂಕ್ ಮತ್ತು ಪಡಿಕ್ಕಲ್ ಆಕರ್ಷಕ ಶತಕಗಳ ಮೂಲಕ ತಂಡಕ್ಕೆ ಭದ್ರ ಬುನಾದಿ ಒದಗಿಸಿದರು. ಮಯಂಕ್ 15 ಬೌಂಡರಿಗಳ ಜೊತೆ 2 ಸಿಕ್ಸರ್ ಬಾರಿಸಿದರೆ, ಪಡಿಕ್ಕಲ್ ಇನಿಂಗ್ಸ್‌ನಲ್ಲಿ 10 ಬೌಂಡರಿಗಳ ಜೊತೆಗೆ ನಾಲ್ಕು ಸಿಕ್ಸರ್‌ಗಳು ಒಳಗೊಂಡಿದ್ದವು. ಪಡಿಕ್ಕಲ್ ಅವರು ನಾಲ್ಕು ಪಂದ್ಯಗಳಿಂದ 101.50ರ ಸರಾಸರಿಯಲ್ಲಿ 406 ರನ್ ಗಳಿಸಿದ್ದಾರೆ.

ಲಯದಲ್ಲಿರುವ ಮತ್ತೊಬ್ಬ ಆಟಗಾರ ಕರುಣ್ ನಾಯರ್ ಅವರೂ ಬಿರುಸಿನ ಆಟ ಆಡಿ 34 ಎಸೆತಗಳಲ್ಲಿ ಅಜೇಯ 62 ರನ್‌ಗಳನ್ನು ಸೂರೆ ಮಾಡಿದರು. ಇದರಲ್ಲಿ ನಾಲ್ಕು ಬೌಂಡರಿ, ನಾಲ್ಕು ಸಿಕ್ಸರ್‌ಗಳಿದ್ದವು. ಯುವತಾರೆ ಸ್ಮರಣ್ ರವಿಚಂದ್ರನ್ (21) ಮತ್ತು ಅಭಿನವ್ ಮನೋಹರ್ (ಅಜೇಯ 21, 6ಎ) ಕರ್ನಾಟಕದ ಮೊತ್ತ 350 ದಾಟಲು ನೆರವಾದರು.

ರಿಷಭ್ ಪಂತ್ ಮತ್ತೆ ವಿಫಲ; ಒಡಿಶಾ ವಿರುದ್ಧ ದೆಹಲಿಗೆ ಸೋಲು

ಬೆಂಗಳೂರು (ಪಿಟಿಐ): ಭಾರತ ತಂಡದ ವಿಕೆಟ್ ಕೀಪರ್–ಬ್ಯಾಟರ್ ರಿಷಭ್ ಪಂತ್ ಸೇರಿದಂತೆ ಪ್ರಮುಖ ಬ್ಯಾಟರ್‌ಗಳು ವಿಫಲರಾಗುವ ಮೂಲಕ ದೆಹಲಿ ತಂಡ ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಯಲ್ಲಿ ಈ ಬಾರಿ ಮೊದಲ ಸೋಲು ಕಂಡಿತು.

ಆಲೂರಿನ ಕೆಎಸ್‌ಸಿಎ ಮೈದಾನದಲ್ಲಿ ಒಡಿಶಾ ತಂಡವು ಬುಧವಾರ ನಡೆದ 'ಡಿ' ಗುಂಪಿನ ಈ ಪಂದ್ಯದಲ್ಲಿ 79 ರನ್‌ಗಳ ಸುಲಭ ಜಯ ಸಾಧಿಸಿತು. ನ್ಯೂಜಿಲೆಂಡ್ ವಿರುದ್ಧ ಮೂರು ಪಂದ್ಯಗಳ ಏಕದಿನ ಸರಣಿಗೆ ಆಯ್ಕೆಗಾರರು ಜನವರಿ ಮೊದಲ ವಾರ ತಂಡ ಪ್ರಕಟಿಸಲು ಸಜ್ಜಾಗಿದ್ದು, ಪಂತ್ ಆಟದ ಮೇಲೆ ಎಲ್ಲರ ಕಣ್ಣು ನೆಟ್ಟಿತ್ತು.

ಆದರೆ ಬೀಸುಹೊಡೆತಗಳ ಆಟಗಾರ 24 ರನ್ ಗಳಿಸಲಷ್ಟೇ ಶಕ್ತರಾದರು. ಒಡಿಶಾ ತಂಡದ 8 ವಿಕೆಟ್‌ಗೆ 272 ರನ್‌ಗಳಿಗೆ ಉತ್ತರವಾಗಿ ದೆಹಲಿ ತಂಡವು 43.3 ಓವರುಗಳಲ್ಲಿ 193 ರನ್‌ಗಳಿಗೆ ಆಲೌಟ್ ಆಯಿತು.

ಒಡಿಶಾ ಈ ಗೆಲುವಿನೊಡನೆ 12 ಪಾಯಿಂಟ್‌ಗಳೊಡನೆ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು. ನಿವ್ವಳ ರನ್ ದರವೂ ಸುಧಾರಿಸಿದ ಕಾರಣ ಅದು ಇಷ್ಟೇ ಅಂಕ ಗಳಿಸಿದ ರೈಲ್ವೇಸ್, ಹರಿಯಾಣ ಮತ್ತು ದೆಹಲಿ ತಂಡಗಳನ್ನು ಹಿಂದೆಹಾಕಿತು.

ಪಂತ್ ಈ ಟೂರ್ನಿಯಲ್ಲಿ ಕ್ರಮವಾಗಿ 5, 70, 22 ಮತ್ತು 24 ರನ್‌ಗಳನ್ನಷ್ಟೇ ಗಳಿಸಿದ್ದಾರೆ. ಮಧ್ಯಮ ವೇಗಿ ದೇವವ್ರತ ಪ್ರಧಾನ್ (28ಕ್ಕೆ3) ಮತ್ತು ಸಂಬಿತ್ ಬರಲ್ (34ಕ್ಕೆ3) ದೆಹಲಿ ಕುಸಿತಕ್ಕೆ ಕಾರಣರಾದರು. ಒಡಿಶಾ ಪರ ನಾಯಕ ಬಿಪ್ಲಬ್ ಸಮಂತರಾಯ್ 72 ಎಸೆತಗಳಲ್ಲಿ 74 ರನ್ ಗಳಿಸಿ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಒಡಿಶಾ: 50 ಓವರುಗಳಲ್ಲಿ 8ಕ್ಕೆ 272 (ಓಂ ಟಿ.ಮುಂಢೆ 26, ಸ್ವಸ್ತಿಕ್ ಸಮಾಲ್ 28, ಗೋವಿಂದ ಪೊದ್ದಾರ್ 35, ಬಿಪ್ಲಬ್ ಸಮಂತರಾಯ್ 72; ಪ್ರಿನ್ಸ್ ಯಾದವ್ 57ಕ್ಕೆ2, ಹೃತಿಕ್ ಶೊಕೀನ್ 27ಕ್ಕೆ4); ದೆಹಲಿ: 42.3 ಓವರುಗಳಲ್ಲಿ 193 (ಆಯುಷ್ ದೊಸೇಜ 28, ರಿಷಭ್ ಪಂತ್ 24, ಹರ್ಷ್ ತ್ಯಾಗಿ 43, ಹೃತಿಕ್ ಶೊಕೀನ್ 32, ದಿವಿಜ್ ಮೆಹ್ರಾ 27; ರಾಜೇಶ್ ಮೊಹಾಂತಿ 42ಕ್ಕೆ2, ದೇವವ್ರತ ಪ್ರಧಾನ್ 28ಕ್ಕೆ3, ಸಂಬಿತ್ ಬರಲ್ 34ಕ್ಕೆ3). ಪಂದ್ಯದ ಆಟಗಾರ: ಬಿಪ್ಲಬ್ ಸಮಂತರಾಯ್.

ಸ್ಕೋರ್ ಕಾರ್ಡ್

ಕರ್ನಾಟಕ: 50 ಓವರುಗಳಲ್ಲಿ 4 ವಿಕೆಟ್‌ಗೆ 363
ಮಯಂಕ್ ಸಿ ಅಮನ್ ಬಿ ಸಿಂಗ್ 132 (124ಎ, 4x15, 6x2)
ದೇವದತ್ತ ಸಿ ಮತ್ತು ಬಿ ಯಾದವ್ 113 (116ಎ, 4x10, 6x4)
ಕರುಣ್ ಔಟಾಗದೇ 62 (34ಎ, 4x4, 6x4)
ಸ್ಮರಣ್ ಸಿ ಅಮನ್ ಬಿ ವಿಶಾಲ್ 21 (17ಎ, 4x2)
ಮನ್ವಂತ್ ಸಿ ಕಾಳೆ ಬಿ ವಾಫಾನಿ 3 (4ಎ)
ಅಭಿನವ್ ಔಟಾಗದೇ 21 (6ಎ, 4x2, 6x2)
ಇತರೆ: 11 (ಲೆಗ್ ಬೈ 1, ನೋಬಾಲ್ 1, ವೈಡ್ 9)
ವಿಕೆಟ್ ಪತನ: 1–228 (ದೇವದತ್ತ ಪಡಿಕ್ಕಲ್, 37.5), 2–266 (ಮಯಂಕ್ ಅಗರವಾಲ್, 41.4), 3–322 (ರವಿಚಂದ್ರನ್ ಸ್ಮರಣ್, 47.1), 4–338 (ಮನ್ವಂತ್ ಕುಮಾರ್, 48.4).
ಬೌಲಿಂಗ್: ವಿಶಾಲ್ ಖೋಕರ್ 8–0–76–1; ಪಾರ್ಥ ವಾಫಾನಿ 9–1–73–1; ಅಮನ್ ಖಾನ್ 5–0–29–0; ಜಯಂತ್ ಯಾದವ್ 9–1–41–1; ಸಾಗರ್ ಉದೇಶಿ 10–0–64–0; ಸಿದಕ್ ಸಿಂಗ್ 9–0–79–1.

ಪುದುಚೇರಿ: 50 ಓವರುಗಳಲ್ಲಿ 296
ನೆಯನ್ ಶ್ಯಾಮ್ ವಿ ವಿದ್ವತ್ ಬಿ ಕರುಣ್ 68 (66ಎ, 4x9, 6x1)
ಅಜಯ್ ಅರೋರಾ ಬಿ ಶ್ರೀಶ 32 (41ಎ, 4x4 6x1)
ಜಶ್ವಂತ್ ಎಲ್‌ಬಿಡಬ್ಲ್ಯು ಬಿ ಕರುಣ್ 14 (21ಎ, 4x2)
ಮೋಹಿತ್ ಎಲ್‌ಬಿಡಬ್ಲ್ಯು ಬಿ ವಿದ್ವತ್ 22 (40ಎ, 4x10, 6x4)
ಅಮನ್ ಖಾನ್ ಸಿ ಶ್ರೇಯಸ್ ಬಿ ವಿದ್ವತ್ 34 (20ಎ, 4x2, 6x3)
ವಿಘ್ನೇಶ್ವರನ್ ಸಿ ಶ್ರೀಶ ಬಿ ಶ್ರೇಯಸ್ 31 (44ಎ, 4x2)
ಜಯಂತ್ ಬಿ ಮನ್ವಂತ್ 54 (35ಎ, 4x4, 6x2)
ಸಿದಕ್ ಸಿಂಗ್ ಸಿ ಅಭಿನವ್ ಬಿ ಅಭಿಲಾಷ್ 27 (22ಎ, 4x1, 6x3)
ಸಾಗರ್ ಉದೇಶಿ ಬಿ ಮನ್ವಂತ್ 0 (1ಎ)
ಪಾರ್ಥ ವಾಫಾನಿ ಬಿ ಮನ್ವಂತ್ 0 (7ಎ)
ವಿಶಾಲ್ ಔಟಾಗದೇ 1 (3ಎ)
ಇತರೆ: 13 (ಬೈ 5, ಲೆಗ್‌ಬೈ 1, ವೈಡ್ 7)
ವಿಕೆಟ್ ಪತನ: 1–78 (ಅಜಯ್ ಅರೋರಾ, 13.6), 2–108 (ಜಶ್ವಂತ್ ಶ್ರೀರಾಮ್, 19.5), 3–128 (ನೆಯನ್ ಶ್ಯಾಮ್ ಕಂಗಾಯನ್, 23.2), 4–177 (ಅಮನ್ ಹಕೀಮ್ ಖಾನ್, 30.3), 5–182 (ಮೋಹಿತ್ ಕಾಳೆ, 32.6), 6–264 (ಜಯಂತ್ ಯಾದವ್, 43.6), 7–275 (ವಿಘ್ನೇಶ್ವರನ್ ಮಾರಿಮುತ್ತು, 44.6), 8–276 (ಸಾಗರ್ ಉದೇಶಿ, 45.2), 9–286 (ಪಾರ್ಥ ವಾಫಾನಿ, 47.3), 10–296 (ಸಿದಕ್ ಸಿಂಗ್, 49.6).
ಬೌಲಿಂಗ್: ವಿದ್ವತ್ ಕಾವೇರಪ್ಪ 9–0–30–2; ಅಭಿಲಾಷ್ ಶೆಟ್ಟಿ 9–0–52–1; ಶ್ರೀಶ ಆಚಾರ್ 10–0–46–1; ಮನ್ವಂತ್ ಕುಮಾರ್ ಎಲ್. 8–0–52–3; ಶ್ರೇಯಸ್ ಗೋಪಾಲ್ 9–0–72–1; ಕರುಣ್ ನಾಯರ್ 5–0–38–2.
ಪಂದ್ಯದ ಆಟಗಾರ: ಮಯಂಕ್ ಅಗರವಾಲ್

ಫಲಿತಾಂಶ: ಕರ್ನಾಟಕ ತಂಡಕ್ಕೆ 67 ರನ್‌ಗಳ ಜಯ

ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು !

ಫಿಫಾ ರೆಫ್ರಿ ಪಟ್ಟಿಯಲ್ಲಿ ಭಾರತದ ಮೂವರು

ನವದೆಹಲಿ (ಪಿಟಿಐ): ಒಬ್ಬ ಮಹಿಳೆ ಸೇರಿ ಭಾರತದ ಇನ್ನೂ ಮೂವರು ರೆಫ್ರಿಗಳು, ವಿಶ್ವ ಫುಟ್‌ಬಾಲ್ ಫೆಡರೇಷನ್‌ನ (ಫಿಫಾ) ರೆಫ್ರಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಬುಧವಾರ ತಿಳಿಸಿದೆ.

ಗುಜರಾತ್‌ನ ರಚನಾ ಕುಮಾರಿ ಅವರು ಫಿಫಾದ ಮಹಿಳಾ ರೆಫ್ರಿಗಳ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ. ಪುದುಚೇರಿಯ ಅಶ್ವಿನ್ ಕುಮಾರ್ ಮತ್ತು ದೆಹಲಿಯ ಆದಿತ್ಯ ಪುರಕಾಯಸ್ಥ ಅವರೂ ರೆಫ್ರಿಗಳ ಪಟ್ಟಿಗೆ ಸೇರಿದ್ದಾರೆ. ಕುಮಾರ್ ಮತ್ತು ಪುರಕಾಯಸ್ಥ ಅವರು ಕ್ವಾಲಾಲಂಪುರದಲ್ಲಿ ನಡೆದ ಎಎಫ್‌ಸಿ ರೆಫ್ರಿ ಅಕಾಡೆಮಿ ಕೋರ್ಸ್ ಪೂರೈಸಿದ್ದಾರೆ. ಈ ಮೊದಲು ಪುದುಚೇರಿಯ ಮುರಳೀಧರನ್ ಪಾಂಡುರಂಗನ್ ಮತ್ತು ಮಹಾರಾಷ್ಟ್ರದ ಪೀಟರ್ ಕ್ರಿಸ್ಟೋಫರ್ ಅವರು ಫಿಫಾ ಅಸಿಸ್ಟೆಂಟ್ ರೆಫ್ರಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದರು.

ಮಾಜಿ ಕ್ರಿಕೆಟಿಗ ಡೇಮಿಯನ್ ಗಂಭೀರ

ಬ್ರಿಸ್ಬೇನ್ (ಎಪಿ): ಆಸ್ಟ್ರೇಲಿಯಾದ ಮಾಜಿ ಕ್ರಿಕೆಟಿಗ ಡೇಮಿಯನ್ ಮಾರ್ಟಿನ್ ಅವರನ್ನು ಪ್ರಜ್ಞಾಹೀನ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮಾಧ್ಯಮಗಳು ಬುಧವಾರ ವರದಿ ಮಾಡಿವೆ.



ಮಾರ್ಟಿನ್ ಅವರು ಮೆದುಳಿನ ಉರಿಯೂತ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅಸ್ವಸ್ಥರಾದ ಕಾರಣ ಅವರನ್ನು ಡಿ. 26ರಂದು ಗೋಲ್ಡ್‌ಕೋಸ್ಟ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಿದುಳು ಮತ್ತು ಬೆನ್ನುಹುರಿಯ ಭಾಗದ ಪೊರೆಯ ಉರಿಯೂತವಾಗಿದೆ. 'ಅವರಿಗೆ ಅತ್ಯಾಧುನಿಕ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಮತ್ತೊಬ್ಬ ಹಿರಿಯ ಕ್ರಿಕೆಟಿಗ ಹಾಗೂ ಮಾರ್ಟಿನ್ ಸ್ನೇಹಿತ ಆ್ಯಡಂ ಗಿಲ್‌ಕ್ರಿಸ್ಟ್ ಅವರು 'ದಿ ಆಸ್ಟ್ರೇಲಿಯನ್' ಪತ್ರಿಕೆಗೆ ತಿಳಿಸಿದ್ದಾರೆ.

ಆಸ್ಟ್ರೇಲಿಯಾದ ಮಾಜಿ ಬ್ಯಾಟರ್ ಡ್ಯಾರೆನ್ ಲೀಮನ್ ಸೇರಿ ಹಲವರು ಅವರ ಚೇತರಿಕೆ ಹಾರೈಸಿ ಜಾಲತಾಣದಲ್ಲಿ ಸಂದೇಶ ಹಾಕಿದ್ದಾರೆ.

ಅತ್ಯುತ್ತಮ ಸ್ಟ್ರೋಕ್‌ಮೇಕರ್ ಗಳಲ್ಲಿ ಒಬ್ಬರಾದ ಮಾರ್ಟಿನ್ ಅವರು ಸ್ಟೀವ್ ವಾ ನೇತೃತ್ವದ ಪ್ರಬಲ ಆಸ್ಟ್ರೇಲಿಯಾ ತಂಡದ ಪ್ರಮುಖ ಬ್ಯಾಟರ್ ಆಗಿದ್ದರು. ಟೆಸ್ಟ್‌ಗಳಲ್ಲಿ 46.37ರ ಸರಾಸರಿಯಲ್ಲಿ 4,406 ರನ್ ಗಳಿಸಿದ್ದರು. ಇದರಲ್ಲಿ 13 ಶತಕಗಳು ಒಳಗೊಂಡಿವೆ. 208 ಏಕದಿನ ಪಂದ್ಯಗಳಲ್ಲಿ 5346 ರನ್ ಗಳಿಸಿದ್ದು 40.8ರ ಸರಾಸರಿ ಹೊಂದಿದ್ದರು. 2006ರಲ್ಲಿ ನಿವೃತ್ತರಾದ ನಂತರ ಕೆಲಕಾಲ ವೀಕ್ಷಕ ವಿವರಣೆಗಾರರಾಗಿದ್ದರು.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

EXECUTIVE / SENIOR EXECUTIVE ELECTRICAL MAINTENANCE

No. of Positions : 3
Work Location : Belur Plant (Dharwad) and Kumbalagodu Plant (Bangalore)
Education : Diploma (Electrical) or ITI (electrical)
Experience : -10+ years of proven experience in a similar role, preferably in the media industry.

- In Depth knowledge of Siemens, Lenze drives & Mitsubishi PLC.
- Problem solving- Identifying & resolving machine problem issues efficiently & effectively.
- Spares and service co-ordination for other TPML plants related to Hiline machinery & utilities
- Plan daily maintenance activities and monitor their execution
- Effective Implementation of Preventive Maintenance / Predictive Maintenance Systems.
- Minimize equipment downtime, monitor & take corrective actions to ensure maintenance targets.

Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಪ್ರೊ ಕುಸ್ತಿ: ಅಮನ್‌ಗೆ ಹೆಚ್ಚಿನ ಮೂಲಬೆಲೆ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಅಮನ್ ಸೆಹ್ರಾವತ್ ಅವರು ಜನವರಿ 3ರಂದು ನಡೆಯುವ ಪ್ರೊ ಕುಸ್ತಿ ಲೀಗ್ ಹರಾಜಿನಲ್ಲಿ ₹18 ಲಕ್ಷ ಮೂಲಬೆಲೆ ಹೊಂದಿದ್ದಾರೆ. ಅತಿ ಹೆಚ್ಚಿನ ಮೌಲ್ಯ ಪಡೆದಿರುವ ಭಾರತದ ಕುಸ್ತಿಪಟುವೆನಿಸಿದ್ದಾರೆ.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಯುಯಿ ಸುಸಾಕಿ ಮತ್ತು ಯುಸ್ನೆಲಿಸ್ ಗುಝ್ಮಾನ್ ಲೊಪೆಝ್ ಅವರೂ ಇದೇ ಮೊತ್ತದ ಮೌಲ್ಯ ಹೊಂದಿದ್ದಾರೆ. ಕುಸ್ತಿ ಲೀಗ್ ಜ. 15 ರಿಂದ ಫೆ. 1ರ ವರೆಗೆ ನೋಯ್ಡಾದ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ. ವಿಶ್ವ ಮತ್ತು ಕಾಮನ್‌ವೆಲ್ತ್ ಗೇಮ್ಸ್ ಪದಕ ವಿಜೇತ ದೀಪಕ್ ಪೂನಿಯಾ ಅವರಿಗೆ ₹10 ಲಕ್ಷ ಮೂಲಬೆಲೆ ನಿಗದಿಯಾಗಿದೆ.

ಆರು ಫ್ರ್ಯಾಂಚೈಸಿಗಳು ಭಾಗವಹಿಸಲಿವೆ. ಹರಿಯಾಣ ಥಂಡರ್ಸ್, ಟೈಗರ್ಸ್ ಆಫ್ ಮುಂಬೈ ದಂಗಲ್ಸ್, ಪಂಜಾಬ್ ರಾಯಲ್ಸ್, ಮಹಾರಾಷ್ಟ್ರ ಕೇಸರಿ, ಡೆಲ್ಲಿ ದಂಗಲ್ ವಾರಿಯರ್ಸ್ ಮತ್ತು ಯುಪಿ ಡಾಮಿನೇಟರ್ಸ್ ಈ ತಂಡಗಳಾಗಿವೆ.

ಸರ್ಫರಾಜ್ ಮಿಂಚಿನ ಶತಕ

ಜೈಪುರ (ಪಿಟಿಐ): ಅಮೋಘ ಲಯದಲ್ಲಿರುವ ಸರ್ಫರಾಜ್ ಖಾನ್ ವರ್ಷದ ಕೊನೆಯ ದಿನ 75 ಎಸೆತಗಳಲ್ಲಿ 14 ಸಿಕ್ಸರ್ ಒಳಗೊಂಡಂತೆ 157 ರನ್ ಸಿಡಿಸಿದರು. ಅವರ ಅಬ್ಬರದ ಆಟದಿಂದ ಮುಂಬೈ ತಂಡ 'ಸಿ' ಗುಂಪಿನ ವಿಜಯ್ ಹಜಾರೆ ಟೂರ್ನಿ ಪಂದ್ಯದಲ್ಲಿ ಬುಧವಾರ ಗೋವಾ ತಂಡವನ್ನು 87 ರನ್‌ಗಳಿಂದ ಮಣಿಸಿ ನಾಕೌಟ್ ಅವಕಾಶ ಉಜ್ವಲಗೊಳಿಸಿತು.

ಸೈಯ್ಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲೂ ರನ್ ಹೊಳೆ ಹರಿಸಿದ್ದ ಸರ್ಫರಾಜ್ 56 ಎಸೆತಗಳಲ್ಲಿ ಶತಕ ದಾಟಿದರು. ಮುಂಬೈ 8 ವಿಕೆಟ್‌ಗೆ 444 ರನ್ ಪೇರಿಸಿತು. ಸರ್ಫರಾಜ್ ಅವರ ಸಹೋದರ ಮುಶೀರ್ 60 ರನ್ ಗಳಿಸಿದರೆ, ಹಾರ್ದಿಕ್ ತಮೋರೆ 53 ರನ್ ಬಾರಿಸಿದರು.

ಈ ಭಾರಿ ಸವಾಲಿನೆದುರು ಗೋವಾ ಸುಲಭವಾಗಿ ಶರಣಾಗಲಿಲ್ಲ. 9 ವಿಕೆಟ್‌ಗೆ 357 ರನ್ ಗಳಿಸಿ ಹೋರಾಟ ತೋರಿತು. ಅಭಿನವ್ ತೇಜರಾಣಾ 100 ರನ್ (70ಎ, 4x5, 6x8) ಬಾರಿಸಿದರು. ನಾಯಕ ದೀಪರಾಜ್ 28 ಎಸೆತಗಳಲ್ಲಿ 70 ರನ್ (4x4, 6x7) ಚಚ್ಚಿದರು. ಶಾರ್ದೂಲ್ ಠಾಕೂರ್ 20 ರನ್‌ಗೆ 3 ವಿಕೆಟ್ ಪಡೆದರು.

ಪಾಲ್ಗೊಳ್ಳುವಿಕೆ ಖಚಿತಪಡಿಸಿ: ಕ್ಲಬ್‌ಗಳಿಗೆ ಎಐಎಫ್‌ಎಫ್ ವಿನಂತಿ

ನವದೆಹಲಿ (ಪಿಟಿಐ): ಈಗಾಗಲೇ ವಿಳಂಬವಾಗಿರುವ ಇಂಡಿಯನ್ ಸೂಪರ್ ಲೀಗ್‌ನಲ್ಲಿ (ಐಎಸ್‌ಎಲ್) ಭಾಗವಹಿಸುವ ಬಗ್ಗೆ ಖಚಿತಪಡಿಸುವಂತೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಬುಧವಾರ ಕ್ಲಬ್‌ಗಳಿಗೆ ಕೇಳಿದೆ.

ತಂಡಗಳು ಪಾಲ್ಗೊಳ್ಳುವುದನ್ನು ಖಚಿತಪಡಿಸಿದರಷ್ಟೇ, ವಿಶ್ವ ಫುಟ್‌ಬಾಲ್ ಸಂಸ್ಥೆಯಾದ ಫಿಫಾಕ್ಕೆ ಲೀಗ್‌ನಲ್ಲಿ ನಡೆಯುವ ಪಂದ್ಯಗಳ ನಿಖರವಾದ ಸಂಖ್ಯೆಯನ್ನು ನೀಡಲು ಫೆಡರೇಷನ್‌ಗೆ ಸಾಧ್ಯವಾಗಲಿದೆ. 2025–26ನೇ ಸಾಲಿನ ಐಎಸ್‌ಎಲ್ ಇನ್ನೂ ಆರಂಭವಾಗಿಲ್ಲ. ತಂಡಗಳು ಕಡ್ಡಾಯ 24 ಪಂದ್ಯಗಳನ್ನು ಆಡಲು ಸಾಧ್ಯವಾಗುವುದು ಅನುಮಾನ. ಹೀಗಾಗಿ, ಲೀಗ್‌ನಲ್ಲಿ ಕಡ್ಡಾಯವಾಗಿ ಆಡಬೇಕಾದ ಪಂದ್ಯಗಳ ಸಂಖ್ಯೆಯನ್ನು ಈ ಬಾರಿ ಕಡಿಮೆ ಮಾಡುವಂತೆ ಐಎಸ್‌ಎಲ್ ಕ್ಲಬ್‌ಗಳು ಎಐಎಫ್‌ಎಫ್‌ಗೆ ಕೋರಿವೆ.

ಪಂದ್ಯಗಳ ಸಂಖ್ಯೆ ಕಡಿಮೆಯಾದರೆ, ಅರ್ಹ ಕ್ಲಬ್‌ಗಳು ಎಫ್‌ಸಿ ಚಾಂಪಿಯನ್ಸ್ ಲೀಗ್ 2ರಲ್ಲಿ ಆಡಲು ಸಾಧ್ಯವಾಗಲಿದೆ.

2025–26ನೇ ಸಾಲಿನ ಐಎಸ್‌ಎಲ್ ಲೀಗ್ ಯಾವ ರೀತಿ ನಡೆಸಬೇಕೆಂದು ನಿರ್ಧರಿಸಲು ಕ್ಲಬ್‌ಗಳ ಪ್ರತಿನಿಧಿಗಳು ಮತ್ತು ಎಐಎಫ್‌ಎಫ್ ರಚಿಸಿದ ಸಮಿತಿ ಈವರೆಗೆ ಐದು ಸಭೆಗಳನ್ನು ನಡೆಸಿವೆ.

ಕನಿಷ್ಠ 24 ಪಂದ್ಯ ಆಡುವುದನ್ನು ಕಡ್ಡಾಯ ಮಾಡುವ ನಿಯಮವನ್ನು ಈ ಬಾರಿ ಸಡಿಲಿಸಲು ಏಷ್ಯನ್ ಫುಟ್‌ಬಾಲ್ ಕಾನ್ಫಡರೇಷನ್ ಬಳಿ ಚರ್ಚಿಸುವಂತೆ ಕ್ಲಬ್‌ಗಳು ಡಿ. 28ರಂದು ನಡೆದ ಸಭೆಯಲ್ಲಿ ಎಐಎಫ್‌ಎಫ್‌ಗೆ ಮನವಿ ಮಾಡಿವೆ.

ಫೆಬ್ರುವರಿ ಮೊದಲ ವಾರದಲ್ಲಿ 2025–26ನೇ ಸಾಲಿನ ಐಎಸ್‌ಎಲ್ ಋತು ಆರಂಭಿಸಲು ಎಐಎಫ್‌ಎಫ್ ಉದ್ದೇಶಿಸಿದೆ.

ಬೆಂಗಳೂರು ಓಪನ್ ಟೆನಿಸ್: ಪ್ರಜ್ವಲ್ ದೇವ್‌ಗೆ ವೈಲ್ಡ್‌ಕಾರ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಪ್ರಜ್ವಲ್ ದೇವ್ ಅವರು ಇದೇ 5ರಿಂದ 11ರವರೆಗೆ ನಡೆಯಲಿರುವ 10ನೇ ಬೆಂಗಳೂರು ಓಪನ್ ಟೆನಿಸ್ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ. ಎಟಿಪಿ ಚಾಲೆಂಜರ್ ಟೂರ್ ಮಟ್ಟದ ಈ ಟೂರ್ನಿಯು ಕಬ್ಬನ್ ಪಾರ್ಕ್‌ನ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯಲಿವೆ.

'ಬೆಂಗಳೂರು ಓಪನ್ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ದೊರಕಿರುವುದು ಹೆಮ್ಮೆಯ ಕ್ಷಣ. ತವರು ನೆಲ ಬೆಂಗಳೂರಿನಲ್ಲಿ ನಡೆಯಲಿರುವ ಜಾಗತಿಕ ಮಟ್ಟದ ಈ ಟೂರ್ನಿಯು ನಮ್ಮ ಸಾಮರ್ಥ್ಯ ಪರೀಕ್ಷೆಗೆ ಅವಕಾಶವಾಗಿದೆ' ಎಂದು ಪ್ರಜ್ವಲ್ ಪ್ರತಿಕ್ರಿಯಿಸಿದ್ದಾರೆ.

29 ವರ್ಷ ವಯಸ್ಸಿನ ಮೈಸೂರಿನ ಆಟಗಾರ ಭುವನೇಶ್ವರದಲ್ಲಿ ನವೆಂಬರ್‌ನಲ್ಲಿ ನಡೆದ ಐಟಿಎಫ್ ವಿಶ್ವ ಟೆನಿಸ್ ಟೂರ್ ಎಂ15 ಟೂರ್ನಿಯ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಅವರು ಪ್ರಸ್ತುತ ಎಟಿಪಿ ಸಿಂಗಲ್ಸ್ ರ‍್ಯಾಂಕಿಂಗ್‌ನಲ್ಲಿ 632ನೇ ಸ್ಥಾನದಲ್ಲಿದ್ದಾರೆ.

ಏಷ್ಯನ್ ಗೇಮ್ಸ್, ಫಿಫಾ ವಿಶ್ವಕಪ್, ಕಾಮನ್‌ವೆಲ್ತ್ ಗೇಮ್ಸ್...

ಚುಟುಕು ಕ್ರಿಕೆಟ್‌ಪ್ರಿಯರಿಗೆ 2026ರ ವರ್ಷ ಡಬಲ್ ಧಮಾಕ. ಪುರುಷರ ಮತ್ತು ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಗಳು ಇದೇ ವರ್ಷ ನಡೆಯಲಿವೆ. ಭಾರತ ಮತ್ತು ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ ಪುರುಷರ ಟೂರ್ನಿ ಮತ್ತು ಇಂಗ್ಲೆಂಡ್ ಆತಿಥ್ಯದಲ್ಲಿ ಮಹಿಳೆಯರ ಟೂರ್ನಿ ಆಯೋಜನೆಗೊಳ್ಳಲಿವೆ. ಕ್ರಿಕೆಟ್ ಮಾತ್ರವಲ್ಲದೆ ಇತರ ಕ್ರೀಡೆಗಳ ಪ್ರಮುಖ ಕೂಟಗಳೂ ಈ ವರ್ಷ ನಡೆಯಲಿವೆ. ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊ ಆತಿಥ್ಯದಲ್ಲಿ ಫಿಫಾ ಪುರುಷರ ಫುಟ್‌ಬಾಲ್ ವಿಶ್ವಕಪ್ ಟೂರ್ನಿ, ಜಪಾನ್‌ನಲ್ಲಿ ಏಷ್ಯನ್ ಗೇಮ್ಸ್, ಗ್ಲಾಸ್ಗೊದಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಈ ವರ್ಷದ ಬಹುನಿರೀಕ್ಷಿತ ಕ್ರೀಡಾಕೂಟಗಳಾಗಿವೆ

2026 ಮುನ್ನೋಟ

ವರ್ಷದ ಪ್ರಮುಖ ಕೂಟಗಳ ಪಟ್ಟಿ ಇಲ್ಲಿವೆ...

ಜನವರಿ: ಮಹಿಳಾ ಕ್ರಿಕೆಟ್: ಜ. 9ರಿಂದ ಫೆ.5ರವರೆಗೆ ನಾಲ್ಕನೇ ಆವೃತ್ತಿಯ ಮಹಿಳಾ ಪ್ರೀಮಿಯರ್ ಲೀಗ್
ಪುರುಷರ ಕ್ರಿಕೆಟ್: 11ರಿಂದ 31ರವರೆಗೆ ನ್ಯೂಜಿಲೆಂಡ್ ಕ್ರಿಕೆಟ್ ತಂಡವು ಭಾರತ ಪ್ರವಾಸದಲ್ಲಿ ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳ ಸರಣಿ ಆಡಲಿದೆ. ಜ.15ರಿಂದ ಫೆ.6ರವರೆಗೆ ನಮೀಬಿಯಾ ಮತ್ತು ಜಿಂಬಾಬ್ವೆ ಆತಿಥ್ಯದಲ್ಲಿ 19 ವರ್ಷದೊಳಗಿನ ಪುರುಷರ ಏಕದಿನ ವಿಶ್ವಕಪ್.
ಬ್ಯಾಡ್ಮಿಂಟನ್: ನವದೆಹಲಿಯಲ್ಲಿ 13ರಿಂದ 18ರವರೆಗೆ ಇಂಡಿಯಾ ಓಪನ್ ಸೂಪರ್ 750 ಟೂರ್ನಿ
ಪುರುಷರ ಹಾಕಿ: 3ರಿಂದ 26ರವರೆಗೆ ಏಳನೇ ಆವೃತ್ತಿಯ ಹಾಕಿ ಇಂಡಿಯಾ ಲೀಗ್
ಟೆನಿಸ್: ಜ.12ರಿಂದ ಫೆ.1ರವರೆಗೆ ಆಸ್ಟ್ರೇಲಿಯಾ ಓಪನ್ ಟೂರ್ನಿ
ಟೇಬಲ್ ಟೆನಿಸ್: ದೋಹಾದಲ್ಲಿ 7ರಿಂದ 11ರವರೆಗೆ ವಿಶ್ವ ಟೇಬಲ್ ಟೆನಿಸ್ ಸರಣಿ
ಫೆಬ್ರುವರಿ: ಪುರುಷರ ಕ್ರಿಕೆಟ್: ಫೆ. 7ರಿಂದ ಮಾರ್ಚ್ 8ರ ವರೆಗೆ ಭಾರತ ಮತ್ತು ಶ್ರೀಲಂಕಾದ ಜಂಟಿ ಆತಿಥ್ಯದಲ್ಲಿ ಐಸಿಸಿ ಟಿ20 ವಿಶ್ವಕಪ್ ಟೂರ್ನಿ
ಟೆನಿಸ್: ಬೆಂಗಳೂರಿನಲ್ಲಿ 7 ಮತ್ತು 8ರಂದು ಭಾರತ– ನೆದರ್ಲೆಂಡ್ಸ್ ನಡುವೆ 2026ರ ಡೇವಿಸ್ ಕಪ್ ಅರ್ಹತಾ ಪಂದ್ಯ
ಟೇಬಲ್ ಟೆನಿಸ್: ಚೆನ್ನೈನಲ್ಲಿ 10ರಿಂದ 15ರವರೆಗೆ ಸ್ಟಾರ್ ಕಂಟೆಂಡರ್ ಟೂರ್ನಿ
ಶೂಟಿಂಗ್: 2ರಿಂದ 14ರವರೆಗೆ ನವದೆಹಲಿಯಲ್ಲಿ ಏಷ್ಯನ್ ರೈಫಲ್/ ಪಿಸ್ತೂಲ್ ಚಾಂಪಿಯನ್‌ಷಿಪ್
ಹಾಕಿ: 11ರಿಂದ 15ರವರೆಗೆ ಭುವನೇಶ್ವರದಲ್ಲಿ ಎಫ್‌ಐಎಚ್ ಪ್ರೊ ಹಾಕಿ ಟೂರ್ನಿಯ ಭಾರತ ಲೆಗ್‌ನ ಪಂದ್ಯಗಳು
ಡೈವಿಂಗ್: ಕೆನಡಾದಲ್ಲಿ ಫೆ.26ರಿಂದ ಮಾರ್ಚ್ 1ರವರೆಗೆ ಈಜು ಡೈವಿಂಗ್ ವಿಶ್ವಕಪ್
ಮಾರ್ಚ್: ಕ್ರಿಕೆಟ್: ಮಾರ್ಚ್ 26ರಿಂದ ಮೇ 31ರವರೆಗೆ ಇಂಡಿಯನ್ ಪ್ರೀಮಿಯರ್ ಲೀಗ್.
ಅಥ್ಲೆಟಿಕ್ಸ್: ಪೋಲೆಂಡ್‌ನಲ್ಲಿ 20ರಿಂದ 22ರವರೆಗೆ ವಿಶ್ವ ಅಥ್ಲೆಟಿಕ್ಸ್ ಒಳಾಂಗಣ ಕ್ರೀಡಾಕೂಟ
ಟೇಬಲ್ ಟೆನಿಸ್: ಇಂಗ್ಲೆಂಡ್‌ನಲ್ಲಿ ಮಾರ್ಚ್ 28ರಂದು ವಿಶ್ವ ಟೀಂ ಚಾಂಪಿಯನ್‌ಷಿಪ್
ಶೂಟಿಂಗ್: ಮೊರಾಕೊದಲ್ಲಿ ಮಾರ್ಚ್ 23ರಿಂದ ಏ.2ರವರೆಗೆ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ (ಶಾಟ್‌ಗನ್) ಟೂರ್ನಿ
ಏಪ್ರಿಲ್: ವೇಟ್‌ಲಿಫ್ಟಿಂಗ್: 1ರಿಂದ 10ರವರೆಗೆ ಅಹಮದಾಬಾದ್‌ನಲ್ಲಿ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್
ಆರ್ಚರಿ: ಮೆಕ್ಸಿಕೊದಲ್ಲಿ 7ರಿಂದ 12ರವರೆಗೆ ವಿಶ್ವಕಪ್ ಟೂರ್ನಿ
ಸ್ನೂಕರ್: ಇಂಗ್ಲೆಂಡ್‌ನಲ್ಲಿ ಏ.18ರಿಂದ ಮೇ 4ರವರೆಗೆ ವಿಶ್ವ ಸ್ನೂಕರ್ ಚಾಂಪಿಯನ್‌ಷಿಪ್
ಮೇ: ಅಥ್ಲೆಟಿಕ್ಸ್: 8ರಂದು ದೋಹಾ ಡೈಮಂಡ್ ಲೀಗ್ ಆಯೋಜನೆ
ಟೆನಿಸ್: ಪ್ಯಾರಿಸ್‌ನಲ್ಲಿ ಮೇ 18ರಿಂದ ಜೂನ್ 7ರವರೆಗೆ ಫ್ರೆಂಚ್ ಓಪನ್ ಟೂರ್ನಿ
ಜೂನ್: ಪುರುಷರ ಫುಟ್‌ಬಾಲ್: ಕೆನಡಾ, ಮೆಕ್ಸಿಕೊ ಮತ್ತು ಅಮೆರಿಕ ಆತಿಥ್ಯದಲ್ಲಿ ಜೂನ್ 11ರಿಂದ ಜುಲೈ 19ರವರೆಗೆ ಫಿಫಾ ವಿಶ್ವಕಪ್ ಟೂರ್ನಿ
ಬ್ಯಾಸ್ಕೆಟ್‌ಬಾಲ್: ಪೋಲೆಂಡ್‌ನಲ್ಲಿ 1ರಿಂದ 7ರವರೆಗೆ ಫಿಬಾ 3x3 ವಿಶ್ವಕಪ್ ಟೂರ್ನಿ
ಮಹಿಳಾ ಕ್ರಿಕೆಟ್: ಇಂಗ್ಲೆಂಡ್ ಆತಿಥ್ಯದಲ್ಲಿ ಜೂನ್ 12ರಂದ ಜುಲೈ 5ರವರೆಗೆ ಐಸಿಸಿ ಟಿ20 ವಿಶ್ವಕಪ್ ಟೂರ್ನಿ
ಗಾಲ್ಫ್: ನ್ಯೂಯಾರ್ಕ್‌ನಲ್ಲಿ 18ರಿಂದ 21ರವರೆಗೆ ಯುಎಸ್ ಓಪನ್ ಟೂರ್ನಿ

ಸೂರ್ಯಕುಮಾರ್ ಯಾದವ್, ಬೂಮ್ರಾ

ಅಥ್ಲೆಟಿಕ್ಸ್: 26ರಂದು ಪ್ಯಾರಿಸ್ ಡೈಮಂಡ್ ಲೀಗ್
ಟೆನಿಸ್: ಲಂಡನ್‌ನಲ್ಲಿ ಜೂನ್ 29ರಿಂದ ಜುಲೈ 12ರವರೆಗೆ ವಿಂಬಲ್ಡನ್ ಟೂರ್ನಿ
ಪುರುಷರ ಕ್ರಿಕೆಟ್: ಅಫ್ಘಾನಿಸ್ತಾನ ಕ್ರಿಕೆಟ್ ತಂಡವು ಭಾರತ ಪ್ರವಾಸದಲ್ಲಿ ಒಂದು ಟೆಸ್ಟ್ ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ
ಜುಲೈ: ಕಾಮನ್‌ವೆಲ್ತ್ ಗೇಮ್ಸ್: ಸ್ಕಾಟ್ಲೆಂಡ್‌ನ ಗ್ಲಾಸ್ಗೋದಲ್ಲಿ ಜುಲೈ 23ರಿಂದ ಆಗಸ್ಟ್ 2ರವರೆಗೆ ಕಾಮನ್‌ವೆಲ್ತ್ ಕ್ರೀಡಾಕೂಟ
ಪುರುಷರ ಕ್ರಿಕೆಟ್: ಭಾರತ ತಂಡವು ಇಂಗ್ಲೆಂಡ್ ಪ್ರವಾಸದಲ್ಲಿ ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳನ್ನು ಆಡಲಿದೆ
ಆಗಸ್ಟ್: ಬ್ಯಾಡ್ಮಿಂಟನ್: ದೆಹಲಿಯಲ್ಲಿ ಬಿಡಬ್ಲ್ಯುಎಫ್ ವಿಶ್ವ ಚಾಂಪಿಯನ್‌ಷಿಪ್
ಹಾಕಿ: ಬೆಲ್ಜಿಯಂ– ನೆದರ್ಲೆಂಡ್ಸ್‌ನಲ್ಲಿ 14ರಿಂದ 30ರವರೆಗೆ ಪುರುಷರ ಮತ್ತು ಮಹಿಳೆಯರ ಎಫ್‌ಐಎಚ್ ವಿಶ್ವಕಪ್ ಟೂರ್ನಿ
ಟೆನಿಸ್: ನ್ಯೂಯಾರ್ಕ್‌ನಲ್ಲಿ ಆ.31ರಿಂದ ಸೆ.13ರವರೆಗೆ ಅಮೆರಿಕ ಓಪನ್ ಟೂರ್ನಿ
ಪುರುಷರ ಕ್ರಿಕೆಟ್: ಭಾರತ ತಂಡವು ಶ್ರೀಲಂಕಾದಲ್ಲಿ ಎರಡು ಟೆಸ್ಟ್ ಪಂದ್ಯಗಳನ್ನು ಆಡಲಿದೆ
ಸೆಪ್ಟೆಂಬರ್: ಬ್ಯಾಸ್ಕೆಟ್‌ಬಾಲ್: 4ರಿಂದ 13ರವರೆಗೆ ಜರ್ಮನಿಯಲ್ಲಿ ಫಿಬಾ ಮಹಿಳೆಯರ ವಿಶ್ವಕಪ್ ಟೂರ್ನಿ
ಏಷ್ಯನ್ ಗೇಮ್ಸ್: ಜಪಾನ್‌ನಲ್ಲಿ ಸೆ.19ರಿಂದ ಅ.4ರವರೆಗೆ ಏಷ್ಯನ್ ಗೇಮ್ಸ್
ಕ್ರಿಕೆಟ್: ವೆಸ್ಟ್ ಇಂಡೀಸ್ ತಂಡವು ಭಾರತ ಪ್ರವಾಸದಲ್ಲಿ ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳನ್ನು ಆಡಲಿದೆ
ಅಕ್ಟೋಬರ್: ಟೆನಿಸ್: ರಿಯಾದ್‌ನಲ್ಲಿ ಡಬ್ಲ್ಯುಟಿಎ ಫೈನಲ್ಸ್
ಜಿಮ್ನಾಸ್ಟಿಕ್ಸ್: 17 ರಿಂದ 28ರವರೆಗೆ ನೆದರ್ಲೆಂಡ್ಸ್‌ನಲ್ಲಿ ವಿಶ್ವ ಚಾಂಪಿಯನ್‌ಷಿಪ್
ಕ್ರಿಕೆಟ್: ಭಾರತ ತಂಡವು ನ್ಯೂಜಿಲೆಂಡ್ ಪ್ರವಾಸದದಲ್ಲಿ ಎರಡು ಟೆಸ್ಟ್, ಮೂರು ಏಕದಿನ ಮತ್ತು ಟಿ20 ಪಂದ್ಯಗಳನ್ನು ಆಡಲಿದೆ
ನವೆಂಬರ್: ಟೆನಿಸ್: ಇಟಲಿಯಲ್ಲಿ 24ರಿಂದ 29ರವರೆಗೆ ಡೇವಿಸ್ ಕಪ್ (ಫೈನಲ್ 8) ಪಂದ್ಯಗಳು
ಟೆನಿಸ್: ಚೀನಾದಲ್ಲಿ ಬಿಲ್ಲಿ ಜೀನ್ ಕಿಂಗ್ ಕಪ್ ಫೈನಲ್ಸ್
ಬ್ಯಾಡ್ಮಿಂಟನ್: ಲಖನೌದಲ್ಲಿ 24ರಿಂದ 29ರವರೆಗೆ ಸೈಯದ್ ಮೋದಿ ಇಂಡಿಯಾ ಇಂಟರ್‌ನ್ಯಾಷನಲ್ ಸೂಪರ್ 300 ಟೂರ್ನಿ
ಡಿಸೆಂಬರ್: ಪುರುಷರ ಕ್ರಿಕೆಟ್: ಶ್ರೀಲಂಕಾ ತಂಡವು ಭಾರತ ಪ್ರವಾಸದಲ್ಲಿ ಮೂರು ಏಕದಿನ ಮತ್ತು 3 ಟಿ20 ಪಂದ್ಯಗಳನ್ನು ಆಡಲಿದೆ
ಬ್ಯಾಡ್ಮಿಂಟನ್: ಚೀನಾದಲ್ಲಿ 9ರಿಂದ 13ರವರೆಗೆ ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ಟೂರ್ನಿ
ಈಜು: 1 ರಿಂದ 6ರವರೆಗೆ ಚೀನಾದ ಬೀಜಿಂಗ್‌ನಲ್ಲಿ ವಿಶ್ವ ಈಜು ಚಾಂಪಿಯನ್‌ಷಿಪ್.

ಪುರುಷರ ಟಿ20 ವಿಶ್ವಕಪ್ 2026